ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 5

ಸಂಚಿಕೆ 1

ಜನವರಿ - ಮಾರ್ಚ್ 1976

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 5 No. 1, January-March 1976

Chief Editor : Dr. G. S. Sivarudrappa

ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

ಪರಿವಿಡಿ

ಅಮೂರ್ತ ಕಂದನ ಆಕ್ರಂದನ

ಜಯಂತ ಕಾಯ್ಕಿಣಿ

ನಾನೊಂದು
ಇನ್ನೂ ಹುಟ್ಟಿರದ ಕೂಸು !
ಕಲ್ಪನೆಯು ಘಟ್ಟದಾಚೆ ಮುಳುಗುತ್ತಿರುವ
ಅರಳಿಹಗಲುಗಳ–ಕಿನೆ ರಾತ್ರಿಗಳ–
ಗತಿಗೂ ಮೀರಿ
ಗತ್ತಿರದ ಇನ್ನೂ ಹೊತ್ತು
ಗೊತ್ತಿರದ ಕೂಸು
ಇನ್ನೂ ಹುಟ್ಟಿರದ ಕೂಸು !

ಈಗಿನ್ನೂ ನಾನು
ಎಷ್ಟೋ ಸೂರ್ಯಕಾಂತಿ ಅರಳುವ ಚುಮುಚುಮು ಕಣ್ಣುಗಳಲ್ಲಿ
ತೊನೆಯುವ ಕೇಶಗಂಗೋತ್ರಿ ಜಡೆಗಳಲ್ಲಿ
ಹಾ ಬಾ ಎನ್ನುವ ಹೃದಯ ಕೊರಳಲ್ಲಿ
ಉನ್ಮತ್ತ ಎಳೆಯುವ ಮುಂಗುರಳಲ್ಲಿ
ಮತ್ತೆ ಮತ್ತದೇ ಚುಂಬಕ ಗಕ್ಕನೆ
ಕೇಂದ್ರಕ್ಕೆ ಸೆಳೆಯುವ ಹೆಣ್ಣು–
ಗಂಡಾಗಿ ನಾಡಿ ಪುಟಿಯುತ್ತಿದ್ದೇನೆ
ಪುಷ್ಪಪರಾಗ ರೇಣು ಸೃಷ್ಟಿ ವಿನ್ಯಾಸದಲ್ಲಿ ಪಕಳೆಯೊಡೆಯುತ್ತ
ಈಗಿನ್ನೂ ನಾನಲ್ಲೇ ಅಲ್ಲಲ್ಲೇ
ನೇವರಿಸುತ್ತ ಅದೇ ಪೋಸ್ಟರು ಅಪಾತ್ರ ಕಾಮಸೂತ್ರ
ಪ್ರಯೋಗಶೀಲತೆಯಲ್ಲಿ ಸಂಗ್ಯಾಬಾಳ್ಯಾದೊಡಲ
ಗಂಗೆಯಿಂದುಕ್ಕಿದ ಭಾವಸ್ಫೋಟಗಳಲ್ಲಿ ರೂಹುಗೊಳ್ಳುತ್ತ
ಹಾಡಾಗಿದ್ದೇನೆ ವರಾಂಡ ಕೆಫಿಟೇರಿಯ
ಹನುಮನಕಟ್ಟೆ ಸಂತೆ ಡೇರಿ ಧ್ವಜ
ಸ್ತಂಭ ಮಹಾಪೂರ ದುಃಖಾರ್ತ ಹೆಣಗಳ ಬೆನ್ನಿಗೇ
ಗೋಡೆಗಳ ಮರೆಯಲ್ಲಿ ತೆಳ್ಳಗೆ ಆಕಳಿಸುತ್ತಿದ್ದೇನೆ

ಬೆಳಕಿನ ಅರ್ಥದ ಚೂಪು ತಟ್ಟಿರದ ದೇಹ
ಪಟ್ಟಿರದ ಕೂಸು ನಾನು
ಇನ್ನೂ ಹುಟ್ಟಿರದ ಕೂಸು !

ಕೆಕ್ಕೆಕ್ಕೆ ಕೆದರುವ ಕೋಳಿ ಹಿಕ್ಕೆ ತೊದಲುವ
ಉದ್ಧಾರದ ವಾಕ್ಯ ಶಬ್ದಗಳು ಸತ್ತು ಗಿಜಿಬಿಜಿ
ನೊಣ ತುಂಬಿದ ತೊಟ್ಟಿಯಲ್ಲಿ ಬದಿಯಲ್ಲಿ
ಚೂರುಪಾರು ಚಂದ್ರನ ಕದ್ದು
ಹರಿದ ಕುಪ್ಪುಸದ ಸಂದಿಯಲ್ಲಿ
ಎಲೆಯಡಿಕೆ ಕೆಂಪಿನುನ್ಮತ್ತ ಮೀಸೆ ಚಾಚಿ ನಗುವಲ್ಲಿ
ಮೆಲ್ಲಗೆ ಮೈಮುರಿಯುತ್ತಿದ್ದೇನೆ.
ಅಯ್ಯೋ ನಾನಿದ್ದೇನೆ ಅಲ್ಲಿ ಬಿಳಿ ಬಿಳೀ ಕತ್ತಲೆಯೊಡಲಲ್ಲಿ
ಚಂದ್ರಶಾಲೆ ಗುಹೆಗುಹ್ಯ
ಭಗ್ನ ಮಿಥುನ ಶಿಲ್ಪ ಸೆಡ್ಡೊಡೆದ
ಹರಿದ ಮೂಗು ಶಿಲಾ ಎತ್ತಿದ ಕಾಲ ಸ್ಫುಟ ಭಂಗಿಯಲ್ಲಿ
ನೇಗಿಲ ಮೊಲೆಯಲ್ಲಿ ಹಾ
ಚಿಲಕದ ತುದಿಯಲ್ಲಿ ಹಾ
–ನಾನಿದ್ದೇನೆ
ಮಿಸು ಮಿಸುಗಿ ಕರಾಳ ಒಂಟಿತನದ ಬಿಲ್ಡಿಂಗು ಸ್ಕೂಟರು
ಫೈಲು ರಿಕ್ಷಾಗಳ ದಟ್ಟ ಧೂಳು ಮುಕ್ಕುವ ಗರ್ದಿ
ಯೊಳಗಿನ ಬೆಚ್ಚನೆ ಏಕಾಂತ ತೆಕ್ಕೆ ಪಂಖ ಸೋಫಾದ
ಆರೋಗಣೆಯ ಅರೋಗ್ಯ ಹೂಕುಂಡಗಳಲ್ಲಿ
ಅಯ್ಯೋ ಮೂಡುತ್ತಿದ್ದೇನೆ
ಮತ್ತೆ ಮತ್ತದೇ ಕಣ್ಣು ಚುಂಬಕ ಗಕ್ಕನೆ
ಕೇಂದ್ರಕ್ಕೆ ಸೆಳೆಯುವ ಹೆಣ್ಣು
ಗಂಡಾಗಿ ಅಯ್ಯೋ ಕೂಡುತ್ತಿದ್ದೇನೆ
ಗರ್ಭಕ್ಕೆ ಇನ್ನೂ ಬೀಜ ತಟ್ಟಿರದ ಫಲಕ
ಕಟ್ಟಿರದ ಕೂಸು ನಾನು
ಇನ್ನೂ ಹುಟ್ಟಿರದ ಕೂಸು !

ಬೇಡಿರೋ ಹೂವುಗಳೇ ಬೇಡಿರೋ
ಚಿಟ್ಟೆಗಳೇ ಬೇಡಿರೋ ವಸ್ತ್ರಗಳೇ ಬೇಡಿರೋ ಅಸ್ತ್ರಗಳೇ
ಕೈ ಮುಗೀತೀನೆ ಕೈ ಮುಗೀತಿದ್ದೇನೆ

ಅಬ್ಬ ! ನಾನಿನ್ನೂ ಬರದ ನಾನಿನ್ನೂ ಇರದ
ವಾಸ್ತವದ ಬಗ್ಗೆ ನನಗೆ ಅನಿಸುತ್ತಿರುವದೇ ಇಷ್ಟು
ಇಲ್ಲದ ನನ್ನ ಕಣ್ಣಿಗೆ ಕಾಣುತ್ತಿರುವದೇ ಇಷ್ಟು–
 ಅವೇ ಝಳಪಿಸುವ ಖಡ್ಗಗಳು ಅವೇ ಚಕ್
 ಚಕಿಸುವ ಒರೆಗಲ್ಲುಗಳು ಚೂಪು ಅವೇ
 ಹಾವಸೆ ಹಾಸಿದ ಶಿಖರಗಳು ಅದೇ
 ಕಣ್ಣಿಗೆ ಕತ್ತಲು ತುಂಬುವ ಬಿಸಿಲು
ಬೇಡಿರೋ, ನನಗೆ ಕಾಣುತ್ತಿರುವದೇ ಇಷ್ಟು–
 ಅವೇ ನೆಲಕ್ಕಂಟಿದ ವ್ರಣ ಮೈಗೂಡುವ ವಿಷ
 ಯುದ್ಧಾದಿ ನರಕನಕಾರ ನಕಾಶೆ
 ಬಕಬಕಾ ಬಾಯ್ತೆರೆದ ಶ್ವಾಸ ತೃಷೆ

ಬೇಡಿರೋ
ಜನ್ಮಕೊಡಬೇಡಿರೊ ನನಗೆ
ಜನ್ಮಕೊಡಬೇಡಿರೋ–

ನಾಳೆ, ಈ ಹದಗೆಟ್ಟ ಯಂತ್ರಗಳ ಜಾತ್ರೆಯಲ್ಲಿ
 ನಾ ಯಾವ ಯಂತ್ರದ ಜತೆ ಆಡಲಿ ?
 ಅಸ್ಥಿಪಂಜರಗಳ ಈ ನಿತ್ಯ ಸ್ಮಶಾನದಲ್ಲಿ
 ನೀರಿಗೆಂದು ಎಲ್ಲಿ ನಾನು ನೆಲವ ತೋಡಲಿ ?
 ಈ ಗತಿಗೆಟ್ಟ ಗಡಿಯಾರಗಳ ಹಣೆಬರಹದಲ್ಲಿ
 ಯಾವ ದಿಕ್ಕಿಗೆ ನಾನು ಮುಳ್ಳಾಗಲಿ ?
 ಈ ಹೆಪ್ಪು ಬಾನಿನ ಕಪ್ಪು ನೆಲದ ತಪ್ಪು
 ವ್ಯವಸ್ಥೆಯ ಒಳಗೆ
 ಯಾವ ಖುರ್ಚಿಗೆ ನಾನು ಕಾಲಾಗಲಿ ?

ಬೇಡಿರೋ ಹಸಿವುಗಳೇ ನೋವುಗಳೇ
ಒಂಟಿತನ ಮಾನಗಳೇ ಬೇಡಿರೋ
ನನ್ನಲ್ಲಿ ಹುಟ್ಟುತ್ತ ತಪ್ಪು ಲೆಕ್ಕ ಹಾಕುತ್ತ
ಸಾವ ಬದುಕ ವ್ಯಾಖ್ಯೆಯನ್ನೆ ಗೆಲ್ಲಬೇಡಿರೋ
ಹುಟ್ಟದಿರುವ ಕಂದ ನಾನು ಹುಟ್ಟದೆಯೆ ಬದುಕ-ಬಲ್ಲೆ
ಹುಟ್ಟಿಸಿಯೆ ನನ್ನನ್ನು ಕೊಲ್ಲಬೇಡಿರೋ...

ಜನ್ಮ ಕೊಡಬೇಡಿರೋ ನನಗೆ
ಜನ್ಮ ಕೊಡಬೇಡಿರೋ.

ಸಾಹಿತ್ಯ – ಒಂದು ಅಭಿವ್ಯಕ್ತಿಯಾಗಿ*

ಅನುವಾದ : **ತೀ. ನಂ. ಶ್ರೀಕಂಠಯ್ಯ**

ಸಾಹಿತ್ಯಪ್ರೇಮಿಗಳಲ್ಲಿ, ಅದನ್ನು ಬಗೆಬಗೆಯ ಇತರ ಕಾರಣಗಳಿಗಾಗಿ ಮೆಚ್ಚುವವರು ಕೆಲವರು; ಅದರಿಂದ ಯಾವುದಾದರೊಂದು ವಿಧದ ಸಾಕ್ಷಾತ್ಕಾರವು ಸಿದ್ಧಿಸಿದ ಹೊರತು ಒಪ್ಪದೆ ಅದನ್ನೇ ನಿರೀಕ್ಷಿಸುವವರು ಕೆಲವರು. ಸುಸಂಸ್ಕೃತರಲ್ಲಿ ರಸಿಕರಲ್ಲಿ, ಅನೇಕರು ಮೊದಲನೆಯ ಗುಂಪಿಗೆ ಸೇರಿದವರೆಂದು ನನ್ನ ನಂಬಿಕೆ. ಅವರಿಗೆ ಸಾಹಿತ್ಯವು ರುಚಿಸುವುದು ಏಕೆಂದರೆ – ವಿನೋದ ಕಾಲಕ್ಷೇಪದಲ್ಲಿ ಅವರಿಗೆ ಅಭಿರುಚಿಯಿರಬಹುದು; ಅಥವಾ ಶಬ್ದಜಾಲದ ಚಿತ್ರಚಮತ್ಕಾರಗಳು ಅವರನ್ನು ಮೋಹಗೊಳಿಸಿ, ಅವರ ಶಕ್ತಿವೈಭವವನ್ನು ಉದ್ರೇಕಿಸಬಹುದು; ಅಥವಾ ಗೋಷ್ಠಿಗಳು, ಸಲ್ಲಾಪಗಳು, ಇವುಗಳಲ್ಲಿ ಉಲ್ಲಾಸವು ಗ್ರಂಥಗಳ ಸಹವಾಸದಲ್ಲೇ ಅವರಿಗೆ ದೊರೆಯಬಹುದು; ಅಥವಾ ಪುಸ್ತಕದ ಸ್ಪರ್ಶ, ಪರಿಮಳ, ಅದರ ಹಾಳೆಗಳನ್ನು ಚೂರಿಯಿಂದ ಮೆಲ್ಲಗೆ ಬಿಡಿಸುವ ಚಾತುರ್ಯ – ಇಷ್ಟರೊಳಗೇ ಅವರಿಗೆ ಹಿತವು ಕಂಡುಬರಬಹುದು. ಅಲ್ಲವಾದರೆ, ಗ್ರಂಥಗಳಲ್ಲಿ ನಿರೂಪಿಸಿರುವಂತೆ ಮಾನವ ಜೀವನದ ವೈಚಿತ್ರ್ಯವನ್ನು ಪರಿಶೀಲಿಸುವುದಕ್ಕೂ ಅಲ್ಲಿ ದೊರೆಯುವ ಕೌತುಕದ ಸಂಗತಿಗಳನ್ನೆಲ್ಲಾ ಕಲೆಯುಹಾಕುವುದಕ್ಕೂ ಅವರಿಗೆ ಆಸಕ್ತಿಯಿರಬಹುದು. ಇವರೇ ದಿಟವಾಗಿಯೂ ಸುಸಂಸ್ಕೃತರು. ಇನ್ನೊಂದು ಗುಂಪಿನವರು ಉಂಟಷ್ಟೆ–ಈ ಗುಂಪಿಗೇ ನಾನು ನನ್ನ ತಾರುಣ್ಯದಲ್ಲೆಲ್ಲಾ ಖಂಡಿತವಾಗಿ ಸೇರಿದ್ದವನು, ಇನ್ನೂ ಬಹುಶಃ ಒಟ್ಟಿನ ಮೇಲೆ ಸೇರಿರತಕ್ಕವನು–ಈ ಗುಂಪಿನವರಿಗೆ ಓದುಗಾರಿಕೆಯಲ್ಲೇ ಅಷ್ಟೊಂದು ಉತ್ಸಾಹವಿಲ್ಲ; ಆದರೂ ಅವರು ಓದುವುದು ಏಕೆಂದರೆ – ಯಾವ ಕೊನೆಗೋ ತಲಪುವುದಕ್ಕೆ, ಏನನ್ನೋ ಹಿಡಿಯುವುದಕ್ಕೆ, ತತ್ಕಾಲದ ಒಂದು ಸಂದಿಗ್ಧವನ್ನಾಗಲಿ ಜೀವನದ ಮಹಾಸಮಸ್ಯೆಗಳನ್ನಾಗಲಿ ಎಂತಾದರೂ ತಮಗೆ ಸ್ಫುಟಗೊಳಿಸುವ ಜ್ಯೋತಿಯೊಂದನ್ನು ಕಂಡುಕೊಳ್ಳುವುದಕ್ಕೆ ಹಲವರು ತಮ್ಮ ತಾರುಣ್ಯದಲ್ಲಿ ಗ್ರಂಥಗಳನ್ನು ಓದುವುದು ಈ ಆಶಯದಿಂದಲೇ ಎಂದು ನಾನು ನಂಬುತ್ತೇನೆ; ಅವರಿಗೆ ಒದಗುವ ಆಶಾಭಂಗಗಳನ್ನು ನಾವು ವಿಚಾರಕ್ಕೆ ತಂದುಕೊಂಡಲ್ಲಿ, ಅವರು ಕೂದಲು ನರೆತುಹೋಗಿದ್ದಾಗಲೂ, ಅದಕ್ಕೂ ಹೀನವಾದ ಅವಸ್ಥೆಗೆ ಇಳಿದಿದ್ದಾಗಲೂ ಕೂಡ ಈ ಆಶೆಗೆ

---

* ಮೂಲ : "Literature as Revelation"—*Essays and Addresses*: Gilbert Murray.

ಈ ಅನುವಾದವನ್ನು ಒದಗಿಸಿಕೊಟ್ಟವರು ದಿವಂಗತರ ಮಗ ಶ್ರೀ ಟಿ. ಎಸ್. ನಾಗಭೂಷಣ.

ಎಷ್ಟೋ ಸಲ ಅಂಟಿಕೊಂಡಿರುವುದು ಗಮನಿಸತಕ್ಕ ಅಂಶ, ತಕ್ಕಮಟ್ಟಿಗೆ ಶ್ಲಾಘಿಸಲೂ ತಕ್ಕ ಅಂಶ.

ಈ ಅತಿ ವಿಶ್ವಾಸಿಗಳ, ಉಬ್ಬುಹರೆಯುವವರ ಪಕ್ಷವನ್ನು ಹಿಡಿದು ಹೀಗೆ ಮಾತಾಡುವುದರಲ್ಲಿ, ನಾನು ಹಿಂದೆ ಹೇಳಿದ ಹಾಗೆ, ವಿದಗ್ಧರೂ ರಸಿಕರೂ ನನಗೆ ಪ್ರತಿಕಕ್ಷಿಗಳಾಗಬಹುದು ; ಆದರೆ ಕಲೋಪಾಸಕರೂ ಲೇಖಕರೂ ಮಾತ್ರ ನನ್ನ ಕಡೆಗೇ ಇರುತ್ತಾರೆ. ನಾನು ಚೆನ್ನಾಗಿ ಬಲ್ಲ ಲೇಖಕರಲ್ಲಿ ಹೆಚ್ಚು ಕಡಮೆ ಎಲ್ಲರಿಗೂ – ಅವರ ಸಂಖ್ಯೆ ಕಡಮೆಯೇನೂ ಅಲ್ಲ-ತಮ್ಮ ಗ್ರಂಥಗಳು ವಿನೋದಕರವಾಗಿವೆ, ಸ್ವಾರಸ್ಯಕರವಾಗಿವೆ ಓದಲು ಚೆನ್ನಾಗಿವೆ ಹೀಗೆಂದು ಹೊಗಳುವುದನ್ನು ಕೇಳಿದಾಗಲೆಲ್ಲಾ ಅಂತರಂಗದಲ್ಲಿ ವ್ಯಥೆಯುಂಟಾಗುವುದೆಂದು ನನಗೆ ತೋರಿಬಂದಿದೆ. ಅವರಿಗೆ, ಅದರಲ್ಲೂ ಕಾದಂಬರಿ ಪ್ರಹಸನಗಳನ್ನು ಬರೆಯುವವರಿಗೆ, ತಾವು ಆಚಾರ್ಯರೆಂದೂ ಪರಮ ಸೂರಿಗಳೆಂದೂ ಕರೆಯಿಸಿಕೊಂಡರೆ ಮಾತ್ರ ನಿಜವಾದ ಆನಂದವುಂಟಾಗುತ್ತದೆ. ತನ್ನ ಜೀವಮಾನದ ಘನಕಾರ್ಯವೆಲ್ಲವೂ ಮಿಕ್ಕವರ ಜೀವನಕ್ಕೆ ಒಂದು ಕಡೆಸೆರಗಾಗಿ, ಒಂದು ಕ್ರೀಡೆಯಾಗಿ ಪರಿಣಮಿಸಿ ಮುಗಿಯುವುದೆಂದು ಭಾವಿಸುವುದರಲ್ಲಿ ಯಾರಿಗೂ ಪೂರ್ಣ ಸಮಾಧಾನವಿಲ್ಲ. ಒಂದಾನೊಂದು ವಿಶ್ವವಿದ್ಯಾನಿಲಯದಲ್ಲಿ ನಿಷ್ಠುರ ನಿರೀಕ್ಷೆಯ ತರುಣನೊಬ್ಬನು ಕೀಟ್ಸ್ ಕವಿಯನ್ನು ಕುರಿತು ಬರೆದ ಪ್ರಬಂಧವೊಂದರ ಕಥೆ ಜನಜನಿತವಾಗಿದೆ. ಅವನು ಅದರಲ್ಲಿ, "ಕೀಟ್ಸ್ ಕವಿ ಎಂದಾದರೂ ಒಂದು ಆತ್ಮವನ್ನು ಉದ್ಧರಿಸಿದ್ದಾನೆಯೇ ಎನ್ನುವುದೇ ಎಲ್ಲಕ್ಕೂ ಮುಖ್ಯವಾಗಿ ಕೇಳಬೇಕಾದ ಪ್ರಶ್ನೆ" ಎಂದು ಬರೆದನು. ಆ ಪ್ರಶ್ನೆಗೆ ಅವನು "ಇಲ್ಲ" ವೆಂಬುದಾಗಿ ಉತ್ತರ ಕೊಟ್ಟನೆಂದು ನಾನು ವಿಷಾದದಿಂದ ಹೇಳಬೇಕಾಗಿದೆ ; ಆ ಉತ್ತರಕ್ಕೆ ಅನುಗುಣವಾಗಿ ಕೀಟ್ಸ್ ಕವಿಯನ್ನು ಖಂಡಿಸಿಬಿಟ್ಟನು. ಈ ಪ್ರಬಂಧಕಾರನು ನಮ್ಮ ಕವಿಯನ್ನು ಅತ್ಯಂತ ಅರ್ಥಹೀನವೂ ಅಸಂಗತವೂ ಆದ ಪ್ರಶ್ನೆಗೆ ಗುರಿಮಾಡಿದನೆಂದು ವಿದಗ್ಧರು ಸಾಮಾನ್ಯವಾಗಿ ಅವನನ್ನು ಅಪಹಾಸ್ಯ ಮಾಡುತ್ತಾರೆ. ವಿದಗ್ಧನು ಈ ವಿಷಯದಲ್ಲಿ ಹೇಳುವುದೇನೆಂದರೆ: "ಕೀಟ್ಸ್ ಕವಿ ರೈಲ್ವೆ ಯಂತ್ರಗಳನ್ನು ಉತ್ತಮಗೊಳಿಸುವುದಕ್ಕೆ ಎಷ್ಟು ಕೈಹಾಕಿದನೋ ಆತ್ಮಗಳನ್ನು ಉದ್ಧರಿಸುವುದಕ್ಕೂ ಅಷ್ಟೇ ಕೈಹಾಕಿದನು. ಅವನು ಕೈಹಾಕಿದ್ದೆಲ್ಲಾ ಸುಂದರ ಕಾವ್ಯಗಳನ್ನು ರಚಿಸುವುದಕ್ಕೆ ; ಇದಕ್ಕೂ ಅದಕ್ಕೂ ಸಂಬಂಧಲೇಶವೂ ಇಲ್ಲ."

ಆದರೆ, ಈ ವಿದಗ್ಧನ ಮಾತು ಸರಿಯೆಂದು ನಾನು ನಂಬಲಾರೆ. ನನಗೇನೋ, ಆ ನಿಷ್ಠುರ ನಿರೀಕ್ಷೆಯ ತರುಣನು ಇಟ್ಟ ಪರೀಕ್ಷೆ ತುಂಬ ಸರಿಯೆಂದು ತೋರುತ್ತದೆ ; ಯಥಾರ್ಥವಾಗಿಯೂ ಶ್ರೇಷ್ಠನಾದ ಕವಿ ಆತ್ಮಗಳನ್ನು ಉದ್ಧರಿಸಲೇ ಬೇಕೆಂದೂ ಉದ್ಧರಿಸಿಯೇ ಉದ್ಧರಿಸುವನೆಂದೂ ತೋರುತ್ತದೆ ; ಇದರ ಮೇಲೆ, ಆ ಕವಿಗೆ "ಆತ್ಮಗಳ ವಿಷಯವು ನನಗೆ ಸೇರಿದ್ದಲ್ಲ, ಅದನ್ನು ಪುರೋಹಿತರಿಗೆ ಬಿಟ್ಟುಬಿಡು"

ಎಂದು ಹೇಳಿದರೆ ನಿಮ್ಮಲ್ಲಿ ಆತನಿಗೆ ಖಂಡಿತ ಸೌಜನ್ಯವು ಉಳಿಯುವುದಿಲ್ಲವೆಂದೂ ತೋರುತ್ತದೆ. ನಾನು ಊಹಿಸುವುದು ಹೀಗೆ: ನಮ್ಮ ಪ್ರಬಂಧಕಾರನು ತಪ್ಪಿ ಹೋಗಿದ್ದ ಪಕ್ಷದಲ್ಲಿ, – ಕೀಟ್ಸ್ ಕವಿ ಹೀನಕವಿಯೆಂದು ನಿರ್ಧರಿಸಿದ್ದರೆ ಅವನು ತಪ್ಪಿಹೋದನೆಂದೇ ನನ್ನ ನಿಷ್ಕರ್ಷೆ – ಆ ತಪ್ಪಿಗೆ ಎರಡು ಕಾರಣಗಳುಂಟು. ಅವನು ಆತ್ಮೋದ್ಧಾರವೆನ್ನುವುದರ ವ್ಯಾಪ್ತಿಯನ್ನು ಬಹು ಸಂಕೋಚಮಾಡಿ ಮತಚರ್ಚೆಯೊಳಗೇ ಅಡಕ ಮಾಡಿರಬೇಕು ; ಅಲ್ಲದೆ, ಕೀಟ್ಸ್ ಕವಿ ಆತ್ಮವೊಂದನ್ನು ಉದ್ಧರಿಸಬಲ್ಲನೆ ಇಲ್ಲವೆ ಎನ್ನುವುದನ್ನು ಅರಿಯುವಷ್ಟು ಆಳಕ್ಕೆ ಆತನ ಭಾವ ಪ್ರವಾಹದಲ್ಲಿ ಅವನು ಮುಳುಗಿ ಮಿಾಯದಿರಬೇಕು. ಎಂದರೆ, ಅವನಿಗೆ ನಾನು ಎರಡು ಪ್ರಶ್ನೆಗಳನ್ನು ಹಾಕುತ್ತಿದ್ದೆನು : ಮೊದಲನೆಯದಾಗಿ, ಒಬ್ಬ ಮನುಷ್ಯನಿಗೆ, ಜೀವನದಲ್ಲಿ ತನ್ನನ್ನೂ ತನ್ನ ಸ್ವಕೀಯ ಕಾಮನೆಗಳನ್ನೂ ಜಯಿಸಿ ಮೇಲಕ್ಕೇರು ವುದಕ್ಕೂ, ಇದುವರೆಗೂ ತನಗೆ ಶೂನ್ಯವಾಗಿ ಕಾಣುತ್ತಿದ್ದ ಕಡೆಗಳಲ್ಲೆಲ್ಲಾ ಸೌಂದರ್ಯ ವನ್ನೂ ಮಹಿಮೆಯನ್ನೂ ಕಾಣುವುದಕ್ಕೂ ಸಾಮರ್ಥ್ಯಪ್ರದಾನವು ಯಾವುದಾದರೂ ಒಂದು ಅರ್ಥದಲ್ಲಿ ಆತ್ಮೋದ್ಧಾರವಲ್ಲವೆ ? ಎಂದು ಕೇಳುತ್ತಿದ್ದೆನು. ಎರಡನೆಯ ದಾಗಿ, ತನ್ನ ಅತ್ಯುತ್ಕೃಷ್ಟ ಕವನವೊಂದರ ಸಾರತಮವಾದ ಅಂತ್ಯದಲ್ಲಿ, ಮಾನವ ಕುಲಕ್ಕೆ ಪುರಾತನ ಗ್ರೀಕ್ ಕಲಶವು ಸಾರತಕ್ಕ ಸಂದೇಶವನ್ನು ಕೀಟ್ಸ್ ಕವಿ

ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ – ಈ ಧರಣಿಯಲ್ಲಿ
ನಿಮಗಿನಿತೆ ತಿಳಿದಿಹುದು, ನಿಮಗಿನಿತೆ ತಿಳಿಯಬೇಕಾಗಿರುವುದೆಲ್ಲ.

ಎಂದು ಸಂಗ್ರಹಿಸಿರುವುದರಲ್ಲಿ ಆತನ ತಾತ್ಪರ್ಯವೇನೆಂಬುದನ್ನು, ಕೀಟ್ಸ್ ಕವಿಯನ್ನು ಖಂಡಿಸಿಬಿಡುವ ಮೊದಲು ನಮ್ಮ ತರುಣನು ನಿಜವಾಗಿಯೂ ಪರಿಭಾವಿಸಿ ನಿಜವಾಗಿಯೂ ಗ್ರಹಿಸಿದ್ದನೇ ಎಂದು ನಾನು ಕೇಳುತ್ತಿದ್ದೆನು.

ಈ ಸಂದೇಶವು ಸತ್ಯವೆಂದು ನಾನು ಹೇಳುತ್ತಿಲ್ಲ. ಇದರಲ್ಲಿ ಕವಿಯ ತಾತ್ಪರ್ಯ ವೇನಿದ್ದಿತೆನ್ನುವುದನ್ನು ನಾನೇ ಪೂರ್ಣವಾಗಿ ಹಿಡಿದಿಲ್ಲ. ಆದರೆ, ಅವನಿಗೂ ಅವನಿಂದ ಅದರ ಉಪದೇಶವನ್ನು ಪಡೆದವರಿಗೂ ಆ ಭಾವವು ಒಂದು ರಹಸ್ಯದ ಸಾಕ್ಷಾತ್ಕಾರದಂತೆ ಕಂಡಿರಬೇಕೆಂದು ನಾನು ದೃಢವಾಗಿ ಹೇಳಬಲ್ಲೆ.

ನನ್ನ ಅನುಭವಕ್ಕೇ ಬಂದಿರುವ ಇನ್ನೊಂದು ಸಂದರ್ಭವನ್ನು ನಿರೂಪಿಸ ಬಹುದು. ನಾನು ಹದಿನೈದು ವರ್ಷದ ಹುಡುಗನಾಗಿದ್ದಾಗ, ಪ್ಯಾರಿಸ್ ನಗರದಲ್ಲಿ ಟ್ಯುಲಿರಿ ಉಪವನದಲ್ಲಿ ಒಂದು ಬೆಂಚಿನ ಮೇಲೆ ಕುಳಿತು, ಆಗ ತಾನೆ ನಾನು ಎರಡುವರೆ ಪೆನ್ನಿಗೆ ತೆಗೆದುಕೊಂಡಿದ್ದ ರೂಸೋವಿನ ''ಸಾಮಾಜಿಕ ನಿಬಂಧನೆ'' ಎಂಬ ಪುಸ್ತಕವನ್ನು ಕೈಯಲ್ಲಿ ಹಿಡಿದಿದ್ದುದು ನನಗೆ ನೆನಪಿದೆ. ಅದು ಪ್ರಖ್ಯಾತ ಗ್ರಂಥ ವೆಂದು ನನಗೆ ತಿಳಿದಿತ್ತು ; ಅದನ್ನು ಸ್ತಿಮಿತ ಮನಸ್ಸಿನಿಂದ ಓದಬೇಕೆಂದು – ಓದು ವುದು ನನ್ನ ಕರ್ತವ್ಯವೆಂಬ ಭಾವನೆಯಿಂದಲೂ ಕೊಂಚ ಪ್ರೇರಿತನಾಗಿ – ನಾನು

ಕುಳಿತೆನು. ಅದರಲ್ಲಿ ಮೊದಲನೆಯ ಅಧ್ಯಾಯದ ಮೊದಲನೆಯ ವಾಕ್ಯವು ಹೀಗಿತ್ತು: "ಮನುಷ್ಯನು ಜನಿಸಿದ್ದು ಸ್ವಾತಂತ್ರ್ಯದಲ್ಲಿ, ಅವನಿರುವುದು ಎಲ್ಲೆಲ್ಲಿಯೂ ಸಂಕಲೆಗಳಲ್ಲಿ."

"ಮನುಷ್ಯನು ಜನಿಸಿದುದು ಸ್ವಾತಂತ್ರ್ಯದಲ್ಲಿ, ಅವನಿರುವುದು ಎಲ್ಲೆಲ್ಲಿಯೂ ಸಂಕಲೆಗಳಲ್ಲಿ." ಆ ಮಾತುಗಳನ್ನು ಓದಿದಾಗ, ಮತ್ತೆ ಓದಿದಾಗ ನನಗುಂಟಾದ ರೋಮಾಂಚವು ಇನ್ನೂ ಜ್ಞಾಪಕದಲ್ಲಿದೆ. ಯಥಾರ್ಥವಾಗಿ ನೋಡಿದರೆ, ರೂಸೋವಿನ ವಿಚಾರ ಸರಣಿಯಲ್ಲಿ ಈ ಮಾತುಗಳ ಸ್ಥಾನವನ್ನು ನಾನು ತೀರ ತಪ್ಪಾಗಿ ಗ್ರಹಿಸಿದೆನು. ಆದರೆ ಇತರರು ಗ್ರಹಿಸಿದುದೂ ನನ್ನಂತೆಯೇ; ಆ ಮಾತುಗಳನ್ನು ಮೊಟ್ಟಮೊದಲು ಪ್ರಕಟಿಸಿದಾಗ, ಅವು ಯೂರೋಪಿನಲ್ಲೆಲ್ಲಾ ಜನರನ್ನು ಹೊಡೆದೆಬ್ಬಿಸುತ್ತಾ, ಕಣ್ಣಿಗೆ ಕಟ್ಟಿದಂತೆ ನೆಲಸುತ್ತಾ, ಮಹಾ ವಿಪ್ಲವ (The Great Revolution) ದ ರೂಪದಲ್ಲಿ ಮುಂದೆ ಜ್ವಲಿಸಿ ಧಗಧಗಿಸಿದ ಬೆಂಕಿಯ ಕಿಡಿಗಳನ್ನು ಕನಲಿಸುತ್ತಾ ಮಿಂಚಿ ಹರಿದ ಬಗೆಯನ್ನು ನಾನು ಅರಿತು ಕೊಳ್ಳಬಲ್ಲೆ.

ಮೂರನೆಯ ದೃಷ್ಟಾಂತವಾಗಿ, ಮುದ್ರಣ ಸ್ವಾತಂತ್ರ್ಯವನ್ನು ಪ್ರತಿಪಾದಿಸಿ ಮಿಲ್ಟನ್ ಮಹಾಕವಿ ಬರೆದ ಶ್ರೇಷ್ಠ ನಿಬಂಧದಿಂದ ಒಂದು ಭಾಗವನ್ನು ತೆಗೆದು ಕೊಳ್ಳಿ. ಅದರಲ್ಲಿ, ಒಂದು ಗ್ರಂಥವು ಉತ್ಕರ್ಷದ ಎಲ್ಲೆಯನ್ನು ಮುಟ್ಟಿದಾಗ ಅದರ ನಿಜಸ್ವರೂಪವು ಯಾವುದು, ಅದು ಜೀವಂತನಾದ ಒಬ್ಬ ಮನುಷ್ಯನಿಗಿಂತಲೂ ಹೇಗೆ ಮಿಗಿಲು—ಎಂಬ ತತ್ತ್ವವನ್ನು ಕ್ರಮಕ್ರಮವಾಗಿ, ಉತ್ಕಟತರವಾಗಿ ಏರು ತ್ತಿರುವ ಪ್ರತಿಭೆಯಿಂದ ಮಿಲ್ಟನ್ನನು ಅಲ್ಲಿ ಅರಿತುಕೊಳ್ಳುವಂತೆ ತೋರುತ್ತದೆ. ಒಬ್ಬ ಮನುಷ್ಯನನ್ನು ಕೊಲ್ಲುವುದಂತೂ ಪಾಪವೇ ಸರಿ; ಅದು ಭಗವಂತನ ಪ್ರತಿ ಬಿಂಬವನ್ನು ಕೊಂದಂತಾಗುತ್ತದೆ. ಆದರೆ, ಒಂದು ಉತ್ತಮ ಗ್ರಂಥವನ್ನು ಕೊಲ್ಲುವುದೆಂದರೆ, ಒಬ್ಬ ಮನುಷ್ಯನ ವಿಚಾರದ ಸಾರಸರ್ವಸ್ವವನ್ನು ಕೊಂದ ಹಾಗೆ; "ಭಗವಂತನ ಪ್ರತಿಬಿಂಬವನ್ನು ಕಣ್ಣು ಕಿತ್ತು ಕೊಂದ ಹಾಗೆ." ಏಕೆಂದರೆ ಆ ಮನುಷ್ಯನಾಗಲಿ ಮತ್ತೊಬ್ಬನಾಗಲಿ, ಯಾವನೂ ಮರ್ತ್ಯನೇ ಸರಿ; ಆದುದ ರಿಂದ ಕೊಂಚ ಕಾಲದೊಳಗೇ ಹೇಗಿದ್ದರೂ ಮೃತಿ ಹೊಂದುವನು; "ಆದರೆ ಒಂದು ಉತ್ತಮ ಗ್ರಂಥವು ಮಹಾ ಚೇತನನೊಬ್ಬನ ಅನರ್ಘ್ಯವಾದ ಜೀವಸಾರ; ಜೀವಿತದ ಮುಂದಿನ ಜೀವಿತಕ್ಕಾಗಿ ಶೇಖರಿಸಿದ ಜೀವಸಾರ." ಅಮರವಾದ ಪ್ರಾಚೀನ ಮಹಾಗ್ರಂಥಗಳಲ್ಲಿ ಕೆಲವನ್ನು ಕೈಗೆ ತೆಗೆದುಕೊಂಡಾಗ, ಈ ವಚನವು ಎಷ್ಟು ಉಚಿತವಾಗಿ ಸ್ಫುರಿಸಿ ಅವುಗಳ ಮೇಲೆ ಬೆಳಕನ್ನು ಬೀರುವುದು. ನನ್ನ ಮನಸ್ಸು ಸಹಜವಾಗಿ ತಿರುಗುವುದು ನನ್ನ ಉದ್ಯೋಗದ ಸಾಧನವಾದ ಕೆಲವು ಗ್ರೀಕ್ ರುದ್ರನಾಟಕಗಳ ಕಡೆಗೆ, ಈಸ್ಕಿಲಸ್ಸನ "ಅಗಮೆಮ್ನನ್", ಯೂರಿಪಿಡೀಸನ

"ಟ್ರಾಯ್‌ನಗರದ ನಾರಿಯರು"– ಇತ್ತ ಕಡೆಗೆ. ಬರೆದು ಎರಡುಸಾವಿರಕ್ಕೆ ಮೀರಿದಷ್ಟು ವರ್ಷಗಳು ಗತಿಸಿದ ಮೇಲೆ, ಇಂದು ಅವನ್ನು ಮತ್ತೆ ಮತ್ತೆ ಓದಬೇಕೆನ್ನಿಸುವುದು ಏತರಿಂದ ? ತನ್ನ ಜೀವವನ್ನೇ ಸಮಗ್ರವಾಗಿ ಕಲಕಿಬಿಡುವ ಶಕ್ತಿ ಅದಕ್ಕೆ ಇನ್ನೂ ಇರುವುದು ಏತರಿಂದ ? ಇದೇ ಉತ್ತರ ; ಮಿಲ್ಟನ್ನನು ಹೇಳಿರುವಷ್ಟು ಮಾತ್ರವೇ ; ಸ್ವಲ್ಪವೂ ಹೆಚ್ಚು ಕಡಮೆಯಿಲ್ಲ : ಅದು "ಮಹಾ ಚೇತನನೊಬ್ಬನ ಅನರ್ಘ್ಯವಾದ ಜೀವಸಾರ ; ಜೀವಿತದ ಮುಂದಿನ ಜೀವಿತಕ್ಕಾಗಿ ಶೇಖರಿಸಿದ ಜೀವಸಾರ."

"ರಹಸ್ಯ ಸಾಕ್ಷಾತ್ಕರಣ"ವೆಂದು ನಾನು ಧೈರ್ಯಮಾಡಿ ಹೆಸರು ಕೊಡುವ ಅಂಶವನ್ನುಳ್ಳ ಬರವಣಿಗೆಗೆ ಮೂರು ಉದಾಹರಣೆಗಳನ್ನು ನಾನು ತೆಗೆದುಕೊಂಡಿದ್ದೇನೆ. ಇನ್ನು ಮುಂದುವರಿಯುವ ಮೊದಲು, ಇವುಗಳ ಮೇಲಿನ ಕೆಲವು ಟೀಕೆಗಳಿಗೆ ಉತ್ತರ ಕೊಡುವುದು ಉಚಿತ. ಮೊದಲು, ನಮ್ಮ ವಿದಗ್ಧನು–ಈತನಿಗೆ ಈ ಉಪನ್ಯಾಸದ ಪ್ರಾರಂಭದಲ್ಲಿ ನಾವು ಕೊಂಚ ಅಸಮಾಧಾನವನ್ನುಂಟುಮಾಡಿದ್ದೆವು—ಈ ವಿದಗ್ಧನು ಅಡ್ಡಗಟ್ಟುವನು. ಆತನು ಹೇಳುವುದೇನೆಂದರೆ—"ಸತ್ಯವೂ ಸೌಂದರ್ಯವೂ ಒಂದೇ ಎಂಬ ಅತ್ಯಸ್ಫುಟವೂ ಅತಿ ಸಂದಿಗ್ಧವೂ ಆದ ಸಿದ್ಧಾಂತವೊಂದರ ತಳಹದಿಯ ಮೇಲೆಯೇ ಕೀಟ್ಸ್ ಕವಿಯಲ್ಲಿ ನಿಮಗಿರುವ ಅಭಿಮಾನವು ನಿಂತಂತೆ ಕಾಣಿಸುತ್ತದೆ. ನನ್ನ ಮಟ್ಟಿಗಂತೂ, ಅದು ನಿಜವೋ ಸುಳ್ಳೋ ಎಂಬುದರಲ್ಲಿ ತೃಣಮಾತ್ರವೂ ಲಕ್ಷ್ಯವಿಲ್ಲ ; ನನ್ನ ಲಕ್ಷ್ಯವೆಲ್ಲಾ, ಆ ಕವನದಲ್ಲಿ ಅದಕ್ಕೆ ಸ್ಥಾನವಿದೆಯೆ, ಔಚಿತ್ಯವಿದೆಯೆ ಎಂಬುದರ ಕಡೆಗೆ. ಒಂದುವೇಳೆ ಅದು ನಿಜವೆಂದು ಭಾವಿಸಿದರೂ, ಕೀಟ್ಸ್ ಕವಿಯ ಕೃತಿಯಲ್ಲಿ ಅದು ಒಂದು ತುಣುಕು ಮಾತ್ರ. ಅವನ ಉಳಿದ ಕೃತಿಯೆಲ್ಲದರ ಮಾತು ಹೇಗೆ ? ನೀವು 'ರಹಸ್ಯಸಾಕ್ಷಾತ್ಕರಣ'ವೆಂದು ವರ್ಣಿಸುತ್ತೀರಲ್ಲ, ಈ ಜಾತಿಯ ತರ್ಕಾತಿರಿಕ್ತ ವಚನಗಳ ಸುಳಿವೇ ಅದರಲ್ಲಿ ಪ್ರಾಯಶಃ ದೊರೆಯುವುದಿಲ್ಲ ; ಹೀಗಿರುವುದೇ ಕವಿಗೆ ಭೂಷಣ. ಕೀಟ್ಸ್ ಕವಿಯ ಉತ್ಕರ್ಷವೆಲ್ಲಾ, ಅವನ ಕೃತಿಯಲ್ಲಿ ಸಿಕ್ಕುವ ಜೀವನ ವಿಚಾರದ ಒಂದೆರಡು ನೀತಿವಚನಗಳ ಮೇಲೆ ನಿಲ್ಲಬೇಕೊ ?–ಆ ಪಕ್ಷಕ್ಕೆ ಅಂಥ ವಚನಗಳು ಇಲ್ಲಿಗಿಂತ ಎಷ್ಟೋ ಹೇರಳವಾಗಿ ಹುಲುಗವಿಗಳಲ್ಲಿ ಸಿಕ್ಕುತ್ತವೆ, ಬಹುಶಃ ಅವುಗಳ ಸತ್ಯಾಂಶವೂ ಇನ್ನೂ ಅಧಿಕವಾಗಿರುತ್ತದೆ. ಹೀಗಿಲ್ಲದಿದ್ದರೆ, ಅವನ ಸಮಗ್ರ ಕೃತಿಯ ಪರಮ ಸೌಂದರ್ಯದ ಮೇಲೆಯೋ ಆ ಉತ್ಕರ್ಷವು ನಿರ್ಭಯವಾಗಿ ನಿಲ್ಲಬೇಕೋ ? ನಿಮಗೇ ಚೆನ್ನಾಗಿ ಗೊತ್ತಿದೆ : ಈ ಎರಡನೆಯದೇ ಸರಿಯಾದ ತಳಹದಿ."

ಇದಕ್ಕೆ ಉತ್ತರಕೊಡುವುದು ಹೇಗೆ ? ಆಗಲಿ, ಮೊಟ್ಟಮೊದಲು ಒಂದು ವಿಷಯವನ್ನು ತಿಳಿಯಪಡಿಸಬೇಕು : ನಾನು ವಾಕ್ಯಗಳನ್ನು ಹೀಗೆ ಬಿಡಿಬಿಡಿಯಾಗಿ

ಆರಿಸಿಕೊಂಡದ್ದು ಸೌಕರ್ಯಕ್ಕೋಸ್ಕರ. ''ರಹಸ್ಯ ಸಾಕ್ಷಾತ್ಕರಣ''ವೆಂದು ನಾನು ಭಾವಿಸುತ್ತಿರುವುದು ಒಂದು ವಾಕ್ಯದೊಳಗೇ ವ್ಯಕ್ತವಾಗಿದ್ದ ಪಕ್ಷದಲ್ಲಿ ಅದು ಏನೆಂಬುದನ್ನು ವಿವರಿಸುವುದು ನನಗೆ ಸುಲಭತರವೆಂದು ಹೀಗೆ ಮಾಡಬೇಕಾಯಿತು. ಆದರೆ ಈ ''ಸಾಕ್ಷಾತ್ಕರಣ''ದ ಅಂಶವು ಯಾರಲ್ಲಿ ಅತಿಶಯವಾಗಿ ಉಂಟೋ ಅಂಥ ಲೇಖಕರು ತಮ್ಮ ಸಾಕ್ಷಾತ್ಕಾರವನ್ನು ಸಾಮಾನ್ಯವಾಗಿ ಸೂತ್ರರೂಪದಲ್ಲಿ ಛಟ್ಟಿ ಯಿಳಿಸುವುದಿಲ್ಲ, ಅದು ಅವರ ಸಮಗ್ರ ಕೃತಿಯಿಂದ ಹೊರಹೊಮ್ಮುವ ಪ್ರಭೆ. ಲೌಕಿಕ ಜೀವನದಲ್ಲಿಯೂ ಹೀಗೆಯೇ. ಒಬ್ಬ ಮನುಷ್ಯನ ಬದುಕುಬಾಳಿಲ್ಲದರ ನಿದರ್ಶನವು ಯಾವ ಸ್ಫೂರ್ತಿಯನ್ನು ಬೀರುತ್ತದೆಯೋ, ಅದರಲ್ಲಿ ಒಂದು ಪಾಲನ್ನಾದರೂ ಆತನು ಉಚ್ಚರಿಸಬಹುದಾದ ನೀತಿಸೂತ್ರಗಳು ಬೀರಲಾರವು. ಷೆಲ್ಲಿ ಕವಿಯಂತೂ ಈ ಸಾಕ್ಷಾತ್ಕರಣ ಶಕ್ತಿಯಿಂದ ತುಂಬಿ ತುಳುಕುತ್ತಾನೆ. ಆತನ ಕೃತಿಯನ್ನು ಓದಿ, ಆತನ ಹೃದಯವನ್ನು ಒಂದು ಬಾರಿ ಹೊಕ್ಕುಬಿಟ್ಟವನಿಗೆ ಈ ಜಗತ್ತು ಮೊದಲಿನಂತೆ ಮತ್ತೆ ಎಂದೆಂದಿಗೂ ತೋರದು. ಇದೇ ಮಾತು ಗಯಟೆಯನ್ನು ಕುರಿತೂ ನಿಜ; ಈಸ್ಕಿಲಸ್, ಯೂರಿಪಿಡೀಸ್ ಮೊದಲಾದ ಕೆಲವರು ಗ್ರೀಕ್ ಕವಿಗಳನ್ನು ಕುರಿತೂ ನಿಸ್ಸಂದೇಹವಾಗಿ ನಿಜ. ಆದರೆ ಅವರ ಗ್ರಂಥಗಳಿಂದ ಯಾವುವಾದರೂ ಬಿಡಿ ವಾಕ್ಯಗಳನ್ನು ಇದೇ ಅವರ ಸಿದ್ಧಾಂತದ ಸಾರ ಸಂಗ್ರಹವೆಂದು ಆಯ್ದು ತೋರಿಸುವುದು ಮಾತ್ರ ಕಷ್ಟ. ಟಾಲ್‌ಸ್ಟಾಯಿಯ ವಿಷಯವು ಕೂಡ ಹೀಗೆಯೇ. ಆತನಲ್ಲಿ ಈ ಸಾಕ್ಷಾತ್ಕರಣಶಕ್ತಿ ಅತ್ಯಂತವಾಗಿ ಉಂಟು; ಅಲ್ಲದೆ, ಆತನು ತನ್ನೊಳಗೆ ಜ್ವಲಿಸುತ್ತಿದ್ದ ಸಂದೇಶವನ್ನು ಸ್ಪಷ್ಟೋಕ್ತಿಗಳಲ್ಲಿ ನಿರೂಪಿಸಬೇಕೆಂದು ಸಂತತವಾಗಿ ಪ್ರಯತ್ನಿಸುತ್ತಿದ್ದವನು; ಉದ್ದೇಶಪೂರ್ವಕವಾಗಿ ಹಠಹಿಡಿದು ಪ್ರಯತ್ನಿಸುತ್ತಿದ್ದವನು. ಅಂಥ ಟಾಲ್‌ಸ್ಟಾಯ್ ಕೂಡ ಅದನ್ನು ಸರಿಯಾಗಿ ವ್ಯಕ್ತಪಡಿಸಲಾರದೆ ಹೋಗಿದ್ದಾನೆ. ಆತನು ತನ್ನ ಧರ್ಮಗ್ರಂಥಗಳಲ್ಲಿ ಮುಟಿಗೆಗಟ್ಟಳೆಯ ನಿಯಮಗಳನ್ನು ವಿಧಿಸಿದ್ದಾನೆ: ಅವುಗಳಲ್ಲಿ ಕೆಲವು ಸಂಗತವಾದುವು. ಕೆಲವು ಅಷ್ಟು ಅಲ್ಲದುವು; ಕೆಲವು ತರ್ಕಾತಿರಿಕ್ತವಾದುವು, ಅತಿ ನೃಶಂಸವಾದುವು; ಹಲವು ಉಜ್ವಲವಾದುವು ಉದ್ದೀಪಕವಾದುವು. ಆದರೂ ಆತನು ವಿಶ್ವರಹಸ್ಯವನ್ನು ಕುರಿತು ಕಂಡುಹಿಡಿದು, ಉಪದೇಶಿಸಲು ಕೈಕೊಂಡಿದ್ದ ಪ್ರಧಾನ ತತ್ತ್ವದ ಪೂರ್ಣ ನಿರೂಪಣೆ ಮಾತ್ರ ಯಾವಾಗಲೂ ಆ ನಿಯಮಗಳಿಗೆ ನಿಲುಕಲಿಲ್ಲ. ಕೀಟ್ಸ್ ಕವಿಯ ಸಂದೇಶವೆನ್ನುವುದು ಯಾವುದೋ ಅದು ಕೀಟ್ಸ್ ಕವಿಯ ಸಮಗ್ರ ಕೃತಿಯೊಳಗಿದೆ; ಆಕಸ್ಮಿಕವಾಗಿ ಅದರ ಬಹುಭಾಗವು ಒಂದು ಬಿಡಿ ವಾಕ್ಯದಲ್ಲಿ ಸಂಗ್ರಹಗೊಂಡಿರಬಹುದು, ಅಷ್ಟೇ. ಪ್ಲೇಟೋವಿನ ಸಂದೇಶವಿರುವುದು ಸಮಗ್ರ ಪ್ಲೇಟೋವಿನಲ್ಲಿ; ಟಾಲ್‌ಸ್ಟಾಯಿಯದು ಸಮಗ್ರ ಟಾಲ್‌ಸ್ಟಾಯಿಯಲ್ಲಿ. ರೆನಾನ್ ಎಂಬಾತನು ಬರೆದ ''ಯೇಸುವಿನ ಜೀವಿತ''ದಲ್ಲಿ ಒಂದು ರಮ್ಯ ಸಂದರ್ಭವಿದೆ. ಅದರಲ್ಲಿ ತಿಳಿಯಬರುವುದೇನೆಂದರೆ: ''ನಿನ್ನ ಸಿದ್ಧಾಂತವು ಯಾವುದು; ಯಾವ ವಿಶಿಷ್ಟ ಧರ್ಮತತ್ತ್ವ

ಗಳನ್ನು ನೀನು ಉಪದೇಶಿಸಲು ಹೊರಟಿರುವೆ" ಎಂದು ಯಾರೋ ಕೇಳಿದ ಪ್ರಶ್ನೆಗೆ ನೇರವಾದ ಉತ್ತರವನ್ನು ಕೊಡುವುದಕ್ಕೆ ಯೇಸುವಿಗೆ ಆಗಲಿಲ್ಲ. ಸಿದ್ಧಾಂತ ಸೂತ್ರಗಳ ಪಟ್ಟಿಯೊಂದನ್ನು ಕೊಡುವುದಕ್ಕಂತೂ ಆತನಿಗೆ ಸಾಧ್ಯವಾಗಲಿಲ್ಲ. ಆತನಿಗೆ ಹೇಳಲು ಸಾಧ್ಯವಾದದ್ದು ಇಷ್ಟೇ : "ನನ್ನನ್ನು ಅನುಸರಿಸು". ಒಬ್ಬ ಮನುಷ್ಯನ ಸಂದೇಶವು ಅವನಿಂದ ಹೊರಹೊಮ್ಮಬೇಕು ; ಎಂದಿಗೂ ಅದನ್ನು ಒಂದೆರಡು ವಾಕ್ಯಗಳಲ್ಲಿ ಸಂಗ್ರಹಿಸಲಾಗಿರುವುದಿಲ್ಲ.

ಈಗ ನಾವು ಕೀಟ್ಸ್ ಕವಿಯ ಬಳಿಗೂ ನಮ್ಮ ವಿದಗ್ಧನ ಕಡೆಗೂ ಹಿಂದಿರುಗಿದರೆ, ಅವನಿಗೆ ಹೇಳಬೇಕಾದದ್ದು ಇಷ್ಟು : ಕೀಟ್ಸ್ ಕವಿಯ ಉತ್ಕರ್ಷವು ನಿಲ್ಲುವುದು ಎಂದಿಗೂ ಆತನ ಒಂದೆರಡು ಹೇಳಿಕೆಗಳ ಸತ್ಯ ಪ್ರಾಧಾನ್ಯಗಳ ಮೇಲಲ್ಲ. ಆದರೆ ಅದು ಮುಖ್ಯವಾಗಿ ನಿಂತಿರುವುದು ಆತನ ಕೃತಿಯಲ್ಲೆಲ್ಲಾ ಗೋಚರಿಸುವ, ಪ್ರಖರ ಪ್ರತಿಭಾಶಕ್ತಿ, ಪ್ರದೀಪ್ತಾನುಭವಶಕ್ತಿಗಳ ಮೇಲೆ. ಒಂದೆರಡು ಕಡೆಗಳಲ್ಲಿ-ಎಂದರೆ, ಎಂಡಿಮಿಯನ್ ಕಾವ್ಯದ ಆರಂಭ ಭಾಗದಲ್ಲಿ, ಗ್ರೀಕ್ ಕಲಶದ ಮೇಲಿನ ಪ್ರಗಾಥದ ಕೊನೆಯ ಪದ್ಯದಲ್ಲಿ—ಧರ್ಮಸೂತ್ರಪ್ರಾಯವಾಗಿ ಈ ಶಕ್ತಿ ಪ್ರಸಂಗವಶದಿಂದ ರೂಪುಗೊಂಡಿದೆ.

ಸಾಹಿತ್ಯದಲ್ಲಿ ಬರುವ ಈ ಸಾಕ್ಷಾತ್ಕಾರಗಳನ್ನು ಕುರಿತು ಮತ್ತೊಂದು ಕೌತುಕದ ವಿಷಯವನ್ನು ಇನ್ನು ಗಮನಿಸೋಣ. ಅವು ಎಂದಿಗೂ ವಾಸ್ತವಾಂಶದ ನಿರೂಪಣೆಗಳಲ್ಲ. ಅವುಗಳಲ್ಲಿ ಎಂದಿಗೂ ನಿರುಕಾದ ಅಳತೆತೂಕವಿರುವುದಿಲ್ಲ. ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಅವುಗಳಲ್ಲಿ ಹೇಳಿರುವುದು ಹೊಸದಾಗಿ ಕಂಡುಹಿಡಿದ ವಿಷಯವು ಕೂಡ ನಿಜವಾಗಿ ಅಲ್ಲವೆಂದು ಹೇಳಿದರೂ ಅದರಲ್ಲಿ ಬಾಧಕವೇನೂ ತೋರುವುದಿಲ್ಲ. ಅವು ಈ ಪ್ರಪಂಚದಷ್ಟೇ ಪುರಾತನವಾದುವು ; ಅಲ್ಲವಾದರೆ ಗ್ರೀಕ್ ತತ್ತ್ವಜ್ಞರು, ಬೈಬಲ್ಲಿನಲ್ಲಿರುವ ಜೋಬನ ಉಪಾಖ್ಯಾನ—ಇವುಗಳಷ್ಟಾದರೂ ಪುರಾತನವಾದುವು. ಅವುಗಳ ಮಹತ್ತ್ವವು ಹೊಸದೊಂದು ಸಂಗತಿಯನ್ನು ತಿಳಿಸುವುದರಲ್ಲಿ ಅಡಗಿಲ್ಲ ; ಆ ಮಹತ್ತ್ವವಿರುವುದು ಇಲ್ಲಿ; ಒಬ್ಬನ ಗಮನವನ್ನೆಲ್ಲಾ, ಒಬ್ಬನ ಸಂಕಲ್ಪದ, ಕಲ್ಪನೆಯ ಗುರಿಯನ್ನೆಲ್ಲಾ ಜೀವನದ ಒಂದು ನಿರ್ದಿಷ್ಟ ಭಾಗದ ಕಡೆಗೆ ಥಟ್ಟನೆ ತಿರುಗಿಸುವುದರಲ್ಲಿ. "ಮನುಷ್ಯನು ಜನಿಸಿದ್ದು ಸ್ವಾತಂತ್ರ್ಯದಲ್ಲಿ ; ಅವನಿರುವುದು ಎಲ್ಲೆಲ್ಲೂ ಸಂಕಲೆಗಳಲ್ಲಿ." ಇದರೊಳಗೆ ಒಂದು ನಿಯತ ಭಾಗವು ಮಾತ್ರ ನಿಜ ; ಅಲ್ಲದೆ, ಎಷ್ಟು ಭಾಗವು ಹಾಗೆ ದಿಟವೋ ಅದಷ್ಟೂ ಲೇಶಮಾತ್ರಕ್ಕೂ ಹೊಸದಲ್ಲ. ಅದು ಒಂದು ವಾಸ್ತವಾಂಶವೆಂಬುದನ್ನು, ಅಷ್ಟು ಮಾತ್ರವನ್ನು, ಎಲ್ಲರೂ ತಿಳಿದಿದ್ದರು. ಆದರೆ ರೂಸೋ ಅದನ್ನು ಇತರರಿಗಿಂತ ವಿಶದತರವಾಗಿ ನಿರೂಪಿಸಿದನು ; ಬಹುಶಃ ತೀಕ್ಷ್ಣತರವಾಗಿ ಅನುಭವ ಮಾಡಿದನು, ಅದು ಮುಖ್ಯತರವೆಂದು ನಂಬಿದನು. ಇಷ್ಟಕ್ಕೇ ಬಿಡದೆ, ಅದರಿಂದ ಕೆಲವು ಸಿದ್ಧಾಂತಗಳನ್ನು

ಸಾಧಿಸಲು ಉದ್ದೇಶಿಸಿದನು; ಆ ಮಾತುಗಳನ್ನು ಓದುವಾಗ ಅಥವಾ ಮನನ ಮಾಡುವಾಗ ಯಾರನ್ನಾದರೂ ಉದ್ದೀಪಿಸತಕ್ಕದ್ದು ಮುಖ್ಯವಾಗಿ ಅವುಗಳಿಂದ ಸಾಧಿಸಬಹುದಾದ ಸಿದ್ಧಾಂತಗಳ ಊಹೆ. ಅವುಗಳನ್ನು ಬಿಡಿಸಿ ಹೇಳಿಲ್ಲ; ಮಸಕು ಮಸಕಾಗಿ ಬಿಟ್ಟಿದೆ. ಇದರಿಂದಲೇ ಅವುಗಳ ಶಕ್ತಿ ಇನ್ನೂ ಪ್ರಚಂಡವಾಗುತ್ತದೆ.

ಜೀವನವನ್ನು ಒಂದು ವಿಶಾಲವಾದ ಚಿತ್ರಶಾಲೆಯೆಂದೋ ವಿಚಿತ್ರ ವಸ್ತು ಸಂಗ್ರಹ ಶಾಲೆಯೊಂದೋ ಭಾವಿಸಿ; ಒಂದು ವಿಶಾಲವಾದ ಯಂತ್ರಗಳ ಕಾರ್ಖಾನೆ ಯೆಂದು ಭಾವಿಸಿದರೆ ಇನ್ನೂ ಉತ್ತಮ. (ಜೀವನವು ಇಷ್ಟೆಲ್ಲವೂ ಆಗಿದೆ, ಇನ್ನೂ ಇತರ ವಿಷಯಗಳೂ ಆಗಿದೆ.) ಅದರೊಳಗೆ ನೀವು ಪ್ರವೇಶಿಸಿ ಸಂಚರಿಸುತ್ತಿದ್ದೀರೆಂದು ಭಾವಿಸಿಕೊಳ್ಳಿ. ಒಂದು ವಸ್ತುಶಾಲೆಯೊಳಗೋ ಕಾರ್ಖಾನೆಯೊಳಗೋ ಒಬ್ಬ ಸಾಧಾರಣ ಮನುಷ್ಯನು, ಅದರ ವಿಚಾರವೇನೂ ತನಗೆ ಸರಿಯಾಗಿ ತಿಳಿಯದಿರುವಾಗ ಹೇಗೆ ನೋಡಿಕೊಂಡು ಹೋಗುತ್ತಾನೆಂದು ನೀವು ಬಲ್ಲಿರಿ. ಬುದ್ಧಿವಂತಿಕೆಯಿಂದ ನಿರೀಕ್ಷಿಸಲು ನೀವು ತುಂಬ ಯತ್ನಿಸುತ್ತೀರಿ; ಆದು ಸಾಗದಿದ್ದರೆ ನಿಮ್ಮ ಮಂಕನ್ನು ಮುಚ್ಚಿಕೊಳ್ಳಲು ಯತ್ನಿಸುತ್ತೀರಿ. ಅಲ್ಲಿರುವುದರ ಸ್ವಾರಸ್ಯವನ್ನು ಕಂಡುಕೊಳ್ಳಲು ನಿಮಗೆ ಇಷ್ಟವುಂಟು: ಅದರಲ್ಲಿ ಸ್ವಾರಸ್ಯವುಳ್ಳದ್ದು ಯಾವುದೋ ಇಲ್ಲದ್ದು ಯಾವುದೋ ನಿಮಗೆ ತಿಳಿಯದು. ಕೆಲವು ಮಾದರಿಗಳು ಚೆನ್ನಾಗಿರುವಂತೆ ನಿಮಗೆ ತೋರುತ್ತದೆ; ಕೆಲವು ಯಂತ್ರಗಳು ತುಂಬ ಶಕ್ತಿಮಯವಾಗಿರುವಂತೆ ತೋರುತ್ತದೆ; ಅಲ್ಲಿ ಉರಿಯುವ ಜ್ವಾಲೆಗಳು ನಿಮ್ಮ ಕಣ್ಣನ್ನು ಕುಕ್ಕುತ್ತವೆ, ನಿಮ್ಮನ್ನು ವಿನೋದಗೊಳಿಸುತ್ತವೆ. ಅಲ್ಲಿಯ ಕೆಲಸಗಾರರನ್ನು ಕುರಿತು ನಿಮಗೆ ಒಳಗೇ ಕುತೂಹಲವೂ, ಅವರೊಡನೆ ಮಾತನಾಡಲಾದೀತೆ ಎಂಬ ಆಕಾಂಕ್ಷೆಯೂ ಹುಟ್ಟುತ್ತವೆ. ಆದರೆ ಒಟ್ಟಿನಲ್ಲಿ, ಮತ್ತೊಂದು ಕೊನೆಯಿಂದ ಹೊರಕ್ಕೆ ಬರುವ ಹೊತ್ತಿಗೆ ನೀವು ಬೇಸರಪಟ್ಟು ತಕ್ಕಮಟ್ಟಿಗೆ ಉತ್ಸಾಹಗುಂದಿ ಹೋಗಿರುತ್ತೀರಿ; ಅಲ್ಲಿ ಹೊಕ್ಕು ಪರಿಶೀಲಿಸಿದ್ದರಿಂದ ನಿಮಗೆ ಯಾವ ಪ್ರಯೋಜನವೂ ಲಭಿಸಿದ ಹಾಗೆಯೇ ಇರುವುದಿಲ್ಲ. ಅವಿದ್ಯಾವಂತನಾದ ಪಡ್ಡನೊಬ್ಬನು, ತನಗೆ ಸಹಾಯಕರು ಯಾರೂ ಇಲ್ಲದಿರುವಾಗ, ಜೀವನದೊಳಗೆ ಸಾಗುವುದು ಹೀಗೆ.

ಇನ್ನೊಂದು ಸಲ, ಅದೇ ವಸ್ತುಶಾಲೆಯೊಳಗೋ ಕಾರ್ಖಾನೆಯೊಳಗೋ ತುಂಬ ದಕ್ಷನಾದ ಮಾರ್ಗದರ್ಶಿಯೊಂದಿಗೆ ನೀವು ನೋಡಿಕೊಂಡು ಹೋಗುತ್ತೀ ರೆಂದು ಭಾವಿಸಿ. ವಸ್ತುಶಾಲೆಯಲ್ಲಿ, ಆ ಮಾದರಿಗಳೆಲ್ಲವೂ ಯಾವ ಯಾವುವು; ಯಾವುದು ಅಪೂರ್ವ, ಯಾವುದು ಸಾಧಾರಣ; ಅವುಗಳ ಸ್ವಾರಸ್ಯವು ಅಡಗಿರುವು ದೆಲ್ಲಿ—ಇದೆಲ್ಲವೂ ಅವನಿಗೆ ಗೊತ್ತು. ಆ ವಸ್ತುಗಳ ಕಡೆಗೆ ನಿಮ್ಮ ಲಕ್ಷ್ಯವನ್ನು ಎಳೆಯುತ್ತಾನೆ, ಅವುಗಳ ಹೃದಯವು ನಿಮಗೆ ಹಿಡಿಯುವಂತೆ ಮಾಡುತ್ತಾನೆ, ಅವುಗಳಲ್ಲಿ ನೀವಾಗಿಯೇ ಕಾಣಲಾಗದಿದ್ದ ನೂರಾರು ವಿವರಗಳನ್ನು—ಆ

ಒಂದೊಂದು ವಿವರವೂ ಅರ್ಥಪೂರ್ಣವಾದದ್ದು —ನೀವು ಕಾಣುವಂತೆ ಮಾಡುತ್ತಾನೆ. ಕಾರ್ಖಾನೆಯಲ್ಲಿ, ಆ ವಿವಿಧ ಯಂತ್ರಗಳು ಕೆಲಸಮಾಡುವ ರೀತಿಯನ್ನು ತೋರ್ಪಡಿಸುತ್ತಾನೆ, ಅವುಗಳನ್ನು ನಿರ್ಮಿಸಿದ ಬಗೆಯನ್ನೂ ಆ ನಿರ್ಮಾಣದಿಂದ ಸಂಭವಿಸಿದ ವ್ಯತ್ಯಾಸ ಪರಿಣಾಮಗಳನ್ನೂ ತಿಳಿಯಹೇಳುತ್ತಾನೆ; ವಿಶೇಷ ಕುಶಲಿಯಾದ ಒಬ್ಬ ಕೆಲಸಗಾರನನ್ನು ನೋಡಲು ನಿಮ್ಮನ್ನು ಕರೆದುಕೊಂಡು ಹೋಗಿ ಆತನ ಕೌಶಲವೆಲ್ಲಿದೆಯೆನ್ನುವುದನ್ನು ನಿಮ್ಮ ಅವಗಾಹನೆಗೆ ತಂದುಕೊಡುತ್ತಾನೆ; ಯಂತ್ರಗಳ ಚಾತುರ್ಯವನ್ನೂ ಸೌಂದರ್ಯವನ್ನೂ ನಿಮ್ಮ ಮನಸ್ಸಿಗೆ ಮುಟ್ಟಿಸುತ್ತಾನೆ. ವಿದಗ್ಧನೆಂದು ಜನರು ಕರೆಯತಕ್ಕ ಯೋಗ್ಯ ಶಿಕ್ಷಕನೊಬ್ಬನ ಸಹಾಯವನ್ನೂ ಸಲಹೆಯನ್ನೂ ಪಡೆದು ಜೀವನದೊಳಗೆ ಸಾಗುವುದು ಹೀಗೆ.

ಈಗ ಮೂರನೆಯ ಸಂದರ್ಭ. ನೀವು ಆ ಸ್ಥಳವನ್ನು ನೋಡಲು ಹೋದ ದಿನ ಎಂದಿನಂತಿನ ಮಾರ್ಗದರ್ಶಿ ಸಿಕ್ಕಲಿಲ್ಲವೆಂದು ಭಾವಿಸಿ. ಮಾರ್ಗದರ್ಶಿಯು ಕಸಬಿನಲ್ಲಿಲ್ಲದಿದ್ದರೂ ಅದೇ ಸಂಸ್ಥೆಯ ಒಂದು ಭಾಗದಲ್ಲಿ ಕೆಲಸಮಾಡತಕ್ಕವ; ನೊಬ್ಬನು ಅವನಿಗೆ ಬದಲಾಗಿ ನಿಮ್ಮನ್ನು ಕರೆದುಕೊಂಡು ಹೋಗುತ್ತಾನೆ. ಅವನ ಸಂಗಡ ಹೋಗುವಾಗ, ಅನೇಕ ಭಾಗಗಳ ವಿಚಾರವಾಗಿ ಅವನಿಗೇ ಏನೂ ತಿಳಿಯದೆಂದೂ, ಕಡೆಯ ಪಕ್ಷ ಅವುಗಳನ್ನು ಕುರಿತು ಹೇಳತಕ್ಕದ್ದೇನೂ ಅವನಿಗೆ ತೋರದೆಂದೂ ನಿಮಗೆ ಕಂಡುಬರುತ್ತದೆ. ಆದರೆ ತನಗೆ ಸಂಬಂಧಪಟ್ಟ ವಿಷಯಕ್ಕೆ ಬಂದಾಗ ಅವನು, ಹಿಂದಿನ ಮಾರ್ಗದರ್ಶಿ ಹೇಳಿದ್ದನ್ನು ಮಾತ್ರವೇ ಅಲ್ಲ, ಆತನು ಅಷ್ಟೇನೂ ಮುಖ್ಯವಲ್ಲವೆಂದು ಹೇಳದೆ ಉಪೇಕ್ಷಿಸಿದ್ದ ಹಲವು ಸಂಗತಿಗಳನ್ನೂ ನಿಮಗೆ ತಿಳಿಯಪಡಿಸುತ್ತಾನೆ. ಅವುಗಳ ವಿಚಾರವಾಗಿ ಅವನ ವಿವರಣೆಯನ್ನು ಈಗ ನೀವು ಕೇಳುವಾಗ ಅವು ತಲಸ್ಪರ್ಶಿಯೆಂದೂ ಗಂಭೀರವೆಂದೂ ನೂತನವೆಂದೂ ನಿಮಗೆ ತೋರುತ್ತದೆ; ಅಲ್ಲದೆ, ನಿಮ್ಮೊಡನೆ ಮಾತಾಡುತ್ತಿರುವ ಮನುಷ್ಯನು ಮಹಾವಿಷಯವೊಂದನ್ನು ಕಂಡುಹಿಡಿದಿದ್ದಾನೆಂದೋ ಕಂಡುಹಿಡಿಯುವುದರಲ್ಲಿದ್ದಾನೆಂದೊ ನಿಮಗೆ ಕ್ರಮಕ್ರಮವಾಗಿ ಅರಿಕೆಯಾಗುತ್ತದೆ. ಆ ವಸ್ತುಶಾಲೆಯಲ್ಲಿ ಒಂದಕ್ಕೊಂದಕ್ಕೆ ಸಂಬಂಧವಿಲ್ಲದಂತೆ ತೋರುವ ಮಾದರಿಗಳನ್ನು ತೆಗೆದುಕೊಳ್ಳುತ್ತಾನೆ; ಒಂದರ ಪಕ್ಕದಲ್ಲಿ ಒಂದನ್ನು ಇಟ್ಟರೆ ಥಟ್ಟನೆ ಹೊಸ ಸೂಚನೆಗಳ ಪ್ರವಾಹವೊಂದು ಉಕ್ಕುವುದನ್ನು ತೋರಿಸುತ್ತಾನೆ; ಇದುವರೆಗೆ ಯಾರೂ ಕೇಳಿಲ್ಲದ, ಆದರೆ ಕೇಳಿದ ಕೂಡಲೆ ಉತ್ತರವನ್ನು ದೊರಕಿಸಿಯೇ ದೊರಕಿಸುವ ಪ್ರಶ್ನೆಗಳ ತರಂಗವೊಂದು ಏಳುವುದನ್ನು ತೋರಿಸುತ್ತಾನೆ. ನೀವು ಹಿಂದಿರುಗುವ ಹೊತ್ತಿಗೆ ಹೊಸ ಜ್ಞಾನದಿಂದ ತುಂಬಿರುವುದಕ್ಕಿಂತ ಹೆಚ್ಚಾಗಿ, ಕುತೂಹಲದಿಂದಲೂ ಲವಲವಿಕೆಯಿಂದಲೂ ಚಡಪಡಿಸುತ್ತಿರುತ್ತೀರಿ; ಭವಿಷ್ಯತ್ತಿನೊಳಕ್ಕೆ ಹೋಗುವ ಹಾದಿಯೊಂದರಲ್ಲಿ ಹೆಜ್ಜೆಯಿಟ್ಟಂತೆ ಅನುಭವ ಹೊಂದಿರುತ್ತೀರಿ. ಅಂತೂ, ಒಂದು ವಸ್ತುವನ್ನೇ

ವಸ್ತು ಸಮುದಾಯವನ್ನೋ ಎಷ್ಟು ಆಳವಾಗಿ ನೀವು ನಿರೀಕ್ಷಿಸಿರುತ್ತೀರೆಂದರೆ—ಒಂದೆ ನೀವು ತರ್ಕಿಸದಿದ್ದ ರಹಸ್ಯವೊಂದನ್ನು ಅದು ಹೊರಪಡಿಸಿ, ಜೀವನದ ಒಂದು ವಿಭಾಗದ ಮೇಲೆ ಬೆಳಕನ್ನು ಎರಚಿರುತ್ತದೆ. ಆವೇಶ ಪ್ರದವಾದ ಸಾಹಿತ್ಯದ ಕೈಕೆಳಗೆ ನಾವು ಜೀವನ ಮಾರ್ಗದಲ್ಲಿ ಸಾಗುವುದು ಇದರ ಹಾಗೆಂದು ನಾನು ಭಾವಿಸುತ್ತೇನೆ.

ಬುದ್ಧಿಯ ದೃಷ್ಟಿಯಿಂದ ಹೇಳುವುದಾದರೆ, ಒಬ್ಬ ಮನುಷ್ಯನಿಗೂ ಮತ್ತೊಬ್ಬನಿಗೂ ಇರತಕ್ಕ ಮುಖ್ಯವ್ಯತ್ಯಾಸವೆಲ್ಲಾ ಅವರು ಒಂದು ಘನಗಜದಷ್ಟು ಪ್ರಪಂಚ ಭಾಗದಲ್ಲಿ ಎಷ್ಟೆಷ್ಟು ವಿಷಯಗಳನ್ನು ಕಾಣಬಲ್ಲರೆನ್ನುವುದೇ ಆಗಿದೆ. 1867ರಲ್ಲಿ ನಾರ್ವಿಚ್ಚಿನ ಕೆಲಸಗಾರರಿಗೆ ಹಕ್ಸ್‌ಲಿ ಅವರು "ಒಂದು ಚೂರು ಸೀಮೆಯಸುಣ್ಣ"ದ ಮೇಲೆ ಕೊಟ್ಟ ಪ್ರಖ್ಯಾತವಾದ ಉಪನ್ಯಾಸವು ನಿಮಗೆ ಗೊತ್ತೆ ? ಆ ಒಂದು ಚೂರು ಸೀಮೆಯ ಸುಣ್ಣವು ಅವರಿಗೆ ತಿಳಿಸಿದ್ದೇನು ?—ಅನಾದಿಯಾದ ಭೂತಕಾಲದ ರಹಸ್ಯಗಳು, ಅಗಾಧವಾದ ಸಾಗರತಲದ ರಹಸ್ಯಗಳು ! ಒಂದು ಗ್ರಂಥದ ವಿಷಯವೂ ಹೀಗೆಯೇ. 'ಮೆಕ್‌ಬೆತ್' ನಾಟಕದ ಪ್ರತಿಯೊಂದನ್ನು ನಾನು ಒಂದು ಸಲ ಕೈಗೆ ಎತ್ತಿಕೊಂಡದ್ದು ನನಗೆ ನೆನಪಿದೆ. ಅದು ಷೇಕ್ಸ್‌ಪಿಯರ್ ವ್ಯಾಸಂಗದಲ್ಲಿ ಉದ್ದಾಮ ವಿದ್ವಾಂಸರಾದ ಆ್ಯಂಡ್ರೂ ಬ್ರಾಡ್ಲಿಯವರದು; ಅದರಲ್ಲಿ ಅವರು ಸೀಸದಕಡ್ಡಿಯಿಂದ ಪುಟದ ಮಗ್ಗುಲುಗಳಲ್ಲಿ ಗುರುತುಮಾಡಿದ್ದ ಟಿಪ್ಪಣಿಗಳನ್ನು ಹಾಗೆಯೇ ಓದಿದೆನು. ಆ ದೃಶ್ಯವು ನನಗೆ ಬಾಯಿಗೆ ಬರುತ್ತಿದ್ದದ್ದು ; ಅರ್ಥವಾಗಿದೆಯೆಂದು ನಾನು ತಿಳಿದುಕೊಂಡಿದ್ದದ್ದು. ಆದರೆ ಪುಟಪುಟದಲ್ಲಿಯೂ ಐದಾರು ಅಂಶಗಳು ನನಗೆ ಹೊಳೆದಿರಲಿಲ್ಲವೆಂದು ಅವರ ಟಿಪ್ಪಣಿಗಳಿಂದ ನನಗೆ ಗೊತ್ತಾಯಿತು. ಜೀವನದ ವಿಶಿಷ್ಟ ಭಾಗವೊಂದರಲ್ಲಿ, ಬುದ್ಧಿವಂತರೆನಿಸಿಕೊಳ್ಳುವ ಜನಸಾಮಾನ್ಯವು ಕಾಣುವುದಕ್ಕಿಂತಲೂ ಅನುಭವಿಸುವುದಕ್ಕಿಂತಲೂ ಎಷ್ಟೋ ಅತಿಶಯವಾಗಿ ನೋಡಿ ಅನುಭವಿಸಿರುವವರೇ ರಹಸ್ಯ ಸಾಕ್ಷಾತ್ಕರಣ ಶಕ್ತಿಯುಳ್ಳ ಲೇಖಕರೆಂದು ನನಗೆ ತೋರುತ್ತದೆ. ಯಾವುದಾದರೊಂದು ಪ್ರಪಂಚಭಾಗದಲ್ಲಿ ಒಂದು ಘನಗಜದೊಳಗೆ ಇತರರೆಲ್ಲರಿಗಿಂತಲೂ ಅಧಿಕ ವಸ್ತುಗಳನ್ನು ಕಾಣಬಲ್ಲ ಅಥವಾ ಅನುಭವಿಸಬಲ್ಲ ಈ ನಿಶ್ಚಿತಶಕ್ತಿಯಿಂದಲೇ ಒಬ್ಬ ಲೇಖಕನ ಕೃತಿ ದಿಟವಾಗಿಯೂ ಆವೇಶಪ್ರದವಾಗತಕ್ಕದ್ದು.

ಜೀವನದ ಒಂದು ಕ್ಲುಪ್ತಭಾಗದಲ್ಲಿ ಇತರರಿಗಿಂತಲೂ ಅತಿಶಯವಾದ ದರ್ಶನ, ಅನುಭವ : ಇಷ್ಟರಿಂದ, ಅಂಥ ಮನುಷ್ಯನೊಬ್ಬನು ತೀರ್ಮಾನಿಸುವುದೆಲ್ಲವೂ ದಿಟವಾಗುವ ಸಂಭವವುಂಟೆನ್ನುವುದಕ್ಕೆ ನಮಗೆ ಯಾವ ಬಗೆಯದಾದರೂ ಭರವಸೆ ದೊರೆಯುತ್ತದೆಯೆ ? ಎಷ್ಟು ಮಾತ್ರಕ್ಕೂ ಇಲ್ಲ. ಒಬ್ಬ ಮನುಷ್ಯನು ದೊಡ್ಡ ಯುದ್ಧವೊಂದರ ಯಾವುದೋ ಒಂದು ಮೂಲೆಯನ್ನು ನೋಡಿ ಬಲ್ಲವನೆಂದೂ ಅದರಲ್ಲಿ ಭಾಗಿಯೂ ಆಗಿದ್ದವನೆಂದೂ, ಮೈ ಜುಮ್ಮೆನ್ನಿಸುವಂತೆ ಭಯವು ಉದ್ರೇಕಿಸುವಂತೆ ಅದರ ಕಥೆಯನ್ನು ನಿರೂಪಿಸಬಲ್ಲವನೆಂದೂ ಇಟ್ಟುಕೊಳ್ಳೋಣ. ಅದ

ಮಾತ್ರಕ್ಕೆ, ಆ ಯುದ್ಧವನ್ನೆಲ್ಲಾ ಒಟ್ಟಾಗಿ ಕುರಿತು ಆತನು ಪಡುವ ಅಭಿಪ್ರಾಯುಗಳು ದಿಟವಾಗಿರುವುವೆಂದು ನಿರೀಕ್ಷಿಸುವುದಕ್ಕೆ ಯಾವ ಕಾರಣವೂ ಇಲ್ಲ. ಅಂಥವನು ಎಲ್ಲವನ್ನೂ ವಕ್ರಪ್ರಮಾಣದಿಂದ ನೋಡತಕ್ಕ ಸಂಭವವೇ ಒಟ್ಟಿನಮೇಲೆ ಹೆಚ್ಚು. ಆತನ ಪಕ್ಷಕ್ಕೆ ಅನುಕೂಲವಾಗಿರುವ ಅಂಶವಿಷ್ಟೇ: ಕೆಲವು ವಿಷಯುಗಳು ನಿಜವಾಗಿಯೂ ಆತನಿಗೆ ತಿಳಿದಿವೆ; ಆತನ ಸಾಮಾನ್ಯ ಅಭಿಪ್ರಾಯುಗಳೂ ಹೇಗಾದರೂ ಇರಲಿ, ಈ ಕೆಲವು ವಿಷಯುಗಳನ್ನು ತಿಳಿಯಬೇಕಾದಾಗ ನಿಮಗೆ ಆತನು ಅನುವಾಗ ಬಲ್ಲನು. ನನ್ನ ಸ್ವಂತದ ಅಂತರಂಗದ ನಂಬಿಕೆಯನ್ನು ಇಲ್ಲಿ ಒಪ್ಪಿಕೊಂಡುಬಿಡುತ್ತೇನೆ, ಅದನ್ನು ನೆಚ್ಚಬೇಕೆಂದು ಬೇರೆ ಯಾರಿಗೂ ನಾನು ಹೇಳುವುದಿಲ್ಲ: ಮಾನವರಿಗೆ ರಹಸ್ಯ ಸಾಕ್ಷಾತ್ಕಾರದಂತೆ ಕಾಣಿಸಿಕೊಂಡಿರುವ ಎಲ್ಲಾ ಗ್ರಂಥಗಳಲ್ಲಿಯೂ ಎಲ್ಲಾ ಮಹಾಸೂಕ್ತಿಗಳಲ್ಲಿಯೂ ಒಂದಾದರೂ ಶುದ್ಧ ಸತ್ಯವಲ್ಲ, ಹಾಗಾಗತಕ್ಕ ಸಂಭವವೂ ಇಲ್ಲ. ನನ್ನನ್ನು ಒತ್ತಿಕೇಳಿದ ಪಕ್ಷದಲ್ಲಿ, (ಈ ಮಾತನ್ನೂ ಹೇಳಿಬಿಡುತ್ತೇನೆ): ಅವು ಹಾಗೆ ಸರ್ವಸತ್ಯವಾಗಿರಬೇಕಾದದ್ದು ಅವುಗಳ ಕರ್ತವ್ಯವೆಂದೂ ನಾನು ನಿಜವಾಗಿ ಭಾವಿಸಲಾರೆ. ಅವುಗಳ ಉದ್ದೇಶವು ವಾಸ್ತವಾಂಶದ ನಿರೂಪಣೆಗಳಾಗಬೇಕೆಂಬುದಲ್ಲ. ಅವು ಆಳಲಿನ ದೊರೆಗಳು, ಉತ್ತೇಜನದ ಕೂಗುಗಳು, ಅಂಧಕಾರದಲ್ಲಿ ಮಿಂಚುವ ಸನ್ನೆಗಳು; ಅವು ನಿಶ್ಚಯರೂಪದ ಹೇಳಿಕೆಗಳಂತೆ ತೋರುತ್ತವೆ, ಆದರೆ ದಿಟವಾಗಿಯೂ ಅವು ವಿಧಿರೂಪದ ವಾಕ್ಯಗಳು—ಆಜ್ಞೆಯು, ಪ್ರಾರ್ಥನೆಯು, ಹಾರೈಕೆಯ ವಾಕ್ಯಗಳು; ಹಲವು ಸಂದರ್ಭಗಳಲ್ಲಿ ಅವುಗಳ ಪರಿಣಾಮವು ತಟ್ಟುವುದು-ಅವು ಹೇಳುವ ವಿಷಯದ ಮೂಲಕವಲ್ಲ, ಅವು ಅದನ್ನು ಹೇಳುವ ಧ್ವನಿಯ ಮೂಲಕ; ಎಷ್ಟೋಸಲ, ಅವು ಹೇಳದೆಯೆ ಬಿಡುವ ಅಂಶಗಳ ಮೂಲಕ.

ರೋಮ್‌ನಗರವನ್ನು ರಕ್ಷಿಸಲು ತಾನು ಪಟ್ಟ ಪ್ರಯತ್ನಗಳೆಲ್ಲವೂ ವಿಫಲವಾದಾಗ, ಗ್ಯಾರಿಬಾಲ್ಡಿ ತನ್ನ ಕಡೆಯವರಿಗೆ ನುಡಿದ ವಚನಗಳು ನಿಮಗೆ ಗೊತ್ತುಂಟೆ? ಆಸ್ಟ್ರಿಯದ ಸಂಗಡ ಸಂಧಿಮಾಡಿಕೊಳ್ಳುವುದೆ, ಅಥವಾ ಗ್ಯಾರಿಬಾಲ್ಡಿಯನ್ನು ಹಿಂಬಾಲಿಸುವುದೆ—ಇದೇ ಅವರಿಗಿದ್ದ ಸಮಸ್ಯೆ. "ವಿದೇಶೀಯರೊಂದಿಗೆ ಯುದ್ಧವನ್ನು ಮುಂದುವರಿಸುವ ಇಚ್ಛೆಯುಳ್ಳವರೆಲ್ಲರೂ ನನ್ನೊಡನೆ ಬರಲಿ. ನಾನು ನಿಲ್ಲಿಸುವುದು ಸಂಬಳವಲ್ಲ, ಬಿಡಾರವಲ್ಲ, ಆಹಾರವಲ್ಲ. ನಾನು ಸಲ್ಲಿಸುವುದು ಹಸಿವು, ಬಾಯಾರಿಕೆ, ಒತ್ತಾಯದ ಸಮರಪ್ರಯಾಣ, ಯುದ್ಧ, ಮರಣ.'' ಆ ಕೇಳಿಕೆಯ ಸತ್ತ್ವವಿದ್ದದ್ದೆಲ್ಲಾ ಅವನು ಹೇಳದೆ ಬಿಟ್ಟದ್ದರಲ್ಲಿ. ಅವನು ಸಲ್ಲಿಸಲು ಒಪ್ಪಿದ್ದು ಇಷ್ಟುಮಾತ್ರವೇ ಅಲ್ಲ, ಜೊತೆಗೆ ಮತ್ತೇನೋ ಇತ್ತು ಎನ್ನುವುದು ಸ್ಪಷ್ಟ. ಅದು ಎಷ್ಟು ವಿಭವೋಜ್ಜ್ವಲವಾಗಿತ್ತೆಂದರೆ, ಆ ಜನಗಳಲ್ಲಿ ಬಹು ಮಂದಿ ಅವನನ್ನು ಹಿಂಬಾಲಿಸಿಯೇ ಹಿಂಬಾಲಿಸಿದರು; ಆದರೆ, ಅದು ಏನೆಂದು ಅವನು ಬಾಯಿಬಿಟ್ಟು ಆಡಲಿಲ್ಲ.

ಕೆಲವುವೇಳೆ, ಸಾಕ್ಷಾತ್ಕರಣದ ಮಾತು ಒಂದು ರೂಪಕವಾಗಿರುತ್ತದೆ; ನಿರುಕ್ತಾದ ಸತ್ಯವನ್ನು ಸಾಧಿಸುವುದು ತನಗೆ ಅಶಕ್ಯವೆಂದೂ, ಅದರ ದಿಕ್ಕನ್ನು ಕುರಿತು ಸನ್ನೆ ಮಾಡುವುದು ಮಾತ್ರ ಶಕ್ಯವೆಂದೂ ಹೇಳತಕ್ಕವನು ಬಲ್ಲನು. ಆಚಾರ್ಯ ಬೀಡ್ ಎನ್ನುವನು ಲ್ಯಾಟಿನ್ ಭಾಷೆಯಲ್ಲಿ ಬರೆದ, ಎಲ್ಲೋ ಕೆಲವರು ಓದುವ, ಸ್ಯಾಕ್ಸನ್ ಚರಿತ್ರೆಯಲ್ಲಿ, ಸ್ಯಾಕ್ಸನ್ ಜನಗಳು ಕ್ರೈಸ್ತಮತಾವಲಂಬಿಗಳಾದ ವಿಚಾರವಾಗಿ ಒಂದು ಅದ್ಭುತ ಕಥೆಯಿದೆ. ಹೊಸಮತವನ್ನು ಅಂಗೀಕರಿಸುವುದೇ ಬಿಡುವುದೇ ಎಂದು ರಾಜನು ಚರ್ಚಿಸುತ್ತಾ ತನ್ನ ಸಚಿವರ ಸಲಹೆಯನ್ನು ಕೇಳಿದನು. ಆಗ ಒಬ್ಬ ವೃದ್ಧ ಸ್ಯಾಕ್ಸನ್ ವೀರನು ಹೀಗೆ ಹೇಳಿದನು : "ಹೋದ ನಡುಮಾಗಿಯಲ್ಲಿ ನಮ್ಮ ಎಡ್ವಿನ್‌ದೊರೆ ವಿಶಾಲಮಂಟಪದಲ್ಲಿ ಉತ್ಸವಕೂಟವೊಂದನ್ನು ಏರ್ಪಡಿಸಿದ್ದು ನಿಮಗೆಲ್ಲಾ ನೆನಪಿದೆಯೆ ? ಒಳಗೆ, ಬೆಳಗುವ ಹಲವು ದೀಪಗಳು, ಎರಡು ಅಗ್ನಿಕುಂಡಗಳಲ್ಲಿ ಪ್ರಜ್ವಲಿಸುವ ದೊಡ್ಡ ಉರಿ ; ಹೊರಗೆ, ಬಿರುಗಾಳಿ, ಕಗ್ಗತ್ತಲೆ. ಆಗ, ಸೂರಿನ ಕೆಳಗಡೆಯ ಗವಾಕ್ಷಿ ತೆರೆದಿದ್ದುದರಿಂದ, ಒಂದು ಹಕ್ಕಿ ಹೊರಗಿನ ಕತ್ತಲೆಯಿಂದ ಬೆಚ್ಚಗೆ ಬೆಳಗುವ ಒಳಮಂಟಪಕ್ಕೆ ಥಟ್ಟನೆ ನುಗ್ಗಿಬಂದು, ತಿರುಗಿ ಆಚೆಯ ಪಕ್ಕದಿಂದ ಹೊರಗಿನ ಕತ್ತಲೆಗೆ ಹಾರಿಹೋಯಿತು. ಆ ಹಕ್ಕಿಯಂತೆ ಮನುಷ್ಯನ ಜೀವ."

ಇದು ಹಾಗಿರಲಿ, ಈ ಮುಂದಿನದನ್ನು ಕುರಿತು ಏನು ಹೇಳೋಣ ? ರಷ್ಯದ ಪ್ರಸಿದ್ಧ ವಿಪ್ಲವಕಾರಿಣಿಯಾದ ಕ್ಯಾಥರೀನ್ ಬ್ರೆಷ್ಕೋಯಿಸ್ಕಿ ಎಂಬಾಕೆ, ವಿಪ್ಲವದ ಪಿತಾಮಹಿ ಎಂದು ಹೆಸರುಪಡೆದಿರುವಾಕೆ ಹಲವು ವರ್ಷಗಳಹಿಂದೆ ಕಳುಹಿಸಿದ ಒಂದು ಸಂದೇಶ; ಸೆರೆಮನೆಯಿಂದ ಹೇಗೋ ನುಸುಳಿಬಂದ ಸಂದೇಶ ; ಆಕೆ ತನ್ನ ಮಿತ್ರರಿಗೂ ಅನುಚರರಿಗೂ, ನಿರಾಶೆಪಡದೆ, ಏನನ್ನೂ ಸಾಧಿಸುತ್ತಾಇಲ್ಲವೆಂದು ಚಿಂತೆಗೊಳ್ಳದೆ ಇರುವಂತೆ ಹೇಳಿಕಳುಹಿಸಿದ ಸಂದೇಶ : "ಹಗಲೂ ಇರುಳೂ ನಾವು ದುಡಿಯುತ್ತಿದ್ದೇವೆ. ಅನ್ನ, ನೀರು, ನಿದ್ದೆ ಇವುಗಳಿಗೆ ಪ್ರತಿಯಾಗಿ ಸ್ವಾತಂತ್ರ್ಯದ ಕನಸನ್ನು ಕಾಣುತ್ತಿದ್ದೇವೆ. ಸೆರೆಮನೆಯ ಗೋಡೆಗಳನ್ನು ತೂರಿ ಪ್ರಪಂಚದ ಕೊನೆಯಿಂದ ಕೊನೆಗೆ ತರುಣರು ತರುಣರನ್ನು ಕರೆಯುತ್ತಿರುವ ಕೂಗು ಇದು." ಇದು ಕೇವಲ ಹೇಳಿಕೆಗಳ ಪರಂಪರೆಯಂತಿದೆ, ನಿಜವೊ ಸುಳ್ಳೊ ಎಂದು ನಿರ್ಧರಿಸಿ ವರ್ಣಿಸಲಾಗದ ಹೇಳಿಕೆಗಳ ಪರಂಪರೆಯಂತಿದೆ. ಆದರೆ, ಇದು ಯಥಾರ್ಥವಾಗಿಯೂ ಹೇಳಿಕೆಯೇ ಎನ್ನುವುದರಲ್ಲಿ ನನಗೆ ಸಂದೇಹವುಂಟು ; ಕೇಳಬಂದ ಕರೆಯಂತೆ ಇದೆಯೆಂದರೆ ಹೆಚ್ಚಾಗಿ ಒಪ್ಪುತ್ತದೆ.

ಅಥವಾ, ಜೆರುಸಲೇಮಿನ ಪತನವಾದ ಬಳಿಕ, ಪುಣ್ಯಕ್ಷೇತಗಳೆಲ್ಲಾ ವಿಧರ್ಮಿಗಳಿಗೆ ಸೂರೆಯಾಗಿ ಧರ್ಮನಿಷ್ಠನಾದ ಯೆಹೂದ್ಯನ ಕಣ್ಣಿಗೆ ಜೀವನದ ಮೂಲವೇ ಛೇದಿಸಿಹೋದಂತೆ ತೋರುತ್ತಿದ್ದಾಗ, ವೃದ್ಧ ರಬ್ಬಿಯೊಬ್ಬನು ಹೇಳಿದ ಈ ಮಾತನ್ನು

ತೆಗೆದುಕೊಳ್ಳಿ : "ಜೆರುಸಲೇಮು ನಮ್ಮ ಕೈಬಿಟ್ಟು ಹೋಯಿತು : ಭಗವಂತನೂ ಆತನ ಕಟ್ಟಳೆಗಳೂ ಹೊರತು ನಮಗಿನ್ನೇನೂ ಉಳಿದಿಲ್ಲ." ಭಗವಂತನೂ ಆತನ ಕಟ್ಟಳೆಗಳೂ ಹೊರತು ನಮಗಿನ್ನೇನೂ ಉಳಿದಿಲ್ಲ. ಈ ಮಾತು ಏಕಕಾಲದಲ್ಲಿ ಎರಡು ಅಂಶಗಳನ್ನು ಹೇಳುವಂತಿದೆಯಲ್ಲವೆ: ಏನೂ ಉಳಿದಿಲ್ಲ, ಯಾವುದು ಮೂಲಾಧಾರವೋ ಪ್ರಧಾನವೋ ಅದೆಲ್ಲವೂ ಉಳಿದಿದೆ. ಎಲ್ಲವೂ ಹೋಯಿತು ; ಪ್ರಧಾನವಾದದ್ದೊಂದೂ ಹೋಗಿಲ್ಲ. ಈ ಸಂದೇಶದಲ್ಲಿ ಸ್ವವಚನ ವಿರೋಧ ಗುಣವೊಂದಿದೆ. ಸಂದೇಶವು ತನ್ನ ಹೃದಯವನ್ನೆಲ್ಲಾ ಬಾಯಿ ಬಿಟ್ಟು ಆಡುತ್ತಿಲ್ಲ ವೆಂದೂ, ತನಗೆ ಅತೀತವಾದ ಯಾವುದನ್ನೋ ಅದು ನಿರ್ದೇಶಿಸುತ್ತಾ ಶ್ರೋತೃವಿನ ಗಮನವನ್ನು ಒಂದು ವಾಸ್ತವದ ಕಡೆಗಲ್ಲ, ಒಂದು ರಹಸ್ಯದ ಕಡೆಗೆ ಎಳೆಯುತ್ತಿದೆ ಯೆಂದೂ ತೋರ್ಪಡುವುದು ಈ ಆತ್ಮೋಕ್ತಿವಿರೋಧದಿಂದಲೇ

ಕಡೆಗೆ, ಈ ಉಜ್ವಲ ವಚನಗಳಲ್ಲೆಲ್ಲಾ ಅತಿ ಶ್ರೇಷ್ಠವೂ ಅತಿ ಸರಳವೂ ಆದ ವಚನವೊಂದನ್ನು, ಪ್ರತಿಭೆಯ ಅವನತಿಯ ಕಾಲದಲ್ಲಿ ತಾನು ಜೀವಿಸಿದರೂ ಲೋಕ ದಲ್ಲೆಲ್ಲಾ ಕಲಮಲವನ್ನೆಬ್ಬಿಸಿದ ಗ್ರೀಕ್ ತತ್ತ್ವಜ್ಞನೊಬ್ಬನ ವಚನವೊಂದನ್ನು ತೆಗೆದುಕೊಳ್ಳಿ: "ಮಾನವರ ವಾಣಿಯಿಂದ, ದೇವತೆಗಳ ವಾಣಿಯಿಂದ ನಾನು ಮಾತಾಡಿದರೂ, ನನ್ನಲ್ಲಿ ಔದಾರ್ಯವಿಲ್ಲದಿದ್ದರೆ, ನಾನೊಂದು ಥಣಥಣಿಸುವ ಜಾಗಟೆ ಮಾತ್ರ. ಝಣಝಣಿಸುವ ಜಾಲರಿ ಮಾತ್ರ. ನನ್ನ ದೇಹವನ್ನೇ ಅಗ್ನಿ ಯಲ್ಲಿ ದಹಿಸಲು ಒಪ್ಪಿಸಿಕೊಟ್ಟರೂ, ನನ್ನಲ್ಲಿ ಔದಾರ್ಯವಿಲ್ಲದಿದ್ದರೆ. ಅದರಿಂದ ನನಗೆ ಏನೊಂದು ಲಾಭವೂ ಇಲ್ಲ." ಇದರಲ್ಲಿ ವಾಸ್ತವಾಂಶಗಳನ್ನು ವಿಭಜಿಸಿ ನಿರೂಪಿಸ ಬಲವರು ಯಾರು ?

ಈ ವೇಳೆಗೆ ನಾವು, ಈ ಆವೇಶದ, ಸಾಕ್ಷಾತ್ಕರಣದ ವಚನಗಳನ್ನು ಕುರಿತು ಮತ್ತೊಂದು ಸಿದ್ಧಾಂತವನ್ನು ಸೂತ್ರೀಕರಿಸುವಷ್ಟು ದೂರ ಮುಂದುವರಿದಿದ್ದೇ ವೆಂದು ನನಗೆ ತೋರುತ್ತದೆ.

ನಿಶ್ಚಿತ ವೈಜ್ಞಾನಿಕ ಸತ್ಯಗಳ ಗೋಜಿಗೆ ಅವು ಎಂದಿಗೂ ಹೋಗುವುದಿಲ್ಲ ನಿರುಕಾದ ಹೇಳಿಕೆಗೆ ಒಳಪಡಿಸಲುಸಾಧ್ಯವಾಗತಕ್ಕ ಅನುಭವ ಭಾಗದ ಗೋಜಿಗೆ ಕೂಡ ಹೋಗುವುದಿಲ್ಲ. ನಾವು ಹಾಯಬೇಕಾದ ಸಾಗರದಲ್ಲಿ, ನೌಕಾಶಾಖೆಯ ನಕಾಸೆ ಗಳಲ್ಲಿ ಆಗಲೆ ಗುರುತುಮಾಡಿರುವ ಪ್ರದೇಶಗಳ ಕಡೆಗಲ್ಲ ಅವುಗಳ ಲಕ್ಷ್ಯ. ಆಲಕ್ಷ್ಯ ವೆಲ್ಲಾ ಇನ್ನೂ ಅಲ್ಲಿ ಗುರುತಿಸದಿರುವ ಪ್ರದೇಶಗಳ ಕಡೆಗೆ, ಮಬ್ಬುಮಬ್ಬಿನ ಹಿಂದೆ ಮರೆಯಲ್ಲಿರುವ ಪ್ರದೇಶಗಳ ಕಡೆಗೆ ; ಅಲ್ಲೆಲ್ಲಾ ಯಾರೂ ಸಂಚರಿಸಿಲ್ಲ, ಕೊನೆಯ ಪಕ್ಷ, ಸ್ಫುಟವಾದ ಸಮಾಚಾರವನ್ನಾದರೂ ಅಲ್ಲಿಂದ ಯಾರೂ ತಂದಿಲ್ಲ. ಈ ಮಹಾವಚನಗಳೆಲ್ಲಾ ಶಾಸ್ತ್ರೀಯ ಜ್ಞಾನವು ಉತ್ಪನ್ನವಾಗುವ ಮುಂಚೆ ಮೂಡುವ

ಊಹೆಗಳಂತೆ, ವಿಷಯದ ಪರಿಸ್ಥಿತಿಯೇ ಹಾಗಿರುವುದರಿಂದ ತನ್ನ ಪಕ್ಷವನ್ನು ಸಾಧಿಸಲು ರುಜುವಾತು ಕೊಡಲಾರದಿದ್ದರೂ, ಅದರ ಸತ್ಯವನ್ನು ಮನಗಂಡಿರುವಾತನೊಬ್ಬನು ಕೊಡುವ ಆವೇಶಪೂರ್ಣವಾದ ಹೇಳಿಕೆಗಳಂತೆ. ಈ ಸಂಗತಿಯಿಂದ ಅವುಗಳನ್ನು ಕುರಿತ ಮೂರು ಅಂಶಗಳು ಸ್ಪಷ್ಟಪಡುತ್ತವೆ : ಅವುಗಳ ಹೃದಯಗ್ರಾಹಕ ಶಕ್ತಿ, ಅವುಗಳ ಪ್ರಾಮುಖ್ಯ, ಅವುಗಳ ದೌರ್ಬಲ್ಯ. ಅವುಗಳಲ್ಲಿ ಎಂದಿಗೂ ನಿರುಕಾದ ಸತ್ಯವಿರುವುದಿಲ್ಲ, ಏಕೆಂದರೆ ಅವು ನಿಶ್ಚಿತಜ್ಞಾನದ ತಳಹದಿಯಮೇಲೆ ಯಾವಾಗಲೂ ನಿಂತಿರುವುದಿಲ್ಲ ; ಇದೇ ಅವುಗಳ ದೌರ್ಬಲ್ಯ. ಅವು ಗೊತ್ತುಪಡಿಸುವುದು ನಮ್ಮ ಮುಂದಿನ ಹೆಜ್ಜೆಗೇ ಸಿಕ್ಕುವ ಪ್ರಯಾಣ ಭಾಗವನ್ನು ; ಇದಿರಿಗಿರುವ ತಿಟ್ಟಿನ ಹಿಂದೆ ಮರೆಗೊಂಡಿರತಕ್ಕ ಪ್ರದೇಶವನ್ನು : ಉಳಿದ ರಸ್ತೆಯ ವಿಚಾರವೆಲ್ಲಕ್ಕಿಂತಲೂ ಇವರ ಸುದ್ದಿಯೇ ನಮಗೆ ಸದ್ಯದಲ್ಲಿ ಹೆಚ್ಚು ಅಗತ್ಯ. ಇದೇ ಅವುಗಳ ಪ್ರಾಮುಖ್ಯ. ನಾವು ಅರಿಯಬೇಕೆಂದು ಹಾತೊರೆಯುವ ವಿಷಯಗಳನ್ನು ಕುರಿತೇ ಅವು ಹೇಳುವುದು ; ಅವುಗಳಲ್ಲಿ ಭಾವದ ವೊನೆ ಲೆಕ್ಕಾಚಾರಕ್ಕೆ ತಗುಲಿವೊಂಡಾಗಿರುವುದಿಲ್ಲ. ಇದೇ ಅವುಗಳ ಉತ್ಕಟವಾದ ಹೃದಯಗ್ರಾಹಕಶಕ್ತಿಗೆ ಮೂಲ. ಧರ್ಮನಿಷ್ಠನಾದ ಮುಸಲ್ಮಾನನೊಬ್ಬನಿಗೆ ಮಹಮ್ಮದನಲ್ಲಿರುವಷ್ಟು ಉಗ್ರವಾದ ನಂಬಿಕೆ ಯಾರಿಗೂ ಮಗ್ಗಿಯ ಕೋಷ್ಟಕದಲ್ಲಿರುವುದಿಲ್ಲ. ಇದಕ್ಕೆ ಇಷ್ಟೇ ಕಾರಣ. ಮಗ್ಗಿಯ ಕೋಷ್ಟಕದ ವಿಚಾರದಲ್ಲಿ ಅವನಿಗೆ ನಿಶ್ಚಿತ ಜ್ಞಾನವಿರುವುದರಿಂದ ಅದನ್ನು ಅದರ ಪಾಡಿಗೆ ಬಿಡುತ್ತಾನೆ. ಮಹಮ್ಮದನ ವಿಚಾರದಲ್ಲಿ ಅವನಿಗೆ ನಿಶ್ಚಿತ ಜ್ಞಾನವಿಲ್ಲದ್ದರಿಂದ ಆ ಜ್ಞಾನದಲ್ಲಿ ಮುಕ್ಕಾಗಿರುವುದನ್ನು ಉಗ್ರವಾದ ಅಭಿಮಾನದಿಂದ ಪೂರ್ತಿಗೊಳಿಸುತ್ತಾನೆ.

ಪ್ರತಿ ತಲೆಮಾರಿನಲ್ಲಿಯೂ ತರುಣರು ಸಾಕ್ಷಾತ್ಕರಣ ಶಕ್ತಿಯುಳ್ಳ ಲೇಖಕರನ್ನು ಅಷ್ಟೊಂದು ಮೆಚ್ಚುವುದು ಏಕೆಂಬುದನ್ನು ಈ ವಿಚಾರವೇ ಸ್ಪಷ್ಟಪಡಿಸುತ್ತದೆ. ತರುಣರಲ್ಲಿ ಯಾರಾದರೂ ನಿರೀಕ್ಷಿಸುವಂತೆ ಸಹಜವಾಗಿ ಹೆಬ್ಬಯಕೆಯೂ ಹುರುಪೂ ಉಕ್ಕುತ್ತಿದ್ದರೆ, ಅವರು ಸರ್ವದಾ ರಹಸ್ಯ ಸಾಕ್ಷಾತ್ಕರಣವನ್ನೇ ಕಾಯುತ್ತಿರುತ್ತಾರೆ. ದೇಹದ ಕಸುವಿನಿಂದಲೋ ವಯಸ್ಸಿನ ಮಹಿಮೆಯಿಂದಲೋ, ಅವರಿಗೆ ಭರವಸೆ ಹೆಚ್ಚು. ಮುಂದೆ ಬರತಕ್ಕ ದಿನಗಳು, ಎಂದರೆ ತಾವು ಬಾಳತಕ್ಕ ದಿನಗಳು ತಾವಿನ್ನೂ ಗಣನೆಗೆ ಬಾರದ ಈ ವರ್ತಮಾನಕಾಲಕ್ಕಿಂತಲೂ ತಮ್ಮ ಪ್ರಸಕ್ತಿಯೇ ಇಲ್ಲದಿದ್ದ ಭೂತಕಾಲಕ್ಕಿಂತಲೂ ನೂರುಪಾಲು ಉತ್ತಮವಾಗಿರುವುವೆಂದು ಅವರ ನಿರೀಕ್ಷೆ. (ಇಲ್ಲಿ ವಿನೋದಕರವಾದ ಅಂಶವೊಂದನ್ನು ನಾವು ಹಾಗೆಯೇ ನೋಡಬಹುದು. ವೃದ್ಧರಿಗೂ ತರುಣರಿಗೂ ಭಿನ್ನಾಭಿಪ್ರಾಯಗಳು ಹುಟ್ಟಿದಾಗ ಇಬ್ಬರೂ ಒಬ್ಬರೊಬ್ಬರ ಅಭಿಪ್ರಾಯಗಳನ್ನು ಒಂದೇ ಕಾರಣಕ್ಕಾಗಿ ನಿರಾಕರಿಸುವುದುಂಟು....

ತನ್ನ ಪ್ರತಿಕಕ್ಷಿಯ ಮಾತು ಓಬಿರಾಯನ ಕಾಲದ್ದೆಂದು ಈ ಪಕ್ಷದವನೂ ತಿಳಿಯುತ್ತಾನೆ. ಆ ಪಕ್ಷದವನೂ ತಿಳಿಯುತ್ತಾನೆ. ವೃದ್ಧರ ಮಾತನ್ನು ತರುಣನು ಕಷ್ಟದಿಂದ ಆಲಿಸುವಾಗ, "ಹೌದು, ಅದೇ. ವಿಕ್ಟೋರಿಯಾ ರಾಣಿಯ ಕಾಲದಲ್ಲಿ ಗಿರಿಜೆಮಿಾಸೆ ಬಿಡುತ್ತಿದ್ದವರು ಆಲೋಚಿಸುತ್ತಿದ್ದ ರೀತಿ ಹೀಗೆಯೇ" ಎಂದು ಭಾವಿಸಿಕೊಳ್ಳುತ್ತಾನೆ. ತರುಣರ ಮಾತನ್ನು ವೃದ್ಧನು ಕಷ್ಟದಿಂದ ಆಲಿಸುವಾಗ "ಹೌದು, ಅದೇ. ವಿಕ್ಟೋರಿಯಾ ರಾಣಿಯ ಕಾಲದಲ್ಲಿ ನಾನು ಆಗತಾನೆ ಗಿರಿಜೆಮಿಾಸೆ ಬಿಡಿಸುತ್ತಿದ್ದಾಗ ಹೀಗಿಯೇ ಹುಚ್ಚು ಹುಚ್ಚಾಗಿ ಆಡುತ್ತಿದ್ದೆ" ಎಂದುಕೊಳ್ಳುತ್ತಾನೆ.) ಒಟ್ಟಿನಲ್ಲಿ ನನಗೆ ತೋರುವುದೇನೆಂದರೆ, ತರುಣನೊಬ್ಬನ, ದುಡುಕಿಯಲ್ಲದ ವಿಚಾರಪರನಾದ ತರುಣನೊಬ್ಬನ, ಮನೋವೃತ್ತಿಯು ಅಚ್ಚುಪಡಿ ಹೀಗಿರುತ್ತದೆ: ತನ್ನ ಹಿರಿಯರೇನೋ ತುಂಬ ಬಲ್ಲವರು. ರಾಶಿಗಟ್ಟಳೆ ಪುಸ್ತಕಗಳನ್ನು ಮುಗುಚಿಹಾಕಿದವರು; ಆದರೆ ಎಷ್ಟು ವಿಚಿತ್ರ! ಯಾವುದೊಂದು ಅಂಶವು ಮಾತ್ರ ಅತಿಮುಖ್ಯವೋ ಅದನ್ನೇ ತಮ್ಮ ಗಮನದಿಂದ ತಪ್ಪಿಸಿಕೊಳ್ಳಲು ಬಿಟ್ಟಿದ್ದಾರಲ್ಲ! ಆ ಅತಿಮುಖ್ಯಾಂಶ—ಇವನಿಗೆ ಅದು ದೊರೆಯುವುದೆಲ್ಲಿ? ಗೊತ್ತೇ ಇದೆ; ತನ್ನ ಹಿರಿಯರು ಕೇಳಿರದ, ಕೇಳಿದ್ದರೂ ಗಮನಿಸಿರದ ಯಾರೋ ಒಬ್ಬ ಆಚಾರ್ಯನಲ್ಲಿ. ಆತನು ತನ್ನ ಮಾತುಕಥೆಗಳಿಂದ ಇವನಿಗೆ ಸ್ಫೂರ್ತಿಯನ್ನು ಕೊಡುವ ಒಬ್ಬ ಪರಿಚಯಸ್ಥನಾಗಿರಬಹುದು; ಸಂದೇಶವೊಂದನ್ನು ಸಾರುವ ಒಬ್ಬ ಹೊಸ ಲೇಖಕನಾಗಿರಬಹುದು, ತನ್ನ ಹಿರಿಯರು ಓದಬಹುದಾಗಿದ್ದೂ ಓದದೆ ಬಿಟ್ಟ ಒಬ್ಬ ಹಿಂದಿನ ಲೇಖಕನಾಗಿರಬಹುದು. ಅಲ್ಲವಾದರೆ, ಆತನು ಅತಿ ಪ್ರಾಚೀನ ಲೇಖಕನೊಬ್ಬನಾಗಿ ಆತನ ಬರವಣಿಗೆಯಲ್ಲಿ ಒಂದು ಹೊಸ ಸಂದೇಶವನ್ನು ಯಾರೋ ಕಂಡುಹಿಡಿದಿದ್ದರೂ ಇರಬಹುದು. ಒಬ್ಬ ಭವಿಷ್ಯದರ್ಶಿಯಾಗುವುದಕ್ಕೆ–ಅಥವಾ ಭವಿಷ್ಯದರ್ಶಿಯ ಪದವಿಯನ್ನು ಪಡೆಯಲು ಸ್ಪರ್ಧೆಗೆ ನಿಲ್ಲುವುದಕ್ಕೆ—ಎರಡು ಯೋಗ್ಯತೆಗಳಿದ್ದರೆ ಸಾಕು. ಹಿಂದಿನ ತಲೆಮಾರಿನವರು ಅವನನ್ನು ಉಪೇಕ್ಷಿಸಿರಬೇಕು, ಅವನಲ್ಲಿ ಭವಿಷ್ಯದರ್ಶನದ ಶೈಲಿಯಿರಬೇಕು. ಅಪೂರ್ಣವಾಗಿ ನಿರ್ಧರಿಸಿರುವ, ತತ್ಕಾಲದಲ್ಲಿ ಆಕರ್ಷಕವಾಗಿರುವ ಜೀವನ ಮಾರ್ಗಗಳನ್ನು ಕುರಿತು ದೃಢವಾದ ಕೆಲವು ಮನವರಿಕೆಗಳು ಅವನಿಗಿರಬೇಕು—ಅವು ಎಷ್ಟು ಮಸಕಾಗಿದ್ದರೂ ಎಷ್ಟು ಹದವಿಾರಿದ್ದರೂ ಚಿಂತೆಯಿಲ್ಲ; ಜೊತೆಗೆ, ನಮ್ಮ ಹಿರಿಯರೂ ಉಪಾಧ್ಯಾಯರೂ ಅರಿಯದ ಕಡೆಯಪಕ್ಷ ನಮಗೆ ಕಲಿಸದ, ಅಂಶಗಳನ್ನೇ ಅವನು ಪ್ರತಿಪಾದಿಸಬೇಕು.

ಈ ಸಾಕ್ಷಾತ್ಕರಣದ ಸಾಹಿತ್ಯಕ್ಕೆ ಪುರಸ್ಕಾರವು ಎಲ್ಲಿಯೂ ಕುಗ್ಗಿರುವಂತೆ ಕಾಣಿಸುವುದಿಲ್ಲ; ದಿನದಿನಕ್ಕೆ ಹೆಚ್ಚುತ್ತಿದೆ. ಕಳೆದ ಶತಮಾನದಲ್ಲಂತೂ ಆ ಬಗೆಯ ಬರವಣಿಗೆ ಬೇಕಾದಷ್ಟು ಬೆಳೆಯಿತು. ಚೊಕ್ಕಬಣ್ಣದ ಬರವಣಿಗೆಯೂ ಹೊಮ್ಮಿತು, ಹುಸಿಬಣ್ಣದ ಜನಮೆಚ್ಚಿಕೆಯ ಹಲವು ಅನುಕರಣಗಳೂ ಹೊಮ್ಮಿದುವು. ಅದಕ್ಕೆ

ಗಿರಾಕಿ ಅಪಾರವಾಯಿತು. ಸರಬರಾಯಿ ಸಹಜವಾಗಿಯೇ ಅವರ ಮಟ್ಟಕ್ಕೆ ಹೆಚ್ಚಿತು. ಗಿರಾಕಿಗಳಿಗೆ ವಿಮರ್ಶೆಯಿಲ್ಲ, ಆದರಿಂದ ಸರಬರಾಯಿಯಲ್ಲಿ ತಾರತಮ್ಯ ವಿವೇಚನೆಯಿಲ್ಲ.

ಈ ಬಗೆಯ ಬರವಣಿಗೆಯನ್ನು ಅಪೇಕ್ಷಿಸುವುದೂ ಒದಗಿಸುವುದೂ ಏಕೆ ಈಚೆಗೆ ಈ ರೀತಿಯಲ್ಲಿ ಬೆಳೆಯುತ್ತಿದೆಯೆಂದು ಕೇಳಿದರೆ ಎರಡು ಮುಖ್ಯ ಕಾರಣಗಳನ್ನು ಸೂಚಿಸಬಹುದು. ಮೊದಲನೆಯದು, ವಿದ್ಯಾಭ್ಯಾಸದ ಪ್ರಚಾರ, ಪ್ರಜಾಧಿಪತ್ಯದ ಉದ್ಗಮನ. ಹಿಂದೆ ತುಂಬ ಕಿರಿದಾಗಿದ್ದ ವಾಚಕಮಂಡಲಿಗೆ ಈಚೆಗೆ ಹೊಸ ಹೊಸ ಪಂಗಡಗಳವರು ಸೇರಿ ಅದು ವಿಸ್ತರಿಸುತ್ತಿದೆ ; ಈ ಹೊಸಬರ ಅಪೇಕ್ಷೆಗಳೂ ನಿರೀಕ್ಷೆಗಳ ಹೊಸರೀತಿಯವಾಗಿರುತ್ತವೆ ಎರಡನೆಯದು, ವಿದ್ಯಾಭ್ಯಾಸದಲ್ಲಿ ಹುಡುಗರನ್ನು ಕುರಿತು ನಮ್ಮ ವರ್ತನೆ, ಉತ್ತೇಜನಕ್ಕೇ ಹೆಚ್ಚು ಪ್ರಾಬಲ್ಯವನ್ನು ಕೊಟ್ಟು ನಿಗ್ರಹವನ್ನು ಸಾಮಾನ್ಯವಾಗಿ ದೂರೀಕರಿಸಿಬಿಟ್ಟಿರುವುದು. ತರುಣರು ಮೊದಲಿಗಿಂತಲೂ ಹೆಚ್ಚಾಗಿ ಆತ್ಮವಿಶ್ವಾಸಿಗಳಾಗುವಂತೆಯೂ ಸಾಹಸಿಗಳಾಗುವಂತೆಯೂ ಅವರನ್ನು ನಾವು ತರಬಿಯತ್ತು ಮಾಡಿದ್ದೇವೆ—ಕಡೆಯಪಕ್ಷ, ಹೀಗಾಗಲು ಅವರಿಗೆ ಅವಕಾಶ ಕೊಟ್ಟಿದ್ದೇವೆ ; ಆದ್ದರಿಂದ ಅವರು ಸಹಜವಾಗಿ ಹೊಸ ಭಾವಗಳ ಹೊಸ ಆಚಾರ್ಯರ ಅನ್ವೇಷಣದಲ್ಲಿ ತೊಡಗಿದ್ದಾರೆ. ಅಲ್ಲದೆ ಇನ್ನೊಂದು ವಿಷಯವನ್ನು ನಾವು ಗಮನಿಸಬೇಕು. ವಾಚಕಮಂಡಲಿಯ ಯೋಗ್ಯತೆ ಬದಲಾಯಿಸಿರುವುದರ ಮಾತು ಹಾಗಿರಲಿ, ಅದರ ವಿಸ್ತಾರವೊಂದೇ ಸಾಹಿತ್ಯದ ಮೇಲೆ ಎಷ್ಟೋ ಪರಿಣಾಮವನ್ನುಂಟುಮಾಡಿದೆ. ಹಿಂದಿನ ಕಾಲದಲ್ಲಿ ಒಂದು ಗ್ರಂಥವು ಯಶಸ್ವಿಯಾಗಬೇಕಾಗಿದ್ದರೆ ತನ್ನ ವಾಚಕರಲ್ಲಿ ಹಲವರನ್ನು ಅದು ಮೆಚ್ಚಿಸಬೇಕಾಗಿತ್ತು. ಈಗ ಹಾಗೆ ಮಾಡುವ ಅಗತ್ಯವಿಲ್ಲ. ಒಬ್ಬರು ಹೀಗೆ ಲೆಕ್ಕಹಾಕಿದ್ದಾರೆ : ಇಂಗ್ಲಿಷನ್ನು ಅರಿತು, ಇಂದಿನ ಇಂಗ್ಲಿಷ್ ಲೇಖಕನೊಬ್ಬನ ಗ್ರಂಥವನ್ನು ಓದಬಹುದಾದವರು ಪ್ರಪಂಚದಲ್ಲಿ ಎಷ್ಟು ಜನರಿದ್ದಾರೋ ಅವರೊಳಗೆ ಸೇಕಡ ತೊಂಬತ್ತರಷ್ಟು ಮಂದಿ ಆ ಲೇಖಕನನ್ನು ದ್ವೇಷಿಸಿ ತಿರಸ್ಕರಿಸಿಬಿಡಲಿ ; ಅಥವಾ ಸಂಪೂರ್ಣವಾಗಿ ಉಪೇಕ್ಷಿಸಿಬಿಡಲಿ ; ಶೇಕಡ ಐದರಷ್ಟು ಮಂದಿಗೆ ಆತನಲ್ಲಿ ಅನಾದರವಿಲ್ಲದಿದ್ದರೂ ಅವರು ಗ್ರಂಥವನ್ನು ಓದದೆಯೂ ಕೊಳ್ಳದೆಯೂ ಬಿಡಲಿ ; ಸೇಕಡ ಎರಡುವರೆಯಷ್ಟು ಮಂದಿಗೆ ಆತನಲ್ಲಿ ಅಭಿರುಚಿಯಿದ್ದರೂ ಆತನ ಗ್ರಂಥಗಳನ್ನು ಅವರು ಕೊಳ್ಳದೆ ಬಿಡಲಿ ; ಉಳಿದ ಸೇಕಡ ಎರಡುವರೆಯಷ್ಟು ಮಂದಿ ಮಾತ್ರ ಕೊಂಡುಕೊಳ್ಳಲಿ—ಇಷ್ಟಾದಮಾತ್ರಕ್ಕೆ ಆತನ ಗ್ರಂಥಗಳ ಪ್ರಚಾರವು ಹಿಂದಿನವರು ಕಂಡುಕೇಳರದಷ್ಟಾಗುವುದಂತೆ ; ಆತನು ದೇಶದೊಳಗಿನ ಅತ್ಯಂತ ಧನಿಕರಲ್ಲಿ, ಸಿದ್ಧಮನೋರಥರಲ್ಲಿ ಒಬ್ಬನಾಗುವನಂತೆ. ಇದು, ತುಂಬ ದೊಡ್ಡ ಚಿತ್ರಶಾಲೆಯಲ್ಲಿ ಸಾವಿರಾರು ಇತರ ಚಿತ್ರಗಳೊಂದಿಗೆ ಸ್ಪರ್ಧಿಸುವ ಚಿತ್ರವೊಂದರ ಸಮಾಚಾರದಂತೆಯೇ ಸರಿ ; ಅದು ಚೀರಿಕೊಂಡ ಹೊರತು

ಯಾರ ದೃಷ್ಟಿಗೂ ಬೀಳುವುದಿಲ್ಲ. ಅಂಥ ಸನ್ನಿವೇಶದಲ್ಲಿ–ಅತ್ಯುಕ್ತಿ, ವಿರೋಧಾಭಾಸ, ರೌದ್ರಗರ್ಜನೆ, ನವೀನತತ್ವದ ಏಕಾಗ್ರಸಾಧನೆ—ಈ ಬಗೆಯ ಗುಣಗಳು ಪ್ರಬಲಿಸುವುದಕ್ಕೇ ಉತ್ತೇಜನವು ಹೆಚ್ಚೆಂದು ಸ್ಪಷ್ಟವಾಗಿದೆ. ನವೀನತ್ವವು ರಹಸ್ಯ ಸಾಕ್ಷಾತ್ಕರಣವಲ್ಲ, ಎಷ್ಟು ಮಾತ್ರಕ್ಕೂ ಅಲ್ಲ. ಆದರೆ ಕೆಲವು ವೇಳೆ ಜನರು ಇದೇ ಅದೆಂದು ಭ್ರಮಿಸುವರು.

ಯೂರೊಪ್ ಖಂಡದಲ್ಲಿ ವಿಚಾರಸರಣಿಯೂ ಸಮಾಜವೂ ಪ್ರಜಾಧಿಪತ್ಯ, ಬಂಧವಿಮೋಚನೆ–ಇವುಗಳ ಕಡೆಗೇ ಏಮ್ಮುಖವಾಗಿ ಹರಿಯುತ್ತಿವೆ. ಆದ್ದರಿಂದ ಅಲ್ಲಿ ಪ್ರಬಲರೂ ವಿಜಯಸಾಧಕರೂ ಆದ ಭವಿಷ್ಯದರ್ಶಿಗಳೆಲ್ಲರೂ ಸ್ವಾಭಾವಿಕವಾಗಿ ವಿಪ್ಲವದ ಪಕ್ಷಕ್ಕೆ ಸೇರಿದವರು.

ಅವರಲ್ಲಿ ಮೊದಲು ಬಂದವರು 1848 ನೆಯ ಇಸವಿಯ ವಿಪ್ಲವಕಾರಾಗ್ರಣಿಗಳಾದ ವಿಕ್ಟರ್ ಹ್ಯೂಗೋ ಮತ್ತು ಮಸಿನಿ, ಅವರ ಶಿಷ್ಯರಾದ ಸ್ವಿನ್‌ಬರ್ನ್, ಬ್ರೌನಿಂಗ್ ಮೊದಲಾದವರು. ಆ ಬಳಿಕ ಬಂದವರು ರಾಜಕೀಯ ವಿಪ್ಲವಕ್ಕೆ ಅಷ್ಟು ಕೈಹಾಕಲಿಲ್ಲ. ಅವರ ಗುರಿ ಅರಸರ ಪೀಠಚ್ಯುತಿಯ ಕಡೆಗಲ್ಲ; ಆಂತರಿಕವಾದ ಆಧ್ಯಾತ್ಮಿಕವಾದ ಶಕ್ತಿಗಳ ಪೀಠಚ್ಯುತಿಯ ಕಡೆಗೆ. ಇಬ್‌ಸನ್ ಬಂದನು, ಎಲ್ಲಾ ಸಾಮಾಜಿಕ ಸಂಕೇತಗಳಿಗೂ ಪೀಠಚ್ಯುತಿ. ಡಾಸ್ಟಾಯೆವ್‌ಸ್ಕಿ ಬಂದನು, ಮಾನವನ ವಿಚಾರಶಕ್ತಿಗೆ ಪೀಠಚ್ಯುತಿ; ಸ್ಟ್ರಿಂಡ್‌ಬರ್ಗ್ ಬಂದನು, ಪ್ರೇಮಕ್ಕೆ ಪೀಠಚ್ಯುತಿ; ಟಾಲ್‌ಸ್ಟಾಯ್ ಬಂದನು, ಜಗತ್ತಿನ ಎಲ್ಲಾ ಕೀರ್ತಿವಿಭವಗಳಿಗೂ, ಎಲ್ಲಾ ಸುಖಗಳಿಗೂ, ಎಲ್ಲಾ ಕಾಮಿತಗಳಿಗೂ ಸತ್ಯಾನ್ವೇಷಣ ಕ್ರಿಸ್ತಭಕ್ತಿಗಳನ್ನುಳಿದ ಎಲ್ಲಕ್ಕೂ ಪೀಠಚ್ಯುತಿ. ನೀತ್ಸೆ ಬಂದನು, ಸದಸದ್ವಿಚಾರಕ್ಕೂ ಚೈತನ್ಯಮಾತ್ರವಲ್ಲದ ಶಕ್ತಿಮಾತ್ರವಲ್ಲದ ಎಲ್ಲಕ್ಕೂ ಪೀಠಚ್ಯುತಿ. ಇಲ್ಲಿ ನಾನು ಉದಾಹರಿಸಿರುವುದು ಶ್ರೇಷ್ಠತೆಯಲ್ಲೋ ಕಡೆಯಪಕ್ಷ ಪ್ರಸಿದ್ಧಿಯಲ್ಲೋ ಅತಿಶಯವುಳ್ಳ ಕೆಲವರನ್ನು ಮಾತ್ರ. ಪ್ರಪಂಚದ ದೇಶದೇಶದಲ್ಲಿಯೂ ಇವರ ಬೆನ್ನ ಹಿಂದೆ, ಇವರಷ್ಟು ವ್ಯಾಪಕರಾಗದ ಜನರು ನೂರುಗಟ್ಟಳೆಯಾಗಿ ಬಂದರು: ಭವಿಷ್ಯದರ್ಶಿಗಳು, ಪತ್ರಿಕಾಚಾಲಕರು, ಆಕಸ್ಮಿಕವಾಗಿ ಖ್ಯಾತಿ ಹೊಂದಿದವರು, ಬೇಕೆಂದು ತಮ್ಮ ಕೀರ್ತಿಯನ್ನು ಡಂಗುರಹೊಯಿಸಿದವರು, ಬಿಡಿಬಿಡಿಯ ಅಷಾಢಭೂತಿಗಳು; ಹೊಸ ವಾದಗಳನ್ನು ಸ್ಥಾಪಿಸಿ ಕುಣಿದ ಗುಂಪುಗಳು ಹಬ್ಬಿದುವು: ಚಿತ್ರಕಲೆಯನ್ನು ಕುರಿತ ಹೊಸವಾದಗಳು, ನೀತಿ, ವಿದ್ಯಾಭ್ಯಾಸ, ಆಹಾರ, ಅಡಿಗೆ, ಉಡಿಗೆಗಳನ್ನು ಕುರಿತ ವಾದಗಳು, ತಲೆಗೆ ಟೊಪ್ಪಿಗೆಯಿಲ್ಲದೆ, ಕಾಲಿಗೆ ಜೋಡಿಲ್ಲದೆ, ಮೈತೊಳೆಯದೆ, ಸ್ವಾರ್ಥತ್ಯಾಗವಿಲ್ಲದೆ, ಉದ್ಯೋಗವಿಲ್ಲದೆ ಬಾಳುವುದನ್ನು ಕುರಿತ ಹೊಸ ವಾದಗಳು.

ನಮ್ಮ ಕಾಲದಲ್ಲಿ ಈ ಹುಸಿಯ ಭವಿಷ್ಯದರ್ಶಿಗಳ ಒಂದು ಹುಲುಸಾದ ಸುಗ್ಗಿಯುಂಟಾಗಿದೆಯೆಂದು ತೋರುತ್ತದೆ. ಕಳೆದ ಶತಮಾನದ ಕೊನೆಯಭಾಗದಲ್ಲಿ

ಮ್ಯಾಕ್ಸ್ ನಾರ್ಡೋ ಎಂಬಾತನು ಬರೆದು ಜರ್ಮನ್ ಚಕ್ರವರ್ತಿಗೆ ಅರ್ಪಿಸಿದ ಒಂದು ವಿಚಿತ್ರ ಗ್ರಂಥದಲ್ಲಿ ಕೆಲವು ಮಟ್ಟಿಗೆ ನಿಜವಿರುವಂತೆ ತೋರುತ್ತದೆ. ಅದರ ಹೆಸರು "ಅಧೋಗತಿ". ಅದರ ವಿಚಾರಸರಣಿ ಹೀಗೆ: ಒಂದು ಹೊಸ ಗ್ರಂಥಕ್ಕಾಗಲಿ, ವಾದಕ್ಕಾಗಲಿ ಎಲ್ಲೆ ಮೀರಿದ ಪುರಸ್ಕಾರವು ದೊರೆತಾಗಲೆಲ್ಲಾ ಅದರ ಜೀವಾಳವೇನೆಂದರೆ ಅದರ ಕರ್ತನಿಗೆ ಎಲ್ಲೋ ಕೊಂಚ, ಸರ್ವಸಾಮಾನ್ಯವಾದ ಬುದ್ಧಿ ವೈಕಲ್ಯವೊಂದು ಬಹುಶಃ ಇರುತ್ತದೆ. ಅವನಿಗೆ ಯಾವುದೋ ಒಂದು ರೀತಿಯ ಹುಚ್ಚು ಸ್ವಲ್ಪ ಹಿಡಿದಿರುತ್ತದೆ; ಈ ಲೋಕದಲ್ಲಿ ಅವನ ರೀತಿಯ ಹುಚ್ಚೇ ಹಿಡಿದಿರುವ ಜನಗಳೆಲ್ಲಾ ಅವನಲ್ಲಿ ಆತ್ಮಾನಂದವನ್ನು ಪಡೆಯುತ್ತಾರೆ. ಅವನು ಅದೃಷ್ಟಶಾಲಿಯಾದರೆ, ಅವನ ಜೊತೆಯ ಹುಚ್ಚರ ಸಂಖ್ಯೆ ಲಕ್ಷೋಪಲಕ್ಷಕ್ಕೆ ಏರಬಹುದು.

ಈ ವಾದದಲ್ಲಿ ಸತ್ಯಾಂಶವು ಕೊಂಚವಿರುವುದೇನೋ ನಿಜ. ಯಾವ ಗಳಿಗೆಯಲ್ಲಾದರೂ ಸರಿಯೆ, ಹಿಡಿದು ಪರೀಕ್ಷೆ ಮಾಡಿದರೆ ನಮ್ಮ ದಿವ್ಯಜ್ಞಾನಿಗಳಲ್ಲಿ, ರಹಸ್ಯ ಸಾಕ್ಷಾತ್ಕಾರಕರಲ್ಲಿ ಅನೇಕರು ಹುಸಿಬಿದ್ದುಹೋಗುವುದೂ ನಿಜ. ಅಲ್ಲದೆ ತಲೆ ಮಾರಿನಿಂದ ತಲೆಮಾರಿಗೆ, ಜನಮೆಚ್ಚಿಕೆಯ ಆಚಾರ್ಯರಲ್ಲಿ ಹೆಚ್ಚು ಕಡಿಮೆ ಎಲ್ಲರೂ ಒಬ್ಬರಾಗುತ್ತಲೊಬ್ಬರು ನಿರಾಕೃತರಾಗುವುದೂ ನಿಜ.

ಅವರ ಸ್ಥಾನವನ್ನು ಹೊಸಬರು ಆಕ್ರಮಿಸಿ ಹೊಸ ಪಂಥಗಳನ್ನು ಸ್ಥಾಪಿಸಿ ಅನುಚರರನ್ನು ಕೂಡಿಸಿ, ಮುಂಚೆಯೋ ಬಳಿಕವೋ ಅದೇ ಪತನವನ್ನೇ ಅನುಭವಿಸುವರು.

ಇದರಿಂದ ನಾವು ಎದೆಗುಂದಬೇಕೋ? ಬೇಕಿಲ್ಲ; ಏಕೆಂದರೆ, ಈ ಸನ್ನಿವೇಶದೊಳಗೇ ಸೇರಿಕೊಂಡಿದ್ದರೂ ಥಟ್ಟನೆ ಕಣ್ಣಿಗೆ ಬೀಳದ ಹಲವು ಅಂಶಗಳನ್ನು ಇದುವರೆಗೂ ನಾವು ಗಣನೆಗೇ ತಂದುಕೊಂಡಿಲ್ಲ. ಮುಖ್ಯವಾಗಿ, ಪ್ರಗತಿಗೋಸ್ಕರ, ಪುರೋಭಿವೃದ್ಧಿಗೋಸ್ಕರ ಒಟ್ಟಿನ ಮೇಲೆ ಚೆನ್ನಾಗಿ ದುಡಿಯುತ್ತಿರುವ ಅಸಂಖ್ಯಾತ ಸಭ್ಯಪುರುಷರನ್ನೂ ಮಹಿಳೆಯರನ್ನೂ ನಾವು ಮರೆತುಬಿಟ್ಟಿದ್ದೇವೆ. ಅವರ ಸಂಖ್ಯೆ ನಮ್ಮ ನಂಬಿಕೆಗೆ ಮೀರಿದಷ್ಟಿದೆ. ಹಲವು ಮಂದಿ ಉತ್ತಮರಾದ ಕ್ರಿಯಾಶಾಲಿಗಳನ್ನು, ಲೇಖಕರನ್ನು—ಬುದ್ಧಿಶಕ್ತಿ ಆತ್ಮಶಕ್ತಿಗಳಿಂದ ತಾವು ಗಣ್ಯರಾಗಿದ್ದರೂ ಕೂಡ ತಮ್ಮ ಹೆಸರನ್ನು ಮುಂದು ಮಾಡದ ಮಹನೀಯರನ್ನು ನಾವು ಮರೆತಿದ್ದೇವೆ. ನಮ್ಮೆಲ್ಲರಿಗೂ ಒಂದೊಂದು ಸಲ ತೋರುವಂತೆ ನನಗೂ, ಆಧುನಿಕ ನಾಗರಿಕತೆಯಲ್ಲಿ ಭರವಸೆ ಅಳಿದು ಹೋಗಿ, ಜಗತ್ತಿಗೆ ಹುಚ್ಚು ಹಿಡಿದಿದೆಯೆಂದು ತೋರಿದಾಗಲೆಲ್ಲಾ, ಆ ಭಾವನೆಯನ್ನು ನಾನು ಒಂದು ರೀತಿಯಲ್ಲಿ ತಡೆಗಟ್ಟುತ್ತೇನೆ. ಅಪಾರವಾಗಿರುವ ಜೀವನವನ್ನು ಸಮಷ್ಟಿಯಾಗಿ ವಿಭಾವಿಸುವುದನ್ನು ಬಿಡುತ್ತೇನೆ;—ಏಕೆಂದರೆ ಅದನ್ನು ಸಮಗ್ರವಾಗಿ ಪರಿಶೀಲಿಸುವುದೂ, ಅಂಶಅಂಶಗಳಾಗಿ ಪೃಥಕ್ಕರಿಸಿ ಬಳಿಕ ಅವುಗಳನ್ನು ಕೂಡಿಸಿ ಒಂದು ಮೊತ್ತವಾಗಿ ನೋಡುವುದೂ ಅಸಾಧ್ಯ. ಹಾಗೆ ಮಾಡದೆ, ಮಾನವ

ವ್ಯಾಪಾರದ ಯಾವುದಾದರೊಂದು ಶಾಖೆಯನ್ನು ತೆಗೆದುಕೊಂಡು ವಿಮರ್ಶಿಸುತ್ತೇನೆ. ಬೇರೆ ಬೇರೆಯ ಶಾಖೆಗಳಲ್ಲಿ ಪ್ರವೀಣರನ್ನು ಕೇಳಿನೋಡಿ; ಪ್ರಪಂಚವು ಒಟ್ಟಿನ ಮೇಲೆ ಬಹುಶಃ ಪಾತಾಳಕ್ಕೇ ಕುಸಿಯುತ್ತಿದ್ದರೂ ತಮತಮಗೆ ಗೊತ್ತಿರುವ ಶಾಖೆಗಳು ಮಾತ್ರ ಉತ್ತಮವಾಗಿವೆಯೆಂದೇ ಅವರು ಸಾಮಾನ್ಯವಾಗಿ ಹೇಳುತ್ತಾರೆ. ಒಬ್ಬ ಯಂತ್ರಜ್ಞನನ್ನು ಕೇಳಿ; ಯಂತ್ರ ವಿಜ್ಞಾನ ಪ್ರಯೋಗಗಳು ಅಳತೆಯಿಲ್ಲದಷ್ಟು ಮುಂದುವರಿದಿವೆಯೆಂದು ಅವನು ಹೇಳುತ್ತಾನೆ. ಉಪಾಧ್ಯಾಯನನ್ನು ಕೇಳಿ, ವಿದ್ಯಾಭ್ಯಾಸವು ತಕ್ಕಷ್ಟು ಬೇಗ ಅಭಿವೃದ್ಧಿಯಾಗುತ್ತಿಲ್ಲವೆಂದು ಅವನು ಗೊಣಗುಟ್ಟಿದರೂ, ಅದು ಅಭಿವೃದ್ಧಿಯಾಗುತ್ತಿರುವುದರಲ್ಲಿ ಮಾತ್ರ ಅವನಿಗೇನೂ ಸಂಶಯವಿಲ್ಲ. ವೈದ್ಯನನ್ನು ಕೇಳಿ; ಪ್ರಪಂಚವು ತುಂಬ ಹೀನಸ್ಥಿತಿಯಲ್ಲಿರುವುದಕ್ಕೆ ಅದು ವೈದ್ಯರ ಮಾತಿಗೆ ಸರಿಯಾಗಿ ಗಮನಕೊಡದಿರುವುದೇ ಕಾರಣವೆಂದು ಆತನಿಗೆ ಅನ್ನಿಸುತ್ತದೆ; ಆದರೆ ವೈದ್ಯವಿದ್ಯೆ ಮಾತ್ರ ಹೆಜ್ಜೆಹೆಜ್ಜೆಗೂ ಉತ್ತಮವಾಗುತ್ತಿದೆ. ಸಮಾಜ ಶಾಸ್ತ್ರಜ್ಞನನ್ನಾಗಲಿ, ಸಮಾಜ ಸುಧಾರಕನನ್ನಾಗಲಿ ಕೇಳಿ, ಸದ್ಯದ ಸ್ಥಿತಿಯನ್ನು ಅವನು ಕೇಳುವವರ ಮನಸ್ಸು ದಣಿವಷ್ಟು ಜರೆಯುತ್ತಾನೆ; ಆದರೆ ವಿವರವಿವರವಾಗಿ ನೋಡಿದರೆ, ನಡೆಯುತ್ತಿರುವ ಕೆಲಸಗಳೆಲ್ಲವೂ ಸ್ವಲ್ಪ ಉತ್ತಮವಾಗಿವೆಯೆಂದು ಆತನು ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಾನೆ.

ಇಷ್ಟರ ಮೇಲೆ, ಈ ಅಜ್ಞಾತಸಾಗರದಲ್ಲಿ ನಮ್ಮ ಅಂಬಿಗರೆಲ್ಲರೂ ದಾರಿ ತಪ್ಪಿ ಹೋದರೆಂದು ನಮಗೆ ಮುಂಚೆಯೋ ಬಳಿಕವೋ ತಿಳಿದುಬಂದು, ನಾವು ಅವರನ್ನು ಹಿಂದೆ ಬಿಟ್ಟೋ, ನಾವೆಯಿಂದಲೇ ಆಚೆಗೆ ತಳ್ಳಿಬಿಟ್ಟೋ ಮುಂದೆ ಸಾಗಬೇಕಾಗಿ ಬಂದರೆ, ಅದರಲ್ಲಿ ವಿಚಾರಪರನಾದ ಯಾರೊಬ್ಬನು ತಾನೆ ಆಶ್ಚರ್ಯಪಡತಕ್ಕದ್ದು ಏನಿದೆ? ನಮ್ಮ ಕರಾರಿನಲ್ಲೇ ಇದೆಲ್ಲವೂ ಇದೆ. ಮನುಷ್ಯನು ಜೀವನದ ಸಂಗಡ ಮಾಡಿಕೊಳ್ಳುವ ದಿನ ಸಾಮಾನ್ಯದ ಕರಾರಿನಲ್ಲಿ ಇದೆಲ್ಲವೂ ಇದೆ. ಕೊನೆಯ ನಿರ್ಣಯ ಇಲ್ಲಿ ಇಲ್ಲ. ಒಂದು ಕ್ರಮಕ್ಕೆ ತಂದು ನಮ್ಮ ನಕಾಸೆಗಳಲ್ಲಿ ಗುರುತು ಮಾಡಿರುವ ಅನುಭವಾಂಶಗಳನ್ನು ಕೂಡ ಪೂರ್ಣವಾಗಿ ನಿಷ್ಕೃಷ್ಟವಾಗಿ ಯಾರೂ ನಿರೂಪಿಸಿಲ್ಲ. ಈ ಮಧ್ಯದಲ್ಲಿ ಮಾನವನು ನಿರಂತರವಾಗಿ ಘಳಿಗೆ ಘಳಿಗೆಯಲ್ಲೂ, ಗುರುತಿಲ್ಲದ ಪ್ರದೇಶಕ್ಕೆ ಸಾಗುತ್ತಿದ್ದಾನೆ. ಆ ಪ್ರದೇಶವೋ ಜ್ಞಾನ ನಿಷ್ಕರ್ಷೆಗಳ ವಿಷಯವಲ್ಲ; ಪ್ರಯೋಗ, ಊಹೆ, ಸಾಹಸ, ವಿವೇಕ–ಇವುಗಳ ವಿಷಯ. ನನಗೆ ಪ್ರಗತಿಯಲ್ಲಿ ಮನಃಪೂರ್ವಕವಾದ ನಂಬಿಕೆಯಿದೆ. ಆದರೆ ಪ್ರಗತಿಯೆನ್ನುವುದು (ಬಾಣಬಿಟ್ಟಂತೆ) ನೇರವಾದ ದಾರಿಯಲ್ಲಿ ಮುಂದುವರಿಯುವುದಲ್ಲ; ಅದು, ಹಿಂದೆ ದೀಪವನ್ನಿಟ್ಟುಕೊಂಡು ಮುಂದಿರುವ ಕತ್ತಲಲ್ಲಿ ಜನರು ತಡಕಾಡುವಂತೆ, ಕಾಣದ ಶಿಖರವನ್ನಡರುವಾಗ ಜನರು ಈ ಕಡೆ ಆ ಕಡೆ ದಾರಿ ಹುಡುಕುವಂತೆ; ಇನ್ನೂ ಶೋಧಿಸಿಲ್ಲದ ಹೊಸಕುನೆಲದಲ್ಲಿ ಗಟ್ಟಿ ಹಾದಿಯನ್ನು ಕಂಡು ಹಿಡಿಯುವಂತೆ, ಅದರಲ್ಲಿ

ಮುಂದೆ ಸಾಗುವುದಕ್ಕೆ ಅನುಕೂಲವಾದ ದಾರಿಯನ್ನು, ದೊಸಕು ನೆಲದ ಸ್ವರೂಪ ಸ್ವಭಾವಗಳನ್ನು ಚೆನ್ನಾಗಿ ಅರಿತ ಮಾರ್ಗದರ್ಶಿಗಳೇ ಸಾಮಾನ್ಯವಾಗಿ ಕಂಡುಹಿಡಿಯುವವರು; ಆದರೆ ಒಂದೊಂದು ವೇಳೆ ಸಣ್ಣ ಮಗುವಿಗೂ ಅದು ಗೋಚರಿಸಬಹುದು. ಜನಪ್ರಿಯರಾದ ಭವಿಷ್ಯದರ್ಶಿಗಳು, ಉಜ್ಜ್ವಲ ವಾಕ್ಸಂಪನ್ನರು, ಇವರೆಲ್ಲರೂ ಸಾಮಾನ್ಯವಾಗಿ ತಮಗೆ ದಾರಿಯೊಂದು ಗೋಚರಿಸಿದೆಯೆಂಬ ನಂಬಿಕೆಯನ್ನಾದರೂ ಕಡೆಯಪಕ್ಷ ಪಡೆದಿರತಕ್ಕವರು, ತತ್ಕಾಲದಲ್ಲಿ ನಮಗೆ ಅತ್ಯಗತ್ಯವೆಂದು ತಾವು ಭಾವಿಸುವ ಸಲಹೆಗಳನ್ನು ನಮಗೆ ಕೂಗಿ ಹೇಳತಕ್ಕವರು.

ಆ ಗಳಿಗೆಯಲ್ಲಿ ಅವರ ಮಾತುಗಳಿಗೆ ಅತಿಶಯ ಪ್ರಾಮುಖ್ಯವಿರುವಂತೆ ತೋರುತ್ತದೆ; ಆ ಗಳಿಗೆ ತೀರಿಹೋದ ಮೇಲೆ ಬಹುಶಃ ಅವರ ಉಪದೇಶವೂ ತೀರಿಹೋಗಿರುತ್ತದೆ. ಆದರೆ ಕೆಲವರು ಉಳಿದುಕೊಳ್ಳುತ್ತಾರೆ. ಭವಿಷ್ಯದರ್ಶಿಗಳಲ್ಲಿ ಬೇರೆ ಬೇರೆಯ ವರ್ಗಗಳಿಗೆ, ಅಂತಃಶುದ್ಧಿಯ ವ್ಯತ್ಯಾಸಗಳು ಹೊರತು ಇದೇ ಮಹತ್ತಮ ವ್ಯತ್ಯಾಸ,—ಕೆಲವರು ಮುಂದೆ ಉಳಿದುಕೊಳ್ಳುತ್ತಾರೆ. ಯಾವ ಗಳಿಗೆಗಾಗಿ ಅವರು ಆ ಮಾತುಗಳನ್ನಾಡಿದರೋ ಅದಕ್ಕೆ ಮಾತ್ರವೇ ಅಲ್ಲದೆ ಮಾನವ ಕುಲಕ್ಕೆ ನಿತ್ಯವಾಗಿ ಅಥವಾ ಪದೇಪದೇ ಒದಗುವ ಪ್ರಸಂಗಗಳಿಗೆಲ್ಲಾ ಅವರ ಮಾತುಗಳು ಅನ್ವಯಿಸುತ್ತವೆ. ಒಂದಕ್ಕೊಂದಕ್ಕೆ ಸಂಬಂಧ ಸಂಪರ್ಕಗಳಿಲ್ಲದ ವಿವಿಧ ಯುಗಗಳಲ್ಲಿ ಹುಟ್ಟಿದ ಸಾಹಿತ್ಯದಲ್ಲೆಲ್ಲಾ ವಿದ್ವಾಂಸರು ಅರಸುವುದು ಇಂಥವರಿಗಾಗಿ. ಇವರೇ, ಸರ್ವದಾ ಮುಖ್ಯವಾದರೂ ಸರ್ವದಾ ಬೇಗ ಗಮನದಿಂದ ತಪ್ಪಿಸಿಕೊಳ್ಳುವ ಜೀವನ ರಹಸ್ಯಗಳನ್ನು, ಮಾನವ ಕುಲಕ್ಕೆ ತುಮುಲದ ನಡುವೆ ಶಾಂತಿಯನ್ನು ಹೊಸಹೊಸದಾಗಿ ಮತ್ತೆ ಮತ್ತೆ ದೊರಕಿಸಿಕೊಡುವ ಕಣಸುಗಳನ್ನು, ಆಕಾಂಕ್ಷೆಗಳನ್ನು ಗಾಢವಾಗಿ ಅನುಭವ ಮಾಡಿರುವ, ಮನಸ್ಸಿಗೆ ನಡುವಂತೆ ನಿರೂಪಿಸಿರುವ ಮಹನೀಯರು. ಅವರ ಮಹಾ ವಚನಗಳು ಸಾಹಿತ್ಯ ಮಾತ್ರವಾಗದೆ ಅದಕ್ಕೆ ಹೆಚ್ಚಿನವಾಗಿ. ವಿರಾಮಕಾಲವನ್ನು ಕಳೆಯುವ ಹಿತಸಾಧನಮಾತ್ರವಾಗದೆ ಚತುರ ಲೇಖನ ಮಾತ್ರವಾಗದೆ ಅವಕ್ಕೆ ಹೆಚ್ಚಿನವಾಗಿ, “ಮಹಾತ್ಮನೊಬ್ಬನ ಅನರ್ಘ್ಯ ಜೀವಸಾರ, ಜೀವಿತದ ಮುಂದಿನ ಜೀವಿತಕ್ಕಾಗಿ ಶೇಖರಿಸಿದ ಜೀವಸಾರ”ವಾಗಿ ನಮ್ಮ ಬಗೆಗಳಲ್ಲಿ ನೆಲೆಗೊಳ್ಳುತ್ತಾನೆ.

ಆಹಾರ ಸೇವನೆಯ ನಿಯಂತ್ರಣ

ಕೆ. ಪದ್ಮಾ ಉಮಾಪತಿ

ಹಸಿವು ಎಲ್ಲ ಜೀವರಾಶಿಗಳಲ್ಲೂ ಇರುವ ಸಹಜ ಪ್ರವೃತ್ತಿ. ಅಮೆರಿಕಾದ ಆಧುನಿಕ ವಿಜ್ಞಾನಿ ಜಾನ್ ಮಯೇರ್ ಅವರು ಎರಡು ಬಗೆಯ ಹಸಿವಿನ ಲಕ್ಷಣಗಳನ್ನು ನಿರೂಪಿಸಿದ್ದಾರೆ : (1) ತೀವ್ರತಮ ಹಸಿವೆ (Hunger) (2) ಸಾಧಾರಣ ಹಸಿವೆ (Appetite).

ಬಹಳ ದಿನಗಳ ಉಪವಾಸದಿಂದ ಉದ್ಭವವಾಗುವ ಜಟಿಲ ಸಂವೇದನೆಗಳಿಗೆ ತೀವ್ರತಮ ಹಸಿವೆ ಎನ್ನಬಹುದು. ಇದು ಅತ್ಯಂತ ಅಸಹನೀಯವೂ, ತೀಕ್ಷ್ಣವೂ ಆಗಿರುವುದರಿಂದ ಪ್ರಾಣಿಯಾಗಲಿ ಮನುಷ್ಯನಾಗಲಿ ಹಸಿವನ್ನು ನೀಗಿಸಿಕೊಳ್ಳಲು ಏನು ಮಾಡಲೂ ಹಿಂಜರಿಯುವುದಿಲ್ಲ. ಕೊನೆಗೆ ಕಾಳಗಕ್ಕೂ ಸಿದ್ಧ. ಅಲ್ಲದೆ ತಾನು ತಿನ್ನುವ ಆಹಾರ ಪದಾರ್ಥಗಳ ರುಚಿಯ ಬಗ್ಗೆ ಗಮನವಿರುವುದಿಲ್ಲ. ಕೈಗೆ ಸಿಕ್ಕಿದುದನ್ನು ತಿನ್ನುತ್ತಾನೆ.

ಸ್ವಲ್ಪ ಕಾಲದ ಉಪವಾಸದಿಂದ ಉಂಟಾಗುವ ಸಂಮಿಶ್ರಿತ ಭಾವನೆಗಳಿಗೆ ಸಾಧಾರಣ ಹಸಿವೆ ಎನ್ನಬಹುದು. ಈ ಹಂತದಲ್ಲಿ ಸಭ್ಯತೆಯ ವರ್ತನೆಯನ್ನು ಮನುಷ್ಯನಲ್ಲಿ ಕಾಣಬಹುದು. ತಾನು ತಿನ್ನುವ ಆಹಾರದ ಆಸ್ವಾದನೆಯ ಬಗ್ಗೆ ಆಸಕ್ತನಾಗಿ, ರುಚಿಯಾದ ಆಹಾರವನ್ನೇ ಬಯಸುತ್ತಾನೆ.

ತೃಪ್ತಿಯ ಭಾವನೆಗಳನ್ನು ಹೊಂದಿದಾಗ ಆಹಾರವಿದ್ದರೂ ಮನುಷ್ಯ ತಿನುವುದನ್ನು ನಿಲ್ಲಿಸುತ್ತಾನೆ. ಆಹಾರಸೇವನೆಯ ನಿಯಂತ್ರಣ ದೇಹದ ಬೆಳವಣಿಗೆಗೂ ಆರೋಗ್ಯಕ್ಕೂ ಅತ್ಯಾವಶ್ಯಕ. ನಾವು ತಿನ್ನುವ ಆಹಾರಕ್ಕೂ, ದೇಹದಲ್ಲಿ ಅದರ ಉಪಯುಕ್ತತೆಗೂ ಪರಸ್ಪರ ಹೊಂದಾಣಿಕೆಯನ್ನು ಕಲ್ಪಿಸಿಕೊಡುವುದೇ ಆಹಾರ ಸೇವನೆಯ ನಿಯಂತ್ರಣ. ದೇಹದ ತೂಕವನ್ನು ಸಮತೋಲನದಲ್ಲಿಡಲು ಆಹಾರ ರೂಪದಲ್ಲಿ ಒದಗಿ ಬರುವ ಶಕ್ತಿಗೂ ದೇಹದಲ್ಲಿ ಅದರ ವ್ಯಯಕ್ಕೂ ಹೊಂದಾಣಿಕೆ ಇರಬೇಕು. ಆಹಾರ ಸೇವನೆಯ ನಿಯಂತ್ರಣದಲ್ಲಿ ಮೂರು ವಿಧಗಳಿವೆ :


(1) ಜೀವಮಾಪಕ ನಿಯಂತ್ರಣ
(2) ಅಲ್ಪಾವಧಿ ನಿಯಂತ್ರಣ
(3) ದೀರ್ಘಾವಧಿ ನಿಯಂತ್ರಣ

ಮನುಷ್ಯನಿಗಾಗಲಿ ಪ್ರಾಣಿಗಾಗಲಿ ಸ್ವಭಾವತಃ ಇರುವ ಕನಿಷ್ಟ ಮತ್ತು ಪರಮಾವಧಿಯ ಆಹಾರ ಸೇವನೆಯ ಮಿತಿಯನ್ನು ಜೀವಮಾಪಕ ನಿಯಂತ್ರಣ ಸೂಚಿಸುತ್ತದೆ.

ದಿನದಿನದ ಆಹಾರ ಸೇವನೆಯ ನಿಯಂತ್ರಣವೇ ಅಲ್ಪಾವಧಿ ನಿಯಂತ್ರಣ. ಕ್ರಿಮಿಕೀಟಗಳಿಂದ ಮಾನವನವರೆಗೂ ಅನೇಕ ಜೀವರಾಶಿಗಳ ಮೇಲೆ ನಡೆಸಿದ ಪ್ರಯೋಗಗಳಿಂದ ತಿಳಿದು ಬರುವುದೇನೆಂದರೆ, ಬಹುಪಾಲು ಜೀವಿಗಳು ಅವುಗಳಿಗಿರುವ ಸ್ವಾಭಾವಿಕ ವಾತಾವರಣದಲ್ಲೇ ತಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಪ್ರತಿದಿನ ಆಹಾರವನ್ನು ಸೇವಿಸುವ ಪ್ರವೃತ್ತಿಯನ್ನು ಹೊಂದಿರುತ್ತವೆ. ಹಾಗೆಂದಮಾತ್ರಕ್ಕೆ ದೇಹಕ್ಕೆ ಬೇಕಾಗುವಷ್ಟು ಆಹಾರವನು ನಿರ್ದಿಷ್ಟ ಪ್ರಮಾಣದಲ್ಲಿ ಸೇವಿಸುತ್ತವೆಂದಲ್ಲ. ಕೆಲವು ವೇಳೆ, ಸ್ವಲ್ಪ ಹೆಚ್ಚಾಗಿಯೋ ಕಡಿಮೆಯಾಗಿಯೋ ಸೇವಿಸಬಹುದು. ಈ ರೀತಿಯ ವ್ಯತ್ಯಾಸಗಳು, ಅಂದರೆ ಮನುಷ್ಯನಲ್ಲಿ 2–3 ವಾರಗಳಲ್ಲಿ ಸಮನಾಗುತ್ತವೆ. ಇದು ದೀರ್ಘಾವಧಿ ನಿಯಂತ್ರಣ. ಈ ನಿಯಂತ್ರಣಗಳು ಇಲ್ಲದಿದ್ದರೆ ದೇಹದ ತೂಕದಲ್ಲಿ ಮತ್ತು ಆರೋಗ್ಯದಲ್ಲಿ ಬಹುಬೇಗ ಏರುಪೇರುಗಳಾಗುತ್ತಿತ್ತು. ಪ್ರಕೃತಿ ನೀಡಿರುವ ರಕ್ಷಕ ಸಾಧನಗಳಿವು.

ಆಹಾರಸೇವನೆಗೆ ಸಂಬಂಧಿಸಿದ ಮೊಟ್ಟಮೊದಲ ಸಿದ್ಧಾಂತಗಳಿಗೆ ಜಠರವೇ ಪ್ರಾಮುಖ್ಯವಾಗಿತ್ತು. ಹಸಿವಿನ ಭಾವನೆಗಳು ಮುಖ್ಯವಾಗಿ ಜಠರದಲ್ಲೇ ಸಂವೇದನೆಯಾಗಿ ಜನಿಸಿದರೂ, ಇದು ಹಸಿವಿನ ನಿಯಂತ್ರಣ ಕಾರ್ಯದ ಮುಖ್ಯ ಅಂಗವಲ್ಲ ಎಂದು ಪ್ರಯೋಗಶಾಲೆಯ ಪ್ರಾಣಿಗಳ ಮೇಲೆ ನಡೆಸಿದ ಸಂಶೋಧನೆಗಳಿಂದ ತಿಳಿದಿದೆ. ಶಸ್ತ್ರಕ್ರಿಯೆಯಿಂದ ಜಠರವನ್ನು ತೆಗೆದು ಹಾಕಿದರೂ ಪ್ರಾಣಿಗಳು ತಿನ್ನುವ ಆಸೆಯನ್ನು ವ್ಯಕ್ತಪಡಿಸುತ್ತವೆ. ಹಸಿವಿನ ತಳಮಳವನ್ನು ನೀರು ಕುಡಿಸಿ ಅಥವಾ ಬಿಗಿಯಾಗಿ ಹೊಟ್ಟೆಯ ಸುತ್ತ ಪಟ್ಟಿಯನ್ನು ಕಟ್ಟಿ ಕಡಮೆಮಾಡಬಹುದು. ಆದ್ದರಿಂದ ಹೊಟ್ಟೆಯಲ್ಲಾಗುವ ಸಂವೇದನೆಗಳು ಆಹಾರವನ್ನು ಸೇವಿಸಬೇಕೆಂಬ ಪ್ರೇರಣೆಯ ಸಂಕೇತ ಮಾತ್ರ. ಹಿಂದಿನ ಕಾಲದಿಂದಲೂ ನಡೆದಿರುವ ಸಂಶೋಧನೆಗಳಿಂದ, ಮಿದುಳಿನ ಅಡಿಯಲ್ಲಿರುವ ಹೈಪೊಥಾಲಮಸ್, ಹಸಿವು ಬಾಯಾರಿಕೆ ತೃಪ್ತಿ ಮುಂತಾದ ಜೀವಾಳ ಕಾರ್ಯಗಳ ನಿಯಂತ್ರಣ ಕೇಂದ್ರ ಎಂದು ಖಚಿತವಾಗಿದೆ. ಈ ಭಾಗ ಪಿಟ್ಯುಟರಿ ಗ್ರಂಥಿ ಇರುವೆಡೆಗೆ ಸ್ವಲ್ಪ ಮೇಲ್ಭಾಗದಲ್ಲಿದೆ. ಚಿತ್ರದಲ್ಲಿ ಸೂಚಿಸಿರುವಂತೆ ಹೈಪೊಥಾಲಮಸ್‌ನಲ್ಲಿ ಹಸಿವು ಮತ್ತು ತೃಪ್ತಿಗಳನ್ನು ನಿಯಂತ್ರಿಸುವ ಎರಡು ಜೋಡಿ ನರ ಕೇಂದ್ರಗಳಿವೆ. ಮಧ್ಯ ಭಾಗವನ್ನು ನಾಶಮಾಡಿದಾಗ ಪ್ರಾಯೋಗಿಕ ಇಲಿಗಳು ಹೊಟ್ಟೆಬಾಕರಂತೆ ತಿಂದು ದಪ್ಪನಾಗುತ್ತವೆ. ಆದ್ದರಿಂದ. ಈ ಭಾಗವನ್ನು ತೃಪ್ತಿಯ ಕೇಂದ್ರವೆಂದು ಕರೆಯಲಾಯಿತು. ಇವುಗಳ ಎಡ, ಬಲ ಪಾರ್ಶ್ವ ಭಾಗಗಳನ್ನು ನಾಶಪಡಿಸಿದಾಗ ಪ್ರಾಣಿಗಳು ತಿನ್ನುವುದನ್ನೂ, ಕುಡಿಯುವು

ದನ್ನೂ ಪೂರ್ತಿ ನಿಲ್ಲಿಸಿಬಿಡುವುದರಿಂದ ಇವನ್ನು, ಹಸಿವಿನ ಕೇಂದ್ರಗಳು ಎನ್ನಲಾಗಿದೆ. ಇವು ತೃಪ್ತಿಯ ಕೇಂದ್ರಗಳ ಪ್ರಭಾವಕ್ಕೊಳಪಟ್ಟಿವೆ. ತೃಪ್ತಿಯ ಕೇಂದ್ರಗಳಿಂದ



ಚಿತ್ರ 1. ಮಿದುಳಿನಲ್ಲಿರುವ ತೃಪ್ತಿಯ ಮತ್ತು ಹಸಿವಿನ ಕೇಂದ್ರಗಳು

ಹಸಿವಿನ ಕೇಂದ್ರಗಳ ದಿಕ್ಕಿಗೆ ಸಾಗುವ ನರಗಳನ್ನು ವರ್ಣದ್ರವ್ಯ ಹತ್ತಿಸುವುದರಿಂದ ಗುರುತಿಸಲಾಗಿದೆ. ತೃಪ್ತಿಯ ನಿಯಂತ್ರಣದ ಮೂಲಕ ಹಸಿವಿನ ನಿಯಂತ್ರಣ ಆಗುವುದು ವಿದಿತ. ತೃಪ್ತಿಯ ಕೇಂದ್ರಗಳು ಯಾವ ಪ್ರಚೋದನೆಗೆ ಒಳಗಾಗಿವೆ ಎಂಬುದಕ್ಕೆ ಎರಡು ಮುಖ್ಯ ಸಿದ್ಧಾಂತಗಳಿವೆ.

ಗ್ಲೂಕೋಸ್ಟಾಟಿಕ್ ಸಿದ್ಧಾಂತ : ಜಾನ್ ಮೆಯೇರ್ ಪ್ರತಿಪಾದಿಸಿರುವ ಈ ತತ್ವಕ್ಕೆ ಸಾಕಷ್ಟು ಪ್ರಾಯೋಗಿಕ ಆಧಾರವಿದೆ. ತೃಪ್ತಿಯ ಕೇಂದ್ರಗಳಲ್ಲಿ ಗ್ಲೂಕೋಸನ್ನು ಗ್ರಹಿಸುವ ರಸಾಯನಿಕ ಆಕರ್ಷಕ ಗುಣ ವಿಶೇಷವನ್ನು ಹೊಂದಿರುವ ಸೂಕ್ಷ್ಮ ಜೀವಕಣಗಳಿವೆ. ಇವು ಗ್ಲೂಕೊ ರಿಸೆಪ್ಟಾರ್‌ಗಳು. ಚಿನ್ನಗಂಧಕ ಗ್ಲೂಕೋಸನ್ನು ಚಿಟ್ಟಿಲಿಗಳಿಗೆ ತಿನ್ನಿಸಿದಾಗ ತೃಪ್ತಿಯ ಭಾವನೆಗಳನ್ನು ಕಳೆದುಕೊಂಡು ತಿಂಡಿ ಬಾಕ ವಾಗುತ್ತವೆ. ಗ್ಲೂಕೋಸನ್ನು ಹೋಲುವ ಗ್ಯಾಲಾಕ್ಟೋಸನ್ನು ಬದಲಿಗೆ ಉಪಯೋಗಿಸಿದಾಗ ತೃಪ್ತಿಯ ಕೇಂದ್ರಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗಲಿಲ್ಲ. ಹಾಗೆಯೇ ಸಾರ್ಬಿಟಾಲ್, ಗ್ಲಿಸರಾಲ್ ಅಥವಾ ಮೇದಾಮ್ಲಗಳನ್ನು ಬದಲಿಗೆ ಉಪಯೋಗಿಸಿದಾಗಲೂ ಯಾವ ರೀತಿಯಲ್ಲೂ ತೃಪ್ತಿಯ ಕೇಂದ್ರಗಳಿಗೆ ಹಾನಿಯಾಗಲಿಲ್ಲ. ಇದರ ಕಾರಣ ಸುಸ್ಪಷ್ಟ. ಗ್ಲೂಕೊರಿಸೆಪ್ಟಾರ್ಸ್ ಜೀವಕಣಗಳು ಗ್ಲೂಕೋಸ್‌ನ್ನು ಮಾತ್ರ ಗ್ರಹಿಸುವುದರಿಂದ ಅದರ ಜೊತೆಯಲ್ಲಿರುದ ಹಾನಿಕರ ಚಿನ್ನದ ಪರಮಾಣುವನ್ನೂ ಹೀರಿಕೊಂಡು ಸಾಯುತ್ತವೆ.

ತೃಪ್ತಿಯ ಕೇಂದ್ರಗಳು ಗ್ಲೂಕೋಸ್ ಪೂರಿತವಾದಾಗ ಹಸಿವಿನ ಕೇಂದ್ರಗಳ ಮೇಲೆ ಪರಿಣಾಮ ಉಂಟಾಗಿ ಜೀವಿ ತಿನ್ನುವುದನ್ನು ನಿಲ್ಲಿಸುತ್ತದೆ. ರಕ್ತದಲ್ಲಿ


ಗ್ಲೂಕೋಸ್ ಹೆಚ್ಚಾಗಿದ್ದ ಮಾತ್ರಕ್ಕೆ ತೃಪ್ತಿಯ ಭಾವನೆಗಳು ಬರುತ್ತವೆ ಎಂದು ಹೇಳಲಾಗುವುದಿಲ್ಲ. ಉದಾಹರಣೆಗೆ, ಮಧುಮೇಹದಿಂದ ನರಳುತ್ತಿರುವ ರೋಗಿಯ ರಕ್ತದಲ್ಲಿ ಗ್ಲೂಕೋಸು ಹೆಚ್ಚಿನ ಪ್ರಮಾಣದಲ್ಲಿದ್ದರೂ ಹೆಚ್ಚಾಗಿ ಹಸಿವಾಗುವುದು ಈ ರೋಗದ ಮುಖ್ಯ ಲಕ್ಷಣಗಳಲ್ಲೊಂದು. ಇನ್ಸುಲಿನ್ ಚೋದನಿಯ ರಸದ ಸಹಾಯವಿಲ್ಲದೆ ಗ್ಲೂಕೋಸ್ ಸಕ್ಕರೆ ತೃಪ್ತಿಯ ಕೇಂದ್ರಗಳನ್ನು ಪ್ರವೇಶಿಸಲಾರದು. ಆದ್ದರಿಂದಲೇ ಮಧುಮೇಹ ರೋಗಿಯಲ್ಲಿ ಹತ್ತಿಕ್ಕಲಾರದಂತಹ ಹಸಿವು ಆಗುತ್ತದೆ.

ಜಠರವೂ ನೇರವಾಗಿ ತೃಪ್ತಿಯ ಕೇಂದ್ರಗಳ ನಿಯಂತ್ರಣಕ್ಕೆ ಒಳಗಾಗಿದೆ ಎಂಬುದಕ್ಕೆ ಪ್ರಾಯೋಗಿಕ ಆಧಾರಗಳಿವೆ. ದೇಹದಲ್ಲಿ ಗ್ಲೂಕಗಾನ್ ಚೋದನಿ ರಸದ ಮುಖ್ಯ ಕಾರ್ಯ, ಯಕೃತ್ತಿನಲ್ಲಿ ಶೇಖರವಾದ ಗ್ಲೂಕೋಸ್ ಸಕ್ಕರೆಯನ್ನು ರಕ್ತಕ್ಕೆ ಬಿಡುಗಡೆ ಮಾಡುವುದು. ಈ ರಸವನ್ನು ಚುಚ್ಚುಮದ್ದಾಗಿ ಪ್ರಯೋಗಾರ್ಥಿಗಳಿಗೆ ಕೊಟ್ಟಾಗ, (ಆಹಾರವನ್ನು ಕೊಡದೆಯೆ) ಹಸಿವಿನ ಭಾವನೆಗಳು ಮಾಯವಾದವು. ಪ್ರಾಣಿಗಳಲ್ಲಿ ತೃಪ್ತಿಯ ಕೇಂದ್ರಗಳನ್ನು ನಾಶಮಾಡಿ, ಬಳಿಕ ಈ ಚುಚ್ಚುಮದ್ದು ಕೊಟ್ಟಾಗ ಯಾವ ರೀತಿಯ ಪರಿಣಾಮವೂ ಆಗಲಿಲ್ಲ. ತೃಪ್ತಿಯ ಕೇಂದ್ರಗಳು ಜಠರದಲ್ಲಿ ಉತ್ಪತ್ತಿಯಾಗುವ ಹೈಡ್ರೊಕ್ಲೋರಿಕ್ ಆಮ್ಲದ ಉತ್ಪಾದನೆಯನ್ನೂ ನಿಯಂತ್ರಿಸುವುದು ಪ್ರಯೋಗಗಳಿಂದ ತಿಳಿದಿದೆ. ನರಕ್ಕೆ ಬಣ್ಣಗೂಡಿಸುವ ತಂತ್ರದಿಂದ, ತೃಪ್ತಿಯ ಕೇಂದ್ರಗಳಿಂದ ಜಠರದ ಕಡೆಗೆ ಹೊರಡುವ ನರಗಳನ್ನು ಗುರುತಿಸಲಾಗಿದೆ. ಇವು ಜಠರವನ್ನು ಚೋದಿಸುವ ವೇಗಸ್ ನರದ ಮೂಲವನ್ನು ಸೇರುತ್ತವೆ.

ಗ್ಲೂಕೊಸ್ಟ್ಯಾಟಿಕ್ ಸಿದ್ಧಾಂತವನ್ನು ಪುಷ್ಟೀಕರಿಸುವಂಥ ಪ್ರಯೋಗಗಳನ್ನು ಮಾಡುವವರಲ್ಲಿ ಪ್ರಮುಖರಾದವರು ನವದೆಹಲಿಯ ಶರೀರ ಶಾಸ್ತ್ರಜ್ಞ ಡಾ॥ ಆನಂದ್. ಇವರು ಜೀವಕಣಗಳ ವಿದ್ಯುತ್ತಿನ ಚಲನೆಗಳನ್ನು ಪರಿಶೀಲಿಸುವ ಹೊಸ ಪ್ರಯೋಗ ತಂತ್ರವನ್ನು ಬಳಸಿ ಹಸಿವು ಮತ್ತು ತೃಪ್ತಿಯ ನರಕಣಗಳ ಕಾರ್ಯಗಳನ್ನು ಅಧ್ಯಯನ ಮಾಡಿದರು. ಪ್ರಾಣಿಗಳಿಗೆ ಆಹಾರ ಅಥವಾ ಚುಚ್ಚುಮದ್ದು ಕೊಟ್ಟಾಗ ಹೈಪೊಥಾಲಮಸ್‌ನ ತೃಪ್ತಿಯ ಕೇಂದ್ರಗಳಲ್ಲಿ ಮಾತ್ರ ವಿದ್ಯುತ್ತಿನ ಕಾರ್ಯಗಳು ತೀವ್ರವಾಗಿ ನಡೆಯುವುದು ಕಂಡುಬಂದಿತು. ಮಿದುಳಿನ ಮಿಕ್ಕ ಭಾಗಗಳಲ್ಲಿ ಈ ರೀತಿಯ ಪರಿಣಾಮ ಉಂಟಾಗಲಿಲ್ಲ. ದೇಹದಲ್ಲಿ ಗ್ಲೂಕೋಸ್ ಸಕ್ಕರೆಯ ಉಪಯೋಗ ಜಾಸ್ತಿಯಾದಾಗ ತೃಪ್ತಿಯ ಕೇಂದ್ರಗಳ ನರಕಣಗಳು ಚುರುಕಾಗಿ ಕೆಲಸ ಮಾಡುವುದು ಕಂಡು ಬಂದಿತು. ಆದರೆ ಹಸಿವಿನ ಕೇಂದ್ರದ ನರಕಣಗಳ ವಿದ್ಯುತ್ ಕಾರ್ಯಗಳು ಇಳಿಮುಖವಾಗಿದ್ದವು. ಗ್ಲೂಕೋಸ್ ಸಕ್ಕರೆಯ ಉಪಯೋಗ ದೇಹದಲ್ಲಿ ಕಡಿಮೆ ಇದ್ದಾಗ ತದ್ವಿರುದ್ಧವಾದ ಪರಿಣಾಮಗಳು ಉಂಟಾದವು.

ಉಷ್ಣ ಸಮಸ್ಥಿತಿ ಸಿದ್ಧಾಂತ : ಸಾಧಾರಣವಾಗಿ ನಮಗೆ ಚಳಿಯಾದಾಗ ಹಸಿವೆ ಜಾಸ್ತಿಯಾದಂತೆಯೂ, ಬಿಸಿಲು ಹೆಚ್ಚಿರುವ ದಿನಗಳಲ್ಲಿ ಹಸಿವು ಕಡಿಮೆ ಆದಂತೆಯೂ ಭಾಸವಾಗುತ್ತದೆ. ಏಕೆಂದರೆ ಜೀವಿಗಳು ತಮ್ಮ ದೇಹವನ್ನು ಶಾಖವಾಗಿಟ್ಟುಕೊಳ್ಳಲು ತಿನ್ನುತ್ತವೆ. ಹೆಚ್ಚಿನ ಉಷ್ಣತೆಯನ್ನು ತಡೆಗಟ್ಟುವುದಕ್ಕೆ ತಿನ್ನುವುದನ್ನು ನಿಲ್ಲಿಸುತ್ತವೆ. ಇದು ಉಷ್ಣಸಮಸ್ಥಿತಿ ಸಿದ್ಧಾಂತದ ಸಂಕ್ಷಿಪ್ತ ವಿವರ. ಈ ತತ್ತ್ವವನ್ನು ಪ್ರತಿಪಾದಿಸಿರುವ ಜೆ. ಆರ್. ಬ್ರೂಬೆಕ್ ಅಭಿಪ್ರಾಯದಲ್ಲಿ ರಕ್ತದ ಉಷ್ಣತೆ ಹೆಚ್ಚಾದಾಗ, ತೃಪ್ತಿಯ ಕೇಂದ್ರಗಳು ಚೋದಿತವಾಗುತ್ತವೆ. ಅದರ ಬಿಸಿ ಕಡಮೆಯಾದಾಗ ಹಸಿವಿನ ಕೇಂದ್ರಗಳು ಉತ್ತೇಜಿತವಾಗುತ್ತವೆ. ವಸ್ತುಸ್ಥಿತಿ ಹೀಗಿರಬಹುದಾದರೂ, ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ನಡೆಸಿದ ಪ್ರಯೋಗಗಳ ಫಲಿತಾಂಶಗಳು ಅತ್ಯಂತ ಕುತೂಹಲಕಾರಿಯಾಗಿವೆ. ಹೈಪೊಥಾಲಮಸ್‌ನ ಉಷ್ಣತೆ ಏರುಪೇರಾಗದೆ ಒಂದೇ ಸಮನಾಗಿರುತ್ತದೆ ಎಂದು ಇವು ತೋರಿಸಿವೆ. ಅಲ್ಲದೆ ಈ ಪ್ರಯೋಗಗಳಲ್ಲಿ ಪ್ರಾಣಿಗಳಿಗೆ ಹಸಿವೆಯಾದಾಗ ಉಷ್ಣತೆ ಕಡಿಮೆಯಾಗುವುದಾಗಲಿ, ತಿನ್ನುವುದನ್ನು ನಿಲ್ಲಿಸಿದಾಗ ಹೆಚ್ಚಾಗುವುದಾಗಲಿ ಕಂಡುಬರಲಿಲ್ಲ. ಉಷ್ಣ ಸಮಸ್ಥಿತಿ ಸಿದ್ಧಾಂತದ ಮತ್ತೊಂದು ಮುಖ್ಯ ತೊಡಕೆಂದರೆ, ಕೆಲವು ಪರಿಸ್ಥಿತಿಗಳಿಗೆ ಇದರಿಂದ ಸಮರ್ಪಕ ಉತ್ತರ ಸಿಗದೇ ಇರುವುದು. ಉದಾಹರಣೆಗೆ, ಥೈರಾಕ್ಸಿನ್ ಚೋದನಿ ರಸದ ಹೆಚ್ಚಳದ ರೋಗದಿಂದ ಬಳಲುವವರ ದೇಹದಲ್ಲಿ ಹೆಚ್ಚಿನ ಉಷ್ಣತೆ ಇದ್ದರೂ, ಹಸಿವೆ ಜಾಸ್ತಿಯಾಗಿರುತ್ತದೆ, ಈ ರೀತಿಯ ಪ್ರತಿವಾದಗಳಿದ್ದರೂ ಆಹಾರ ಸೇವನೆಯ ನಿಯಂತ್ರಣದಲ್ಲಿ ದೇಹದ ಉಷ್ಣತೆ ಭದ್ರತೆಯ ಕವಾಟದಂತೆ ವರ್ತಿಸಬಹುದೆಂದು ಜಾನ್ ಮಯೇರ್ ಅಭಿಪ್ರಾಯ.

ಅಲ್ಪಾವಧಿ ನಿಯಂತ್ರಣದಲ್ಲಾಗುವ ತಪ್ಪುಗಳನ್ನು ಸರಿಪಡಿಸುವ ದೀರ್ಘಾವಧಿ ನಿಯಂತ್ರಣದ ಬಗ್ಗೆ ಹೆಚ್ಚು ತಿಳಿದಿಲ್ಲ. ಪ್ರಾಯಶಃ ಕೊಬ್ಬಿನ ಜೀವಕಣಗಳು ಕಿಣ್ವಗಳ



ಚಿತ್ರ 2. ಆಹಾರ ಸೇವನೆಯ ನಿಯಂತ್ರಣ ರೀತಿ

ಸಹಾಯದಿಂದ ದೇಹದ ಚಯಾಪಚಯ ಕ್ರಿಯೆಯ ಮೇಲೆ ಪರಿಣಾಮವನ್ನು ಉಂಟು ಮಾಡಿ ದೇಹದ ತೂಕವನ್ನು ಸಮತೋಲನದಲ್ಲಿಡಬಹುದೆಂದು ವಿಜ್ಞಾನಿಗಳು ಸೂಚಿಸಿದ್ದಾರೆ.

ಅನೇಕ ಪ್ರಾಣಿಗಳ ಮತ್ತು ಮನುಷ್ಯನ ಆಹಾರ ಸೇವನೆಯ ರೀತಿ ಇನ್ನೂ ಅನೇಕ ಅಂಶಗಳ ಪ್ರಭಾವಕ್ಕೊಳಗಾಗಿದೆ ಎಂದರೆ ಆಶ್ಚರ್ಯವಾಗಬಹುದು. ಈ ಅಂಶಗಳು ಇದುವರೆಗೂ ವಿವರಿಸಿದ ಕ್ಲಿಷ್ಟವಾದ ಭೌತಿಕ ಅಂಶದ ಚೌಕಟ್ಟಿನಲ್ಲಿಯೇ ಕೆಲಸ ಮಾಡುತ್ತವೆ. ಇವುಗಳಲ್ಲಿ ಮುಖ್ಯವಾದ ಮಾನಸಿಕ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ತಮ್ಮವೇ ಆದ ವಿಶಿಷ್ಟ ರೀತಿಯುಲ್ಲಿ ಆಹಾರ ಸೇವನೆಯನ್ನು ನಿಯಂತ್ರಿಸುವುವು. ಈ ಎಲ್ಲಾ ಅಂಶಗಳ ಅನುಕಲನವನ್ನು ಚಿತ್ರದಲ್ಲಿ ಕಾಣಹುದು.

ಸಹಾಯಕ ಗ್ರಂಥಗಳು

1. S. Devidson, R. Passmore and J. F. Brock : *Human Nutrition and Dietetics*. The English Language Book Society and Churchill Livingstone, Edinburgh (1973), pp. 27-33
2. Mayer, Jeen : *Overweight–Causes, Cost and Control,* Prentice-Hall, Inc. New Jersey. (1958), pp. 9-25
3. Wohl G. Micheal and Robert S. Goodhart (Ed.) : *Modern Nutrition in Health and Disease*, Lea & Febiger, Philadelphia. (1970), pp. 76-94

ಕರ್ಮ ಮತ್ತು ಪುನರ್ಜನ್ಮ

ಬಿ. ಕುಪ್ಪುಸ್ವಾಮಿ

ಭಾರತೀಯ ಹಿಂದೂ, ಬೌದ್ಧ ಮತ್ತು ಜೈನ ಸಂಸ್ಕೃತಿಗಳಲ್ಲಿ ಕರ್ಮ ಮತ್ತು ಪುನರ್ಜನ್ಮ ಮತ್ತು ಸಂಸಾರ ಈ ಮೂರು ಭಾವನೆಗಳನ್ನು ಸಿದ್ಧಾಂತಗಳೆಂದು ಪರಿಗಣಿಸಲಾಗಿದೆ. ಪುರಾಣ ಮತ್ತು ಆಧ್ಯಾತ್ಮಿಕ ಗ್ರಂಥಗಳಲ್ಲಿಯೂ ಸಾಮಾನ್ಯ ಜನರ ನಂಬಿಕೆಗಳಲ್ಲಿಯೂ ಈ ಮೂರು ಭಾವನೆಗಳು ತೀವ್ರವಾಗಿ ಬೇರೂರಿವೆ. ಜನಜೀವನದಲ್ಲಿರುವ ವ್ಯತ್ಯಾಸ, ಬಲಾಬಲ, ಸುಖ ದುಃಖ, ಜಾತಿ ಮತ್ತು ಸಾಮಾಜಿಕಸ್ತರ ವಿನ್ಯಾಸಗಳಿಗೆ ಈ ಭಾವನೆಗಳು ಕಾರಣಭೂತವೆಂದು ಹೇಳಲಾಗಿದೆ. ಎಲ್ಲ ಸಮಾಜಗಳಲ್ಲಿಯೂ ವ್ಯತ್ಯಾಸಗಳಿರುವುದು ಸರ್ವವಿದಿತ. ಈ ವ್ಯತ್ಯಾಸಗಳಿಗೆ ಕಾರಣವೇನು ಎಂದು ಕಂಡುಹಿಡಿಯಲು ಹೊರಟಾಗ ಇವು ಮನುಷ್ಯನ ವರ್ತನೆಯ ಆಧಾರದ ಮೇಲೆ ಇರುವುವೆಂದು ಸಿದ್ಧಾಂತ. ಇದೂ ನಿರ್ವಿವಾದ. ಮದುವೆಯ ಊಟದಲ್ಲಿ ಒಳ್ಳೆಯ ಭಕ್ಷ್ಯಗಳು ಸಿಗುವುವೆಂದು ಅವುಗಳನ್ನು ಅತಿ ಹೆಚ್ಚಾಗಿ ತಿಂದರೆ ಆ ರಾತ್ರಿ ದುಃಸ್ವಪ್ನಗಳು ಮತ್ತು ಅಜೀರ್ಣದಿಂದ ಅಸ್ವಸ್ಥತೆಯುಂಟಾಗುವುದು ಸ್ವಾಭಾವಿಕ. ಒಬ್ಬ ವಿದ್ಯಾರ್ಥಿಯು ಪಾಠ ಪ್ರವಚನಗಳನ್ನು ಶ್ರದ್ಧೆಯಿಂದ ಮಾಡಿದರೆ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ಪಡೆಯುವುದು ಸಾಧ್ಯ. ಕೆಟ್ಟ ನಡತೆಯು ಒಬ್ಬ ವ್ಯಕ್ತಿಯನ್ನು ಸಮಾಜದಲ್ಲಿ ಅವಮಾನಕ್ಕೆ ಗುರಿಮಾಡುವುದು ಮತ್ತು ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಮಾಡುವುದು.

ಈ ಅಂಶಗಳು ಮಾನವ ಜೀವನದಲ್ಲಿರುವ ಎಲ್ಲ ವ್ಯತ್ಯಾಸಗಳನ್ನು ವಿವರಿಸಲಾರವು. ಒಂದು ಮಗುವು ಹಣವಂತರ ಮನೆಯಲ್ಲಿ ಹುಟ್ಟಬಹುದು, ಮತ್ತೊಂದು ಮಗು ಬಡವರ ಮನೆಯಲ್ಲಿ ಹುಟ್ಟಬಹುದು. ಈ ವ್ಯತ್ಯಾಸಕ್ಕೆ ಕಾರಣವೇನು ? ಹೀಗೆಯೇ ಒಂದು ಮಗು ವಿದ್ಯಾವಂತರ ಮನೆಯಲ್ಲಿ ಹುಟ್ಟಬಹುದು. ಮತ್ತೊಂದು ಅನಕ್ಷರಸ್ಥರ ಮನೆಯಲ್ಲಿ ಹುಟ್ಟಬಹುದು. ಅಥವಾ ಬೇರೆ ಬೇರೆ ಜಾತಿಗಳಲ್ಲಿ ಮಕ್ಕಳು ಹುಟ್ಟುವರು. ಈ ವ್ಯತ್ಯಾಸಗಳಿಗೆ ಕಾರಣವೇನು ?

ಇದೇ ರೀತಿಯಾಗಿ ಒಬ್ಬ ಮನುಷ್ಯನು ಎಷ್ಟು ವಿದ್ಯಾವಂತನಾಗಿದ್ದರೂ, ಎಷ್ಟು ಬುದ್ಧಿವಂತನಾಗಿದ್ದರೂ, ಎಷ್ಟು ಶ್ರಮಪಟ್ಟು ಕೆಲಸ ಮಾಡಿದರೂ ನೀತಿ ನಿಯಮಗಳಿಗೆ ಅನುಸಾರವಾಗಿ ತನ್ನ ಜೀವನವನ್ನು ನಡೆಸುತ್ತಿದ್ದರೂ ಆತನಿಗೆ ಬಡತನ, ರೋಗ, ಮುಂತಾದ ಕಷ್ಟ ಕಾರ್ಪಣ್ಯಗಳಿರುವುವು. ಆದರೆ ಮತ್ತೊಬ್ಬನು

ಎಷ್ಟು ಬುದ್ಧಿ ಹೀನನಾಗಿದ್ದರೂ ಎಷ್ಟು ದುಷ್ಟನಾಗಿದ್ದರೂ ಅನಾಚಾರಿಯಾಗಿದ್ದರೂ ಅವನಿಗೆ ಸಂಪತ್ತು, ಸಾಮಾಜಿಕ ಸ್ಥಾನಮಾನಗಳು ಮುಂತಾದವು ಲಭಿಸಬಹುದು. ಈ ವ್ಯತ್ಯಾಸಗಳನ್ನು ಅವರ ಜೀವನಕ್ರಮದಲ್ಲಿ ಮಾಡುವ ಕೆಲಸ ಕಾರ್ಯಗಳ ಆಧಾರದ ಮೇಲೆ ವಿವರಿಸಲಾಗುವುದಿಲ್ಲ.

ಕೆಲವು ಮಕ್ಕಳಿಗೆ ಅತಿ ಹೆಚ್ಚಾದ ಬುದ್ಧಿಶಕ್ತಿಯಿರುವುದು. ಮತ್ತೆ ಕೆಲವರು ದಡ್ಡರಾಗಿರುವರು. ಈ ಬುದ್ಧಿಶಕ್ತಿಯಲ್ಲಿರುವ ತಾರತಮ್ಯಗಳಿಗೆ ಕಾರಣವೇನು ?

ಕೆಲವು ಮಕ್ಕಳಿಗೆ ಸಂಗೀತ, ಗಣಿತ ಅಥವಾ ತಾಂತ್ರಿಕ ಶಕ್ತಿ ಮುಂತಾದುವು ಹುಟ್ಟಿನಿಂದಲೇ ಯಾರೂ ಹೇಳಿಕೊಡದೇ ಇದ್ದರೂ ಇರುವುವು. ಈ ಶಕ್ತಿಗಳು ಜನ್ಮಸಿದ್ಧವಾದ ಶಕ್ತಿಗಳು. ಕೇವಲ ತರಪೇತಿಯಿಂದಾಗಲೀ ವೈಯಕ್ತಿಕ ಪ್ರಯತ್ನದಿಂದಾಗಲೀ ಉಂಟಾಗುವುದಿಲ್ಲ. ಈ ವ್ಯತ್ಯಾಸಗಳಿಗೆ ಕಾರಣವೇನು ? ಇಂತಹ ಸಮಸ್ಯೆಗಳನ್ನು ಪರಿಹರಿಸಲು, ಕರ್ಮಸಿದ್ಧಾಂತವನ್ನು, ಪುನರ್ಜನ್ಮ ಸಿದ್ಧಾಂತವನ್ನು ಪ್ರಾಚೀನ ಕಾಲದ ಭಾರತೀಯರು ಉಪಯೋಗಿಸಿರುವರು. ಈ ಸಿದ್ಧಾಂತಗಳ ಪ್ರಕಾರ ಒಬ್ಬ ಮನುಷ್ಯನ ಸ್ಥಿತಿಗತಿಗಳು ಆಕಸ್ಮಿಕದಿಂದ ಉಂಟಾಗಲಾರವು ಎಂದು ಊಹಿಸಿದರು. ಇವುಗಳಿಗೆ ಕಾರಣ ಭಗವಂತನಲ್ಲ ಎಂದೂ ಊಹಿಸಿದರು. ಈ ವ್ಯತ್ಯಾಸಗಳಿಗೆ ಭಗವಂತನೇ ಕಾರಣನಾಗಿದ್ದರೆ ಆಗ ಭಗವಂತನು ಪಕ್ಷಪಾತಿಯಾಗಿರುವನು. ಇಂತಹ ಊಹೆಯು ಅಸಂಬದ್ಧ. ಆದರೆ ಎಲ್ಲ ಜೀವಿಗಳನ್ನು ಸುಖಿಗಳನ್ನಾಗಿಯೂ ಒಳ್ಳೆಯವರನ್ನಾಗಿಯೂ ಯಾವ ಕಾರಣದಿಂದ ಭಗವಂತನು ಸೃಷ್ಟಿಸಲಿಲ್ಲ ? ಸಾಧಾರಣವಾಗಿ ವ್ಯಕ್ತಿಗಳಲ್ಲಿರುವ ವ್ಯತ್ಯಾಸಗಳನ್ನು ಅವರು ಹುಟ್ಟುವ ವಾತಾವರಣದ ವ್ಯತ್ಯಾಸಗಳನ್ನು ಸಮಂಜಸವಾಗಿ ವಿವರಿಸಲು ಈ ಕೆಳಗಿನ ಕಾರಣಗಳನ್ನು ಊಹಿಸಬಹುದು :

1. ಸಮಾಜದಲ್ಲಿ ಕಂಡುಬರುವ ವ್ಯತ್ಯಾಸಗಳಿಗೆ ದೇವರೇ ಕಾರಣ.
2. ಈ ವ್ಯತ್ಯಾಸಗಳಿಗೆ ಆನುವಂಶಿಕ ಪ್ರಕೃತಿಯೇ ಕಾರಣ.
3. ಈ ವ್ಯತ್ಯಾಸಗಳಿಗೆ ಸಾಮಾಜಿಕ ಸ್ಥಿತಿಗತಿಗಳೂ ಸಂಪ್ರದಾಯಗಳೂ ಕಾರಣ.
4. ಈ ವ್ಯತ್ಯಾಸಗಳಿಗೆ ವ್ಯಕ್ತಿಯು ಈಗಿನ ಮತ್ತು ಹಿಂದಿನ ಜನ್ಮದ ಕರ್ಮಗಳೇ ಕಾರಣ.

ಮೇಲೆ ವಿವರಿಸಿರುವ ಹಾಗೆ ಮೊದಲನೆಯ ಕಾರಣವು ಸಮಂಜಸವಲ್ಲ. ದೇವರೇ ಈ ವ್ಯತ್ಯಾಸಗಳಿಗೆ ಕಾರಣವಾದರೆ ಅವನು ಪಕ್ಷಪಾತಿಯಾಗುವನು. ಅನ್ಯಾಯಗಳಿಗೆ ಕಾರಣಭೂತನಾಗುವನು.

ಈ ಶತಾಬ್ದದ ಜೀವನ ಶಾಸ್ತ್ರದ ಪರಿಶೋಧನೆಗಳು ವ್ಯಕ್ತಿಗಳಲ್ಲಿರುವ ವ್ಯತ್ಯಾಸಗಳಿಗೆ ಕಾರಣ ಅನುವಂಶಿಕ ನಿಯಮಗಳೆಂದು ತೋರಿಸಿವೆ. ಒಂದೆ ತಾಯಿ ತಂದೆಗಳ ಶರೀರದಲ್ಲಿ ಹುಟ್ಟಿದ ಮಕ್ಕಳು ಕೆಲ ಅಂಶಗಳಲ್ಲಿ ಸಾಮ್ಯವನ್ನು ಮತ್ತೆ ಕೆಲ ಅಂಶಗಳಲ್ಲಿ ವ್ಯತ್ಯಾಸಗಳಿಂದ ಕೂಡಿರುವುದು ಅನುಭವ ಸಿದ್ಧವಾಗಿದೆ. ಅನುವಂಶಿಕ ನಿಯಮಗಳೇ ಈ ಸಾಮ್ಯಗಳಿಗೂ ವ್ಯತ್ಯಾಸಗಳಿಗೂ ಕಾರಣಭೂತವೆಂದು ಪರಿಶೋಧನೆಗಳು ತೋರಿಸಿಕೊಟ್ಟಿವೆ. ಸಮಾಜಶಾಸ್ತ್ರದ ಮತ್ತು ಮನಶ್ಶಾಸ್ತ್ರದ ಪರಿಶೋಧನೆಗಳ ಪ್ರಕಾರ ಮಾನವಕೋಟಿಯಲ್ಲಿರುವ ವರ್ತನಾ ವ್ಯತ್ಯಾಸಗಳಿಗೆ ಆ ಸಮಾಜದ ಸಾಂಪ್ರದಾಯಗಳು ಮತ್ತು ಆ ಸಮಾಜದ ಸ್ಥಿತಿಗತಿಗಳು ಕಾರಣಭೂತವೆಂದು ತೋರಿಸಿಕೊಟ್ಟಿವೆ. ಉದಾಹರಣೆಗೆ, ತಂದೆತಾಯಿಗಳು ವಿದ್ಯಾವಂತರಾದರೆ ಅವರ ಮಕ್ಕಳನ್ನು ಅನಕ್ಷರಸ್ಥರಾಗಿರುವುದಕ್ಕೆ ಅವಕಾಶ ಕೊಡುವುದಿಲ್ಲ. ಒಂದು ಗುಂಪಿಗೂ ಮತ್ತೊಂದು ಗುಂಪಿಗೂ ಊಟ ಉಡುಪುಗಳಲ್ಲಿಯೂ ಭಾಷೆಗಳಲ್ಲಿಯೂ ನಡವಳಿಕೆಗಳಲ್ಲಿಯೂ ಇರುವ ವ್ಯತ್ಯಾಸಗಳು ಸಂಪ್ರದಾಯ ಜನ್ಯವೆಂದು ಅನುಭವವು ತೋರಿಸಿಕೊಡುವುದು. ಸಾವಿರಾರು ವರ್ಷಗಳಿಂದಲೂ ಅನಕ್ಷರಸ್ಥರಾಗಿದ್ದ ಹರಿಜನ ಗಿರಿಜನ ಮನೆತನಗಳ ಮಕ್ಕಳು ಈಗ ಒಂದೇ ತಲಮಾರಿನಲ್ಲಿ ವಿದ್ಯಾವಂತರಾಗಿರುವುದನ್ನು ನಾವು ನೋಡುತ್ತಿರುವೆವು. ಮತ್ತೊಂದು ಕಡೆ ಶಾಲೆಗಳನ್ನು ಪಟ್ಟಣಗಳ ಕೊಳಚೆ ಪ್ರದೇಶಗಳಲ್ಲಿಯೂ ಹಳ್ಳಿಗಳಲ್ಲಿಯೂ ಸ್ಥಾಪಿಸಿದರೂ ಲಕ್ಷಾಂತರ ಮಕ್ಕಳು ಶಾಲೆಗೆ ಹೋಗುವುದಿಲ್ಲ. 1971ರ ಜನಗಣತಿಯ ಪ್ರಕಾರ ಶೇಕಡ 70 ಭಾರತೀಯರು ಅನಕ್ಷರಸ್ಥರಾಗಿ ಉಳಿದಿರುವರು. ಈ ಅನಕ್ಷರಸ್ಥತೆಗೆ ಕಾರಣ ಕುಟುಂಬದ ಸಂಪ್ರದಾಯ. ತಮ್ಮಲ್ಲಿ ಶಾಲೆಗೆ ಮಕ್ಕಳನ್ನು ಕಳಿಸುವ ಸಂಪ್ರದಾಯವಿಲ್ಲದೇ ಇರುವುದರಿಂದ ಮನೆಹತ್ತಿರ ಉಚಿತ ವಿದ್ಯಾಭ್ಯಾಸವನ್ನು ಕೊಡುವ ಶಾಲೆಗಳಿದ್ದರೂ ಅಲ್ಲಿಗೆ ತಮ್ಮ ಮಕ್ಕಳನ್ನು ಕಳುಹಿಸಿ ಕೊಡುವುದಿಲ್ಲ. ಹೀಗೆ ಸಮಾಜದಲ್ಲಿ ಕಾಣಬರುವ ಅನೇಕ ವ್ಯತ್ಯಾಸಗಳು ವಾತಾವರಣದ ದೆಸೆಯಿಂದಲೂ ಸಂಪ್ರದಾಯದ ದೆಸೆಯಿಂದಲೂ ಉಂಟಾಗಿರುವುವೆಂದು ನಮ್ಮ ಅನುಭವ ಮತ್ತು ಸಾಮಾಜಿಕ ಶಾಸ್ತ್ರದ ಪರಿಶೋಧನೆಗಳು ತೋರಿಸಿಕೊಡುವುವು. ವಾತಾವರಣದ ಅನಾನುಕೂಲದಿಂದಲೂ ಒಳ್ಳೆಯ ಸಂಪ್ರದಾಯದ ಅಭಾವದಿಂದಲೂ ಕೋಟ್ಯಂತರ ಜನರು ಭಾರತದಲ್ಲಿ ಅಸಂಸ್ಕೃತರಾಗಿ ಉಳಿದಿರುವುದು ನಮ್ಮ ಅನುಭವಕ್ಕೆ ಸಿಲುಕಿದ ವಿಷಯ. ಈ ದೋಷಗಳಿಗೆ ಸಾಮಾಜಿಕ ಸ್ಥಿತಿಗತಿಗಳು ಕಾರಣವೇ ಹೊರತು ಆ ವ್ಯಕ್ತಿಗಳಲ್ಲ. ಅವರು ಬೆಳೆದ ವಾತಾವರಣದಲ್ಲಿರುವ ನ್ಯೂನತೆಗಳೇ ಈ ದೋಷಗಳನ್ನುಂಟುಮಾಡುವುವು. ವಾತಾವರಣವನ್ನು ಬದಲಾಯಿಸಿದರೆ ಪ್ರಾಯಶಃ ವರ್ತನೆಯೂ ಬದಲಾಯಿಸುವುದು.

ಮೇಲೆ ವಿವರಿಸಿರುವ ಎರಡನೆಯ ಮತ್ತು ಮೂರನೆಯ ಕಾರಣಗಳು ಈಗ ಸುಮಾರು ನೂರು ವರ್ಷಗಳ ಪ್ರಯತ್ನದಿಂದ ದೊರೆತಿರುವುವು. ಮಾನವರಲ್ಲಿರುವ

ವ್ಯತ್ಯಾಸಗಳಿಗೆ ಆನುವಂಶಿಕ ಮತ್ತು ಪರಿಸರಗಳಿಂದ ಉಂಟಾದ ವ್ಯತ್ಯಾಸಗಳೇ ಕಾರಣಗಳೆಂಬುದನ್ನು ಆಧುನಿಕ ಶಾಸ್ತ್ರಜ್ಞರು ಒಪ್ಪಿಕೊಂಡಿರುವರು. ಈ ನಂಬಿಕೆಯು ಆಧುನಿಕ ವಿಜ್ಞಾನದ ಪರಿಶೋಧಗಳ ಫಲಿತಾಂಶಗಳ ಆಧಾರದ ಮೇಲೆ ನಿಂತಿರುವುವು.

ಆದರೆ ಭಾರತ ದೇಶದಲ್ಲಿ ಸಾವಿರಾರು ವರ್ಷಗಳ ಹಿಂದೆ ಈ ವಿಷಯವನ್ನು ಕುರಿತು ಪರ್ಯಾಲೋಚಿಸಿದ ಪ್ರಾಜ್ಞರು ಮಾನವರಲ್ಲಿರುವ ವ್ಯತ್ಯಾಸಗಳು ವ್ಯಕ್ತಿಗತವೆಂದೂ, ಇವು ಒಬ್ಬ ಮನುಷ್ಯನು ಮಾಡಿದ ಕರ್ಮದ ಫಲವೆಂದೂ, ನಂಬಿದರು. ನಮ್ಮ ಅನುಭವಕ್ಕೆ ವಿಶದವಾಗಿರುವ ಹಾಗೆ ಒಬ್ಬ ವ್ಯಕ್ತಿಯು ಕಷ್ಟಪಟ್ಟು ಕೆಲಸ ಮಾಡಿದರೆ ತಾನು ಮಾಡುವ ಕೆಲಸದಲ್ಲಿ ನಿಪುಣತೆಯನ್ನು ಪಡೆಯಬಹುದು. ಆದರೆ ನಿಪುಣತೆಯನ್ನು ಪಡೆಯಬೇಕಾದರೆ ಕೇವಲ ಶ್ರದ್ಧೆ ಮಾತ್ರ ಸಾಲದು. ಶ್ರದ್ಧೆಯ ಜೊತೆಗೆ ಬುದ್ಧಿಶಕ್ತಿಯೂ ಅವಕಾಶವೂ ಬೇಕು. ಈ ಮೂರೂ ಸಮ್ಮಿಳಿತವಾಗಿದ್ದರೆ ಆಗ ಕಾರ್ಯಸಿದ್ಧಿಯುಂಟಾಗುವುದು. ಒಬ್ಬ ವ್ಯಕ್ತಿಯಲ್ಲಿ ಶಕ್ತಿಯಿರಬಹುದು; ಅವಕಾಶವೂ ಇರಬಹುದು, ಆದರೆ ಶ್ರದ್ಧೆಯಿಲ್ಲದಿದ್ದರೆ ಅವನು ತನ್ನ ಕೆಲಸದಲ್ಲಿ ಮುಂದುವರೆಯಲಾರ. ಇದೇ ವಿಧವಾಗಿ ಮತ್ತೊಬ್ಬನಲ್ಲಿ ಶಕ್ತಿಯೂ ಇರಬಹುದು; ಶ್ರದ್ಧೆಯೂ ಇರಬಹುದು, ಆದರೆ ಅವಕಾಶವು ಇಲ್ಲದಿರಬಹುದು. ಆಗಲೂ ಆ ವ್ಯಕ್ತಿ ತನ್ನ ಕೆಲಸದಲ್ಲಿ ಮುಂದುವರೆಯಲಾರ. ಜೀವನ ಶಾಸ್ತ್ರದ ಪರಿಶೋಧನೆಗಳ ಪ್ರಕಾರ ಒಬ್ಬ ವ್ಯಕ್ತಿಯ ಶಕ್ತಿಯು ಆನುವಂಶಿಕ ನಿಯಮಗಳಿಂದ ಉಂಟಾಗುವುದು. ಪ್ರಾಚೀನ ಕಾಲದಲ್ಲಿ ಈ ಅರಿವು ಇರಲಿಲ್ಲ. ಆದುದರಿಂದ ಪ್ರಾಚೀನ ಭಾರತದ ತಜ್ಞರು ಈ ವ್ಯತ್ಯಾಸಗಳಿಗೆ ಕಾರಣವು ವ್ಯಕ್ತಿಯಲ್ಲಿಯೇ ನೆಲಸಿರಬೇಕೆಂದು ಊಹಿಸಿದರು. ಇದು ಆತನು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಫಲವಿರಬಹುದೆಂದು ಯೋಚಿಸಿದರು. ಈ ಊಹೆಗೆ ತತ್ತ್ವಶಾಸ್ತ್ರದ ಆಧಾರವೂ ಇರುವುದು. ಆತ್ಮ ನಿತ್ಯವಾದರೆ ಜೀವಿಯು ಅನೇಕ ಜನ್ಮಗಳನ್ನು ತಾಳಿ, ಚಿತ್ತಶುದ್ಧಿಯ ಮೂಲಕ ಪರಿಪಕ್ವತೆಯನ್ನು ಹೊಂದಿ ಸಾಯುಜ್ಯಮುಕ್ತಿಯನ್ನು ಪಡೆಯಬಹುದು. ಈ ದೃಷ್ಟಿಯಿಂದ ನೋಡಿದರೆ ಕರ್ಮ ಮತ್ತು ಪುನರ್ಜನ್ಮಗಳ ಪ್ರಭಾವವನ್ನು ಒಪ್ಪಿಕೊಳ್ಳಬೇಕಾಗುವುದು. ಒಬ್ಬ ವ್ಯಕ್ತಿಯ ಇಂದಿನ ಸ್ಥಿತಿಗಳಿಗೆ ವ್ಯಕ್ತಿಯೇ ಕಾರಣಭೂತವಾದರೆ ಪುನರ್ಜನ್ಮ ಊಹೆಯನ್ನು ಒಪ್ಪಿಕೊಳ್ಳಬೇಕಾಗುವುದು. ತಾನು ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳ ಆಧಾರದ ಮೇಲೆ ಇಂದು ಅವುಗಳ ಫಲವನ್ನು ಅನುಭವಿಸುತ್ತಿರುವನು. ಈ ನಂಬಿಕೆಯು ಕಾರ್ಯಕಾರಣ ಸಿದ್ಧಾಂತದ ಆಧಾರದ ಮೇಲೆ ನಿಂತಿರುವುದು.

ವೈದಿಕ ಮಂತ್ರಗಳ ಪ್ರಕಾರ ಯಾರು ಯಜ್ಞಯಾಗಾದಿಗಳನ್ನು ಮಾಡುವರೋ ಅವರಿಗೆ ದೇವಲೋಕ ಸಿಗುವುದು. ಅಂದರೆ ಒಳ್ಳೆಯ ಕೆಲಸಗಳಿಗೆ ಒಳ್ಳೆಯ

ಫಲ. ಕೆಟ್ಟ ಕೆಲಸಕ್ಕೆ ಕೆಟ್ಟ ಫಲ. ಆದುದರಿಂದ ಈಗ ಒಬ್ಬ ವ್ಯಕ್ತಿಯು ಒಳ್ಳೆಯ ಸ್ಥಿತಿಯಲ್ಲಿದ್ದರೆ ಇದಕ್ಕೆ ಕಾರಣ ಅವನು ಈ ಜನ್ಮದಲ್ಲಿಯೋ ಅಥವಾ ಹಿಂದಿನ ಜನ್ಮಗಳಲ್ಲಿಯೋ ಒಳ್ಳೆಯ ಕೆಲಸವನ್ನು ಮಾಡಿರಬೇಕು. ಆದುದರಿಂದ ಆತನಿಗೆ ಈಗ ಸದ್ಗತಿ ಉಂಟಾಗಿದೆ. ಇದೇ ಆಲೋಚನೆಯನ್ನು ಮುಂದುವರೆಸಿದರೆ ಒಬ್ಬ ವ್ಯಕ್ತಿಯ ಇಂದಿನ ದುರ್ಗತಿಗೆ ಕಾರಣ ಆತನು ಈ ಜನ್ಮದಲ್ಲಿಯೋ ಅಥವಾ ಹಿಂದಿನ ಜನ್ಮಗಳಲ್ಲಿಯೋ ಮಾಡಿದ ದುಷ್ಕೃತ್ಯಗಳೇ ಕಾರಣವಾಗುವುವು. ಇದೇ ಯೋಚನೆಯನ್ನು ಇನ್ನು ಸ್ವಲ್ಪ ಮುಂದುವರಿಸಿದರೆ ಮತ್ತೊಂದು ಪರಿಣಾಮವನ್ನು ಊಹಿಸಬಹುದು. ಒಬ್ಬ ವ್ಯಕ್ತಿಯು ಇಂದು ಒಳ್ಳೆಯ ಕಾರ್ಯಗಳನ್ನು ಮಾಡಿದರೆ ಈ ಜನ್ಮದಲ್ಲಿಯೇ ಸದ್ಗತಿಯನ್ನು ಹೊಂದಬಹುದು. ಇಲ್ಲದಿದ್ದರೆ ಮುಂದಿನ ಜನ್ಮದಲ್ಲಿ ಸದ್ಗತಿಯನ್ನು ಹೊಂದಬಹುದು. ಈ ವಿಧವಾಗಿ ಪ್ರಾಚೀನ ಭಾರತೀಯ ತಜ್ಞರು ಕರ್ಮ ಸಿದ್ಧಾಂತ ಮತ್ತು ಪುನರ್ಜನ್ಮ ಸಿದ್ಧಾಂತವನ್ನು ಪ್ರತಿಪಾದಿಸಿದರು.

ಋಗ್ವೇದದ ಮಂತ್ರ ಭಾಗವು ಕರ್ಮ, ಪುನರ್ಜನ್ಮಗಳ ವಿಷಯವನ್ನು ಕುರಿತು ಪ್ರಸ್ತಾಪಿಸುವುದಿಲ್ಲ. ಆ ಕಾಲದ ಋಷಿಗಳು ಯಾರು ಯಜ್ಞಗಳನ್ನು ಮಾಡಿ ದೇವರುಗಳನ್ನು ತೃಪ್ತಿಪಡಿಸುವರೋ ಅವರಿಗೆ ಅಮೃತತ್ವವು ಲಭಿಸುವುದೆಂದೂ ಭೂಲೋಕದಲ್ಲಿ ಅವರು ಸತ್ತಮೇಲೆ ದೇವರ ಸಂಗದಲ್ಲಿ ಯಾವಾಗಲೂ ಸಂತುಷ್ಟ ಜೀವಿಗಳಾಗಿರುವರೆಂದೂ ಭಾವಿಸಿದರು. ಈ ಲೋಕದಲ್ಲಿ ಕೆಟ್ಟಕೆಲಸಗಳನ್ನು ಮಾಡಿದವರು ಸತ್ತಮೇಲೆ ಅಂಧಕಾರದಲ್ಲಿರುವರೆಂದು ಊಹಿಸಿದರು. ಆದುದರಿಂದ ಮಾನವನ ಧ್ಯೇಯವು ದೇವತೆಗಳ ಹಾಗೆ ಅಮೃತತ್ವವನ್ನು ಪಡೆಯುವುದೇ ಆಗಿತ್ತು. ಅಮೃತತ್ವವನ್ನು ಪಡೆಯಬೇಕಾದರೆ ಯಜ್ಞಯಾಗಾದಿಗಳನ್ನು ಮಾಡಬೇಕಾಗಿತ್ತು.

ಕರ್ಮ, ಕರ್ಮಫಲ, ಪುನರ್ಜನ್ಮ ಮುಂತಾದ ಭಾವನೆಗಳು ವೇದಗಳ ಉತ್ತರಾರ್ಧವಾದ ಉಪನಿಷತ್ತುಗಳಲ್ಲಿ ಗೋಚರವಾಗುತ್ತದೆ. ಕಠೋಪನಿಷತ್ತಿನಲ್ಲಿ "ಸಸ್ಯಮಿವ ಮರ್ತ್ಯಃ ಪಚ್ಯತೇ ಸಸ್ಯಮಿವಾಜಾಯತೇ ಪುನಃ" (1-1-6) ಅಂದರೆ ಮನುಷ್ಯನು ಸಸ್ಯದಂತೆ ಪತನವಾಗುತ್ತಾನೆ, ಸಸ್ಯದಂತೆ ಪುನಃ ಹುಟ್ಟುತ್ತಾನೆ. ಬೃಹದಾರಣ್ಯಕೋಪನಿಷತ್ತಿನಲ್ಲಿ "ಪುಣ್ಯೋ ವೈ ಪುಣ್ಯೇನ ಕರ್ಮಣಾ ಭವತಿ, ಪಾಪಃ ಪಾಪೇನೇತಿ" ಎಂದು ಹೇಳಲಾಗಿದೆ (3–2–13). ಅಂದರೆ, ಪುಣ್ಯ ಕರ್ಮದಿಂದ ಪುಣ್ಯನಾಗುತ್ತಾನೆ. ಪಾಪಕರ್ಮದಿಂದ ಪಾಪಿಯಾಗುತ್ತಾನೆ. ಆದುದರಿಂದ ಒಬ್ಬ ಮನುಷ್ಯನ ಸ್ಥಿತಿಗತಿಗಳು ಅವನ ಕರ್ಮವನ್ನು ಅವಲಂಬಿಸಿರುತ್ತದೆ. ಈ ವಿಷಯವನ್ನು ಕುರಿತು ಛಂದೋಗ್ಯೋಪನಿಷತ್ತಿನಲ್ಲಿ ಈ ಮಂತ್ರವಿರುವುದು : "ಪುರುಷೋ ಯಥಾಕ್ರತುರಸ್ಮಿಂಲ್ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ ಸಂಕ್ರತು ಕುರ್ವೀತ" (3–14–1). ಅಂದರೆ ಈ ಲೋಕದಲ್ಲಿ ಪುರುಷನು ಎಂಥ

ಕ್ರತು ಉಳ್ಳವನೋ ಇಲ್ಲಿಂದ ಹೋದಮೇಲೆ ಹಾಗೆಯೇ ಆಗುತ್ತಾನೆ. ಆದುದರಿಂದ ಅವನು ಕ್ರತುವನ್ನು ಮಾಡಬೇಕು.

ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಆತ್ಮನು ಹೋಗುವುದನ್ನು ಬೃಹದಾರಣ್ಯಕೋಪನಿಷತ್ತಿನ ಮತ್ತೊಂದು ಮಂತ್ರವು ಹೀಗೆ ವಿವರಿಸಿದೆ : "ತದ್ಯಥಾ ತೃಣಜಲಾಯುಕಾ ತೃಣಸ್ಯಾಂತಂ ಗತ್ವಾ ಅನ್ಯಮಾಕ್ರಮ್ಯಾತ್ಮಾನಮುಪ ಸಂಹರತಿ, ಏವ ಮೇವಾಯಮಾತ್ಮೇದಂ ಶರೀರಂ ನಿಹತ್ಯ ಅವಿದ್ಯಾಂ ಗಮಯಿತ್ವಾ, ಅನ್ಯಮಾಕ್ರಮ್ಯಾತ್ಮಾನಮುಪಸಂಹರತಿ" (4–4–3). ಅಂದರೆ ಹೇಗೆ ತೃಣ ಜಲಾಯುಕವು (ಹುಲ್ಲಿನಲ್ಲಿರುವ ಒಂದು ವಿಧವಾದ ಜಿಗುಣೆ) ಒಂದು ಹುಲ್ಲಿನ ತುದಿಗೆ ಹೋಗಿ ಇನ್ನೊಂದು ಆಶ್ರಯವನ್ನು (ಎಂದರೆ ಹುಲ್ಲನ್ನು) ಹಿಡಿದುಕೊಂಡು ತನ್ನನ್ನು ಎಳೆದುಕೊಳ್ಳುತ್ತದೆಯೋ ಹಾಗೆಯೇ ಈ ಆತ್ಮನು ಈ ಶರೀರವನ್ನು ತ್ಯಜಿಸಿ, ಅಚೇತನಗೊಳಿಸಿ ಇನ್ನೊಂದು ಆಶ್ರಯವನ್ನು ಪಡೆದುಕೊಂಡು ತನ್ನನ್ನು ಎಳೆದು ಕೊಳ್ಳುತ್ತಾನೆ. ಇದೇ ಉಪನಿಷತ್ತಿನಲ್ಲಿ ಮತ್ತೊಂದು ಮಂತ್ರವು ಇನ್ನೊಂದು ಉಪಮಾನವನ್ನು ಕೊಡುವುದು. ಯಾವ ವಿಧವಾಗಿ ಚಿನ್ನದ ಕೆಲಸ ಮಾಡುವವನು ಚಿನ್ನಕ್ಕೆ ಒಂದು ಹೊಸದಾದ ರೂಪವನ್ನು ಕೊಡುವನೋ ಹಾಗೆಯೇ ಈ ಆತ್ಮನು ಈ ಶರೀರವನ್ನು ತ್ಯಜಿಸಿ ಮತ್ತೊಂದು ರೂಪವನ್ನು ನಿರ್ಮಿಸಿಕೊಳ್ಳುವನು (4–4–4). ಮುಂದಿನ ಮಂತ್ರವು ಹೀಗೆ ವಿವರಿಸುವುದು : "ಯಥಾಕಾರಿ ಯಥಾಚಾರಿ ತಥಾ ಭವತಿ ಸಾಧುಕಾರಿ ಸಾಧುರ್ಭವತಿ, ಪಾಪಕಾರಿ ಪಾಪೋ ಭವತಿ ಪುಣ್ಯಃ ಪುಣ್ಯೇನ ಕರ್ಮಣಾ ಭವತಿ, ಪಾಪಃ ಪಾಪೇನ। ಅಥೋ ಖಲ್ವಾಹುಃ ಕಾಮಮಯ ಏವಾಯಂ ಪುರುಷ ಇತಿ; ಸ ಯಥಾ ಕಾಮೋ ಭವತಿ ತತ್ಕ್ರತುರ್ಭವತಿ, ಯತ್ಕ್ರತುರ್ಭವತಿ ತತ್ಕರ್ಮ ಕುರುತೇ, ಯತ್ಕರ್ಮ ಕುರುತೇ ತದಭಿ ಸಂಪದ್ಯತೇ"। (4-4-5). ಅಂದರೆ ಇವನು ಹೇಗೆ ಮಾಡುವನೋ, ಹೇಗೆ ಆಚರಿಸುವನೋ ಹಾಗೆ ಆಗುವನು : ಸಾಧು ಕಾರಿಯಾದವನು ಸಾಧುವಾಗುತ್ತಾನೆ, ಪಾಪಕಾರಿಯಾದವನು ಪಾಪಿಯಾಗುತ್ತಾನೆ. ಪುಣ್ಯಕರ್ಮದಿಂದ ಪುಣ್ಯವಂತನಾಗುವನು, ಪಾಪಕರ್ಮದಿಂದ ಪಾಪಿಯಾಗುವನು. ಏನೇಆಗಲಿ ಇನ್ನು ಕೆಲವರು ಹೀಗೆ ಹೇಳುತ್ತಾರೆ: "ಈ ಪುರುಷನು ಕಾಮ ಮಯನೇ; ಅವನು ಎಂಥ ಕಾಮದವನೋ ಅಂಥ ಕೃತಸಂಕಲ್ಪನಾಗುವನು. ಎಂಥ ಕೃತಸಂಕಲ್ಪನೋ ಅಂಥ ಕರ್ಮವನ್ನು ಮಾಡುವನು, ಎಂಥ ಕರ್ಮವನ್ನು ಮಾಡು ವನೋ ಅದನ್ನೇ ಪಡೆಯುತ್ತಾನೆ.

ಈ ಜನ್ಮ–ಮೃತ್ಯು–ಜನ್ಮ ಪರಂಪರೆಯಿಂದ ಮುಕ್ತಿ ಇದೆಯೇ ? ಬೃಹ ದಾರಣ್ಯಕೋಪನಿಷತ್ತಿನ ಪ್ರಕಾರ ಆಸಕ್ತಿಯು ಕರ್ಮಕ್ಕೆ ಮೂಲ. ಅಂದರೆ ಫಲ ಕಾಮಿಯು ಪುನಃ ಈ ಲೋಕಕ್ಕೆ ಹೊಸ ಕರ್ಮಕ್ಕಾಗಿ ಹಿಂದಿರುಗುತ್ತಾನೆ. ಈ ಕಾಮಗಳಾವುವು ? ಈ ಉಪನಿಷತ್ತಿನ ಪ್ರಕಾರ ಪುತ್ರೈಷಣ, ವಿತ್ತೈಷಣ ಮತ್ತು

ಲೋಕೈಷಣ. ಈ ಮೂರು ಮುಖ್ಯವಾದ ಕಾಮಗಳು (3–5). ಅಂದರೆ ಮನುಷ್ಯನು ಈ ಲೋಕದಲ್ಲಿ ಐಶ್ವರ್ಯವನ್ನು, ಸಂತತಿಯನ್ನು, ಕೋರುವನು. ಐಶ್ವರ್ಯದ ಮೂಲಕ ಈ ಲೋಕದಲ್ಲಿ ಸುಖವನ್ನು ಅನುಭವಿಸುವುದೊಂದೇ ಅಲ್ಲದೆ ಪರಲೋಕದ ಇಚ್ಛೆಯಿಂದ ಯಜ್ಞಗಳನ್ನು ಮತ್ತು ಇತರ ಕರ್ಮಗಳನ್ನು ಮಾಡುವನು. ಯಾವ ಮನುಷ್ಯನು ಈ ಇಚ್ಛೆಗಳನ್ನು ದಾಟಿ ಆತ್ಮಜ್ಞಾನವನ್ನು ಹೊಂದುವನೋ ಅವನು ಬ್ರಹ್ಮಸ್ಥಿತಿಯನ್ನು ಹೊಂದುವನು. ಮತ್ತೊಂದು ಕಡೆ ಈ ಉಪನಿಷತ್ತಿನ ಮಂತ್ರವು ಹೀಗಿದೆ: "ಇತಿ ಸುಕಾಮಯಮಾನಃ ಅಥೌ ಕಾಮಯ ಮಾನಃ–ಯೋಽಕಾಮೋ ನಿಷ್ಕಾಮ ಆಪ್ತಕಾಮ ಆತ್ಮಕಾಮೋನತಸ್ಯ ಪ್ರಾಣಾ ಉತ್ಕ್ರಾಮಂತಿ, ಬ್ರಹ್ಮೈವ" ಸನ್ ಬ್ರಹ್ಮಾಪ್ಯೇತಿ ॥ (4–4–6). ಅಂದರೆ ಫಲ ಕಾಮಿಯು (ಸಂಸರಿಸುತ್ತಾನೆ) ಈಗ ಅತಿ ಕಾಮಿಯಾದವನು: ಯಾವನು ಅಕಾಮನೋ ನಿಷ್ಕಾಮನೋ, ಆಪ್ತಕಾಮನೋ, ಆತ್ಮಕಾಮನೋ ಅವನ ಇಂದ್ರಿಯಗಳು ಉತ್ಕ್ರಮಿಸುವುದಿಲ್ಲ. ಬ್ರಹ್ಮವೇ ಆಗಿ ಬ್ರಹ್ಮದಲ್ಲಿ ಲೀನವಾಗುತ್ತಾನೆ. ಆದುದರಿಂದ ಯಾವ ಮನುಷ್ಯನು ಅಕಾಮಿಯೂ ನಿಷ್ಕಾಮಿಯೂ ಆಗುವನೋ ಅವನು ಈ ಜೀವಮಾನದಲ್ಲಿಯೇ ಬ್ರಹ್ಮಸ್ಥಿತಿಯನ್ನು ಹೊಂದುವುದು ಸಾಧ್ಯವೆಂದು ಈ ಉಪನಿಷತ್ತು ಅಧಿಕಾರವಾಣಿಯಿಂದ ಘೋಷಿಸಿದೆ.

ಈ ವಿಧವಾಗಿ ಉಪನಿಷತ್ತುಗಳು ಬಂಧನದ ಕಾರಣಗಳನ್ನು ಅದರಿಂದ ವಿವೇಚನಾ ಮಾರ್ಗವನ್ನು ಸ್ಪಷ್ಟವಾಗಿ ತಿಳಿಸಿವೆ.

ಆದರೆ ಆ ಕಾಲದಲ್ಲಿಯೇ ಛಾಂದೋಗ್ಯೋಪನಿಷತ್ತು ಕರ್ಮ ಮತ್ತು ಪುನರ್ಜನ್ಮ ಸಿಂದ್ಧಾಂತಗಳಿಗೂ ಸಮಾಜದಲ್ಲಿನ ವರ್ಣ ವ್ಯವಸ್ಥೆಗೂ ಸಂಬಂಧವನ್ನು ಸ್ಪಷ್ಟವಾಗಿ ಸೂಚಿಸಿದೆ. "ತದ್ಯ ಇಹ ರಮಣೀಯಚರಣಾ ಅಭ್ಯಾಶೋಹ ಯತ್ತೇ ರಮಣೀಯಾಂ ಯೋನಿಮಾಪದ್ಯೇರನ್ ಬ್ರಾಹ್ಮಣಯೋನಿಂ ವಾ ಕ್ಷತ್ರಿಯಯೋನಿಂ ವಾ ವೈಶ್ಯಯೋನಿಂವಾಥ ಯ ಇಹ ಕಪೂಯಚರಣಾ ಅಭ್ಯಾಶೋಹ ಯತ್ತೇ ಕಪೂಯಾಂ ಯೋನಿ ಮಾಪದ್ಯೇರಂಶ್ವಯೋನಿಂವಾಸೂಕರ ಯೋನಿಂ ವಾ ಚಂಡಾಲ ಯೋನಿಂ ವಾ" (5-10-7). ಅಂದರೆ ಅವರಲ್ಲಿ ಯಾರು ಇಲ್ಲಿ ರಮಣೀಯ ಚರಣರೋ ಅವರು ರಮಣೀಯ ಯೋನಿಯನ್ನು–ಬ್ರಾಹ್ಮಣ ಯೋನಿಯನ್ನಾಗಲಿ, ಕ್ಷತ್ರಿಯ ಯೋನಿಯನ್ನಾಗಲಿ ಅಥವಾ ವೈಶ್ಯ ಯೋನಿಯನ್ನಾಗಲೀ ಶೀಘ್ರವಾಗಿ ಪಡೆಯುತ್ತಾರೆ. ಆದರೆ ಯಾರು ಇಲ್ಲಿ ಕಪೂಯ ಚರಣರೋ ಕೆಟ್ಟ ಕೆಲಸವನ್ನು ಮಾಡುವರೋ ಅವರು ಕೆಟ್ಟ ಯೋನಿಯನ್ನು—ನಾಯಿಯ ಯೋನಿಯನ್ನಾಗಲೀ ಸೂಕರ ಯೋನಿಯನ್ನಾಗಲೀ ಅಥವಾ ಚಂಡಾಲ ಯೋನಿಯನ್ನಾಗಲೀ ಶೀಘ್ರವಾಗಿ ಪಡೆಯುತ್ತಾರೆ.

ಈ ವಿಧವಾಗಿ ಈ ಉಪನಿಷತ್ತು ಒಬ್ಬ ಮನುಷ್ಯನು ತನ್ನ ಜೀವನದಲ್ಲಿ ಕೆಟ್ಟ ಕೆಲಸಗಳನ್ನು ಮಾಡಿದರೆ ಅವನು ಮುಂದಿನ ಜನ್ಮದಲ್ಲಿ ದ್ವಿಜನಾಗಿಯೋ ಅಥವಾ

ಏಕಜನಾಗಿಯೋ ನಾಯಿ ಜನ್ಮವನ್ನೊ ಪಡೆಯುವನೆಂದು ಹೇಳಿದೆ. ಈ ಮಂತ್ರದ ಉದ್ದೇಶವು ಮಾನವನು ಕೆಟ್ಟಕೆಲಸಗಳನ್ನು ಮಾಡದೇ ಇರುವ ಹಾಗೆ ಎಚ್ಚರಿಸುತ್ತದೆ. ಆದರೆ ಈ ಮಂತ್ರವು ವರ್ಣ ವ್ಯವಸ್ಥೆಯಲ್ಲಿರುವ ವ್ಯತ್ಯಾಸವು ಹಿಂದಿನ ಜನ್ಮದಲ್ಲಿ ಮಾಡಿದ ಸುಕೃತಗಳೋ ಅಥವಾ ದುಷ್ಕೃತಗಳೋ ಎಂಬುದನ್ನು ಸೂಚಿಸಿ ವರ್ಣ ವ್ಯವಸ್ಥೆಯನ್ನು ಬಲಪಡಿಸುತ್ತದೆ. ಈ ಮಂತ್ರವು ಶೂದ್ರವರ್ಣವನ್ನು ಸೂಚಿಸದೇ ಇದ್ದರೂ ದ್ವಿಜರಲ್ಲದವರು ಹಿಂದಿನ ಜನ್ಮದ ದುಷ್ಕೃತ್ಯಗಳಿಂದ ಈಗ ಆ ವರ್ಣದಲ್ಲಿ ಜನ್ಮವನ್ನು ತಾಳಿರುವರೆಂದು ಸ್ಪಷ್ಟವಾಗಿ ಸೂಚಿಸುವುದು.

ಈ ಅಂಶವನ್ನೇ ಧರ್ಮಶಾಸ್ತ್ರಗಳು ಮತ್ತು ಇತಿಹಾಸ ಪುರಾಣಗಳು ಮುಂದುವರಿಸಿ ಜಾತಿಧರ್ಮಕ್ಕೂ ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತಗಳಿಗೂ ನಿಕಟ ಸಂಬಂಧವನ್ನು ಬಲಪಡಿಸಿವೆ.

ಮಹಾಭಾರತದ 'ವನಪರ್ವ'ದಲ್ಲಿರುವ ಧರ್ಮವ್ಯಾಧನ ಕಥೆಯು (ಅಧ್ಯಾಯ 207 ಮತ್ತು ಮುಂದುವರೆದುದು) ಜಾತಿ, ಕರ್ಮ ಮತ್ತು ಧರ್ಮಗಳಿಗಿರುವ ಸಂಬಂಧವನ್ನು ವಿಪುಲವಾಗಿ ವಿವರಿಸುವುದು.

ಕೌಶಿಕನೆಂಬ ಒಬ್ಬ ಬ್ರಾಹ್ಮಣನು ವೇದಾಧ್ಯಯನ ಸಂಪನ್ನ, ತಪಸ್ವಿ. ಒಂದು ದಿನ ಮರದ ಕೆಳಗೆ ಕುಳಿತಿದ್ದಾಗ ಆ ಮರದ ಮೇಲಿದ್ದ ಒಂದು ಹಕ್ಕಿಯು ಅವನ ಮೇಲೆ ಹಿಕ್ಕೆಯನ್ನು ಹಾಕಿತು. ಕೋಪದಿಂದ ಆ ಹಕ್ಕಿಯನ್ನು ನೋಡಲು ಅದು ಸತ್ತು ಕೆಳಕ್ಕೆ ಬಿತ್ತು. ವೇದಾಧ್ಯಯನದಿಂದ ತನಗೆ ಉಂಟಾದ ಶಕ್ತಿಯನ್ನು ಅರಿತನು. ಆಮೇಲೆ ಒಂದು ಮನೆಯಲ್ಲಿ ಭಿಕ್ಷೆಯನ್ನು ಕೇಳಲು ಹೋದನು. ಆ ಗೃಹಿಣಿಯು ಸಲ್ಪ ತಡಮಾಡಿಕೊಂಡು ಭಿಕ್ಷೆಯನ್ನು ಕೊಡಲು ಬಂದಾಗ ಆಕೆಯನ್ನು ಕೋಪದಿಂದ ನೋಡಿದನು. ತನ್ನ ಪತಿಯ ಸೇವೆಯಲ್ಲಿ ನಿರತಳಾದ ಆಕೆಗೆ ಈತನಿಗಿಂತ ಹೆಚ್ಚು ಶಕ್ತಿಯಿತ್ತು. "ನಿನ್ನ ಕೋಪದಿಂದ ಆ ಹಕ್ಕಿಯನ್ನು ಸಾಯಿಸಿದ ಹಾಗೆ ನನ್ನನ್ನು ಸಾಯಿಸಲಾರೆ. ನಿನಗೆ ಅಪರಾಧವನ್ನು ಕ್ಷಮಿಸುವ ಉದಾರ ಭಾವನೆಯಿಲ್ಲ. ಧರ್ಮದ ನಿಜಸ್ವರೂಪವನ್ನು ಅರಿಯಲು ಮಿಥಿಲೆಯಲ್ಲಿರುವ ವ್ಯಾಧನ ಹತ್ತಿರಕ್ಕೆ ಹೋಗು" ಎಂದಳು. ಕೌಶಿಕನು ಮಾಂಸವನ್ನು ಮಾರುತ್ತಿದ್ದ ಒಬ್ಬ ವ್ಯಾಧನನ್ನು ನೋಡಿ ಆಶ ರ್ಯಪಟ್ಟನು. ಧರ್ಮವ್ಯಾಧನು "ಕಾಮ ಕ್ರೋಧಗಳನ್ನು ಯಾವ ಮನುಷ್ಯನು ವಶದಲ್ಲಿಡುವನೋ, ಯಾವನಲ್ಲಿ ಇಂದ್ರಿಯನಿಗ್ರಹವು ಇರುವುದೋ, ಯಾವನು ಸತ್ಯ ಅಹಿಂಸೆಗಳಿಂದ ಕೂಡಿರುವನೋ ಅವನು ಶಿಷ್ಟನು" ಎಂದು ಹೇಳಿದನು. ಕೌಶಿಕನು, "ಇಂಥ ಸಂಸ್ಕಾರವನ್ನು ಹೊಂದಿರುವ ನೀನು ವ್ಯಾಧನ ಕುಲದಲ್ಲಿ ಜನಿಸಿ ಆ ಕಸುಬನ್ನು ಯಾವ ಕಾರಣದಿಂದ ಮಾಡುತ್ತಿರುವೆ" ಎಂದು ಕೇಳಿದನು. ಹಿಂದಿನ ಜನ್ಮದ ಕರ್ಮಫಲವನ್ನು ಅನುಭವಿಸಲು ಒಬ್ಬ ಮನುಷ್ಯನು ಆ ಕರ್ಮಕ್ಕೆ ತಕ್ಕ ಜಾತಿಯಲ್ಲಿ ಜನಿಸುವನು. ಯಾವ ಜಾತಿಯಲ್ಲಿ ಹುಟ್ಟುವನೋ ಆ ಕುಲ ಕಸುಬನ್ನು

ಶ್ರದ್ಧೆಯಿಂದ ಮಾಡಿ ತನ್ನ ಮಾತಾಪಿತೃಗಳ ಸೇವೆಯನ್ನು ಭಕ್ತಿಯಿಂದ ಮಾಡು ವನೋ ಅವನು ಬ್ರಹ್ಮಜ್ಞಾನಿಯಾಗುವನು ಎಂದು ಧರ್ಮವ್ಯಾಧನು ಕೌಶಿಕನಿಗೆ ಹೇಳಿದನು.

ಈ ವಿಧವಾಗಿ ಜಾತಿಗೂ ಹಿಂದಿನ ಜನ್ಮದ ಕರ್ಮಕ್ಕೂ ಸಂಬಂಧವಿದೆಯೆಂದು ವನಪರ್ವದ ಈ ಕಥೆಯು ಸಾದರ ಪಡಿಸುವುದು. ಎರಡನೆಯದಾಗಿ ಯಾವ ಜಾತಿಯಲ್ಲಿ ಹುಟ್ಟಿದರೂ ಆ ಜಾತಿಯ ಕಸುಬನ್ನು ಶ್ರದ್ಧೆಯಿಂದ ಮಾಡಿ ತನ್ನ ಕರ್ತವ್ಯಗಳೆಲ್ಲವನ್ನೂ ನಿಷ್ಠೆಯಿಂದ ಪೂರೈಸಿದರೆ ಅವನಿಗೆ ಬ್ರಹ್ಮಜ್ಞಾನವು ಸಿದ್ಧಿಸುವುದು. ಈ ವಿಧವಾಗಿ ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತಗಳು ಸಮಾಜದಲ್ಲಿ ವರ್ಣ ಮತ್ತು ಜಾತಿ ವ್ಯವಸ್ಥೆಗಳನ್ನು ಪುಷ್ಟೀಕರಿಸಿವೆ. ಆದರೆ ಇಂತಹ ಅಭಿಪ್ರಾಯವು ಸಾಮಾಜಿಕ ಸ್ಥಿರತೆಯನ್ನು ಕಾಪಾಡಿದರೂ ವ್ಯಕ್ತಿಯ ಸರ್ವತೋಮುಖವಾದ ವಿಕಾಸಕ್ಕೂ ಇಡೀ ಸಮಾಜದ ಅಭ್ಯುದಯಕ್ಕೂ ಅಡಚಣೆಯನ್ನು ತಂದೊಡ್ಡಿದೆ. ಆದುದರಿಂದ ಸಾವಿರಾರು ವರ್ಷಗಳಿಂದ ಭಾರತ ದೇಶದಲ್ಲಿ ಶೇಖಡ 80–90 ಜನರಲ್ಲಿ ಅನಕ್ಷರಸ್ಥಿತಿಯೂ ಬಡತನವೂ ಉಂಟಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದರೂ ಸಂವಿಧಾನದ ಪ್ರಕಾರ ಜಾತಿ ಮತ ಲಿಂಗ ಭೇದಗಳನ್ನಾಚರಿಸುವುದು ಕಾನೂನಿಗೆ ವಿರುದ್ಧವಾದರೂ ಪ್ರಾಥಮಿಕ ವಿದ್ಯಾಭ್ಯಾಸವು ಸಾರ್ವತ್ರಿಕವಾಗಿರಬೇಕಾದುದು ಅತ್ಯಗತ್ಯವೆಂದು ಸರ್ಕಾರವೂ, ಸಮಾಜವೂ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರೂ ಬಡತನವಾಗಲೀ, ಅನಕ್ಷರತೆಯಾಗಲೀ ಗಮನಾರ್ಹವಾದ ಬದಲಾವಣೆಯನ್ನು ಹೊಂದಿಲ್ಲ. ಈ ಪರಿಸ್ಥಿತಿಗೆ ಅನೇಕ ಕಾರಣಗಳಿರುವುವು. ಅವುಗಳಲ್ಲಿ ಕರ್ಮಸಿದ್ಧಾಂತ ಮತ್ತು ಪುನರ್ಜನ್ಮ ಸಿದ್ಧಾಂತಗಳಲ್ಲಿರುವ ನಂಬಿಕೆಗಳು ಕಾರಣವೆಂದು ಸಾಮಾಜಿಕ ದೃಷ್ಟಿಯಿಂದ ಹೇಳಬಹುದು. ಜಾತಿಕಟ್ಟುಪಾಡುಗಳು ಮುಖ್ಯವಾಗಿ ದೇಶದ ಐದೂವರೆ ಲಕ್ಷ ಹಳ್ಳಿಗಳಲ್ಲಿಯೂ ಪಟ್ಟಣಗಳ ಕೊಳಚೆ ಪ್ರದೇಶಗಳಲ್ಲಿಯೂ ವ್ಯಕ್ತಿಗಳ ಮೇಲೆ ನಿರ್ಬಂಧಗಳನ್ನು ಹೊರಿಸಿರುವುದರಿಂದ ಸಂವಿಧಾನದ ಮೂಲಕ ಪಡೆದಿರುವ ವ್ಯಕ್ತಿ ಸ್ವಾತಂತ್ರ್ಯವೂ, ಸಮಾನತ್ವವೂ ಫಲಪ್ರದವಾಗಲಿಲ್ಲ.

ಈ ವಿಧವಾಗಿ ಜಾತಿ ಧರ್ಮಕ್ಕೂ ಪುನರ್ಜನ್ಮಕ್ಕೂ ನಿಕಟ ಸಂಬಂಧವನ್ನು ಕಲ್ಪಿಸಲಾಗಿದೆ. ಒಬ್ಬ ಮನುಷ್ಯನು ಶ್ರದ್ಧೆಯಿಂದ ತನ್ನ ಕುಲಕಸುಬನ್ನು ನಿರ್ವಹಿಸಿದರೆ ಆತನು ಮುಕ್ತಿಯನ್ನು ಹೊಂದಬಹುದೆಂದು ನಂಬಲಾಗಿದೆ. ತದ್ವಿರುದ್ಧವಾಗಿ ಯಾವನು ತನ್ನ ಕುಲ ಕಸುಬನ್ನು ತ್ಯಜಿಸಿ ಇತರ ಕಸುಬುಗಳನ್ನು ಅನುಸರಿಸುವನೋ ಆತನು ಪುನರ್ಜನ್ಮಕ್ಕೆ ಒಳಗಾಗುವನೆಂಬ ನಂಬಿಕೆಯಿದೆ. ಹೀಗೆ ಪ್ರತಿಯೊಬ್ಬನೂ ತನ್ನ ಕುಲಕಸುಬನ್ನು ಬಿಡದೆ ಅದರ ನಿರ್ವಹಣೆಯ ಮೂಲಕ ಮುಕ್ತಿಯನ್ನು ಹೊಂದಿ ಪುನರ್ಜನ್ಮದಿಂದ ವಿಮೋಚನೆಯನ್ನು ಪಡೆಯಲು ಸಾಧ್ಯವೆಂದು ನಂಬಲಾ

ಗಿತ್ತು. ಮನುಸ್ಮೃತಿಯ ಪ್ರಕಾರ ರಾಜನ ಕರ್ತವ್ಯವುಬೇರೆ ಬೇರೆ ವರ್ಣಗಳಿಗೆ ಸೇರಿದ ಜನರು ಆಯಾ ವರ್ಣದ ಕೆಲಸಗಳನ್ನು ಮಾಡುವ ಹಾಗೆ ನೋಡಿಕೊಳ್ಳುವುದೇ ಆಗಿತ್ತು (7-35). ಅಂದರೆ ಒಬ್ಬ ವ್ಯಕ್ತಿಯು ಆತನ ಕುಲ ಕಸುಬನ್ನು ತ್ಯಜಿಸಿದರೆ ಒಂದು ಕಡೆ ಶಿಕ್ಷೆಗೆ ಗುರಿಯಾಗುವನು ಮತ್ತೊಂದು ಕಡೆ ಪುನರ್ಜನ್ಮದಿಂದ ಬಂಧಿಸಲ್ಪಡುವನು. ಈ ನಂಬಿಕೆಯು ಭಾರತೀಯ ಸಮಾಜದಲ್ಲಿ ಜಾತಿಯ ವ್ಯವಸ್ಥೆಯನ್ನು ಬಲಪಡಿಸಿರುವುದರಿಂದ ಹೊಸ ಸಂವಿಧಾನ ನಿರ್ಮಿತವಾದರೂ ಹೊಸ ಕಾನೂನುಗಳು ರಚಿಸಲ್ಪಟ್ಟಿದ್ದರೂ ಹಳ್ಳಿ ಪ್ರದೇಶಗಳಲ್ಲಿ ಇಂದಿಗೂ ಕೋಟ್ಯಂತರ ಜನರು ತಮ್ಮ ಕುಲ ಕಸುಬನ್ನೇ ಅನುಸರಿಸಿಕೊಂಡು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸದಂತೆ ಮಾಡಿವೆ. ಈ ಕಾರಣದಿಂದ ದೇಶದ ಅನಕ್ಷರತೆಯು ಬಹಳ ನಿಧಾನವಾಗಿ ಕಡಿಮೆಯಾಗುತ್ತಿರುವುದು. ಈ ದುಃಸ್ಥಿತಿಗೆ ಮುಖ್ಯ ಕಾರಣವೆಂದರೆ ಧರ್ಮ ಸಂರಕ್ಷಣೆಯು ಕೇವಲ ತಮ್ಮ ಕುಲ ಕಸುಬನ್ನು ಅನುಸರಿಸುವುದೇ ಎಂಬ ನಂಬಿಕೆ. ಕಾರಣಾಂತರಗಳಿಂದ ಕಸುಬಿಗೂ ಧರ್ಮಕ್ಕೂ ಬೇರ್ಪಡಿಸಲಾಗದ ಸಂಬಂಧವನ್ನು ಕಲ್ಪಿಸಲಾಯಿತು. ಆಧುನಿಕ ಸಮಾಜದಲ್ಲಿ ಬದಲಾವಣೆಯುಂಟಾದರೂ ಕಸುಬಿಗೂ ಧರ್ಮಕ್ಕೂ ಇರುವ ಸಂಬಂಧವನ್ನು ಮಾರ್ಪಡಿಸಲು ಸಾಧ್ಯವಾಗಲಿಲ್ಲ. ಕಸುಬಿಗೂ ವ್ಯಕ್ತಿಯ ಶಕ್ತಿ ಸಾಮರ್ಥ್ಯಗಳಿಗೂ ಒಂದು ಹೊಸ ಸಂಬಂಧವನ್ನು ರಚಿಸಬೇಕಾದದು ಅಗತ್ಯ, ಈ ಹೊಸ ಸಂಬಂಧವನ್ನು ಪ್ರಜೆಗಳಲ್ಲಿ ಉಂಟುಮಾಡದೆ ಹೋದರೆ ಭಾರತೀಯ ಸಮಾಜವು ಬಡತನದಿಂದಲೂ ಅನಕ್ಷರತೆಯಿಂದಲೂ ಬಹಳಕಾಲ ನರಳಬೇಕಾಗುವುದು. ಕುಲಕಸುಬನ್ನು ಬಿಟ್ಟು ಬೇರೆ ಬೇರೆ ಕಸುಬನ್ನು ತೆಗೆದುಕೊಂಡರೆ ಇದು ಅಧರ್ಮವಲ್ಲ ಎಂಬ ನಂಬಿಕೆಯು ಭಾರತೀಯರಲ್ಲುಂಟಾಗಬೇಕು. ಅಂದರೆ ಮೋಕ್ಷ ಸಾಧನಕ್ಕೆ ಕುಲಕಸುಬನ್ನು ಅನುಸರಿಸುವುದು ಮುಖ್ಯ ನಿಯಮವಲ್ಲವೆಂದೂ ನೈತಿಕ ಜೀವನವು ಪ್ರಧಾನವೆಂಬ ಭಾವನೆಯು ಜನಸಾಮಾನ್ಯರಲ್ಲಿ ಹರಡಬೇಕಾಗಿವೆ.

ಮೇಲೆ ವಿವರಿಸಿರುವ ಹಾಗೆ ಭಾರತೀಯ ಸಂಸ್ಕೃತಿಯಲ್ಲಿ ಮೂರು ಅಂಶಗಳು ಆಧುನಿಕ ಜೀವನ ಪಥಕ್ಕೆ ಸಹಾಯಕವಾಗುವುದು. ಇವು ಸುವರ್ಣ ನಿಯಮದ ಪ್ರತಿಪಾದನೆ; ಸಾಧಾರಣ ಧರ್ಮಗಳ ಆಚರಣೆ ಮತ್ತು ಸ್ವಧರ್ಮ ಪರಿಪಾಲನೆ.

ಸುವರ್ಣ ನಿಯಮವು ಭಾರತೀಯ ಸಮಾಜದಲ್ಲಿರುವ ಎಲ್ಲ ವ್ಯಕ್ತಿಗಳೂ ಬ್ರಹ್ಮ ಸ್ವರೂಪ. ಇತರರಿಗೆ ಹಾನಿಯುಂಟುಮಾಡಿದರೆ ಅದರಿಂದ ನಮಗೆ ಹಾನಿಯುಂಟಾಗುವುದೆಂಬ ದೃಢ ನಂಬಿಕೆಯಿಂದ ಕೂಡಿರುವುದು. ದೇಶದ ಪ್ರತಿಯೊಬ್ಬ ಪ್ರಜೆಯ ಪ್ರಗತಿಯು ನಮ್ಮ ಪ್ರಗತಿಗೆ ಅನುಕೂಲ ಮಾಡುವುದೆಂಬ ಭಾವನೆ ಮೂಡಬೇಕು. ಅಂದರೆ ಇತರರನ್ನು ಹಾಳುಮಾಡಿ ತನ್ಮೂಲಕ ನಮ್ಮ ಅಭ್ಯುದಯ ಉಂಟಾಗುವುದೆಂಬ ಮೂಢನಂಬಿಕೆ ಮತ್ತು ಕ್ರೂರ ನಂಬಿಕೆ ನಿರ್ಮೂಲವಾಗಬೇಕು. ಅಂದರೆ ಇತರರಲ್ಲಿ ಸಹಾನುಭೂತಿ ಮತ್ತು ಮಾನವಸೇವೆಯೇ

ನಮ್ಮ ಅಭ್ಯುದಯಕ್ಕೆ ಕಾರಣಭೂತವೆಂಬ ದೃಢನಂಬಿಕೆಯುಂಟಾಗಬೇಕು. ಈ ತತ್ತ್ವವನ್ನೇ ಮಹಾತ್ಮ ಗಾಂಧೀಜಿಯವರು ಸರ್ವೋದಯವೆಂದು ನಿರೂಪಿಸಿದರು. ಸರ್ವೋದಯ ಭಾವನೆಯ ಅಡಿಗಲ್ಲು ಸುವರ್ಣನಿಯಮ. ಎಲ್ಲರನ್ನೂ ತನ್ನಂತೆ ಕಾಣುವುದು. ಮುಕ್ತಿಗೆ ಎರಡನೆಯ ಮಾರ್ಗವು ಸಾಧಾರಣ ಧರ್ಮದ ಅನುಷ್ಠಾನ. ಸಾಧಾರಣ ಧರ್ಮಗಳಾವುವು? ಎಂಬುದನ್ನು ಉಪನಿಷತ್ತುಗಳು, ಗೀತೆ, ಮನುಸ್ಮೃತಿ ಮುಂತಾದ ಗ್ರಂಥಗಳು ನಿರೂಪಿಸಿವೆ. ಆದರೆ ಪ್ರಾಚೀನ ಕಾಲದ ಧರ್ಮಸೂತ್ರಗಳೂ ಮತ್ತು ಧರ್ಮಶಾಸ್ತ್ರಗಳೂ ಸಾಧಾರಣ ಧರ್ಮಗಳನ್ನು ಸೂಕ್ಷ್ಮವಾಗಿ ತಿಳಿಸಿ ವರ್ಣಾಶ್ರಮ ಧರ್ಮವನ್ನು ವಿಪುಲವಾಗಿ ವಿವರಿಸಿವೆ. ಸಾವಿರಾರು ವರ್ಷಗಳಿಂದ ಭಾರತ ದೇಶದಲ್ಲಿ ಶೇಕಡ 90 ರಷ್ಟು ಮಂದಿ ದಲಿತ ಪಂಗಡಕ್ಕೆ ಸೇರಿ ಸಮಾಜದಲ್ಲಿ ಕೀಳು ಸ್ಥಾನವನ್ನು ಹೊಂದಿರುವುದು ಈ ಕಾರಣದಿಂದಲೇ. ಆಧುನಿಕ ಸಮಾಜದ ಧ್ಯೇಯವು ಸಾಧಾರಣ ಧರ್ಮಗಳಾದ ಸತ್ಯ, ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಕರುಣೆ, ದಯೆ ಮುಂತಾದ ಭಾವನೆಗಳಿಗೆ ಪೂರ್ಣಬೆಂಬಲವನ್ನು ಕೊಟ್ಟು ಜಾತಿ, ಮತ, ಲಿಂಗ, ಐಶ್ವರ್ಯ, ಬಣ್ಣ, ಜನಾಂಗ ವರ್ಗ, ಅಂತಸ್ತು, ವಂಶ ಮುಂತಾದ ಸಂಕುಚಿತ ಭಾವನೆಗಳನ್ನು ನಿರ್ಮೂಲ ಮಾಡಲು ಪ್ರಯತ್ನಿಸಿರುವುದು. ಅಂದರೆ ಆಧುನಿಕ ಸಾಮಾಜಿಕ ಧ್ಯೇಯವು ಮಾನವೀಯತೆಗೆ ಬೆಲೆ ಕೊಡುವುದೇ ಹೊರತು ಜಾತಿ ಕುಲ ಗೋತ್ರಗಳಿಗಲ್ಲ. ಯಾವ ವ್ಯಕ್ತಿಯು ತನಗಿರುವ ಶಕ್ತಿಗಳನ್ನು ಬೆಳಸಿಕೊಂಡು ತನಗಿರುವ ಅವಕಾಶಗಳನ್ನು ಉಪಯೋಗಿಸಿಕೊಂಡು ಸತ್ಪ್ರವರ್ತನೆಯಿಂದ ಕೂಡಿದ ಬಾಳನ್ನು ನಡೆಸುವನೋ ಅವನು ಧನ್ಯ ಹಾಗೂ ಪೂಜ್ಯ. ಅವನನ್ನು ಅವನ ಕಾರ್ಯ ಸಾಧನೆಗೆ ಗೌರವಿಸಬೇಕೇ ಹೊರತು ಜಾತಿವಂಶಗಳಿಗಲ್ಲ. ಅಂದರೆ ವ್ಯಕ್ತಿಶಃ ಅವನು ಮಾಡಿದ ಸತ್ಕಾರ್ಯಗಳಿಗೆ ಬೆಲೆ ಕೊಡಬೇಕೇ ಹೊರತು ಅವನ ಪೂರ್ವಜರ ಕೆಲಸಗಳಿಗಲ್ಲ. ಈ ನಿಯಮವನ್ನು ಆಧುನಿಕ ಸಮಾಜವು ಕಾರ್ಯರೂಪಕ್ಕೆ ತಂದಿರುವುದು. ವಂಶ ಪರಂಪರೆಯ ಬಲದ ಆಧಾರದ ಮೇಲೆ ನಿಂತಿದ್ದ ರಾಜ ಮಹಾರಾಜರುಗಳನ್ನು ಕಾನೂನಿನ ಮೂಲಕ ಸಾಧಾರಣ ಪ್ರಜೆಗಳನ್ನಾಗಿ ಮಾಡಿದೆ. ಈ ಆಧುನಿಕ ದೃಷ್ಟಿಯಲ್ಲಿ ಮತ್ತೊಂದು ಅಂಶ ಗಮನಾರ್ಹ. ಇದೇ ಸಾಮಾಜಿಕ ನ್ಯಾಯ (Social Justice). ಬಲಹೀನನಾಗಿರುವ ಮಗನಿಗೆ ತಾಯಿಯು ಪೌಷ್ಟಿಕ ಆಹಾರವನ್ನು ಹೇಗೆ ಕೊಡುವಳೋ ಹಾಗೆ ಸರ್ಕಾರವು ಮತ್ತು ಸಮಾಜವು ಕೀಳು ಜಾತಿಯವರಿಗೂ ದಲಿತ ವರ್ಗದವರಿಗೂ ಹೊಸ ಅವಕಾಶಗಳನ್ನು ಕಲ್ಪಿಸಿ ಕೊಡಬೇಕು. ಈ ಗುಂಪುಗಳಿಗೆ ಸೇರಿದ ವ್ಯಕ್ತಿಗಳಿಗೆ ಸಹಾಯವನ್ನು ಮಾಡುವುದು ಧರ್ಮ. ಅವರು ಹಿಂದಿನ ಜನ್ಮಗಳಲ್ಲಿ ಮಾಡಿದ ದುಷ್ಕೃತ್ಯಗಳ ಫಲವಾಗಿ ಈಗ ದುಃಸ್ಥಿತಿಯಲ್ಲಿರುವರೆಂಬ ನಂಬಿಕೆಯು ಧರ್ಮಸಮ್ಮತವಲ್ಲ. ಶಕ್ತಿ ಸಾಮರ್ಥ್ಯಗಳು ಯಾವ ವ್ಯಕ್ತಿಯಲ್ಲಿದ್ದರೂ ಅವುಗಳಿಗೆ ತಕ್ಕ ಪೋಷಣೆಯನ್ನು ಕೊಡುವುದು ಧರ್ಮ. ಭಾರತೀಯ ಸಂಸ್ಕೃತಿಯ ಮೂರನೆಯ ನಿಯಮವೇದರೆ

ಸ್ವಧರ್ಮ. ಈ ಭಾವನೆಯು ಸಾರ್ವತ್ರಿಕ ಭಾವನೆ. ಪ್ರತಿಯೊಬ್ಬ ವ್ಯಕ್ತಿಯು ತಾನು ಕೈಗೊಂಡಿರುವ ಕಾರ್ಯವನ್ನು ಶ್ರದ್ಧೆಯಿಂದ ಮಾಡುವುದು ಸ್ವಧರ್ಮದ ಲಕ್ಷಣ. ಮೇಲೆ ವಿವರಿಸಿರುವ ಹಾಗೆ ಕಾರಣಾಂತರದಿಂದ ಈ ಭಾವನೆಯನ್ನು ಸಂಕುಚಿತ ರೀತಿಯಿಂದ ಸೀಮಿತಗೊಳಿಸಿ ಸ್ವಧರ್ಮವೆಂದರೆ ತನ್ನ ಪರಂಪರಾನುಗತ ವಾಗಿ ಬಂದಿರುವ ಕುಲಕಸುಬನ್ನು ಮಾಡುವುದೇ ಎಂಬ ಭಾವನೆಯು ಬೇರೂರಿ ಶೇಕಡ 90 ರಷ್ಟು ಮಂದಿ ಮುಖ್ಯವಾಗಿ ಹಳ್ಳಿಗಳಲ್ಲಿ ಈ ಭಾವನೆಯನ್ನು ನಂಬಿ ತಮ್ಮ ವ್ಯಕ್ತಿ ವಿಕಾಸಕ್ಕೆ ಎಡೆಕೊಡಲಿಲ್ಲ. ತಮ್ಮಲ್ಲಿರುವ ಬುದ್ಧಿಶಕ್ತಿಯ ಅರಿವೇ ಅವರಲ್ಲಿರಲಿಲ್ಲ. ವಂಶಾನುಗತವಾಗಿ ತಮಗೆ ಬಂದಿರುವ ಸ್ಥಾನಮಾನಗಳೇ ಶಾಶ್ವತ ವೆಂದು ನಂಬಿದರು. ಇದರಿಂದ ಒಂದು ಕಡೆ ವ್ಯಕ್ತಿವಿಕಾಸಕ್ಕೆ ಅವಕಾಶವಿರಲಿಲ್ಲ. ಮತ್ತೊಂದು ಕಡೆ ಸಮಾಜದ ಅಭ್ಯುದಯಕ್ಕೆ ಪ್ರತಿಕೂಲವಾಯಿತು. ಆದುದರಿಂದ ಆಧುನಿಕ ಸಮಾಜಿಕ ಧ್ಯೇಯವು ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಶಕ್ತಿ ಸಾಮರ್ಥ್ಯಗಳಿಗೆ ತಕ್ಕ ತರಪೇತನ್ನು ಪಡೆದು ತನ್ನ ಕೆಲಸಗಳನ್ನು ಶ್ರದ್ಧೆಯಿಂದ ನಿರ್ವಹಿಸಿ ತನ್ನ ಮತ್ತು ಸಮಾಜದ ಅಭ್ಯುದಯಕ್ಕೆ ಶ್ರಮಿಸಬೇಕು. ಇದೇ ಪ್ರಾಚೀನ ಸ್ವಧರ್ಮ ತತ್ವದ ತಿರುಳು. ತನ್ನ ಈಗಿನ ಹೀನಸ್ಥಿತಿಯು ತಾನು ತನ್ನ ಹಿಂದಿನ ಜನ್ಮಗಳಲ್ಲಿ ಮಾಡಿದ ದುಷ್ಕೃತ್ಯಗಳ ಫಲವೆಂದು ನಂಬಿದರೆ ಆತನಲ್ಲಿ ದೌರ್ಬಲ್ಯವು ಆತ್ಮವಿಶ್ವಾಸದ ಅಭಾವವುಂಟಾಗುವುದು. ಇದರಿಂದ ತನ್ನ ಏಳಿಗೆಗೆ ಆತನು ಶ್ರಮಿಸುವುದಿಲ್ಲ. ಒಂದು ಸಮಾಜದಲ್ಲಿ ಶೇಖಡ 90ರಷ್ಟು ಮಂದಿ ಇಂತಹ ಮನೋದೌರ್ಬಲ್ಯವನ್ನು ಹೊಂದಿರುವರಾದರೆ ಆ ಸಮಾಜದ ಅಭ್ಯುದಯವು ಹೇಗೆ ತಾನೇ ಉಂಟಾಗುವುದು ? ಈಗ ಸುಮಾರು ಐದಾರು ದಶಕಗಳಿಂದಲೂ ಹಳ್ಳಿಯ ಜನಜೀವನ ಮಟ್ಟವು ಉತ್ತಮಗೊಳ್ಳಬೇಕೆಂದು ಸರ್ಕಾರವು ಅನೇಕ ಕಾರ್ಯಕ್ರಮ ಗಳನ್ನು ಕೈಗೊಂಡಿತು. ಆದರೆ ಹಳ್ಳಿಯ ಜೀವನ ಮಾತ್ರ ಉತ್ತಮಗೊಳ್ಳಲಿಲ್ಲ. ಈ ದುಃಸ್ಥಿತಿಗೆ ಪುನರ್ಜನ್ಮ ಸಿದ್ಧಾಂತದ ನಂಬಿಕೆಯು ಒಂದು ಕಾರಣವೆಂದರೆ ಅತಿಶಯೋಕ್ತಿಯಾಗಲಾರದು. ಅಂದರೆ ಸ್ವಧರ್ಮವು ಕರ್ತವ್ಯಕರ್ಮನಿಷ್ಠ ಭಾವನೆ ಯನ್ನು ಸೂಚಿಸುವುದು. ಯಾವ ವ್ಯಕ್ತಿಯೇ ಆಗಲಿ ತಾನು ಯಾವ ಕೆಲಸವನ್ನು ಮಾಡುವೆನೆಂದು ಒಪ್ಪಿಕೊಳ್ಳುವನೋ ಆ ಕೆಲಸವನ್ನು ಶ್ರದ್ಧೆಯಿಂದ ಪ್ರಾಮಾಣಿಕತೆ ಯಿಂದ ಮಾಡುವನೋ ಅವನು ಸ್ವಧರ್ಮವನ್ನು ಪಾಲಿಸುವನು.

ಪುನರ್ಜನ್ಮ ಮತ್ತು ಶ್ರಾದ್ಧ.— ತೀರಿ ಹೋದ ತಂದೆ ತಾಯಿಗಳಿಗೆ ಪ್ರತಿ ಅಮಾವಾಸ್ಯೆ ತರ್ಪಣವನ್ನು ಬಿಡುವುದು ಮತ್ತು ಪ್ರತಿ ವರ್ಷವೂ ಅವರು ತೀರಿ ಹೋದ ದಿನದಲ್ಲಿ ಶ್ರಾದ್ಧ ಮಾಡುವುದು ಭಾರತೀಯ ಸಂಸ್ಕೃತಿಯ ಮುಖ್ಯ ಆಚರಣೆ. ಸತ್ತವರ ದೇಹಕ್ಕೂ ಆತ್ಮಕ್ಕೂ ತೃಪ್ತಿ ಹಾಗೂ ಶಾಂತಿಯುಂಟಾಗುವ ಹಾಗೆ ಪುತ್ರನು ಶ್ರಾದ್ಧವನ್ನು ಮಾಡಬೇಕು. ಅಂದರೆ ಈ ನಂಬಿಕೆಯ ಪ್ರಕಾರ ಪುತ್ರನು ಯಾವ

ವಿಧವಾಗಿ ವೃದ್ಧ ತಂದೆತಾಯಿಗಳನ್ನು ನೋಡಿ ಕೊಳ್ಳುವುದು ಆತನ ಕರ್ತವ್ಯವೋ ಅದೇ ರೀತಿಯಾಗಿ ಅವರು ಸತ್ತಮೇಲೆ ತರ್ಪಣ ಮತ್ತು ಶ್ರಾದ್ಧದ ಮೂಲಕ ಅವರನ್ನು ನೋಡಿಕೊಳ್ಳುವುದು ಆತನ ಕರ್ತವ್ಯ. ಈ ನಂಬಿಕೆಯ ಪ್ರಕಾರ ತಂದೆ ತಾಯಿಗಳು ಸತ್ತುಹೋದರೂ ಸಹ ಅವರು ಇನ್ನೊಂದು ಲೋಕದಲ್ಲಿ ಉಳಿದಿರುವರು. ಆದುದರಿಂದ ಅವರನ್ನು ನೋಡಿಕೊಳ್ಳುವುದು ಪುತ್ರನ ಕರ್ತವ್ಯ. ಆದರೆ ಪುನರ್ಜನ್ಮ ಸಿದ್ಧಾಂತದ ಪ್ರಕಾರ ಸತ್ತುಹೋದ ತಂದೆಯು ಮತ್ತೊಂದು ಜನ್ಮವನ್ನು ತಾಳಿ ತನ್ನ ಆತ್ಮಶುದ್ಧಿಯನ್ನು ಮಾಡಿಕೊಳ್ಳಲು ಪ್ರಯತ್ನಿಸಬೇಕು. ಶಂಕರಾಚಾರ್ಯರು ಅವರ "ಭಜ ಗೋವಿಂದಂ" ಕೃತಿಯಲ್ಲಿ "ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನೀ ಜಠರೇ ಶಯನಂ" ಎಂದು ಹೇಳಿರುವರು. ಅಂದರೆ ಮನುಷ್ಯನು ಸದಾ ಜನನ ಮರಣದ ಸಂಸಾರ ಚಕ್ರದಲ್ಲಿ ಜೀವಿಸುತ್ತಿರುವನು. ಗೀತೆಯಲ್ಲಿ ಈ ವಿಷಯವನ್ನು ಕುರಿತು ಹೀಗೆ ಹೇಳಿದೆ :

> ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
> ನವಾನಿ ಗೃಹ್ಣಾತಿ ನರೋಽಪರಾಣಿ ।
> ತಥಾ ಶರೀರಾಣಿ ವಿಹಾಯ ಜೀರ್ಣಾ
> ನ್ಯನ್ಯಾನಿ ಸಂಯಾತಿ ನವಾನಿ ದೇಹೀ ।। (II–22)

ಅಂದರೆ ಮನುಷ್ಯನು ಹೇಗೆ ಹಳೆಯ ಬಟ್ಟೆಗಳನ್ನು ಬಿಟ್ಟು ಹೇಗೆ ಹೊಸ ಹೊಸ ವಸ್ತ್ರಗಳನ್ನು ತೆಗೆದುಕೊಳ್ಳುತ್ತಾನೋ, ಹಾಗೆಯೇ ದೇಹವನ್ನು ಹೊಂದಿರುವ ಆತ್ಮನು ಜೀರ್ಣವಾದ ಶರೀರಗಳನ್ನು ಬಿಟ್ಟು ಹೊಸ ಶರೀರಗಳನ್ನು ಹೊಂದುತ್ತಾನೆ.

ಈ ವಿಧವಾಗಿ ಪುನರ್ಜನ್ಮದ ಸಿದ್ಧಾಂತದ ಪ್ರಕಾರ ಮೃತ್ಯು ಎನ್ನುವುದು ಕೇವಲ ದೇಹಕ್ಕೆ ಸಂಬಂಧಪಟ್ಟಿದ್ದೇ ಹೊರತು ಆತ್ಮಕ್ಕೆ ಸಂಬಂಧ ಪಟ್ಟಿದ್ದಲ್ಲ. ಈ ದೃಷ್ಟಿಯಿಂದ ನೋಡಿದರೆ ಪುನರ್ಜನ್ಮ ಸಿದ್ಧಾಂತದ ನಂಬಿಕೆಗೂ ಶ್ರಾದ್ಧ ಆಚರಣೆಗೂ ವಿರುದ್ಧ ಸಂಬಂಧವಿರುವುದು. ಒಂದು ಸತ್ಯವಾದರೆ ಮತ್ತೊಂದು ಮಿಥ್ಯ ಎನಿಸುವುದು. ಆದರೆ ಸಾಧಾರಣವಾಗಿ ಸಾವಿರಾರು ವರ್ಷಗಳಿಂದ ಭಾರತೀಯರು ಈ ಎರಡು ವಿರುದ್ಧ ಭಾವನೆಗಳಲ್ಲಿ ವಿಶ್ವಾಸವನ್ನು ಇಟ್ಟುಕೊಂಡಿರುವರು. ಆದರೆ ಇವೆರಡೂ ಕೇವಲ ನಂಬಿಕೆಗಳ ಆಧಾರದ ಮೇಲೆ ಇರುವುದೇ ಹೊರತು ಈ ಎರಡು ಭಾವನೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಸತ್ಯವೆಂದಾಗಲೀ ಅಸತ್ಯವೆಂದಾಗಲೀ ನಿರ್ಣಯಿಸಲು ಅಸಾಧ್ಯ.

ಗರುಡ ಪುರಾಣವು ಸತ್ತ ಮೇಲೆ ಜೀವವು ಯಾವ ಕಾರಣಗಳಿಂದ ನರಕಕ್ಕೆ ಹೋಗುವುದು ಎಂಬುದನ್ನು ವಿವರಿಸುವುದು.

ಯೇಽಪಿ ಪಾಪರತಾಸ್ತಾರ್ಕ್ಷ್ಯ ದಯಾಧರ್ಮವಿವರ್ಜಿತಾಃ ।
ದುಷ್ಟಸಂಗಾಶ್ಚ ಸಚ್ಛಾಸ್ತ್ರಸತ್ಸಂಗತಿ ಪರಾಂಙ್ಮುಖಾಃ ॥
ಆತ್ಮ ಸಂಭಾವಿತಾಃ ಸ್ತಬ್ಧಾ ಧನ ಮಾನಮದಾನ್ವಿತಾಃ ।
ಆಸುರಂ ಭಾವಮಾಪನ್ನಾ ದೈವೀ ಸಂಪದ್ವಿವರ್ಜಿತಾಃ ।
ಅನೇಕ ಚಿತ್ತವಿಭ್ರಾಂತಮೋಹಜಾಲಸಮಾವೃತಾಃ
ಪ್ರಸಕ್ತಾ ಕಾಮಭೋಗೇಷು ಪತಂತಿ ನರಕೇಽಶುಚೌ ।।
ಯೇ ನರಾ ಜ್ಞಾನಶೀಲಾಶ್ಚ ತೇ ಯಾಂತಿ ಪರಮಾಂ ಗತಿಮ್
ಪಾಪಶೀಲಾ ನರಾ ಯಾಂತಿ ದುಃಖೇನ ಯಮಯಾತನಾಮ್ ।। (I. 14-17)

ಅಂದರೆ ಯಾರು ಪಾಪಕಾರ್ಯಗಳಲ್ಲಿ ಇಚ್ಛೆಯುಳ್ಳವರೋ, ಯಾರು ದಯೆ ಮತ್ತು ಧರ್ಮವನ್ನು ತ್ಯಜಿಸಿರುವರೋ, ಯಾರು ದುಷ್ಟರ ಸಹವಾಸದಲ್ಲಿರುವರೋ ಯಾರು ಒಳ್ಳೆಯ ಶಾಸ್ತ್ರಗಳಿಂದಲೂ, ಒಳ್ಳೆಯವರ ಸಹವಾಸದಿಂದಲೂ ವಿಮುಖರಾಗಿರುವರೋ,

ಯಾರು ದುರಹಂಕಾರಿಗಳೊ, ಕಠಿಣ ಹೃದಯರೋ, ಯಾರು ಧನ ಮಾನಗಳ ಗರ್ವದಿಂದ ಕೂಡಿರುವರೋ, ಯಾರು ಆಸುರೀ ಭಾವವನ್ನು ಹೊಂದಿರುವರೋ, ಯಾರು ದೈವೀ ಸಂಪತ್ತನ್ನು ದೂರ ಮಾಡಿರುವರೋ,

ಯಾರ ಮನಸ್ಸು ಮೋಹದ ಬಲೆಯಲ್ಲಿ ಸಿಕ್ಕಿ ಅನೇಕ ರೀತಿಯಲ್ಲಿ ಭ್ರಾಂತಿಗೊಂಡಿರುವುದೋ, ಯಾರು ಕಾಮಭೋಗದಲ್ಲಿ ಆಸಕ್ತರಾಗಿರುವರೋ ಅವರೆಲ್ಲರೂ ಕಲ್ಮಷಪೂರಿತವಾದ ನರಕದಲ್ಲಿ ಬೀಳುತ್ತಾರೆ.

ಯಾವ ಮನುಷ್ಯರು ಜ್ಞಾನಿಗಳಾಗಿರುತ್ತಾರೋ, ಅವರು ಉತ್ತಮಗತಿಯನ್ನು ಪಡೆಯುತ್ತಾರೆ. ಪಾಪಶೀಲರಾದವರು ದುಃಖದಿಂದ ಯಮ ಯಾತನೆಯನ್ನು ಅನುಭವಿಸುತ್ತಾರೆ. (I–14–17)

ಈ ವಿಧವಾಗಿ ಗರುಡ ಪುರಾಣದ ಪ್ರಕಾರ ಯಾರು ಸಾಧಾರಣ ಧರ್ಮಗಳನ್ನು ನಿರಾಕರಿಸುವರೋ ಅಂದರೆ ಸಾರ್ವತ್ರಿಕ ಮಾನವ ನಿಯಮಗಳನ್ನು ತ್ಯಜಿಸುವರೋ ಅವರು ಪಾಪಕರ್ಮಗಳನ್ನು ಮಾಡಿದುದರಿಂದ ಜೀವಿಸುವಾಗಲೂ, ತೀರಿ ಹೋದ ಮೇಲೆಯೂ ನರಕ ಯಾತನೆಯನ್ನು ಅನುಭವಿಸುವರು. ಆದರೆ ಯಾರು ಸಾರ್ವತ್ರಿಕ ಸಾಧಾರಣ ಧರ್ಮಗಳನ್ನು ಆಚರಣೆಯಲ್ಲಿಟ್ಟುಕೊಂಡಿರುವರೋ ಅವರು ಸುಖವನ್ನೂ ಉತ್ತಮಗತಿಯನ್ನೂ ಪಡೆಯುವರು. ಆದುದರಿಂದ ಮನುಷ್ಯನು ಯಾವಾಗಲೂ ಇತರರನ್ನು ದಯೆ ಮತ್ತು ಕರುಣೆಯಿಂದ ನೋಡಬೇಕು. ಯಾರು ತಮ್ಮ ಧನವನ್ನೂ ಸಾಮಾಜಿಕ ಸ್ಥಾನವನ್ನೂ ಮನಸ್ಸಿನಲ್ಲಿಟ್ಟುಕೊಂಡು ಗರ್ವದಿಂದಲೂ ಅಹಂಭಾವದಿಂದಲೂ ಇತರರನ್ನು ತಿರಸ್ಕರಿಸುವರೋ ಅವರು ದುಃಖಕ್ಕೆ ಗುರಿಯಾಗುವರು.

ಮಾನವೀಯತೆಯನ್ನು ಕಳೆದುಕೊಂಡು ದುಷ್ಕೃತಿಯಲ್ಲಿ ನಿರತರಾಗಿರುವವರು ಗರುಡ ಪುರಾಣದ ಶೈಲಿಯಲ್ಲಿ ಅವರು ಸತ್ತಮೇಲೆ ಅತ್ಯಂತ ದುಃಖಕ್ಕೆ ಗುರಿಯಾಗುವರು.

ಏವಂ ವೈ ಕ್ಲಿಶ್ಯಮಾನಾಸ್ತೇ ನರಾ ನಾರ್ಯಃ ಸಹಸ್ರಶಃ ।
ಪಚ್ಯಂತೇ ನರಕೇ ಘೋರೇ ಯಾವದಾ ಭೂತ ಸಂಪ್ಲವಮ್ ।।
ತಸ್ಯಾಕ್ಷಯಂ ಫಲಂ ಭುಕ್ತ್ವಾ ತತ್ರೈವೋತ್ಪದ್ಯತೇ ಪುನಃ ।
ಯಮಾಜ್ಞಯಾ ಮಹೀಂ ಪ್ರಾಪ್ಯ ಭವಂತಿ ಸ್ಥಾವರಾದಯಃ ।।

ಅಂದರೆ ಈ ರೀತಿ ನಿಶ್ಚಯವಾಗಿಯೂ ಪೀಡಿಸಲ್ಪಟ್ಟು, ಸಾವಿರಾರು ನರನಾರಿಯರು ಪ್ರಳಯ ಕಾಲದವರೆಗೆ ಘೋರವಾದ ನರಕಗಳಲ್ಲಿ ಬೇಯಿಸಲ್ಪಡುತ್ತಾರೆ.

ಅದರ ಅಕ್ಷಯ ಫಲವನ್ನು ಅಲ್ಲಿಯೇ ಅನುಭವಿಸಿ ಪುನಃ ಹುಟ್ಟುತ್ತಾರೆ. ಯಮನ ಆಜ್ಞೆಯ ಪ್ರಕಾರ ಭೂಮಿಗೆ ಬಂದು ಸ್ಥಾವರ ಇತ್ಯಾದಿಗಳಾಗುತ್ತಾರೆ (IV. 55-56).

ಈ ವಿಧವಾಗಿ ಗರುಡ ಪುರಾಣವು ಕರ್ಮಸಿದ್ಧಾಂತ, ಪಾಪ ಪುಣ್ಯಸಿದ್ಧಾಂತ, ಸ್ವರ್ಗ ನರಕ ಸಿದ್ಧಾಂತ, ಪುನರ್ಜನ್ಮ ಸಿದ್ಧಾಂತ ಮತ್ತು ಪುರುಷಾರ್ಥ ಸಿದ್ಧಾಂತಗಳನ್ನು ಒಂದುಗೂಡಿಸಿದೆ. ಆದುದರಿಂದ ಸಾಮಾನ್ಯ ಜನರಲ್ಲಿ ಈ ನಾಲ್ಕು ಸಿದ್ಧಾಂತಗಳಲ್ಲಿ ಯಾವುದು ಮುಖ್ಯ, ಯಾವುದು ಮುಖ್ಯವಲ್ಲ ಎಂಬುದನ್ನು ಗ್ರಹಿಸಲು ಕಷ್ಟಸಾಧ್ಯವಾಗುವುದು. ಒಬ್ಬ ಮನುಷ್ಯನು ತನ್ನ ದುಷ್ಕೃತ್ಯಗಳಿಗೆ ಘೋರವಾದ ನರಕದಲ್ಲಿ ಪ್ರಳಯಕಾಲದವರೆಗೆ ಬೇಯಿಸಲ್ಪಟ್ಟು ಈ ಲೋಕದಲ್ಲಿ ಪುನಃ ಹುಟ್ಟಿದರೆ ಆತನು ಮತ್ತೊಮ್ಮೆ ಕರ್ಮಫಲವನ್ನನುಭವಿಸಲು ಹೇಗೆ ಸಾಧ್ಯವಾದೀತು. ಆದರೂ ಗರುಡ ಪುರಾಣವು ಹೀಗೆ ಸಾರುತ್ತದೆ.

ಗಲತ್ಕುಷ್ಠಾಶ್ಚ ಜನ್ಮಾಂಧಾ ಮಹಾರೋಗಸಮಾಕುಲಾಃ ।
ಭವಂತ್ಯೇವಂ ನರಾ ನಾರ್ಯಃ ಪಾಪಚಿಹ್ನೋಪಲಕ್ಷಿತಾಃ ।।

ಅಂದರೆ ಈ ರೀತಿ ತೀವ್ರವಾದ ಕುಷ್ಠ ರೋಗಿಗಳು ಹುಟ್ಟು ಕುರುಡರು ಮಹಾರೋಗಗಳಿಂದೊಡಗೂಡಿ ಪಾಪಚಿಹ್ನೆಗಳನ್ನು ಸೂಚಿಸುವ ನರನಾರಿಯರಾಗುತ್ತಾರೆ (IV–60).

ಆದುದರಿಂದ ನರಕದಲ್ಲಿ ತಮ್ಮ ದುಷ್ಕೃತ್ಯಗಳಿಂದುಂಟಾದ ಅಕ್ಷಯ ಫಲವನ್ನು ಅಲ್ಲಿಯೇ ಅನುಭವಿಸಿದರೂ ಮತ್ತು ಇನ್ನೊಂದು ಜನ್ಮದಲ್ಲಿ ಮಹಾರೋಗಗಳಿಂದ ನರಳುವರು ಎಂದು ಹೇಳಿದ ಹಾಗಾಯಿತು.

ಆದರೆ ಈಗ ಚೆನ್ನಾಗಿ ಗೊತ್ತಿರುವ ಹಾಗೆ ಮಹಾವ್ಯಕ್ತಿಗಳೂ ಜೀವನ್ಮುಕ್ತರೂ ಆದ ಶ್ರೀ ರಾಮಕೃಷ್ಣ ಪರಮಹಂಸರು, ಶ್ರೀ ರಮಣ ಮಹರ್ಷಿಗಳು,

ಶ್ರೀ ಅರವಿಂದರು ಮುಂತಾದವರು ಅರ್ಬುದ ರೋಗ (ಕ್ಯಾನ್ಸರ್) ದಿಂದ ಅವರ ಅಂತ್ಯಕಾಲದಲ್ಲಿ ನರಳಿದರು. ಈ ವಿಷಯುವನ್ನು ಎರಡು ದೃಷ್ಟಿಯಿಂದ ಕಾಣಬಹುದು. ಪುನರ್ಜನ್ಮದ ಸಿದ್ಧಾಂತದ ಪ್ರಕಾರ ಇವರು ಜೀವನ್ಮುಕ್ತರಾದರೂ ಪ್ರಾರಬ್ಧಕರ್ಮವನ್ನು ಅನುಭವಿಸಲೇಬೇಕಾಯಿತು. ಆದರೆ ಮತ್ತೊಂದು ದೃಷ್ಟಿಯಾದ ವಿವೇಚನಾ ದೃಷ್ಟಿಯಿಂದ ನೋಡಿದರೆ ದೈಹಿಕ ರೋಗಗಳಿಗೂ ಜೀವನ್ಮುಕ್ತ ಸ್ಥಿತಿಗೂ ಯಾವ ಸಂಬಂಧವೂ ಇಲ್ಲ ಎಂದು ಹೇಳಬಹುದು.

ದಾನಗಳನ್ನು ಕುರಿತು ಗರುಡ ಪುರಾಣವು ಹೀಗೆ ಹೇಳುವುದು :

ಪಾತ್ರೇ ಪ್ರದಾಯ ಶಯನಂ ವಾಂಛಿತಂ ಫಲಮಾಪ್ನುಯಾತ್ ।
ಪಿತಾ ಚ ದಾತಾ ತನಯಃ ಪರತ್ರೇಹ ಚಮೋದತೇ ॥
ಪುರಂದರಗೃಹೇ ದಿವ್ಯೇ ಸೂರ್ಯಪುತ್ರಾಲಯೇಽಪಿ ಚ।
ಉಪತಿಷ್ಠೇನ್ನ ಸಂದೇಹಃ ಶಯ್ಯಾದಾನಪ್ರಭಾವತಃ।।
ವಿಮಾನವರಮಾರೂಢಃ ಸೇವ್ಯಮಾನೋಽಪ್ಸರೋಗಣೈಃ।
ಅಭೂತಸಂಪ್ಲವಂ ಯಾವತ್ತಿಷ್ಠತ್ಯಾತಂಕವರ್ಜಿತಃ॥
ಸರ್ವತೀರ್ಥೇಷು ಯತ್ಪುಣ್ಯಂ ಸರ್ವಪರ್ವದಿನೇಷುಚ।
ತೇಭ್ಯಶ್ಚಾಪ್ಯಧಿಕಂ ಪುಣ್ಯಂ ಶಯ್ಯಾದಾನೋದ್ಭವಂ ಭವೇತ್॥

ಅಂದರೆ ಸತ್ಪಾತ್ರನಲ್ಲಿ ಶಯ್ಯಾದಾನವನ್ನು ಮಾಡಿ ಅಪೇಕ್ಷಿಸಿದ ಫಲಗಳನ್ನು ಪಡೆದು, ತಂದೆ ಮತ್ತು ದಾನಿಯಾದ ಮಗನು ಇಹಪರಗಳಲ್ಲಿ ಸಂತೋಷ ಪಡುತ್ತಾರೆ.

ಶಯ್ಯಾದಾನದ ಪ್ರಭಾವದಿಂದ ಇಂದ್ರನ ದಿವ್ಯವಾದ ಗೃಹದಲ್ಲಿ ಮತ್ತು ಸೂರ್ಯ ಪುತ್ರನಾದ ಯಮರಾಜನ ನಿವಾಸದಲ್ಲಿ ನಿಸ್ಸಂದೇಹವಾಗಿ ವಾಸಿಸುತ್ತಾನೆ.

ಅವನು ಶ್ರೇಷ್ಠವಾದ ವಿಮಾನವನ್ನು ಹತ್ತಿ ಅಪ್ಸರೆಯರಿಂದ ಸೇವಿಸಲ್ಪಡುತ್ತ ಪ್ರಳಯಕಾಲದವರೆಗೆ ತೊಂದರೆಗಳಿಲ್ಲದೆ ಇರುತ್ತಾನೆ.

ಎಲ್ಲ ತೀರ್ಥಗಳಲ್ಲಿಯೂ ಮತ್ತು ಎಲ್ಲ ಪರ್ವದಿನಗಳಲ್ಲಿಯೂ ಯಾವ ಪುಣ್ಯ ಬರುತ್ತದೋ ಅದಕ್ಕಿಂತ ಹೆಚ್ಚಾದ ಪುಣ್ಯವು ಶಯ್ಯಾದಾನದಿಂದ ಉಂಟಾಗುತ್ತದೆ (13-78-81).

ಆದರೆ ಮತ್ತೊಂದು ಕಡೆ ಗಯೆಯಲ್ಲಿ ಶ್ರಾದ್ಧವನ್ನು ಮಾಡಿದರೆ ಪಿತೃಗಳಿಗೂ ಅದನ್ನು ಮಾಡಿದ ಪುತ್ರನಿಗೂ ಮುಕ್ತಿ ಲಭಿಸುವುದೆಂದು ಹೇಳಲಾಗಿದೆ.

ಗಯಾಶ್ರಾದ್ಧಾತ್ಪ್ರಮುಚ್ಯಂತೇ ಪಿತರೋ ಭವಸಾಗರಾತ್।
ಗದಾಧರಾನುಗ್ರಹೇಣ ತೇ ಯಾಂತಿ ಪರಮಾಂ ಗತೀಮ್।।
ಏವಮಾಮುಷ್ಮಿಕೀಂ ತಾರ್ಕ್ಷ್ಯ । ಯಃ ಕರೋತಿ ಕ್ರಿಯಾಂ ಸುತಃ ।
ಸ ಸ್ಯಾತ್ಸುಖೀ ಭವೇನ್ಮುಕ್ತಃ ಕೌಶಿಕಸ್ಯಾತ್ಮಜೋ ಯಥಾ।।

ಅಂದರೆ ಗಯಾ ಶ್ರಾದ್ಧದಿಂದ ಪಿತೃಗಳು ಭವಸಾಗರದಿಂದ ಮುಕ್ತರಾಗುತ್ತಾರೆ. ಗದಾಧರನ ಅನುಗ್ರಹದಿಂದ ಅವರು ಪರಮ ಗತಿಯನ್ನು ಹೊಂದುತ್ತಾರೆ (13–110). ಈ ರೀತಿ ಯಾವ ಪುತ್ರನು ಪರಲೋಕಕ್ಕೆ ಸಂಬಂಧಿಸಿದ ಕ್ರಿಯೆಗಳನ್ನು ಮಾಡುತ್ತಾನೋ ಅವನು ಸುಖವನ್ನು ಹೊಂದಿ ಮುಕ್ತನಾಗುತ್ತಾನೆ (13-116). ಆದರೂ ಹದಿನಾರನೆಯ ಅಧ್ಯಾಯದಲ್ಲಿ ಮುಕ್ತಿಯನ್ನು ಪಡೆಯಲು ಜ್ಞಾನದಿಂದ ಮಾತ್ರ ಸಾಧ್ಯವೆಂದೂ ಕರ್ಮದಿಂದಾಗಲೀ ಕೇವಲ ಶ್ರುತಿ ಸ್ಮೃತಿಗಳ ತಿಳುವಳಿಕೆಯಿಂದಾಗಲೀ ಅಸಾಧ್ಯವೆಂದು ಹೇಳಲಾಗಿದೆ.

ನ ವೇದಾಧ್ಯಯನಾನ್ಮುಕ್ತಿರ್ನ ಶಾಸ್ತ್ರಪಠನಾದಪಿ।
ಜ್ಞಾನಾದೇವಹಿ ಕೈವಲ್ಯಂ ನಾನ್ಯಥಾ ವಿನತಾತ್ಮಜ॥
ನಾಶ್ರಮಃ ಕಾರಣಂಮುಕ್ತೇರ್ದರ್ಶನಾನಿನ ಕಾರಣಮ್।
ತಥೈವ ಸರ್ವಕರ್ಮಾಣಿ ಜ್ಞಾನಮೇವ ಹಿ ಕಾರಣಮ್।

ಅಂದರೆ ವೇದಾಧ್ಯಯನದಿಂದಲೂ ಶಾಸ್ತ್ರಗಳನ್ನು ಓದುವುದರಿಂದಲೂ ಮುಕ್ತಿಯು ದೊರಕುವುದಿಲ್ಲ. ಜ್ಞಾನದಿಂದಲೇ ಕೈವಲ್ಯ. ಅನ್ಯಥಾ ಇಲ್ಲ. (ನಾಲ್ಕು) ಆಶ್ರಮಗಳು ಮುಕ್ತಿಗೆ ಕಾರಣವಲ್ಲ. (ಆರು) ದರ್ಶನಗಳೂ ಕಾರಣವಲ್ಲ. ಹಾಗೆಯೇ ಎಲ್ಲ ಕರ್ಮಗಳಿಗೂ ಕೇವಲ ಜ್ಞಾನವೊಂದೇ ಕಾರಣವು (16-8-88). ಈ ವಿಧವಾಗಿ ಈ ಎರಡು ಶ್ಲೋಕಗಳಲ್ಲಿ ಗರುಡ ಪುರಾಣವು ಜ್ಞಾನವೊಂದೇ ಮೋಕ್ಷ ಸಾಧನೆ ಎಂದು ಒತ್ತಿ ಹೇಳುವುದು. ಕೇವಲ ವೇದಾಧ್ಯಯನದಿಂದಲೂ ದರ್ಶನಗಳ ಅಧ್ಯಯನದಿಂದಲೂ ವೈದಿಕ ಕರ್ಮಗಳ ಆಚರಣೆಯಿಂದಲೂ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲವೆಂದು ವಿಷದೀಕರಿಸಿದೆ.

ಆದರೆ ಕೊನೆಯಲ್ಲಿ ಹೀಗೆ ತಿಳಿಸಿದೆ :

ಇತಿ ತೇ ಕಥಿತಂ ತಾರ್ಕ್ಷ್ಯ ಮೋಕ್ಷಧರ್ಮಂ ಸಮನ್ವಿತಮ್।
ಜ್ಞಾನವೈರಾಗ್ಯಸಹಿತಂ ಶ್ರುತ್ವಾ ಮೋಕ್ಷಮವಾಪ್ನುಯಾತ್॥

ಅಂದರೆ ಗರುಡ ಪುರಾಣದಲ್ಲಿ ವಿವರಿಸಿರುವ ಸನಾತನವಾದ ಮೋಕ್ಷ ಧರ್ಮವನ್ನು ಜ್ಞಾನ ವೈರಾಗ್ಯಗಳ ಸಮೇತವಾಗಿ ಕೇಳಿದವನು ಮೋಕ್ಷವನ್ನು ಪಡೆಯುತ್ತಾನೆ (16–115). ಈ ವಿಧವಾಗಿ ಯಾರು ಗರುಡ ಪುರಾಣವನ್ನು ಜ್ಞಾನ ವೈರಾಗ್ಯಗಳಿಂದ ಕೇಳುವರೋ ಅವರು ಮೋಕ್ಷವನ್ನು ಪಡೆಯುವರೆಂದು ಹೇಳಿದೆ.

ಮೇಲೆ ಹೇಳಿದ ಹಾಗೆ ಗರುಡ ಪುರಾಣವು ಆ ಕಾಲದಲ್ಲಿ ಸಾಂಪ್ರದಾಯಿಕವಾಗಿದ್ದ ಯಜ್ಞಯಾಗಾದಿಗಳನ್ನು ದಾನಗಳನ್ನು ಪಾಪ ಪುಣ್ಯ ಮತ್ತು ಸ್ವರ್ಗ ನರಕ ನಂಬಿಕೆಗಳನ್ನು ಹೊಸದಾಗಿ ಉಂಟಾದ ಪುರುಷಾರ್ಥಗಳ ವಿವೇಚನೆಯನ್ನು—ಈ ಎಲ್ಲ ವಿಷಯಗಳನ್ನು ಕುರಿತು ಹೇಳಿದೆ. ಇದು ಭಾರತೀಯ ಸಂಸ್ಕೃತಿಯ ಒಂದು

ವೈಶಿಷ್ಟ್ಯ. ಹೊಸ ಸಿದ್ಧಾಂತಗಳು ಹೊರಟರೆ ಹಳೆಯ ನಂಬಿಕೆಗಳನ್ನು ಬಿಡುವುದಿಲ್ಲ. ಹಳೆಯದಕ್ಕೂ ಹೊಸದಕ್ಕೂ ಸಮನ್ವಯ ಇಲ್ಲದಿದ್ದರೂ ಎರಡರಲ್ಲೂ ನಂಬಿಕೆಯನ್ನಿಡುವುದೇ ಆಗಿದೆ.

ಉಪನಿಷತ್ಕಾಲದಲ್ಲಿ ಮೋಕ್ಷವೇ ಮಾನವನ ಅಂತಿಮಗುರಿಯೆಂದೂ, ಇದನ್ನು ಪಡೆಯಲು ಜ್ಞಾನ ವೈರಾಗ್ಯಗಳೇ ಸಾಧನೆಯೆಂದೂ, ಜ್ಞಾನವೈರಾಗ್ಯಗಳು ಯಾರಲ್ಲಿರುವುವೋ ಅವರು ಕೇವಲ ಇಂದ್ರಿಯಜನ್ಯ ಸುಖಾನುಭವವನ್ನು ಅಹಂಕಾರ ಮಮಕಾರಗಳನ್ನು ಯಾವ ಪ್ರಯತ್ನವೂ ಇಲ್ಲದೇ ಅನೈಚ್ಛಿಕವಾಗಿ ತ್ಯಜಿಸಿ ಸತ್ಪ್ರವರ್ತನೆಯಿಂದ ಕೂಡಿದವರಾಗಿರುವವರು ಎಂದು ಸಾರಿದೆ. ಇದೇ ಅಭಿಪ್ರಾಯವನ್ನು ಗೀತೆಯು ನಾನಾಕಡೆ ಪ್ರಕಟಿಸಿದೆ.

ಗೀತೆಯ ನಾಲ್ಕನೆಯ ಅಧ್ಯಾಯವನ್ನು ಜ್ಞಾನಯೋಗವೆಂದು ಕರೆಯಲಾಗಿದೆ. ಈ ಅಧ್ಯಾಯದಲ್ಲಿ 33 ನೆಯ ಶ್ಲೋಕವು ಜ್ಞಾನವೇ ಮುಕ್ತಿಗೆ ಸಾಧನವೆಂದು ಸಾರಿತು.

ಶ್ರೇಯಾನ್ ದ್ರವ್ಯಮಯಾದ್ಯಜ್ಞಾಜ್ಜ್ಞಾನಯಜ್ಞಃ ಪರಂತಪ ।
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ

ಅಂದರೆ ದ್ರವ್ಯಮಯವಾದ ಯಜ್ಞಕ್ಕಿಂತಲೂ ಜ್ಞಾನಯಜ್ಞವು ಶ್ರೇಯಸ್ಕರವಾದುದು. ಎಲ್ಲಾ ಕರ್ಮವೂ ಜ್ಞಾನದಲ್ಲಿ ನಿಶ್ಶೇಷವಾಗಿ ಪರಿಸಮಾಪ್ತಿಯನ್ನು ಹೊಂದುತ್ತದೆ (4-33).

ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ಕುರುತೇಽರ್ಜುನ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ।।
ನ ಹಿ ಜ್ಞಾನೇನ ಸದೃಶಂ ಪವಿತ್ರ ಮಿಹ ವಿದ್ಯತೇ।
ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ॥
ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ।
ಅಜ್ಞಶ್ಚಾಶ್ರದ್ಧಧಾನಶ್ಚ ಸಂಶಯಾತ್ಮಾ ವಿನಶ್ಯತಿ।
ನಾಯಂ ಲೋಕೋಽಸ್ತಿನ ಪರೋ ನ ಸುಖಂ ಸಂಶಯಾತ್ಮನಃ

ಅಂದರೆ ಚೆನ್ನಾಗಿ ಪ್ರಜ್ವಲಿಸುತ್ತಿರುವ ಅಗ್ನಿಯು ಕಟ್ಟಿಗೆಗಳನ್ನು ಹೇಗೆ ಸುಟ್ಟು ಬೂದಿ ಮಾಡುತ್ತದೆಯೋ ಹಾಗೆಯೇ ಜ್ಞಾನವೆಂಬ ಅಗ್ನಿಯು ಕರ್ಮಗಳನ್ನೆಲ್ಲ ಭಸ್ಮ ಮಾಡಿಬಿಡುವುದು.

ಈ ಲೋಕದಲ್ಲಿ ಜ್ಞಾನಕ್ಕೆ ಸಮಾನವಾದ ಪವಿತ್ರ ವಸ್ತು ಯಾವುದೂ ಇರುವುದಿಲ್ಲ. ಯೋಗದಿಂದ ಸಂಸಿದ್ಧಿಯನ್ನು ಹೊಂದಿದವನು ಕಾಲಕ್ರಮದಲ್ಲಿ ಆ ಜ್ಞಾನವನ್ನು ತನ್ನಲ್ಲಿ ತಾನೇ ಹೊಂದುವನು.

ಶ್ರದ್ಧೆಯುಳ್ಳವನೂ ತತ್ಪರನೂ ಜಿತೇಂದ್ರಿಯನೂ (ಆದ ಮುಮುಕ್ಷುವು) ಜ್ಞಾನವನ್ನು ಹೊಂದುತ್ತಾನೆ. ಜ್ಞಾನವನ್ನು ಪಡೆದು ಶೀಘ್ರದಲ್ಲಿಯೇ ಪರಮ ಶಾಂತಿಯನ್ನು ಪಡೆಯುತ್ತಾನೆ.

ಜ್ಞಾನವಿಲ್ಲದವನೂ ಶ್ರದ್ಧೆಯಿಲ್ಲದವನೂ ಸಂಶಯಾತ್ಮನೂ (ಈ ಮೂವರೂ) ನಾಶ ಹೊಂದುವರು. ಸಂಶಯಾತ್ಮನಿಗೆ ಈ ಲೋಕವಿಲ್ಲ, ಪರಲೋಕವೂ ಇಲ್ಲ. ಸುಖವೂ ಇಲ್ಲ (4–73–40).

ಮನುಸ್ಮೃತಿಯಲ್ಲಿ ಶ್ರಾದ್ಧಗಳಲ್ಲಿ ಯಾವ ಯಾವ ಭಕ್ಷ್ಯಗಳನ್ನು ಪಿತೃಗಳಿಗೆ ಅರ್ಪಿಸಿದರೆ ಎಷ್ಟು ಕಾಲ ಅವರು ತೃಪ್ತಿಯಿಂದಿರುವರೆಂಬುದನ್ನು ವಿವರಿಸಲಾಗಿದೆ.

ತಿಲೈರ್ವ್ರೀಹಿಯವೈರ್ಮಾಷೈರದ್ಭಿರ್ಮೂಲ ಫಲೇಸದಾ।
ದತ್ತೇನ ಮಾಸಂ ತೃಪ್ಯಂತಿ ವಿಧಿವತ್ಪಿತರೋನೃಣಾಂ॥
ದ್ವೌಮಾಸೌ ಮತ್ಸ್ಯಮಾಂಸೇನ ತ್ರೀನ್‌ಮಾಸಾನ್ ಹಾರಿಣೇನ ತು।
ಔರಭ್ರೇಣಾಥ ಚತುರಃ ಶಾಕುನೇನಾಥ ಪಂಚ ವೈ॥
ಷಣ್ಮಾಸಾಂಶ್ಛಾಗ ಮಾಂಸೇನ ಪಾರ್ಷತೇನ ಚ ಸಪ್ತ ವೈ।
ಅಷ್ಟಾವೇಣಸ್ಯ ಮಾಂಸೇನ ರೌರವೇಣ ನವೈವ ತು॥
ದಶಮಾಸಾಂಸ್ತು ತೃಪ್ಯಂತಿ ವರಾಹಮಹಿಷಾಮಿಷೈಃ
ಶಶಕೂರ್ಮಯೋಸ್ತು ಮಾಂಸೇನ ಮಾಸಾನೇಕಾದಶೈವ ತು।।
ಸಂವತ್ಸರಂ ತು ಗವ್ಯೇನ ಪಯಸಾ ಪಾಯ ಸೇನ ಚ ।
ವಾರ್ಧ್ರೀ ಣಸಸ್ಯ ಮಾಂಸೇನ ತೃಪ್ತಿರ್ದ್ವಾದಶವಾರ್ಷಿಕೀ।।

ಅಂದರೆ ಎಳ್ಳು, ಭತ್ತ, ಯವ, ಉದ್ದು, ನೀರು, ಗೆಣಸು, ಹಣ್ಣುಗಳನ್ನು ಪಿತೃಗಳಿಗೆ ದಾನ ಮಾಡಿದರೆ ಮನುಷ್ಯ ಮಾನವ ಮಾಸ ಕಾಲದವರೆಗೆ ಅವರಿಗೆ ತೃಪ್ತಿಯಾಗುವುದು.

ಭಕ್ಷ್ಯಗಳಾದ ಮತ್ಸ್ಯ ಮಾಂಸದಿಂದ ಎರಡು ಮಾಸ, ಹರಿಣ ಮಾಂಸದಿಂದ ಮೂರು ಮಾಸ, ಮೇಷ ಮಾಂಸದಿಂದ ನಾಲ್ಕು ಮಾಸ, ಪಕ್ಷಿಮಾಂಸದಿಂದ ಐದು ಮಾಸ ಪರ್ಯಂತ ಪಿತೃ ತೃಪ್ತಿಯು.

ಆಡು, ಪೃಷತ್, ಏಣ, ರುರು (ಮೃಗಭೇದ) ಮಾಂಸದಿಂದ ಕ್ರಮವಾಗಿ ಅಧಿಕ ತೃಪ್ತಿಯು.

ವರಾಹ, ಯದಿಕ್ಷಿ ಶಶ, ಕೂರ್ಮಗಳಿಂದ ಅನುಕ್ರಮವಾಗಿ ಬಹು ತೃಪ್ತಿಯು.

ಗೋವಿನ ಹಾಲು ಅದರ ಪಾಯಸಗಳಿಂದ ಸಂವತ್ಸರ ಪರ್ಯಂತ ತೃಪ್ತಿಯು. ವಾರ್ಧ್ರೀಣಸ ಮಾಂಸವು ಬಹು ಫಲವು (III–267–271).

ಇಷ್ಟೆಲ್ಲ ವಿವರಗಳನ್ನು ಕೊಟ್ಟು ಕಡೆಗೆ ಮನುಸ್ಮೃತಿಯಲ್ಲಿ ಹೀಗೆ ಹೇಳಲಾಗಿದೆ :

ಯದ್ಯದ್ದದಾತಿ ವಿಧಿವತ್ಸಮ್ಯಕ್ ಶ್ರದ್ಧಾಸಮನ್ವಿತಃ ।
ತತ್ತತ್ಪಿತೃಣಾಂ ಭವತಿ ಪರತ್ರಾನಂತಮಕ್ಷಯಂ ॥

ಅಂದರೆ ಶಾಸ್ತ್ರ ಸಿಷಿದ್ಧವಲ್ಲದ, ತನಗೆ ದೊರೆತ ಏನನ್ನಾದರೂ ಶ್ರದ್ಧೆಯಿಂದ ಪಿತೃಗಳಿಗೆ ಸಮರ್ಪಿಸಿದರೆ ಅದು ಅವರಿಗೆ ಅನಂತ ಅಕ್ಷಯ ತೃಪ್ತಿಯ ಮೂಲಕ ತನಗೂ ಬಹು ಫಲದಾಯಕವಾಗುವುದು. ಆದ್ದರಿಂದ ಶ್ರಾದ್ಧ ಪದವು ಪ್ರಚಾರಕ್ಕೆ ಬಂದಿ (ದೆIII–275).

ಈ ವಿಧವಾಗಿ ಶ್ರಾದ್ಧ ಕರ್ಮಕ್ಕೆ ಎರಡು ಪರಿಣಾಮಗಳು. ಮೊದಲನೆಯದು ಪಿತೃಗಳ ತೃಪ್ತಿ. ಎರಡನೆಯದು ಕರ್ತೃವಿಗೆ ಉಂಟಾಗುವ ಫಲ. ಈ ವಿಷಯವನ್ನು ಕುರಿತು ಮತ್ತೊಂದು ಶ್ಲೋಕವು ಹೀಗೆ ಹೇಳಿದೆ :

ಯುಕ್ಷು ಕುರ್ವನ್ ದಿನರ್ಕ್ಷೇಷು ಸರ್ವಾನ್ಕಾಮಾನ್ಸಮಶ್ನುತೇ ।
ಅಯುಕ್ಷುತು ಪಿತೄನ್ ಸರ್ವಾನ್ಪ್ರಜಾಂ ಪ್ರಾಪ್ನೋತಿ ಪುಷ್ಕಲಾಂ ॥

ಅಂದರೆ ತಿಥಿ–ನಕ್ಷತ್ರಗಳಲ್ಲಿ ಎರಡನೆ ನಾಲ್ಕನೆ ಮುಂತಾದ ಬಿದಿಗೆ, ಚೌತಿ ತಿಥಿಗಳಲ್ಲಿ, ಭರಣಿ ರೋಹಿಣಿ ನಕ್ಷತ್ರಗಳಲ್ಲಿ ಶ್ರಾದ್ಧ ಮಾಡಿದರೆ ಸರ್ವಫಲವು ಹಾಗೆಯೇ ವಿಷಯ ತಿಥಿ ನಕ್ಷತ್ರಗಳಲ್ಲಿ ಪ್ರಜಾ ಸಂಪತ್ತಿಯಾಗುವುದು (III–277).

ಹೀಗೆ ಮೇಲೆ ಹೇಳಿದಂತೆ ಸಮದಿನಗಳಲ್ಲಿ ಶ್ರಾದ್ಧವನ್ನು ಮಾಡಿದರೆ ಆಗ ಕರ್ತೃವಿಗೆ ಸರ್ವಫಲಗಳು ಲಭಿಸುವುವು. ಬೆಸದಿನಗಳಲ್ಲಿ ಮಾಡಿಧರೆ ಒಳ್ಳೆಯ ಮಕ್ಕಳನ್ನು ಪಡೆಯುವನು.

ಕರ್ಮ ಸಿದ್ಧಾಂತವನ್ನು ಕುರಿತು ಮನುಸ್ಮೃತಿಯಲ್ಲಿ ಈ ಕೆಳಗಿನ ವಿವರಗಳನ್ನು ಕೊಡಲಾಗಿದೆ :

ತಸ್ಯೇಹ ತ್ರಿವಿಧಸ್ಯಾಪಿ ತ್ರ್ಯಧಿಷ್ಠಾನಸ್ಯ ದೇಹಿನಃ ।
ದಶಲಕ್ಷಣ ಯುಕ್ತಸ್ಯ ಮನೋವಿದ್ಯಾತ್ಪ್ರವರ್ತಕಂ ॥
ಪರದ್ರವ್ಯೇಷ್ವಭಿಧ್ಯಾನಂ ಮನಸಾऽನಿಷ್ಟಚಿಂತನಂ ।
ವಿತಥಾಭಿನಿವೇಶಶ್ಚ ತ್ರಿವಿಧಂ ಕರ್ಮ ಮಾನಸಂ ॥
ಪಾರುಷ್ಯಮನೃತಂ ಚೈವ ಪೈಶುನ್ಯಂ ಚಾಪಿ ಸರ್ವಶಃ ।
ಅಸಂಬದ್ಧ ಪ್ರಲಾಪಶ್ಚ ವಾಙ್ಮಯಂ ಸ್ಯಾಚ್ಚತುರ್ವಿಧಂ ॥
ಅದತ್ತಾನಾಮುಪಾದಾನಂ ಹಿಂಸಾ ಚೈವಾವಿಧಾನತಃ ।
ಪರದಾರೋಪಸೇವಾ ಚ ಶಾರೀರಂ ತ್ರಿ ವಿಧಂ ಸ್ಮೃತಂ ।
ಮಾನಸಂ ಮನಸ್ಯೈವಾಯಮುಪಭುಂಕ್ತೇ ಶುಭಾಶುಭಂ ।
ವಾಚಾ ವಾಚಾಕೃತಂ ಕರ್ಮ ಕಾಯೇನೈವ ಚ ಕಾಯಕಂ ॥

ಈ ಆತ್ಮನ ಸರ್ವ ವ್ಯಾಪಾರಗಳಿಗೂ ಪ್ರವರ್ತಕ (ಸಾಧನ)ವಾದುದು ಮನಸ್ಸು. ಹತ್ತು ವಿಧವಾದ ಕರ್ಮಗಳನ್ನು ದೇಹ-ವಾಕ್ ಮನಸ್ಸುಗಳ ಆಶ್ರಯದಲ್ಲಿ ಉತ್ತಮ, ಮಧ್ಯಮ, ಅಧಮ ವರ್ಗವಾಗಿ ಮನಸ್ಸೇ ಉಂಟುಮಾಡುವುದು.

ಪರರ ಸೊತ್ತಿನಲ್ಲಿ ಆಸೆ, ಪರರಿಗೆ ಕೇಡು ಬಗೆಯುವುದು, ವಿರುದ್ಧ ನಿಶ್ಚಯ ಈ ಮೂರು ದುಷ್ಫಲದಾಯಕವಾದ ಮಾನಸಿಕ ಕರ್ಮಗಳು. ಪರುಷ ವಚನ, ಸುಳ್ಳು, ತರಳೆ, ಅಸಂಬದ್ಧ ಮಾತು—ಈ ನಾಲ್ಕು ಕೆಟ್ಟ ವಚನ ಕರ್ಮಗಳು,

ಇತರರು ಕೊಡದೆ ಇರುವುದನ್ನು ತೆಗೆದುಕೊಳ್ಳುವುದು, ಹಿಂಸೆ, ಪರಸ್ತ್ರೀ ಸಹವಾಸ—ಇವು ಮೂರು ಶರೀರ ಜನ್ಯ ಕುಕರ್ಮಗಳು.

ಮಾನಸ ಕರ್ಮದಿಂದ ಮನಸ್ಸಿಗೆ ವಚನದಿಂದ ಮಾತಿಗೆ ದೈಹಿಕ ಕರ್ಮದಿಂದ ದೇಹಕ್ಕೆ ಪ್ರತಿಫಲವು ಉಂಟಾಗುವುದು (12-4-8).

ಈ ವಿಧವಾಗಿ ಮನುಸ್ಮೃತಿಯಲ್ಲಿ ಹತ್ತು ವಿಧವಾದ ದುಷ್ಕೃತ್ಯವನ್ನು ವಿವರಿಸಲಾಗಿದೆ. ಮೇಲೆ ನೋಡಿದ ಹಾಗೆ ಮನುಸ್ಮೃತಿಯಲ್ಲಿ ಅಹಿಂಸಾ, ಸತ್ಯ ಮುಂತಾದ ಹತ್ತು ಮುಖ್ಯ ಸಧರ್ಮಗಳು ಪ್ರತಿಯೊಬ್ಬ ಮಾನವನೂ ಆಚರಿಸ ಬೇಕಾದುದೆಂದು ಹೇಳಲಾಗಿದೆ (6.91-92 ಮತ್ತು 10.63). ಅಂದರೆ ಮನು ಸ್ಮೃತಿಯಲ್ಲಿ ಹತ್ತು ವಿಧವಾದ ಸಾಧಾರಣ ಧರ್ಮಗಳನ್ನೂ, ಹತ್ತು ವಿಧವಾದ ದುಷ್ಕೃತ್ಯಗಳನ್ನೂ ವಿವರಿಸಿರುವುದು.

ಈ ದುಷ್ಕೃತ್ಯಗಳಿಗೂ ಪುನರ್ಜನ್ಮ ಸಿದ್ಧಾಂತಕ್ಕೂ ಇರುವ ಸಂಬಂಧವನ್ನು ಮನುಸ್ಮೃತಿಯು ಹೀಗೆ ಸೂಚಿಸಿರುವುದು :

ಶರೀರಜೈಃ ಕರ್ಮದೋಷೈರ್ಯಾತಿ ಸ್ಥಾವರತಾಂ ನರಃ ।
ವಾಚಿಕೈಃ ಪಕ್ಷಿಮೃಗತಾಂ ಮಾನಸೈರಂತ್ಯಜಾತಿತಾಂ ॥

ಅಂದರೆ ಶಾರೀರಿಕ ಅಪರಾಧದಿಂದ ಕಲ್ಲು ಮರ ಎಂಬ ಸ್ಥಾವರ ರೂಪ, ವಾಚಕ ಅಪರಾಧದಿಂದ ಮೃಗ ಪಕ್ಷಿಗಳ ಜನ್ಮ, ಮಾನಸ ಕುಕರ್ಮದಿಂದ ಅಂತ್ಯಜ ಜನ್ಮವು ಬರುವುದು (12-9).

ಮತ್ತೊಂದು ಕಡೆ (12.52-81) ಯಾವ ಯಾವ ದುಷ್ಕೃತ್ಯಗಳಿಗೆ ಯಾವ ಯಾವ ಜನ್ಮವು ಮುಂದೆ ಉಂಟಾಗುವುದೆಂಬುದನ್ನು ವಿವರಿಸಿರುವುದು.

ಗರುಡ ಪುರಾಣದಲ್ಲಿ ಹೇಳಿರುವ ಹಾಗೆ ಮನುಸ್ಮೃತಿಯಲ್ಲಿಯೂ ಸಹ ಪಾಪ ಪುಣ್ಯಗಳಿಗೂ ಸ್ವರ್ಗ ನರಕಗಳಿಗೂ ಸಂಬಂಧವನ್ನು ಸೂಚಿಸಿರುವುದು.

ಯದ್ಯಾಚರತಿ ಧರ್ಮಂ ಸ ಪ್ರಾಯಶೋಽಧರ್ಮಮಲ್ಪಶಃ ।
ತೈರೇವ ಚಾವೃಕೋ ಭೂತೈಃ ಸ್ವರ್ಗೇ ಸುಖಮು ಪಾಶ್ನತೇ ॥
ಯದಿ ತಂ ಪ್ರಾಯಶೋಽಧರ್ಮಂ ಸೇವತೇ ಧರ್ಮಮಲ್ಪಶಃ ।
ತೈರ್ಭೂತೈಃ ಪರಿತ್ಯಕ್ತೋ ಯಾಮೀಃ ಪ್ರಾಪ್ನೋತಿ ಯಾತನಾಃ ।

ಅಂದರೆ ಕಡಿಮೆ ಅಧರ್ಮವನ್ನು ಹೆಚ್ಚು ಧರ್ಮವನ್ನು ಗಳಿಸಿದರೆ ದಿವ್ಯ ದೇಹಧಾರಿಯಾಗಿ ಸ್ವರ್ಗ ಸುಖವನ್ನು ಅನುಭವಿಸುತ್ತಾನೆ. ಅಧರ್ಮವನ್ನು ಹೆಚ್ಚಾಗಿಯೂ. ಧರ್ಮವನ್ನು ಕಡಿಮೆಯಾಗಿಯೂ ಗಳಿಸಿದ್ದರೆ ಯಮ ಯಾತನೆಗಳಿಗೆ ಗುರಿಯಾಗುವನು (12-20-21). ಇಷ್ಟೆಲ್ಲವೂ ಪಾಪ ಪುಣ್ಯ ಸ್ವರ್ಗ ನರಕ ಮತ್ತು ದುಷ್ಕರ್ಮ ಪುನರ್ಜನ್ಮಗಳನ್ನು ವಿವರಿಸಿದ ಮೇಲೆ ಆತ್ಮಜ್ಞಾನವು ಯಾವ ವಿಧವಾಗಿ ಮುಕ್ತಿಗೆ ಕಾರಣವೆಂಬುದನ್ನು ಕೊನೆಯಲ್ಲಿ ಸೂಚಿಸಲಾಗಿದೆ.

ಸರ್ವಮಾತ್ಮನಿ ಸಂಪಶ್ಯೇತ್ಸಚ್ಚಾಸಚ್ಚ ಸಮಾಹಿತಃ ।
ಸರ್ವಂ ಹ್ಯಾತ್ಮನಿ ಸಂಪಶ್ಯನ್ನಾಧರ್ಮೇ ಕುರುತೇ ಮನಃ ।

ಸಂಭವಿಸಿದ ಒಳ್ಳೆಯದು, ಕೆಟ್ಟದ್ದನ್ನು ತನಗೆ ಸಂಬಂಧಿಸಿದಂತೆ ಪರಾಮರ್ಶಿಸಬೇಕು. ಆಗ ಉಂಟಾಗುವ ಮಾನಸಿಕ ಪ್ರತಿಕ್ರಿಯೆಯು ತನಗೂ ಇತರರಿಗೂ ಮಾನ್ಯವಾಗ ತಕ್ಕದ್ದು. ಅದು ರಾಗ ದ್ವೇಷ ಪಕ್ಷಪಾತಗಳಿಗೆ ಗುರಿಯಾಗುವುದಿಲ್ಲ. ಸರ್ವವೂ ಆತ್ಮವೆಂದು ಮನನ ಮಾಡಿದವನಿಗೆ ರಾಗ ದ್ವೇಷಮಯವಾಗಿ ಅಧರ್ಮದಲ್ಲಿ ಅಭಿರತಿಯು ಸಮಾವಿಸಲಾರದು (12-118).

ಸರ್ವೇಷಾಮಪಿ ಚೈತೇಷಾಂ ಶುಭಾನಾಮಿಹ ಕರ್ಮಣಾಂ ।
ಕಿಂಚಿತ್ ಶ್ರೇಯಸ್ಕರಕರಂ ಕರ್ಮೋಕ್ತಂ ಪುರುಷಂ ಪ್ರತಿ ॥
ಸರ್ವೇಷಾ ಮಪಿ ಚೈತೇಷಾಮಾತ್ಮಜ್ಞಾನಂ ಪರಂಸ್ಮೃತಂ ।
ತದ್ಧ್ಯಗ್ರ್ಯಂ ಸರ್ವವಿದ್ಯಾನಾಂ ಪ್ರಾಪ್ಯತೇಪ್ಯಮೃತಂ ತತಃ ॥
(12.84-85)

ಅಂದರೆ ಎಲ್ಲ ಒಳ್ಳೆಯ ಕಾರ್ಯಗಳಲ್ಲಿ ಮನುಷ್ಯನ ಶ್ರೇಯಸ್ಸಿಗೆ ಉತ್ತಮವಾದ ಒಂದು ಕರ್ಮವಿದೆ.

ಅದು ಆತ್ಮಜ್ಞಾನವು. ಆತ್ಮಜ್ಞಾನವೇ ಉತ್ತಮ ಶಾಸ್ತ್ರವು. ಅದರಿಂದ ಅಮೃತತ್ವವನ್ನು ಪಡೆಯಲಾಗುವುದು (12-84-85).

ಈ ವಿಧವಾಗಿ ಮನುಸ್ಮೃತಿಯು ಮಾನವನ ಎಲ್ಲ ಕರ್ತವ್ಯಗಳಲ್ಲಿ ಮುಖ್ಯವಾದ ಕರ್ತವ್ಯವು ಆತ್ಮಜ್ಞಾನವನ್ನು ಪಡೆಯುವುದೇ ಆಗಿದೆಯೆಂದು ಆತ್ಮಜ್ಞಾನದ ಮೂಲಕ ಮುಕ್ತಿಯನ್ನು ಪಡೆಯುವುದು ಸಾಧ್ಯವೆಂದೂ, ಪಾಪ ಪುಣ್ಯ, ನರಕ ಸ್ವರ್ಗ, ಪುನರ್ಜನ್ಮ ಮುಂತಾದ ಭಾವನೆಗಳು ಮುಖ್ಯವಲ್ಲವೆಂದೂ ಮನುಸ್ಮೃತಿಯು ಕಟ್ಟಕಡೆಯ ಅಧ್ಯಾಯದ ಕೊನೆಯ ಭಾಗದಲ್ಲಿ ಅಧಿಕಾರವಾಣಿಯಿಂದ

ವಿವರಿಸಿರುವುದು. ಅಂದರೆ ಪುನರ್ಜನ್ಮ ಸಿದ್ಧಾಂತಕ್ಕಿಂತಲೂ ಧರ್ಮದಿಂದ ಕೂಡಿದ ಜೀವನವು ಜೀವನ್ಮುಕ್ತಿಗಾಗಿ ಶ್ರಮಿಸುವುದು ಮಾನವನ ಶ್ರೇಷ್ಠ ಮತ್ತು ಏಕಮೇವ ಕರ್ತವ್ಯವೆಂದು ಹೇಳಿದ ಹಾಗಾಯಿತು.

ಈ ಕಾರಣದಿಂದಲೇ ಯಾವುದಾದರೂ ಕೆಲಸವು ನಿಷ್ಪ್ರಯೋಜಕವಾದರೆ (ಇದರಿಂದ ಪುಣ್ಯವೂ, ಪುರುಷಾರ್ಥವೂ ಇಲ್ಲ) ಎಂದು ಹೇಳಲಾಗುವುದು. ಹಳೆಯ ಸಂಪ್ರದಾಯದ ಪ್ರಕಾರ ಪುಣ್ಯವನ್ನು ಪಡೆಯುವುದೇ ಮಾನವನ ಮುಖ್ಯ ಕರ್ತವ್ಯವಾಗಿತ್ತು. ಆದರೆ ಉಪನಿಷತ್ಕಾಲದಲ್ಲಿ ಒಂದು ಹೊಸ ದೃಷ್ಟಿಯುಂಟಾಯಿತು. ಇದನ್ನು ಮೇಲೆ ವಿವರಿಸಿರುವ ಹಾಗೆ ಬೃಹದಾರಣ್ಯಕೋಪನಿಷತ್ತಿನ ಮಧುಕಾಂಡದಲ್ಲಿ ಯಾಜ್ಞವಲ್ಕ್ಯ ಋಷಿಯು ತನ್ನ ಪತ್ನಿಯಾದ ಮೈತ್ರೇಯಿಗೆ ಹೀಗೆ ವಿವರಿಸಿರುವರು : "ಎಲೈ ಮೈತ್ರೇಯಿ, ಆತ್ಮನನ್ನು ನೋಡಬೇಕು, ಶ್ರವಣ ಮಾಡಬೇಕು, ಮನನ ಮಾಡಬೇಕು ; ನಿಧಿಧ್ಯಾಸನಮಾಡಬೇಕು. ಎಲೈ ಮೈತ್ರೇಯಿ, ಆತ್ಮದರ್ಶನದಿಂದ, ಶ್ರವಣದಿಂದ, ಮನನದಿಂದ, ನಿಧಿಧ್ಯಾಸನದಿಂದ ಇದೆಲ್ಲವೂ ತಿಳಿಯಲ್ಪಡುತ್ತದೆ." ಯಾವನು ಲೋಕಗಳನ್ನು ಆತ್ಮನಿಗಿಂತ ಭಿನ್ನವೆಂದು ಅರಿಯುತ್ತಾನೆಯೋ ಅವನನ್ನು ಲೋಕಗಳು ನಿರಾಕರಿಸುವುವು. ಯಾವನು ದೇವತೆಗಳನ್ನು ಆತ್ಮನಿಗಿಂತ ಭಿನ್ನವೆಂದು ಅರಿಯುತ್ತಾನೆಯೋ ಅವನನ್ನು ದೇವತೆಗಳು ನಿರಾಕರಿಸುವರು. ಯಾವನು ಪ್ರಾಣಿಗಳನ್ನು ಆತ್ಮನಿಗಿಂತ ಭಿನ್ನವೆಂದು ಅರಿಯುತ್ತಾನೆಯೋ ಅವನನ್ನು ಪ್ರಾಣಿಗಳು ನಿರಾಕರಿಸುವುವು. ಯಾವನು ಎಲ್ಲವನ್ನು ಆತ್ಮನಿಗಿಂತ ಭಿನ್ನವೆಂದು ಅರಿಯುತ್ತಾನೆಯೋ ಅವನನ್ನು ಎಲ್ಲವೂ ನಿರಾಕರಿಸುವುವು (2.4). ಈ ವಿಧವಾಗಿ ಉಪನಿಷತ್ತುಗಳು "ಆತ್ಮೈವ ಸರ್ವಂ" ಎಂಬುವ ಸಿದ್ಧಾಂತವನ್ನು ಪ್ರತಿಪಾದಿಸುವುವು.

ಉಪನಿಷತ್ತುಗಳ ಪ್ರಕಾರ ಶ್ರವಣ, ಮನನ, ನಿಧಿಧ್ಯಾಸನದಿಂದ ಆತ್ಮದರ್ಶನವಾಗುವುದು. ಆತ್ಮದರ್ಶನವಾದರೆ ಆಗ ಸರ್ವವೂ ಆತ್ಮಸ್ವರೂಪವೆಂಬ ಅನುಭವವು ಉಂಟಾಗುವುದು. ಈ ಅನುಭವ ಉಂಟಾದರೆ ತಾನು ಬೇರೆ, ಇತರರು ಬೇರೆ, ತಾನು ಉತ್ತಮ, ಇತರರು ಕೀಳು, ಮುಂತಾದ ಸ್ವ–ಪರ ಭಿನ್ನಾಭಿಪ್ರಾಯಗಳು ಮೇಲು ಕೀಳು ಎಂಬುವ ಸಾಮಾಜಿಕ ಸ್ಥರ ವಿನ್ಯಾಸಗಳೂ ಅಳಿಸಿಹೋಗುವುವು. ಆಗ ಆ ವ್ಯಕ್ತಿಯಲ್ಲಿ ಸರ್ವಾತ್ಮ ಭಾವವು ದೃಢೀಕರಿಸಿ ಇತರರು ತನ್ನವರು ಎಂಬ ಭಾವನೆ ಉಂಟಾಗಿ ಅಹಿಂಸಾ ಮತ್ತು ಅದ್ವೇಷ್ಯಾವರ್ತನೆಯು ಸಹಜವಾಗುವುದು. ಇದೇ ಮೇಲೆ ವಿವರಿಸುವ ವರ್ತನೆಯ ಸುವರ್ಣನಿಯಮಕ್ಕೆ ಅಡಿಪಾಯ.

ಈ ಸತ್ಯವನ್ನು ಪೂರ್ಣವಾಗಿ ಗ್ರಹಿಸಿ ಇತರ ಮನುಷ್ಯರನ್ನೂ ಇತರ ಜೀವಿಗಳನ್ನೂ ಸರ್ವಾತ್ಮ ಭಾವದಿಂದ ಯಾವ ವ್ಯಕ್ತಿಯು ವರ್ತಿಸುವನೋ ಅವನು ಜೀವನ್ಮುಕ್ತನು. ಇದನ್ನು ಪಡೆಯಲು ಪ್ರತಿಯೊಬ್ಬ ಮಾನವನಿಗೂ ಸಾಧ್ಯವೆಂದೂ

ಮತ್ತು ಈ ಸತ್ಯವನ್ನು ಈ ಜನ್ಮದಲ್ಲಿಯೇ ಅರಿಯಲು ಮತ್ತು ಅನುಷ್ಠಾನಕ್ಕೆ ತರಲು ಸಾಧ್ಯವೆಂದು ಉಪನಿಷತ್ತುಗಳು ಸಾರುವುವು. ಈ ದೃಷ್ಟಿಯಿಂದ ನೋಡಿದರೆ ಪುನರ್ಜನ್ಮ ಸಿದ್ಧಾಂತವು ಭಾರತೀಯ ಸಂಸ್ಕೃತಿಯಲ್ಲಿ ಅತಿ ಮುಖ್ಯವಾದ ಅಂಶವಲ್ಲ ವೆಂದು ಸ್ಪಷ್ಟವಾಗುವುದು.

ಸಾಮಾಜಿಕ ಅಸಮಾನತೆಗಳು : ಪ್ರತಿಯೊಂದು ಸಮಾಜದಲ್ಲಿಯೂ ಅಸಮಾನತೆಯು ಅನೇಕ ಕಾರಣಗಳಿಂದ ಉಂಟಾಗುವುದು. ಮನುಷ್ಯರಲ್ಲಿ ಬುದ್ಧಿಶಕ್ತಿಯ ವ್ಯತ್ಯಾಸಗಳೂ, ಸಿರಿಸಂಪತ್ತುಗಳ ವ್ಯತ್ಯಾಸಗಳೂ ಮುಂತಾದುವುಗಳು ಇರುವುವು. ಭಾರತೀಯ ಸಾಮಾಜಿಕ ದೃಷ್ಟಿಗಳ ವೈಶಿಷ್ಟ್ಯವೆಂದರೆ ಈ ವ್ಯತ್ಯಾಸಗಳು ಆಯಾ ಮನೆತನಕ್ಕೂ, ಆಯಾ ಗುಂಪಿಗೂ ಶಾಶ್ವತವಾದುದೆಂಬ ನಂಬಿಕೆ. ಇವಕ್ಕೆ ಕಾರಣ ಕರ್ಮ ಸಿದ್ಧಾಂತ ಮತ್ತು ಪುನರ್ಜನ್ಮ ಸಿದ್ಧಾಂತ. ಒಂದು ಮನೆತನಕ್ಕೂ ಇನ್ನೊಂದು ಮನೆತನಕ್ಕೂ ಇರುವ ವ್ಯತ್ಯಾಸಗಳಿಗೆ ಕಾರಣವನ್ನು ಆ ಮನೆತನಗಳಲ್ಲಿ ಸೇರಿರುವ ವ್ಯಕ್ತಿಗಳ ಹಿಂದಿನ ಜನ್ಮದಲ್ಲಿಮಾಡಿದ ಕರ್ಮಫಲವೆಂದು ಭಾವಿಸುವರು. ಈಗ ಒಬ್ಬ ವ್ಯಕ್ತಿಯು ಅನುಕೂಲದಿಂದ ಬಾಳಿದರೆ ಅದಕ್ಕೆ ಆತನು ಹಿಂದಿನ ಜನ್ಮದಲ್ಲಿ ಮಾಡಿದ ಸುಕೃತವೇ ಕಾರಣವೆಂದು ನಂಬಿಕೆಯಿರುವುದು. ಈ ನಂಬಿಕೆಯಲ್ಲಿ ಎರಡು ಅಂಶಗಳನ್ನು ಪ್ರತ್ಯೇಕಿಸಬಹುದು. ಮೊದಲನೆಯ ಅಂಶವೆಂದರೆ ತನ್ನ ಇಂದಿನ ಸ್ಥಿತಿಗೆ ತಾನೇ ಕಾರಣ. ಎರಡನೆಯದು ಸಮಾಜದಲ್ಲಿ ನಾವು ಕಾಣುವ ವ್ಯತ್ಯಾಸಗಳು ಶಾಶ್ವತ. ಇವುಗಳನ್ನು ಬದಲಾಯಿಸುವುದು ಅಸಾಧ್ಯ.

ತನ್ನ ಸ್ಥಿತಿಗೆ ತಾನೇ ಕಾರಣ ಎಂಬ ನಂಬಿಕೆಯು ಬಹಳ ಉನ್ನತ ನಂಬಿಕೆ. ತನ್ನ ಸ್ಥಿತಿಗೆ ತಾನೇ ಕಾರಣವಾದರೆ ಇತರರನ್ನು ದೂಷಿಸುವಹಾಗಿಲ್ಲ. ಅಂದರೆ ಸಾಮಾಜಿಕ ರಚನೆ ತನ್ನ ದುಃಸ್ಥಿತಿಗೆ ತಾನೇ ಕಾರಣವಲ್ಲ ಎಂಬುದಾಗಿ ಹೇಳಿದ ಹಾಗಾಯಿತು. ಆದುದರಿಂದ ತನ್ನ ಕಷ್ಟಗಳನ್ನು ಸ್ಥೈರಣೆಯಿಂದ ತಾನು ಅನುಭವಿಸಬೇಕು. ಈ ದೃಷ್ಟಿಯು ತನ್ನ ಸ್ಥಿತಿಗೆ ವಿಧಿಯೇ ಕಾರಣವೆಂಬ ಭಾವನೆ ಮೂಡುವಂತೆ ಮಾಡುವುದು. ಆದುದರಿಂದ ನಿರಾಶೆಯು ಉತ್ಪನ್ನವಾಗುವುದು. ತಾನು ಏನೇ ಮಾಡಲಿ ಎಷ್ಟೇ ಮಾಡಲಿ ತನ್ನ ದುಃಸ್ಥಿತಿಯಿಂದ ಪಾರಾಗಲು ಅಸಾಧ್ಯವೆಂಬ ದೃಢ ನಂಬಿಕೆ ಉಂಟಾಗುವುದು. ಈ ದೃಷ್ಟಿಯು ತನ್ನ ಕಷ್ಟಗಳನ್ನು ಸಹಿಸುವ ಮನೋಸ್ಥೈರ್ಯವನ್ನು ಕೊಡುವುದು. ಆದರೆ ಆ ಸ್ಥಿತಿಯಿಂದ ಸ್ವಪ್ರಯತ್ನದಿಂದ ಪಾರಾಗಲು ಸಾಧ್ಯವೆಂಬ ಭರವಸೆಯನ್ನು ಕೊಡುವುದಿಲ್ಲ. ಏಕೆಂದರೆ ತಾನು ಈಗ ಅನುಭವಿಸುತ್ತಿರುವ ದುಃಸ್ಥಿತಿಗೆ ತನ್ನ ಹಿಂದಿನ ಜನ್ಮದಲ್ಲಿ ಮಾಡಿದ ದುಷ್ಕೃತ್ಯಗಳೇ ಕಾರಣವೆಂಬ ನಂಬಿಕೆಯುಂಟಾದರೆ ಆ ಮನುಷ್ಯನಲ್ಲಿ ಅಸಹಾಯಕತೆ, ದುರ್ಬಲತೆ ಮುಂತಾದುವು ಉಂಟಾಗುವುವು.

ಮುಖ್ಯವಾಗಿ ಜಾತಿಗೂ ಪುನರ್ಜನ್ಮ ಸಿದ್ಧಾಂತಕ್ಕೂ ಸಂಬಂಧವನ್ನು ಕಲ್ಪಿಸಿಕೊಂಡಿರುವುದರಿಂದ ಸಮಾಜದಲ್ಲಿರುವ ಅಸಮಾನತೆಗಳು ಶಾಶ್ವತವೆಂಬ ನಂಬಿಕೆಯುಂಟಾಗುವುದು. ತನ್ನ ಹುಟ್ಟನ್ನು ಬದಲಾಯಿಸುವ ಹಾಗಿಲ್ಲ. ಇದು ಸತ್ಯ. ಆದರೆ ತನ್ನ ಸ್ಥಿತಿಯನ್ನು ಬದಲಾಯಿಸುವುದು ತನ್ನ ಕೈಯಲ್ಲಿದೆ. ಈ ನಂಬಿಕೆಯು ಅದರಿಂದುಂಟಾಗುವ ಪ್ರಯತ್ನವು ವ್ಯಕ್ತಿ ವಿಕಾಸಕ್ಕೂ, ಸಾಮಾಜಿಕ ಅಭ್ಯುದಯಕ್ಕೂ ಮೂಲ ಕಾರಣವಾಗುವುದು. ತಾನು ಯಾವ ಮನೆತನದಲ್ಲಿ ಜನಿಸಿದರೂ ಸ್ವಪ್ರಯತ್ನದಿಂದ ತಾನು ಸಮಾಜದಲ್ಲಿ ಉತ್ತಮಸ್ಥಾನವನ್ನು ಪಡೆಯಬಹುದೆಂಬ ದೃಢ ನಂಬಿಕೆಯು ಮನುಷ್ಯನಲ್ಲಿರಬೇಕು.

ಭಾರತ ದೇಶದ ಸಂವಿಧಾನವು ಭಾರತೀಯರ ಸಮಾನತ್ವವನ್ನು ಮೂಲಭೂತ ಹಕ್ಕೆಂಬುದಾಗಿ ಒಪ್ಪಿಕೊಂಡಿದೆ. ಆದ್ದರಿಂದ ಪ್ರತಿಯೊಬ್ಬ ಭಾರತೀಯನಿಗೆ, ಸ್ತ್ರೀಯಾಗಲೀ ಪುರುಷನಾಗಲೀ, ಯಾವ ಜಾತಿಯಲ್ಲಿ ಜನಿಸಿದರೂ ಸಹ, ಯಾವ ಮತ ಧರ್ಮವನ್ನವಲಂಬಿಸಿದರೂ ಸಹ, ಸಮಾನ ಹಕ್ಕು ಅವಕಾಶಗಳು ಮತ್ತು ಸ್ಥಾನಮಾನಗಳಿರುವುವೆಂದು ಘೋಷಿಸಲಾಗಿದೆ. ಆದರೆ ಈ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ತಾನು ಇತರರಿಗೆ ಸಮಾನವೆಂಬ ಮನೋಭಾವವು ದೃಢವಾಗಿರಬೇಕು. ಈ ನಂಬಿಕೆಯನ್ನು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಉಂಟುಮಾಡುವುದೇ ಇಂದಿನ ಭಾರತೀಯ ಸಮಾಜದ ಮುಖ್ಯ ಕರ್ತವ್ಯ. ಇದನ್ನು ಸಾಧಿಸಲು ಇಂದಿನ ಸಮಾಜದಲ್ಲಿರುವ ಅನಕ್ಷರಸ್ಥತೆಯು, ಗ್ರಾಮ ಪ್ರದೇಶಗಳಲ್ಲಿ ಅತಿ ಹೆಚ್ಚಾಗಿರುವ ಜನಸಂಖ್ಯೆಯು ಪಟ್ಟಣಗಳ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನಗಳಲ್ಲಿಯೂ ಅನೇಕ ತೊಡಕುಗಳನ್ನು ಉಂಟುಮಾಡುವುವು. ಈ ವಿಷಮ ಸ್ಥಿತಿಯಿಂದ ಪಾರಾಗಲು ಸರ್ವಪ್ರಯತ್ನಗಳನ್ನು ಮಾಡಬೇಕಾದುದು ತುರ್ತಿನ ಹಾಗೂ ಅವಶ್ಯಕವಾದ ಕರ್ತವ್ಯ. ಈ ನಂಬಿಕೆಯು ಉಂಟಾಗದಿದ್ದರೆ ಆ ವ್ಯಕ್ತಿಯಲ್ಲಿ ಏಳಿಗೆಯ ಪ್ರಯತ್ನವಿರುವುದಿಲ್ಲ.

ಪ್ರತಿಯೊಂದು ಕುಟುಂಬದಲ್ಲಿ ಈ ಪ್ರಗತಿಶೀಲ ಮನೋಭಾವವು ಇಲ್ಲದಿದ್ದರೆ ದೇಶದ ಪ್ರಗತಿಯು ಕೇವಲ ಪಂಚವಾರ್ಷಿಕ ಯೋಜನೆಗಳಿಂದ ಸಾಧ್ಯವಾಗುವುದಿಲ್ಲ. ದೇಶದ ಪ್ರಗತಿಗೆ ರಾಷ್ಟ್ರೀಯ ಯೋಜನೆಯು ಬೇಕು. ಇನ್ನೂ ಮುಖ್ಯವಾಗಿ ಪ್ರತಿಯೊಬ್ಬ ಪ್ರಜೆಯಲ್ಲಿಯೂ ಉತ್ಕಾಂಕ್ಷೆಯೂ ಮತ್ತು ಪ್ರಯತ್ನವೂ ಬೇಕು. ಪುನರ್ಜನ್ಮ ಸಿದ್ಧಾಂತದ ಮೂಲತತ್ವ ಏನೇ ಆಗಿರಲಿ, ಕಾರ್ಯತಃ ಈ ನಂಬಿಕೆಯು ದೇಶದ ಅಭ್ಯುದಯಕ್ಕೆ ಮಹತ್ತರವಾದ ಅಡಚಣೆಯನ್ನು ತಂದೊಡ್ಡಿರುವುದೆಂಬುದು ಭಾರತದೇಶದ ಈ ಮೂರು ದಶಕಗಳ ಅನುಭವವು ಸತ್ಯವೆಂದು ತೋರಿಸುವುದು. ರಾಷ್ಟ್ರೀಯ ಯೋಜನೆಗಳ ಫಲಗಳು ಸಾಮಾನ್ಯ ಭಾರತೀಯರ, ಅಂದರೆ ಸುಮಾರು

40-45 ಕೋಟಿ ಜನಗಳು ಜೀವನ ಮಟ್ಟದಲ್ಲಿ ಯಾವ ವಿಧವಾದ ಪರಿವರ್ತನೆಯನ್ನೂ ಮಾಡಿಲ್ಲವೆಂದು ಅಂಕಿ ಅಂಶಗಳು ಸಿರ್ವಿವಾದವೆಂಬುದಾಗಿ ತೋರಿಸುವುವು.

ಹಾಗಾದರೆ ಕರ್ಮಸಿದ್ಧಾಂತದ ಸತ್ಯಾಂಶವೇನು ಎಂಬುವ ಸಂಶಯವುಂಟಾಗುವುದು. ಮೇಲೆ ವಿವರಿಸಿರುವಹಾಗೆ ಪ್ರಾಚೀನ ಭಾರತೀಯರು ಕರ್ಮಸಿದ್ಧಾಂತದ ಮೂಲಕ ಪ್ರಕೃತಿಯಲ್ಲಿ ಇರುವ ಕಾರ್ಯ ಕಾರಣ ಸಂಬಂಧವನ್ನು ನೈತಿಕ ವಿಷಯಗಳಿಗೂ ಸಹ ಅನ್ವಯಿಸುವುದೆಂಬುದಾಗಿ ಒಂದು ಮಹತ್ತರ ಸತ್ಯವನ್ನು ಪ್ರಕಟಿಸಿದರು. ತಾನು ಮಾಡಿದುದಕ್ಕೆ ಉಂಟಾದ ಫಲವನ್ನು ತಾನು ಅನುಭವಿಸಬೇಕು. ಇದರಿಂದ ಪಾರಾಗಲು ಯಾರಿಗೂ ಸಾಧ್ಯವಿಲ್ಲ. ಇದು ಕರ್ಮಸಿದ್ಧಾಂತದ ತಿರುಳು. ಆದರೆ ಒಬ್ಬ ವ್ಯಕ್ತಿಯು ಕೀಳು ಜಾತಿಯಲ್ಲಿ, ಅಸಂಸ್ಕೃತ ಮನೆತನದಲ್ಲಿ, ತೀವ್ರಬಡತನದಲ್ಲಿ, ರೋಗರುಜಿನಗಳಿಂದ ಅಥವಾ ಅಂಗವಿಕಲತೆಗಳಿಂದ ಕೂಡಿರುವುದು ಯಾವ ಕಾರಣಗಳಿಂದ ? ಈ ಸ್ಥಿತಿಗಳಿಗೆ ಇದರಿಂದ ಸಮಾಜದ ಅಭ್ಯುದಯವು ಅಸಾಧ್ಯವಾಗುವುದು ಪ್ರಾಚೀನ ಭಾರತೀಯರು ಮೇಲೆ ವಿವರಿಸಿರುವ ಕಾರ್ಯಕಾರಣ ಸಂಬಂಧದ ಆಧಾರದ ಮೇಲೆ ಆ ವ್ಯಕ್ತಿಯೇ ಕಾರಣವೆಂದು ತೀರ್ಮಾನಿಸಿದರು. ಆದರೆ ಈ ಕಾರಣಗಳು ಅತನು ಯಾವ ಪರಿಸ್ಥಿತಿಗಳಲ್ಲಿ ಹುಟ್ಟಿದನೊ ಆ ಪರಿಸ್ಥಿತಿಗಳಿಗೆ ಸಹ ಆತನೇ ಕಾರಣವಿರಬೇಕೆಂಬುದಾಗಿ ಉಹಿಸಿದರು. ಭಾರತೀಯ ತತ್ವಶಾಸ್ತ್ರದ ಪ್ರಕಾರ ಆತ್ಮವು ನಿತ್ಯ. ಆದುದರಿಂದ ಜೀವಿಯು ಅನೇಕ ಜನ್ಮಗಳನ್ನು ತಾಳುವನೆಂದೂ ಈ ಜನ್ಮಗಳ ಮೂಲಕ ಪಕ್ವತೆಯನ್ನು ಪಡೆದು ತಾನು ಅನಿತ್ಯ ಜೀವಿಯಲ್ಲವೆಂದು ನಿಜವಾಗಿಯೂ ತಾನು ನಿತ್ಯವಾದ ಆತ್ಮವೆಂದೂ ತಿಳಿದುಕೊಂಡು ಜನ್ಮಮೃತ್ಯುಗಳಿಂದ ಪಾರಾಗುವನೆಂದು ಊಹಿಸಿದರು. ಈ ಊಹೆಯು ಆಧಾರದಮೇಲೆ ಒಬ್ಬ ವ್ಯಕ್ತಿಯು ಹುಟ್ಟಿದ ಪರಿಸ್ಥಿತಿಗಳಿಗೆ ಕಾರಣ ಆತನು ತನ್ನ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳೇ ಎಂಬುವ ನಿರ್ಣಯಕ್ಕೆ ಬಂದರು. ಆದರೆ ಮೇಲೆ ವಿವರಿಸಿರುವ ಹಾಗೆ ಈ ಊಹೆಯ ಪ್ರಾಮಾಣಿಕತೆಯನ್ನು ನಿರ್ಧರಿಸುವುದು ಅಸಾಧ್ಯ. ಹುಟ್ಟುವುದು ಒಂದು ದೈವಿಕ ಕ್ರಿಯೆ. ಆ ವ್ಯಕ್ತಿಯ ಪರಿಸ್ಥಿತಿಗಳು ಆತನು ಯಾವ ಕುಟುಂಬದಲ್ಲಿ ಹುಟ್ಟುವನೋ ಅದನ್ನು ಅನ್ವಯಿಸುವುದು. ವ್ಯವಸಾಯದ ಆಧಾರದಮೇಲೆ ನಿಂತಿರುವ ಸಮಾಜಗಳಲ್ಲಿ ಸರ್ವರೀತಿಯಲ್ಲೂ ಅತ್ಯಂತ ವ್ಯತ್ಯಾಸಗಳಿರುವುದು ಸಹಜ. ಈ ವ್ಯತ್ಯಾಸಗಳು ಆ ವ್ಯಕ್ತಿ ಹುಟ್ಟಿದ ಮನೆತನದ ಪರಿಸ್ಥಿತಿಗೆ ಕಾರಣಭೂತ ಆದುದರಿಂದಲೇ ಕೈಗಾರಿಕೆಗಳ ಆಧಾರದಮೇಲೆ ನಿಂತಿರುವ ಆಧುನಿಕ ಸಮಾಜಗಳು ಈ ಅಂತರಗಳನ್ನು ಕಡಿಮೆ ಮಾಡಲು ಕಾರ್ಯಕ್ರಮಗಳನ್ನೂ ಕೈಗೊಳ್ಳುವುವು. ಸಮಾಜಕಲ್ಯಾಣದ ಯೋಜನೆಗಳು ಆಧುನಿಕ ಸಮಾಜಗಳ ಮುಖ್ಯಕೆಲಸವಾಗಿ ನಿಂತಿವೆ. ಈ ದೃಷ್ಟಿಯಿಂದ ನೋಡಿದರೆ ಒಬ್ಬ ವ್ಯಕ್ತಿಯ ಪರಿಸ್ಥಿತಿಯೂ ಸಾಮಾಜಿಕ ಮತ್ತು ದೈವಿಕ ಕಾರಣಗಳ ಆಧಾರದ ಮೇಲಿರುವುದೆಂದು ವಿಶದವಾಗುವುದು. ಆಧುನಿಕ ಸಮಾಜದಲ್ಲಿ ಕೈಗಾರಿಕಾ

ಉದ್ಯಮಗಳು ಮತ್ತು ಸಾಮಾಜಿಕ ವ್ಯವಸ್ಥೆಯೂ ಸರಿಯಾಗಿದ್ದರೆ ಯಾವ ಕುಟುಂಬವೇ ಆಗಲಿ ದುಃಸ್ಥಿತಿಯಲ್ಲಿ ನರಳಬೇಕಾಗಿಲ್ಲ. ಒಬ್ಬ ವ್ಯಕ್ತಿಯೂ ದುಃಸ್ಥಿತಿಗೆ ಗುರಿಯಾದರೆ ಅದು ಆತನು ತನಗಿರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳದೆ ಸ್ವಪ್ರೇರಣೆಯಲ್ಲಿ ಕುಂದು ಕೊರತೆಗಳ ಮೂಲಕ ತನ್ನ ವಿಕಾಸದಲ್ಲಿ ಅಶ್ರದ್ಧೆಯನ್ನು ತೋರಿಸಿ ಕಷ್ಟಕ್ಕೆ ಗುರಿಯಾಗುವನು. ಈ ದೃಷ್ಟಿಯಿಂದ ನೋಡಿದರೆ ಕರ್ಮ ಸಿದ್ಧಾಂತವು ತಥ್ಯಾಂಶದಿಂದ ಕೂಡಿರುವುದು. ತನ್ನ ಕಷ್ಟಗಳಿಗೆ ವ್ಯಕ್ತಿಯು ತಾನೇ ಕಾರಣವೆಂದು ನಂಬಿ ತನ್ನಸ್ಥಿತಿಯನ್ನು ಉತ್ತಮಗೊಳಿಸಲು ಪ್ರಯತ್ನಿಸಲು ಸಾಧ್ಯ. ಆದರೆ ತಾನು ಯಾವ ಮನೆತನದಲ್ಲಿ ಹುಟ್ಟಿದನೋ ಅದಕ್ಕೆ ಮಾತ್ರ ತಾನು ಕಾರಣವಲ್ಲ ಎಂಬುವ ನಂಬಿಕೆಯೂ ಸತ್ಯಾಂಶದಿಂದ ಕೂಡಿರುವುದು. ಆದರೆ ಈ ದೃಷ್ಟಿಯು ಒಬ್ಬ ವ್ಯಕ್ತಿಯ ಸ್ಥಿತಿಗತಿಗಳನ್ನು ಸಂಪೂರ್ಣವಾಗಿ ಸ್ಪಷ್ಟೀಕರಿಸುವುದೆಂದು ಹೇಳಲಾಗುವುದಿಲ್ಲ. ಜೀವಮಾನದಲ್ಲಿ ಅನೇಕ ಘಟನೆಗಳು ನಿರ್ದಿಷ್ಟವಲ್ಲ. ಇದನ್ನು ಅದೃಷ್ಟವೆಂದು ಕರೆಯಬಹುದೇವಿನಾ ದೃಷ್ಟಕಾರಣವನ್ನು ಹುಡುಕುವುದು ನಿರರ್ಥಕ. ಒಬ್ಬ ವ್ಯಕ್ತಿಯು ಕಷ್ಟಕ್ಕೆ ಗುರಿಯಾದರೆ ಅದಕ್ಕೆ ಮೂರು ಕಾರಣಗಳು ಇರುವುವೆಂಬುದಾಗಿ ಹೇಳಬಹುದು. ಮೊದಲನೆಯದಾಗಿ ಆತನು ಜೀವಿತದಲ್ಲಿ ಮಾಡಿದ ದುಷ್ಕೃತ್ಯಗಳು ಅಂದರೆ ಧ್ಯೇಯಗಳನ್ನು ಮರೆತು ತನ್ನ ಆಸೆ ಆಕಾಂಕ್ಷೆಗಳನ್ನು ಯಾವ ವಿಧದಲ್ಲೀ ಆದರೂ ಇತರರಿಗೆ ಎಷ್ಟು ಹಾನಿಯುಂಟಾದರೂ ತನಗೆ ಇದರಿಂದ ಮುಂದೆ ಎಷ್ಟು ನಷ್ಟವಾದರೂ ತನ್ನ ಆಸೆಗಳನ್ನು ಪೂರೈಸಿಕೊಳ್ಳುವುದು.

ಎರಡನೆಯದಾಗಿ ಸಾಮಾಜಿಕ ಮತ್ತು ಪ್ರಾಕೃತಿಕ ದುರ್ಘಟನೆಗಳಿಂದ ಉಂಟಾಗುವ ಕಾರಣಗಳು. ತಾನು ತನ್ನ ಧ್ಯೇಯಗಳನ್ನು ಸಫಲಗೊಳಿಸಲು ಪ್ರಯತ್ನ ಮಾಡುವಾಗ ಸಾಮಾಜಿಕ ಕಟ್ಟು ನಿಟ್ಟುಗಳು ಮತ್ತು ಕಾನೂನಿನ ನಿರ್ಬಂಧಗಳು ಆತನಿಗೆ ಕಷ್ಟವನ್ನುಂಟುಮಾಡುವುದು. ಹಾಗೆಯೇ ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ಪ್ರಾಕೃತಿಕ ಘಟನೆಗಳು ಕಾರಣವಾಗಬಹುದು. ಈ ಎರಡು ಕಾರಣಗಳು ನಿರ್ಧರಿಸಲಾಗುವ ಕಾರಣಗಳು. ಆದರೆ ಇವುಗಳಲ್ಲಿ ಪ್ರಥಮ ಕಾರಣವು ಅಂದರೆ ವ್ಯಕ್ತಿಯ ವರ್ತನೆಯ ಕಾರಣವು ನಿಂದಾರ್ಹ. ಸಾಮಾಜಿಕ ಮತ್ತು ಪ್ರಾಕೃತಿಕ ಘಟನೆಗಳಿಂದ ಉಂಟಾದ ಕಾರಣಗಳಿಗೆ ಆ ವ್ಯಕ್ತಿಯನ್ನು ನಿಂದಿಸುವುದು ಸಮಂಜಸವಲ್ಲ. ಮೂರನೆಯದಾಗಿ ವ್ಯಕ್ತಿಯು ಎಷ್ಟೇ ನೀತಿ ನಿಯಮಗಳಿಂದ ಬಾಳಿದರೂ, ಸಾಮಾಜಿಕ ಸ್ಥಿತಿಗತಿಗಳು ಅನುಕೂಲವಾಗಿದ್ದರೂ ಪ್ರಕೃತಿಯ ಘಟನೆಗಳು ಸಹ ಅನುಕೂಲವಾಗಿದ್ದರೂ ಆ ವ್ಯಕ್ತಿಯು ಮಾಡುವ ಪ್ರಯತ್ನಗಳು ಸಫಲವನ್ನು ಹೊಂದದೆ ಇರಬಹುದು. ಆತನಿಗೆ ಅನಿರೀಕ್ಷಿತವಾದ ದೈಹಿಕ, ಮಾನಸಿಕ, ಆರ್ಥಿಕ ಮುಂತಾದ ಕಷ್ಟಗಳುಂಟಾಗಬಹುದು. ಈ ಅನಿರೀಕ್ಷಿತ ಕಾರಣಗಳಿಗೆ "ಅದೃಷ್ಟ" ಅಂದರೆ ನಿರ್ಣಯಿಸಲಾಗದ ಆಕಸ್ಮಿಕ ಕಾರಣಗಳಿರಬಹುದು. ಈ ಅದೃಷ್ಟ ಅಥವಾ

ಆಕಸ್ಮಿಕ ಪರಿಸ್ಥಿತಿಯಿಂದ ಉಂಟಾಗುವ ಪರಿಣಾಮ ಆ ವ್ಯಕ್ತಿಗೆ ಅನುಕೂಲವಾಗಿರಬಹುದು ಅಥವಾ ಪ್ರತಿಕೂಲವಾಗಿರಬಹುದು. ಅನುಕೂಲವಾಗಿದ್ದರೆ ಸಂತೋಷ, ಹೆಮ್ಮೆ, ಪ್ರತಿಕೂಲವಾಗಿದ್ದರೆ ಅದನ್ನು ದುರದೃಷ್ಟವೆಂದು ನೋಡುವರು. ಆದರೆ ಈ ಮೂರನೆಯ ಗುಂಪಿಗೆ ಕಾರಣಗಳು ಅನಿರೀಕ್ಷಿತವಾದ ಕಾರಣಗಳು. ಆದುದರಿಂದ ಇವುಗಳ ಮೇಲೆ ಹತೋಟಿಯನ್ನು ಹೊಂದಲು ಅಸಾಧ್ಯ. ಕೆಲವರು ಈ ಪರಿಸ್ಥಿತಿಯನ್ನು ಒಪ್ಪಿಕೊಂಡು ಇದರಿಂದುಂಟಾದ ಸುಖ ಅಥವಾ ದುಃಖವನ್ನು ಅನುಭವಿಸುವರು. ಆದರೆ ಕರ್ಮಸಿದ್ಧಾಂತದಲ್ಲೂ ಪುನರ್ಜನ್ಮ ಸಿದ್ಧಾಂತದಲ್ಲೂ ನಂಬಿಕೆಯನ್ನಿಟ್ಟಿರುವವರು ಈ ಅನಿರೀಕ್ಷಿತ ಘಟನೆಗಳಿಗೂ ಸಹ ನಿರ್ದಿಷ್ಟ ಕಾರಣಗಳಿವೆಯೆಂದು, ಈ ಕಾರಣಗಳು ಹಿಂದಿನ ಜನ್ಮದ ಸುಕೃತ, ದುಷ್ಕೃತಗಳ ಪರಿಣಾಮವೆಂದು ಭಾವಿಸುವರು. ಮತ್ತೊಂದು ಗುಂಪಿಗೆ ಸೇರಿದವರು ಈ ಘಟನೆಗೆ ಕಾರಣ ಗ್ರಹಚಾರವೆಂದೂ ಗ್ರಹಗಳಿಂದುಂಟಾದುದೆಂದು ಜೋತಿಷ್ಯ ಶಾಸ್ತ್ರದಲ್ಲಿ ನಂಬಿಕೆಯಿರುವವರು ಈ ಅನಿರೀಕ್ಷಿತ ಕಾರಣಗಳಿಂದ ದುಃಖವುಂಟಾದರೆ ಆ ಗ್ರಹಗಳಿಗೆ ಶಾಂತಿಮಾಡಲು ಪ್ರಯತ್ನಿಸುವರು.

ವಿಚಾರಪರರು ಕರ್ಮ ಸಿದ್ಧಾಂತವು ಮಾನವನ ಪ್ರಯತ್ನದಲ್ಲಿ ಇರುವ ಗುಣದೋಷಗಳಿಂದಲೂ ಸಾಮಾಜಿಕ ಮತ್ತು ಪ್ರಾಕೃತಿಕ ಘಟನೆಗಳಿಂದುಂಟಾದ ಕಾರಣಗಳಿಂದಲೂ ಅನಿರೀಕ್ಷಿತ ಘಟನೆಗಳ ಸಂಯೋಗದಿಂದುಂಟಾಗುವ ಪರಿಣಾಮಗಳಿಗೆ ಸೀಮಿತಗೊಳಿಸುವರು. ಆದರೆ ಕೇವಲ ಇಂತಹ ವಿಚಾರ ದೃಷ್ಟಿಯಲ್ಲಿ ನಂಬಿಕೆಯಿಡದವರು ಕರ್ಮ ಸಿದ್ಧಾಂತವನ್ನು ವಿಸ್ತರಿಸಿ ಅದು ಹಿಂದಿನ ಜನ್ಮಕ್ಕೂ ಮುಂದಿನ ಜನ್ಮಕ್ಕೂ ಸಹ ಅನ್ವಯಿಸುವುದೆಂದೂ ನಂಬುವರು. ಇಂತಹ ಬೇರೆ ಜನ್ಮಗಳಲ್ಲಿರುವ ನಂಬಿಕೆಯನ್ನು ರುಜುವಾತು ಮಾಡಲು ಅಥವಾ ಅಪ್ರಮಾಣವೆಂದು ನಿರ್ಧರಿಸಲು ಅಸಾಧ್ಯ.

ಆದುದರಿಂದ ಕರ್ಮ ಸಿದ್ಧಾಂತವನ್ನೂ ವ್ಯಕ್ತಿಮಾಡುವ ಅಥವಾ ಮಾಡದೇ ಇರುವ ಕೆಲಸಗಳಿಗೂ, ಸಾಮಾಜಿಕ ಪರಿಸ್ಥಿತಿಗಳಿಗೂ, ಪಾಕೃತಿಕ ಘಟನೆಗಳಿಗೂ ಸೀಮಿತಗೊಳಿಸಬೇಕು. ಆಗ ಕಾರ್ಯಕಾರಣ ಸಂಬಂಧವನ್ನು ರುಜುವಾತು ಪಡಿಸಲು ಸಾಧ್ಯ.

ಈ ವಿಧವಾಗಿ ಸಾಮಾಜಿಕ ದೃಷ್ಟಿಯಿಂದಲೂ ವಿಚಾರ ದೃಷ್ಟಿಯಿಂದಲೂ ಒಂದು ಸಿದ್ಧಾಂತವನ್ನು ರುಜುವಾತು ಪಡಿಸುವ ದೃಷ್ಟಿಯಿಂದಲೂ ಪುನರ್ಜನ್ಮ ಸಿದ್ಧಾಂತವು ಕೇವಲ ನಂಬಿಕೆಯ ಆಧಾರದ ಮೇಲೆ ಇರುವುದೆಂದು ಈ ನಂಬಿಕೆಯ ಪ್ರಾಮಾಣಿಕತೆಯನ್ನು ಪ್ರತಿಪಾದಿಸುವುದು ಅಸಾಧ್ಯವೆಂದು ಅರಿಯಬೇಕು.

ಆದರೆ ಮೇಲೆ ನೋಡಿದ ಹಾಗೆ ಕರ್ಮ ಸಿದ್ಧಾಂತವು ಭಾರತೀಯ ಸಂಸ್ಕೃತಿಯ ಒಂದು ವೈಶಿಷ್ಟ್ಯ. ಈ ಮೂಲಕ ಕಾರ್ಯ ಕಾರಣ ಸಂಬಂಧವನ್ನು ಪ್ರಾಕೃತಿಕ ಘಟನೆಗಳಿಗೆ ಮಾತ್ರ ಅನ್ವಯಿಸದೆ ನೈತಿಕ ವಿಷಯಗಳಿಗೂ, ನಡವಳಿಕೆಯ ವಿಷಯಗಳಿಗೂ ಅನ್ವಯಿಸುವುದೆಂದು ವಿಸ್ತರಿಸಿದರು. ಆದರೆ ಆ ಕಾಲದಲ್ಲಿ ಕರ್ಮ ಸಿದ್ಧಾಂತಕ್ಕೂ ಪುನರ್ಜನ್ಮ ಸಿದ್ಧಾಂತಕ್ಕೂ ನಿಕಟ ಸಂಬಂಧವಿರುವುದೆಂದು ನಂಬಿದರು. ಇದರಿಂದಾಗಿ ಸಾಮಾಜಿಕ ವ್ಯವಸ್ಥೆಯು ಸ್ಥಿರವೆಂದು ನಿತ್ಯವೆಂದು ಇದನ್ನು ಬದಲಾಯಿಸಲು ಅಸಾಧ್ಯವೆಂದು ಕೀಳು ಜಾತಿಯ ಮನೆತನದಲ್ಲಿ ಹುಟ್ಟಿದ ವ್ಯಕ್ತಿಯು ಅದೇ ಮಟ್ಟದಲ್ಲಿರಬೇಕೆಂದು ತನ್ನ ಕುಲಕಸುಬನ್ನು ತ್ಯಜಿಸಿ ತನ್ನ ಶಕ್ತಿ ಸಾಮರ್ಥ್ಯದಿಂದ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆಯಲು ಪ್ರಯತ್ನಿಸುವ ವ್ಯಕ್ತಿಯು ಧರ್ಮ ವಿರುದ್ಧ ನಡತೆಯನ್ನು ಪ್ರದರ್ಶಿಸುವನೆಂದೂ ಅವನು ಶಿಕ್ಷಾರ್ಹನೆಂದೂ ಭಾವಿಸುತ್ತಿದ್ದರು. ಇದರಿಂದಾಗಿ ಕೋಟ್ಯಂತರ ಬುದ್ಧಿವಂತರು ಮತ್ತು ಸಮರ್ಥರು ಸಾವಿರಾರು ವರ್ಷದಿಂದ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಲು ಅವಕಾಶವಿಲ್ಲದೆ ಅನಕ್ಷರಸ್ಥರಾಗಿ ಅಕುಶಲ ಕೆಲಸಗಳನ್ನು ಮಾಡುತ್ತಾ ತಮ್ಮ ವ್ಯಕ್ತಿತ್ವದ ವಿಕಾಸಕ್ಕೆ ಸಾಧ್ಯವಿಲ್ಲದೆ ತಮ್ಮ ಜೀವನವನ್ನು ಕಳೆದರು ಮತ್ತು ಇಂದು ಕಳೆಯುತ್ತಿರುವರು. ಕೋಟ್ಯಂತರ ಜನ ಹೀಗೇ ಬಾಳಿದರೆ ದೇಶದ ಅಭ್ಯುದಯಕ್ಕೆ ಅವಕಾಶವೆಲ್ಲಿ ?

ಆದುದರಿಂದ ಪುನರ್ಜನ್ಮ ಸಿದ್ಧಾಂತವನ್ನು ರುಜುವಾತು ಪಡಿಸಲು ಅಸಾಧ್ಯವೆಂದು ಆ ಸಿದ್ಧಾಂತದಲ್ಲಿ ನಂಬಿಕೆಯನ್ನು ತಡೆ ಹಿಡಿಯುವುದು ಸೂಕ್ತ.

ಕರ್ಮ ಸಿದ್ಧಾಂತದ ವಿಷಯದಲ್ಲಿ ಅದನ್ನು ಹಿಂದಿನ ಜನ್ಮಕ್ಕೂ ಮುಂದಿನ ಜನ್ಮಕ್ಕೂ ವಿಸ್ತರಿಸದೇ ಈಗ ನಾವು ಏನು ಮಾಡುವೆವೋ ಅದರ ಪರಿಣಾಮವನ್ನನು ಭವಿಸಲೇಬೇಕು ಎಂಬುದು ನಿರ್ವಿವಾದ. ದುಷ್ಕೃತ್ಯಗಳನ್ನು ಯಾರಿಗೂ ತಿಳಿಯದಂತೆ ಮಾಡಿ, ಮನೆಯವರಿಂದಲೂ, ಸ್ನೇಹಿತರಿಂದಲೂ, ನೆರೆಹೊರೆಯವರಿಂದಲೂ ನಿಂದೆಯನ್ನು ಪಡೆಯದಿದ್ದರೂ, ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡು ತಪ್ಪಿಸಿಕೊಂಡರೂ ತನ್ನ ಮನಸ್ಸಿನಲ್ಲಿ ತಾನು ಮಾಡಿದ ಅಪರಾಧಕ್ಕೆ ನೋವನ್ನು ಸಹಿಸಬೇಕಾಗುವುದು. ಈ ನೋವೇ ಆ ಅಪರಾಧಕ್ಕೆ ಶಿಕ್ಷೆಯಾಗುವುದು. ಈ ವಿಧವಾದ ತನ್ನ ದುಷ್ಕೃತ್ಯಕ್ಕೆ ಪಶ್ಚಾತ್ತಾಪವನ್ನು ಹೊಂದಿದರೆ ಮುಂದೆ ದುಷ್ಕೃತ್ಯವನ್ನು ತ್ಯಜಿಸುವನು. ತ್ಯಜಿಸದೆ ಹೋದರೆ ಯಾರು ಯಾವಾಗ ತನ್ನ ತಪ್ಪನ್ನು ಕಂಡು ಹಿಡಿಯುವರೋ ಎಂಬ ಭೀತಿಗೆ ಒಳಗಾಗುವನು. ಈ ಭೀತಿಯಿಂದ ಕೂಡಿದ ವರ್ತನೆಯು ಅವನ ದುಷ್ಕೃತ್ಯವನ್ನು ಪತ್ತೆಮಾಡಲು ಅನುಕೂಲವಾಗುವುದು. ಆದುದರಿಂದ ಕರ್ಮ ಸಿದ್ಧಾಂತದ ಪ್ರಭಾವವನ್ನು ಈ ಜೀವಿತಕ್ಕೆ ಅನ್ವಯಿಸುವ ಹಾಗೆ ಸೀಮಿತಗೊಳಿಸಬೇಕು. ಹೀಗೆ ಮಾಡಿದರೆ ಒಬ್ಬ ವ್ಯಕ್ತಿಯು ಯಾವ

ಮಣಿತನದಲ್ಲಿ ಹುಟ್ಟಿದರೂ ತನ್ನ ಶಕ್ತಿ ಸಾಮರ್ಥ್ಯಗಳಲ್ಲಿ ವಿಶ್ವಾಸವನ್ನು ಪಡೆದು ತನ್ನ ಸ್ಥಿತಿಗತಿಗಳನ್ನು ಸ್ವಪ್ರಯತ್ನದಿಂದ ಉತ್ತಮಗೊಳಿಸಿಕೊಳ್ಳುವುದಕ್ಕೆ ಅವಕಾಶ ಉಂಟಾಗುವುದು. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಹೀಗೆ ಪ್ರಯತ್ನ ಪೂರ್ವಕ ಜೀವನವನ್ನು ನಡೆಸಿದರೆ ಆಗ ವ್ಯಕ್ತಿಯು ಅಭ್ಯುದಯವನ್ನು ಹೊಂದಲು ಸಾಧ್ಯವಾಗುವುದು. ಅಲ್ಲದೆ ದೇಶದ ಪ್ರಗತಿಯುಂಟಾಗುವುದು.

ಕೆತ್ತನೆ ಕೆಲಸ

ಎಚ್. ಎಚ್. ಗಂಗಾಧರಾಚಾರ್

ಈ ನೆಲದಲ್ಲಿ ಹುಟ್ಟಿಯೇ ಹುಟ್ಟುತ್ತೇನೆಂಬ
ಗ್ಯಾರಂಟಿಯೇನಿರಲಿಲ್ಲ.
ಯಾವುದೇ ಗಳಿಗೆಯ ಸೆಳೆತದುದ್ವೇಗಕ್ಕೆ
ಪ್ರಕೃತಿ-ಪುರುಷರ ಅನ್ಯೋನ್ಯ ಒಡನಾಟಕ್ಕೆ
ಹೆಪ್ಪುಗಟ್ಟಿ, ಹೊರಬಿದ್ದ ಜೀವಕಣಗಳ ಮೊತ್ತವಷ್ಟೆ!
ನೀರಿನಲ್ಲಿದ್ದ ಗಾಳಿಯಗುಳ್ಳೆ
ಒಡೆದು ಹೋಗುವವರೆಗೆ ಅನಿವಾರ್ಯ ತೇಲುವ ಹಾಗೆ
ಹುಟ್ಟಿದ ಮರುಕ್ಷಣದಿಂದಲೇ ಏರಿಳಿಯತೊಡಗಿತು-ಗಾಳಿಚೀಲ.
ಹುಟ್ಟು ದಡ ಮುಟ್ಟುವುದಕ್ಕೆ ಮೊದಲು
ದೇಹದಂಗಾಂಗಗಳಿಗೆ ಹೊಸರಕ್ತ ಹಾಯಿಸುವುದಕ್ಕೆ,
ನಾಡಿ ಮಿಡಿಸುವುದಕ್ಕೆ
ತುತ್ತಿನ ಚೀಲಕ್ಕೆ ಆಗಾಗ್ಗೆ ಒಂದಿಷ್ಟು ಹಿಟ್ಟು,
ಚಿತ್ತಲಿಗೆ ಮುತ್ತಿಕೊಳ್ಳುವುದಕ್ಕೊಂದು ಬಟ್ಟೆ,
ವಂಶದ ಬಳ್ಳಿ ಹಬ್ಬಿಸುವುದಕ್ಕೊಂದು ಸಂತಾನ...
...ಹೀಗೆ ಬೆಳೆಯುವ 'ಬೇಕು'ಗಳ ಪಟ್ಟಿ
ಬದುಕಿನ ವಿಗ್ರಹ ಕಡೆಯುತೊಡಗಿರಬಹುದೆ?
ಪೀಠದಡಿಯಲ್ಲಿ ಕಾಲದ ಲೆಕ್ಕ ಹಾಕುತ್ತಿರುವ ಟೈಂಬಾಂಬು
ಎಂದೋ ಒಂದು ದಿನ ಆಸ್ಫೋಟಿಸಿದಾಗ
ಈ ಕೆತ್ತನೆ ಕೆಲಸಕ್ಕೆ ಪೂರ್ಣವಿರಾಮ ದೊರಕಬಹುದೆ?

ತುಕ್ಕು ಮತ್ತು ಅದರ ನಿವಾರಣೆ

ಎಸ್. ವೆಂಕಟೇಶಮೂರ್ತಿ

ಲೋಹಗಳ ಮೃತ್ಯು ತುಕ್ಕು. ತುಕ್ಕನ್ನು ಪ್ರತಿಬಂಧಿಸುವುದರಿಂದ ಲೋಹಗಳ ಆಯುರ್ಮಾನವನ್ನು ಹೆಚ್ಚಿಸಬಹುದು. ಬಹಳ ಲೋಹಗಳು ತುಕ್ಕಿನಿಂದ ನಶಿಸುತ್ತವೆ. ಲೋಹಗಳನ್ನು ಮನುಷ್ಯ ರಕ್ಷಿಸದಿದ್ದಲ್ಲಿ ಕೇವಲ ಕೆಲವೇ ವರ್ಷಗಳಲ್ಲಿ ನಮ್ಮ ಲೋಹೋತ್ಪನ್ನಗಳೆಲ್ಲ ತುಕ್ಕಿನಿಂದ ಹಾಳಾಗುತ್ತವೆ. ಆದರೆ ಮನುಷ್ಯ ಲೋಹಗಳನ್ನು ರಕ್ಷಿಸುತ್ತಾನೆ. ಹಲವು ತೆರನ ರಕ್ಷಕ ಕವಚಗಳನ್ನು ಲೋಹಗಳಿಗೆ ತೊಡಿಸುತ್ತಾನೆ. ಇಷ್ಟಾದರೂ, ತುಕ್ಕು ಹಿಡಿಯುವುದರಿಂದ ಆಗುವ ನಷ್ಟಗಳಿಗೇನೂ ಕಡಿಮೆಯಿಲ್ಲ, ತುಕ್ಕು ಹಿಡಿಯಲು ಕಾರಣಗಳನ್ನು ಕಂಡುಹಿಡಿದು ಅದನ್ನು ಸಂಪೂರ್ಣವಾಗಿ ನಿರೋಧಿಸಲು ತೀವ್ರತರ ಸಂಶೋಧನೆಗಳು ನಡೆಯುತ್ತಿವೆ.

1890 ರಿಂದ 1923 ರ ಅವಧಿಯಲ್ಲಿ 1760 ಮಿಲಿಯನ್ ಟನ್ನುಗಳಷ್ಟು ಉಕ್ಕು ಮತ್ತು ಕಬ್ಬಿಣ ಉತ್ಪತ್ತಿಯಾಯಿತು. ಆದರೆ ಇದೇ ಅವಧಿಯಲ್ಲಿಯೇ 718 ಮಿಲಿಯನ್ ಟನ್ನುಗಳಷ್ಟು ಉಕ್ಕಿನ ಉತ್ಪನ್ನ ಆಕ್ರಮಣಕ್ಕೊಳಗಾಗಿ ನಾಶವಾಯಿತು. ಇತ್ತೀಚೆಗೆ ಇಷ್ಟೊಂದು ನಷ್ಟವಾಗುತ್ತಿಲ್ಲ. ಒಟ್ಟು ಉತ್ಪನ್ನದಲ್ಲಿ ಕೇವಲ ಹತ್ತರಲ್ಲೊಂದು ಭಾಗ ತುಕ್ಕು ಹಿಡಿದು ಹಾಳಾಗುತ್ತಿದೆ. ಈ ನಷ್ಟವನ್ನು ಇನ್ನೂ ತಗ್ಗಿಸಲು ಸಂಶೋಧನೆಗಳಾಗುತ್ತಿವೆ.

ಒಂದು ಕಾಲದಲ್ಲಿ ಕನ್ನಡಿಯಂತೆ ಹೊಳೆಯುತ್ತಿದ್ದ ಲೋಹದ ಮೇಲೆ ಧೂಳಿನೊಂದಿಗೆ ರಕ್ತದ ಕಲೆಗಳು ಹತ್ತಿಕೊಂಡು ಕಜ್ಜಿಯಾಗಿದೆಯೇನೋ ಎಂಬಂತೆ ಕಂಡುಬರುವ ತುಕ್ಕಿನಿಂದ ಅದು ಸ್ಪಂಜಿನಂತಾಗಿ ಸವೆಯುತ್ತದೆ. ತಾಮ್ರದ ಮೇಲೆ, ಹಸಿರು ಪೊರೆಕಟ್ಟಲು ತುಕ್ಕೇ ಕಾರಣ. ತಾಮ್ರಕ್ಕೆ ಹತ್ತಿದ ತುಕ್ಕನ್ನು 'ಕಿಲುಬು' ಎನ್ನುತ್ತಾರೆ. ಚಿನ್ನ ಮತ್ತು ಪ್ಲಾಟಿನಂಗಳಂಥ ಅಮೂಲ್ಯ ಲೋಹಗಳನ್ನೂ ಬಿಟ್ಟಿಲ್ಲ ಈ ತುಕ್ಕು.

ತುಕ್ಕು ಉಂಟುಮಾಡುವ ಅಪಾರ ಕಷ್ಟನಷ್ಟಗಳನ್ನು ಊಹಿಸುವುದೂ ಕಷ್ಟ. ಕೆಲವು ವೇಳೆ, ತುಕ್ಕು ಹಿಡಿಯುವುದರಿಂದ ನೀರಿನ ಕೊಳಾಯಿಗಳು ಬಂದಾಗುತ್ತವೆ. ಸಾರ್ವಜನಿಕ ನೀರು ಸರಬರಾಜು ನಿಂತು ಹೋಗುತ್ತದೆ. ಅನೇಕ ವೇಳೆ, ಇದರಿಂದ ರಾಸಾಯನಿಕ ಸ್ಥಾವರಗಳನ್ನೂ ಮುಚ್ಚಬೇಕಾಗುತ್ತದೆ. ಕುದಿಪಾತ್ರೆಗಳಿಗೆ ಪೂರೈಕೆಯಾಗುವ ನೀರನ್ನು ನಿರ್ಮಾಯುಗೊಳಿಸದಿದ್ದರೆ ತುಕ್ಕಿನ ಆಕ್ರಮಣವನ್ನು ಎದುರಿಸ

ಬೇಕಾಗುತ್ತದೆ. ತುಕ್ಕಿನಿಂದ ರಕ್ಷಿಸುವುದಕ್ಕಾಗಿ ಲೋಹಗಳ ಭಾಗಗಳಿಗೆ ಬಣ್ಣ ಬಳಿಯಲೂ, ಜಿಡ್ಡು ಹಚ್ಚಲೂ ಅಪಾರ ಹಣ ವೆಚ್ಚವಾಗುತ್ತಿದೆ.

ತುಕ್ಕು ಎರಡು ಬಗೆಯಲ್ಲಿ ಆಕ್ರಮಣವೆಸಗುತ್ತದೆ. ಮೇಲ್ಮೈ ರಾಸಾಯನಿಕ ಕ್ರಿಯೆಯಿಂದಾಗಿ ತುಕ್ಕು ಹಿಡಿಯುವುದು ಒಂದು ಬಗೆ. ಈ ರೀತಿಯ ತುಕ್ಕು ಉಂಟಾಗಲು ಲೋಹಗಳು ಇತರ ಧಾತುಗಳೊಂದಿಗೆ ಸೇರಿ ಸಂಯುಕ್ತಗಳಾಗುವುದೇ ಮುಖ್ಯ ಕಾರಣ. ಕೆಲವು ವಿದ್ಯುದ್ವಾಹಕ ಶುಷ್ಕಾನಿಲಗಳು ಮತ್ತು ದ್ರವಗಳಿಗೆ ಲೋಹಗಳು ತಾಕಿದರೆ ಈ ರೀತಿ ತುಕ್ಕು ಹಿಡಿಯುವುದು. ಶಾಲೆ ದಿನಗಳನ್ನು ಜ್ಞಾಪಿಸಿಕೊಳ್ಳಿ. ರಸಾಯನಶಾಸ್ತ್ರದ ಅಧ್ಯಾಪಕರು ಒಂದು ಪ್ರಯೋಗವನ್ನು ತೋರಿಸಲು, ಸೀಮೆಎಣ್ಣೆ ಶೀಸೆಯಲ್ಲಿ ಇಟ್ಟಿರುವ ಸೋಡಿಯಮ್ಮಿನ ಒಂದು ಚೂರನ್ನು ಹೊರತೆಗೆದು ಚಾಕುವಿನಿಂದ ಕೊಯ್ದಿರಬಹುದು. ಆಗತಾನೆ ಕತ್ತರಿಸಿದ ಭಾಗ ನುಣುಪಾಗಿ ಹೊಳೆಯುತ್ತಿರುವುದು. ಆದರೆ ಒಂದೆರಡು ನಿಮಿಷಗಳಲ್ಲಿಯೇ ಅದು ಮಸಕಾಗಿ, ಬೂದು ಬಣ್ಣದ ಆಕ್ಸೈಡ್ ಪೊರೆ ಸೋಡಿಯಂ ಚೂರನ್ನು ಆವರಿಸುವುದು. ಅದಕ್ಕೆ ಕಾರಣ ರಸಾಯನಿಕ ತುಕ್ಕು. ಕಬ್ಬಿಣಕ್ಕೆ ತುಕ್ಕು ಹಿಡಿಯುವುದಕ್ಕೂ ರಸಾಯನಿಕ ಕ್ರಿಯೆಯೇ ಕಾರಣ. ಗಾಳಿಯಲ್ಲಿನ ಆಮ್ಲಜನಕದೊಂದಿಗೆ ಲೋಹ ಸಂಯೋಗವಾಗಿ ಅದರ ಆಕ್ಸೈಡ್ ತಯಾರಾಗುವುದೇ ಹಾಗೆ ರಸಾಯನಿಕ ತುಕ್ಕು ಹಿಡಿಯಲು ಕಾರಣ.

ಇನ್ನೊಂದು ಬಗೆಯ ತುಕ್ಕು ಸ್ವಲ್ಪ ಜಟಿಲ ಯಾಂತ್ರಿಕತೆಯದು. ಅದಕ್ಕೆ ವಿದ್ಯುತ್ ರಸಾಯನಿಕ ತುಕ್ಕು ಎಂದು ಹೆಸರು. ಇದನ್ನು ಅರ್ಥ ಮಾಡಿಕೊಳ್ಳಲು ಒಂದು ಸರಳ ವಿದ್ಯುತ್ಕೋಶವನ್ನು ಪರಿಶೀಲಿಸೋಣ. ಇಲ್ಲಿ ತಾಮ್ರ ಮತ್ತು ಸತುವಿನ ತಗಡುಗಳು ವಿದ್ಯುತ್‌ವಾಹಕ ದ್ರಾವಣದಲ್ಲಿ ಮುಳುಗಿವೆ. ವಾಹಕ ತಂತಿಯನ್ನು ಇವೆರಡು ತಗಡುಗಳಿಗೆ ತಾಕಿಸಿದಾಗ, ತಂತಿಯ ಮೂಲಕ ವಿದ್ಯುತ್ ಹರಿದು ಸತುವಿನ ತಗಡು ಸತುವಿನ ಆಕ್ಸೈಡಾಗಿ ಮಾರ್ಪಡುತ್ತದೆ. ಲೋಹಗಳಲ್ಲಿಯೂ ಈ ರೀತಿಯ ವಿದ್ಯುತ್ಕೋಶಗಳು ಏರ್ಪಡಲು ಕಾರಣ ಅವುಗಳ ಅಸಮ ರಚನೆ ಮತ್ತು ಅವಲ್ಲಿರುವ ಅನ್ಯವಸ್ತುಗಳು.

ಸಮುದ್ರದ ನೀರು, ನದಿಯ ನೀರು, ವಾತಾವರಣದ ತೇವ ಮೊದಲಾದುವು ಲೋಹಗಳನ್ನು ಸುಲಭವಾಗಿ ಆವರಿಸುವ ವಿದ್ಯುದ್ರಾವಣಗಳು. ಸಮುದ್ರದ ನೀರು ಉತ್ತಮ ವಿದ್ಯುತ್‌ವಾಹಕ. ಇಂತಹ ವಿದ್ಯುದ್ರಾವಣಗಳು ಲೋಹವನ್ನು ಸುತ್ತುವರಿದಾಗ, ವಿದ್ಯುತ್ಕೋಶವೊಂದು ಏರ್ಪಟ್ಟು, ತಾಮ್ರ ಮತ್ತು ಸತುವಿನ ತಗಡುಗಳ ನಡುವೆ ವಿದ್ಯುತ್ ಪ್ರವಹಿಸಿದಂತೆಯೇ ಲೋಹದ ವಿವಿಧ ಭಾಗಗಳ ನಡುವೆಯೂ ವಿದ್ಯುತ್ತು ಹರಿಯುವುದು.

ಏರಡು ಬಗೆಯ ತುಕ್ಕೂ ಹಲವು ರೂಪಗಳಲ್ಲಿ ಹಾಳು ಮಾಡುತ್ತದೆ. ಕೆಲವುವೇಳೆ ಲೋಹಗಳು ಏಕರೂಪವಾಗಿ ತುಕ್ಕು ಹಿಡಿಯಬಹುದು ; ಕೆಲವು ಬಾರಿ ತುಕ್ಕು ಲೋಹಗಳಲ್ಲಿ ಕುಳಿಗಳನ್ನು ತೋಡುವುದೂ ಉಂಟು, ಇನ್ನೂ ಹಲವು ಸಲ ಲೋಹ ಕಣಗಳ ಗಡಿಗಳಿಗೇ ತುಕ್ಕು ಹಿಡಿಯುವುದು. ಹೊರನೋಟಕ್ಕೆ ಉತ್ತಮ ವಾಗಿ ಗಡುಸಾಗಿ ಕಂಡುಬರುವ ಲೋಹ ತುಕ್ಕಿನಿಂದ ಒಳಗೇ ಟೊಳ್ಳಾಗಿರುವುದು. ಸ್ವಲ್ಪ ಒತ್ತಡ ಹೇರಿದರೂ ಸಾಕು, ಆಗ ಆ ಲೋಹ ಪುಡಿಪುಡಿಯಾಗುತ್ತದೆ.

ಎಲ್ಲಾ ಲೋಹಗಳು ತುಕ್ಕು ಹಿಡಿಯುತ್ತವೆ. ಆದರೆ ಕ್ರೋಮಿಯಂ, ಚಿನ್ನ ಮತ್ತು ಅಲ್ಯೂಮಿನಿಯಂ ತುಕ್ಕಿನಿಂದ ಹಾಳಾಗುವುದಿಲ್ಲವಲ್ಲ, ಕಾರಣವೇನು ಎಂದು ಕೇಳಬಹುದು. ಅವು ಉತ್ಕರ್ಷಣಗೊಳ್ಳುವುದಿಲ್ಲವೇ ? ಹೌದು, ಅವು ಅದಕ್ಕೊಳಗಾಗುತ್ತವೆ. ಉದಾಹರಣೆಗೆ, ಕ್ರೋಮಿಯಂ ಗಾಳಿಗೆ ತಾಕಿದ ತಕ್ಷಣವೇ ಅದರ ಮೇಲ್ಮೈ ಮೇಲೆ ತೆಳುವಾದ, ಆದರೆ ಕಸುವಿನಿಂದ ಕೂಡಿರುವ, ಪಾರದರ್ಶಕ ಆಕ್ಸೈಡು ಪೊರೆ ರೂಪುಗೊಳ್ಳುತ್ತದೆ. ಈ ಪೊರೆ ಅದರ ಕೆಳಗಿರುವ ಲೋಹವನ್ನು ತುಕ್ಕಿನಿಂದ ರಕ್ಷಿಸುತ್ತದೆ. ಅಷ್ಟು ಪಾರದರ್ಶಕವಲ್ಲದ ಅದೇ ತೆರನ ಒಂದು ಪೊರೆ ಅಲ್ಯುಮಿನಿಯಮ್ಮಿನ ಮೇಲೂ ಉಂಟಾಗುತ್ತದೆ. ಅವುಗಳ ಮೇಲ್ಮೈಗಳ ಮೇಲೆ ರಕ್ಷಕ ಆಕ್ಸೈಡು ಪೊರೆಗಳನ್ನು ನಿರ್ಮಿಸುವ ಕೆಲವು ಲೋಹಗಳ ಈ ವಿಶೇಷ ಗುಣ ತುಕ್ಕಿನಿಂದ ಅವಷ್ಟಕ್ಕೆ ಅವೇ ರಕ್ಷಿಸಿಕೊಳ್ಳಲು ಅಸಮರ್ಥವಾಗಿರುವ ಇತರ ಲೋಹ ಗಳಿಗೆ ರಕ್ಷಣೆಯನ್ನೊದಗಿಸಲು ನೆರವಿಗೆ ಬಂದಿವೆ. ಸಾಮಾನ್ಯವಾಗಿ ಈ ರೀತಿ ರಕ್ಷಿಸಲ್ಪಡುವ ಲೋಹಗಳೆಂದರೆ ಉಕ್ಕುಗಳು. ಇವುಗಳ ರಕ್ಷಕ ಮಾಧ್ಯಮ ನಿಕ್ಕಲ್ ಅಥವಾ ಕ್ರೋಮಿಯಂ. ಈ ರೀತಿಯ ವಿಶೇಷ ಉಕ್ಕುಗಳನ್ನು ಮೋಟಾರು ಯಂತ್ರಗಳ ಬಿಡಿಭಾಗಗಳು, ಕೈಗಾರಿಕಾ ಸ್ಥಾವರಗಳು, ಗೃಹೋಪಕರಣಗಳು ಇವೇ ಮೊದಲಾದ ನಿತ್ಯೋಪಯೋಗಿ ವಸ್ತುಗಳಲ್ಲಿ ಕಾಣಬಹುದು.

ತುಕ್ಕು ಹಿಡಿಯುವುದನ್ನು ತಡೆಗಟ್ಟುವ ಇನ್ನೊಂದು ಸ್ವಾರಸ್ಯಕರ ವಿಧಾನ ವೆಂದರೆ, ಕೆಲವು ಲೋಹಗಳು ಅವೇ ತುಕ್ಕಿಗೆ ಆಹುತಿಯಾಗಿ ಬೇರೆ ಲೋಹಗಳನ್ನೂ ರಕ್ಷಿಸುವುದು. ಈ 'ಆತ್ಮಾರ್ಪಣ ವಿಧಾನ'ವನ್ನು ಅರ್ಥಮಾಡಿಕೊಳ್ಳಲು ವಿದ್ಯುತ್ಕೋಶವನ್ನೇ ನೋಡೋಣ. ಇದರಲ್ಲಿ ತಾಮ್ರದ ತಗಡು (ಋಣದ್ವಾರ) ವಾಗೂ ಸತುವಿನ ತಗಡು ಧನದ್ವಾರವಾಗೂ ವರ್ತಿಸುವುವು. ಈ ಕ್ರಿಯೆಯಲ್ಲಿ ಧನದ್ವಾರ ಹಾಳಾಗುತ್ತದೆ. ಸತು ಬಲಿಯಾಗಿ ತಾಮ್ರವನ್ನು ಋಣದ್ವಾರ ರಕ್ಷಿಸುತ್ತದೆ. ತಾಮ್ರದ ಬದಲು ಮೆಗ್ನೀಷಿಯಮ್ಮನ್ನು ಉಪಯೋಗಿಸಿದಾಗ ಸತು ಋಣದ್ವಾರವಾಗಿ ಮಾರ್ಪಡುವುದು. ಧನದ್ವಾರ ಸ್ಥಾನದಲ್ಲಿರುವ ಮೆಗ್ನಿಷಿಯಂ ಬಲಿಯಾಗಿ ಸತುವನ್ನು ಉಳಿಸುವುದು.

ವಿದ್ಯುತ್‌ವಾಹಕ ದ್ರಾವಣದಲ್ಲಿ ಲೋಹಗಳು ಲೀನವಾಗುವ (ಧನ ಅಯಾನು ಗಳನ್ನು ಕಳೆದುಕೊಳ್ಳುವ) ಆತುರತೆಗೆ ಅನುಸಾರವಾಗಿ ಅವನ್ನು ಕ್ರಮಪಡಿಸಿದಾಗ ಹೊಸದೊಂದು 'ವಿದ್ಯುತ್ ರಸಾಯನಿಕ ಶ್ರೇಣಿ' ಸಿದ್ಧವಾಗುತ್ತದೆ. ಈ ಶ್ರೇಣಿ ಈ ರೀತಿಯಿದೆ (ಅವರೋಹಣ ಕ್ರಮದಲ್ಲಿ): ಪೊಟಾಸಿಯಂ, ಸೋಡಿಯಂ, ಬೇರಿಯಂ, ಕ್ಯಾಲ್ಸಿಯಂ, ಮೆಗ್ನಿಷಿಯಂ, ಅಲ್ಯುಮಿನಿಯಂ, ಮ್ಯಾಂಗನೀಸ್, ಸತು, ಕ್ರೋಮಿಯಂ, ಕಬ್ಬಿಣ, ಕೋಬಾಲ್ಟ್, ನಿಕಲ್, ಸೀಸ, ತವರ, ತಾಮ್ರ, ಬೆಳ್ಳಿ, ಪ್ಲಾಟಿನಂ ಮತ್ತು ಚಿನ್ನ. ಈ ಶ್ರೇಣಿಯಲ್ಲಿನ ಯಾವುದೇ ಎರಡು ಲೋಹಗಳನ್ನು ವಿದ್ಯುತ್ಕೋಶದ ವಿದ್ಯುದ್ವಾರಗಳಾಗಿ ಪರಿಗಣಿಸಿದರೂ, ಯಾವ ಲೋಹ ಎರಡನೆಯದಕ್ಕಿಂತ ಮೇಲಿನ ಶ್ರೇಣಿಯಲ್ಲಿರುವುದೋ, ಅದು ಯಾವಾಗಲೂ ಧನದ್ವಾರವಾಗುತ್ತದೆ. ಅಂದರೆ ಅದು ಬಲಿಯಾಗಲು ಸಿದ್ಧವಾಗುತ್ತದೆ. ಇಂದು ಕಬ್ಬಿಣದ ಮತ್ತು ಉಕ್ಕಿನ ಅನಿಲ ಕೊಳವೆಗಳು, ಹಡಗಿನ ಭಾಗಗಳೇ ಮೊದಲಾದ ಅನೇಕ ಉಕ್ಕಿನ ರಚನೆಗಳಿಗೆ ತುಕ್ಕು ಹಿಡಿಯದಂತೆ ರಕ್ಷಿಸಲು ತ್ಯಾಗಿ ಲೋಹಗಳಾದ ಸತು ಅಥವಾ ಮ್ಯಾಂಗನೀಸ್ ಚೂರುಗಳು ಧನದ್ವಾರಗಳಂತೆ ಬಳಕೆಯಾಗುತ್ತಿವೆ. ಒಂದು ಲೋಹದ ಮೇಲೆ ಇನ್ನೊಂದರ ಲೇಪದಿಂದಲೂ ತುಕ್ಕನ್ನು ತಡೆಗಟ್ಟಬಹುದು. ಕಬ್ಬಿಣದ ಮೇಲೆ ಸತು ಅಥವಾ ನಿಕ್ಕಲ್ ಲೇಪನದಿಂದ ಕಬ್ಬಿಣ ತುಕ್ಕು ಹಿಡಿಯುವುದಿಲ್ಲ. ಇದು ಹೇಗೆ ? ವಿದ್ಯುತ್ ರಸಾಯನಿಕ ಶ್ರೇಣಿಯಲ್ಲಿ ಸತು ಕಬ್ಬಿಣಕ್ಕಿಂತ ಮೇಲಿರುವುದರಿಂದ, ಕಬ್ಬಿಣಕ್ಕೆ ಸತುವಿನ ಲೇಪನವಾದಾಗ ಸತುವಿನ ಲೇಪನದಲ್ಲಿ ಸ್ವಲ್ಪ ಮಾತ್ರ ಬಿರುಕಾಗಿ ವಾತಾವರಣದ ತೇವದಲ್ಲಿ ಸರಳಗ್ಯಾಲ್ವನಿಕ ಕೋಶವೊಂದು ಸಿದ್ಧವಾಗುತ್ತವೆ. ಸತು ತೇಯ್ದು ಹೋಗಿ ಕಬ್ಬಿಣವನ್ನು ಕಾಪಾಡುತ್ತದೆ. ಸತುವಿನ ಕೊನೆಯ ಕಣ ಇರುವವರೆಗೂ ಕಬ್ಬಿಣಕ್ಕೆ ತುಕ್ಕು ಹಿಡಿಯದಂತೆ ನೋಡಿಕೊಳ್ಳುತ್ತದೆ. ಆದರೆ ನಿಕಲ್ ಲೇಪನದ ಸ್ಥಿತಿಯೇ ಬೇರೆ. ನಿಕಲ್ ವಿದ್ಯುತ್ ರಸಾಯನಿಕ ಶ್ರೇಣಿಯಲ್ಲಿ ಕಬ್ಬಿಣಕ್ಕಿಂತ ಕೆಳಗೆ ಇರುವುದರಿಂದ ಲೇಪನದಲ್ಲಿ ಸ್ವಲ್ಪವೇ ಬಿರುಕು ಬಿಟ್ಟರೂ ಸಾಕು, ಕಬ್ಬಿಣದ ಮೇಲೆ ತುಕ್ಕು ಹತ್ತುತ್ತದೆ.

ಕೆಲವು ಸಲ ತುಕ್ಕು ಹಿಡಿಯುವುದನ್ನು ತಪ್ಪಿಸಲು ಮೇಲೆ ಹೇಳಿದ ಯಾವ ವಿಧಾನಗಳೂ ಕೆಲಸಕ್ಕೆ ಬರುವುದಿಲ್ಲ. ಹಾಗಿದ್ದರೂ ಲೋಹಗಳನ್ನು ರಕ್ಷಿಸದೇ ಇರುವದೂ ಸಾಧ್ಯವಿಲ್ಲ. ಆಗ ಪ್ರತಿಬಂಧಕಗಳು ನೆರವಾಗುತ್ತವೆ.

ತುಕ್ಕು ಹಿಡಿಯುವಂಥ ಸನ್ನಿವೇಶಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಬೆರೆಸು ವುದರಿಂದ ರಕ್ಷಕ ಕವಚಗಳನ್ನು ರೂಪಿಸಿ ತುಕ್ಕನ್ನು ತಡೆಗಟ್ಟುವಂಥ ವಸ್ತುಗಳೇ ಪ್ರತಿಬಂಧಕಗಳು. ಲೋಹಗಳನ್ನು ಪ್ರಬಲವಾಗಿ ತಿಂದು ಹಾಕುವ ಸಲ್ಫ್ಯೂರಿಕ್ ಮತ್ತು ಹೈಡ್ರೋಕ್ಲೋರಿಕ್ ಆಮ್ಲಗಳೊಂದಿಗೆ ಸ್ವಲ್ಪ ಪ್ರತಿಬಂಧಕವನ್ನು ಬೆರೆಸು ವುದರಿಂದ ಅವನ್ನು ಯಾವ ಅಪಾಯವೂ ಇಲ್ಲದೆ, ಕಬ್ಬಿಣದ ತೊಟ್ಟಿಗಳಲ್ಲಿಯೇ

ಸಾಗಿಸಬಹುದು. ಸಾಮಾನ್ಯವಾಗಿ, ಇವಕ್ಕೆ ಬಳಿಯುವ ಬಣ್ಣ ವಸ್ತುಗಳಿಗೂ ಮೆರುಗೆಣ್ಣೆಗಳಿಗೂ ಪ್ರತಿಬಂಧಕಗಳನ್ನು ಸ್ವಲ್ಪ ಬೆರೆಸುತ್ತಾರೆ.

ತುಕ್ಕಿನ ಪ್ರತಿಬಂಧಕಗಳ ಸಾಮರ್ಥ್ಯ ಪ್ರಯೋಗಗಳಿಂದಲೂ ಸ್ಥಿರಪಟ್ಟಿದೆ. ಹೊಲಿಯುವ ಸೂಜಿಗಳ ಒಂದು ಕಟ್ಟಿಗೆ ಪೆಟ್ರೋಲಿಯಂ ಚೆಲ್ಲಿ ಸವರಿ ಪ್ಯಾರಫಿನ್ ಲೇಪಿತ ಕಾಗದದಲ್ಲಿ ಸುತ್ತಿಡಲಾಯಿತು. ಅದೇ ತೆರನ ಸೂಜಿಗಳ ಮತ್ತೊಂದು ಕಟ್ಟನ್ನು ತುಕ್ಕು ಪ್ರತಿಬಂಧಕದ ದ್ರಾವಣದಲ್ಲಿ ಅದ್ದಿದ ಕಾಗದದಿಂದ ಸುತ್ತಿಡಲಾಯಿತು. ಕೆಲವು ತಿಂಗಳಾದನಂತರ ಕಾಗದಗಳನ್ನು ಬಿಚ್ಚಿದಾಗ, ಪ್ಯಾರಫಿನ್ ಕಾಗದ ಸುತ್ತಿದ್ದ ಸೂಜಿಗಳು ಭಾರಿ ಪ್ರಮಾಣದಲ್ಲಿ ತುಕ್ಕಿಗೆ ಈಡಾಗಿದ್ದವು. ಆದರೆ ಪ್ರತಿಬಂಧಕದ ಕಾಗದ ಸುತ್ತಿದ್ದ ಸೂಜಿಗಳು ಲೇಶಮಾತ್ರವೂ ತುಕ್ಕು ಹಿಡಿದಿರಲಿಲ್ಲ.

ತುಕ್ಕು ನಿರೋಧದ ಜಯಾಪಜಯಗಳು ಲೋಹ ರಚನೆಗಳನ್ನು ನಿರ್ಮಿಸುವ ವಿನ್ಯಾಸಕಾರನನ್ನೂ ಅವಲಂಬಿಸಿವೆ. ಯಾವುದೇ ಲೋಹವನ್ನು ಸರಿಯಾದ ರೀತಿಯಲ್ಲಿ, ಸೂಕ್ತ ಸನ್ನಿವೇಶಗಳಲ್ಲಿ ಮಾತ್ರ ಬಳಸಬೇಕೆಂಬುದು ವಿನ್ಯಾಸ ಕಾರನಿಗೆ ತಿಳಿದಿರಬೇಕು. ಇಲ್ಲದಿದ್ದರೆ ತುಕ್ಕು ಯಾವ ನಿರ್ಬಂಧವೂ ಇಲ್ಲದೆ ದಾಳಿ ನಡೆಸುತ್ತದೆ. ಅದ್ದರಿಂದ ಲೋಹ ಶಿಲ್ಪಿಗಳು ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವರು. ಅಲ್ಯುಮಿನಿಯಮ್ಮಿನ ಮಿಶ್ರಲೋಹಗಳನ್ನು ತಾಮ್ರದೊಂದಿಗಾಗಲೀ, ಹಿತ್ತಾಳೆ ಅಥವಾ ತುಕ್ಕು ಹತ್ತದ ಉಕ್ಕಿನೊಂದಿಗಾಗಲಿ ಬೆರೆಯಲು ಬಿಡಬಾರದು. ಅಂಥ ಸಹಯೋಗವನ್ನು ತಪ್ಪಿಸಲಾಗದ ಸಂದರ್ಭಗಳಲ್ಲಿ ಸಂಪರ್ಕ ಕಲ್ಪಿಸುವ ಎರಡು ಲೋಹ ಮೇಲ್ಮೈಗಳ ನಡುವೆ ಜಡವಸ್ತುಗಳನ್ನು ಕೂಡಿಸಬೇಕು. ತ್ಯಾಗಿ ಧನ ದ್ವಾರಗಳನ್ನು ಸೂಕ್ತವಾದ ಸ್ಥಳಗಳಲ್ಲಿ ಉಪಯೋಗಿಸುವುದನ್ನೂ ಮರೆಯಬಾರದು.

ತುಕ್ಕು	rust	ಸತುಲೇಪಿಸು	galvanize
ಜಿಡ್ಡು	grease	ಕುದಿಪಾತ್ರೆ	boiler
ಉತ್ಕರ್ಷಣ	oxidation	ಯಾಂತ್ರಿಕತೆ	mechanism
ಧನದ್ವಾರ	anode	ಋಣದ್ವಾರ	cathode
ಅನಿಲ ಕೊಳವೆ	gas pipe	ವಿದ್ಯುದ್ವಾರ	electrode
ತೊಟ್ಟಿ	tank	ಪ್ರತಿಬಂಧಕ	inhibitor
ಮೆರುಗೆಣ್ಣೆ	varnish	ಬಣ್ಣವಸ್ತು	paint

ನೇಮಿಚಂದ್ರ

ಟಿ. ವಿ. ವೆಂಕಟಾಚಲ ಶಾಸ್ತ್ರೀ

'ಲೀಲಾವತಿ' ಎಂಬ ಶೃಂಗಾರಕಾವ್ಯದ ಕರ್ತೃವಾಗಿ ಪ್ರಸಿದ್ಧನಾಗಿರುವ ನೇಮಿಚಂದ್ರ ಕವಿಯ ಇನ್ನೊಂದು ಕೃತಿ 'ನೇಮಿನಾಥ ಪುರಾಣ'. ಕನ್ನಡ ಜೈನಕವಿ ಮಾರ್ಗದಂತೆ ಇವುಗಳಲ್ಲಿ ಮೊದಲಿನದು ಒಂದು ಲೌಕಿಕ ಗ್ರಂಥ, ಎರಡನೆಯದು ಧಾರ್ಮಿಕ ಗ್ರಂಥ. ಈ ಕವಿಯ ಕವಿತಾಸಾಮರ್ಥ್ಯವನ್ನು ಜನ್ನ, ಇಮ್ಮಡಿ ಗುಣವರ್ಮ, ಪಾರ್ಶ್ವಪಂಡಿತ, ಕಮಲಭವ, ಬಾಹುಬಲಿ ಪಂಡಿತ, ಮಧುರ, ಮಂಗರಸ ಮೊದಲಾದವರು ವಿಶೇಷವಾಗಿ ಕೀರ್ತಿಸಿದ್ದಾರೆ. ಆ ಕೊಂಡಾಟದ ನುಡಿಗಳಲ್ಲಿ 'ನೇಮಿಜನ್ನಮರ್ಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್' ಎಂಬ ಮಧುರ ಕವಿಯ 'ಧರ್ಮನಾಥ ಪುರಾಣ'ದ ಉಕ್ತಿ ಸ್ಮರಣೀಯವಾದ್ದು. ಕವಿಯ ಹಿರಿತನಕ್ಕೆ ಹೇಳಿದ ಒಂದು ಒಳ್ಳೆಯ ಸಾಕ್ಷ್ಯ ಅದು.

ನೇಮಿಚಂದ್ರನು ತನ್ನ ತಾಯಿ ತಂದೆಗಳ ಹೆಸರನ್ನಾಗಲಿ ಕುಲ ಗೋತ್ರಗಳ ವಿವರವನ್ನಾಗಲಿ ಗುರುವಿನ ಉಲ್ಲೇಖವನ್ನಾಗಲಿ ತನ್ನ ಕೃತಿಗಳಲ್ಲಿ ಕೊಟ್ಟಿಲ್ಲ. ತನಗೆ ಹಿಂದಿದ್ದ ಕನ್ನಡ ಕವಿಗಳಲ್ಲಿ ಯಾರ ಹೆಸರನ್ನೂ ಹೇಳಿಲ್ಲ. ಯತಿ ಶ್ರೇಷ್ಠರೂ ಶಾಸ್ತ್ರಜ್ಞರೂ ಆಗಿ ಖ್ಯಾತರಾಗಿದ್ದ ಸಮಂತಭದ್ರ, ಅಕಲಂಕದೇವ ಮತ್ತು ಪೂಜ್ಯ ಪಾದರನ್ನು 'ಲೀಲಾವತಿ'ಯಲ್ಲಿಯೂ, ಇವರನ್ನೊಳಗೊಂಡು ಗೃಧ್ರಪಿಂಛಾಚಾರ್ಯ, ಕೊಂಡಕುಂದಾಚಾರ್ಯ, ಕವಿ ಪರಮೇಷ್ಠಿ, ಜಿನಸೇನ, ವೀರಸೇನ, ಗುಣಭದ್ರ, ಪುಷ್ಪದಂತ ಮಲಧಾರಿಗಳನ್ನು 'ನೇಮಿನಾಥ ಪುರಾಣ'ದಲ್ಲಿಯೂ ಸ್ತುತಿಸಿದ್ದಾನೆ. 'ಲೀಲಾವತಿ'ಯ ಅಂತ್ಯ ಭಾಗದಿಂದ ಲಕ್ಷ್ಮಣದೇವ-ಚಂದಲ ದೇವಿಯರೆಂಬ ಅಥವಾ ಲಕ್ಷ್ಮೀಧರ–ಚಂದ್ರಿಕಾದೇವಿಯರೆಂಬ ರಾಜದಂಪತಿಗಳ ಆಶ್ರಯದಲ್ಲಿ ಕವೀಶ್ವರನಾಗಿದ್ದನೆಂದೂ 'ನೇಮಿನಾಥ ಪುರಾಣ'ದ ಆಶ್ವಾಸಾಂತ್ಯ ಗದ್ಯಭಾಗದಿಂದ ಶ್ರೀಮತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳ ದೇವನ ಮಹಾ ಪ್ರಧಾನನಾದ ಸೆಜ್ಜೆವಳ್ಳ ಪದ್ಮನಾಭನ[1] ಆಶಯದಂತೆ ಆ ಗ್ರಂಥವನ್ನು ರಚಿಸಿದನೆಂದೂ ತಿಳಿದುಬರುತ್ತದೆ.

---

1 'ನೇಮಿನಾಥ ಪುರಾಣ'ದ 1–42–44 ರಲ್ಲಿಯೂ 6–38, 39 ರಲ್ಲಿಯೂ ಈತನ ಹಿರಿಮೆಯನ್ನು ಕೀರ್ತಿಸಿದೆ. 1–43 ರ ಪದ್ಯ 'ಲೀಲಾವತಿ'ಯಲ್ಲಿ ಕೂಡ ದೊರೆಯುತ್ತದೆ (1–95). ಆದರೆ 'ಪದ್ಮನಾಭಪ್ರಧಾನಂ' ಎಂಬೆಡೆಗೆ 'ವಿಶ್ವವಿದ್ಯಾವಿನೋದಂ' ಎನ್ನುವ ಮಾತಿದ್ದು ಅದನ್ನು ಕಂದರ್ಪದೇವನಿಗೆ ಅನ್ವಯಿಸುವಂತೆ ಬಳಸಿದೆ.

ಈ ಚರಿತ್ರೆಯು ವ್ಯಕ್ತಿಗಳ ಕಾಲ ದೇಶ ವೃತ್ತಾಂತಗಳ ಹೊಲಬನ್ನು ಹಿಡಿದು ನೇಮಿಚಂದ್ರ ಕವಿಯು ಕಾಲ ದೇಶ ವೃತ್ತಾಂತಗಳನ್ನು ತಿಳಿಯಲು ತಕ್ಕಮಟ್ಟಿಗೆ ಸಾಧ್ಯವಾಗಿದೆ.

ನೇಮಿಚಂದ್ರನಿಗೆ ಕವಿರಾಜಮಲ್ಲ, ಕಲಾಕಾಂತ, ಸುಕರಕವಿಶೇಖರ, ಕವಿಧವಳ, ಶೃಂಗಾರ ಕಾರಾಗೃಹ, ಕವಿರಾಜ ಕುಂಜರ, ಚತುರ್ಭಾಷಾ ಕವಿಚಕ್ರವರ್ತಿ, ಮೊದಲಾದ ಹಲವು ಬಿರುದುಗಳಿದ್ದಂತೆ ತೋರುತ್ತದೆ.[2] ಅವುಗಳಲ್ಲಿ 'ಕವಿರಾಜ ಕುಂಜರ' ಎಂಬುದು 'ಲೀಲಾವತಿ'ಯ ಆಶ್ವಾಸಾಂತ್ಯ ಗದ್ಯದಲ್ಲಿಯೂ 'ಚತುರ್ಭಾಷಾ ಕವಿಚಕ್ರವರ್ತಿ' ಎಂಬುದು 'ನೇಮಿನಾಥ ಪುರಾಣ'ದ ಆಶ್ವಾಸಾಂತ್ಯ ಗದ್ಯದಲ್ಲಿಯೂ ತಪ್ಪದೆ ಪುನರಾವೃತ್ತಿಗೊಳ್ಳುವ ಕಾರಣ, ಇವು ಕವಿಯ ಅಧಿಕೃತವಾದ ಅಥವಾ ಅತಿ ಮೆಚ್ಚಿಕೆಯ ಬಿರುದುಗಳಾಗಿರಬೇಕೆಂದು ಊಹಿಸಬಹುದು. ಉಳಿದವು ಬಹುಮಟ್ಟಿಗೆ ಸ್ವಾರೋಪಿತವಾದವೇ ಇರಬೇಕು.

ನೇಮಿಚಂದ್ರನು ಕನ್ನಡದಲ್ಲಿ ಮಾತ್ರವಲ್ಲದೆ ಸಂಸ್ಕೃತ ಪ್ರಾಕೃತಾದಿ ಭಾಷೆಗಳಲ್ಲಿಯೂ ಪಂಡಿತನಾಗಿದ್ದಂತೆ 'ಚತುರ್ಭಾಷಾ ಕವಿಚಕ್ರವರ್ತಿ' ಎಂಬ ಆತನ ಬಿರುದಿನ ಮೂಲಕವಾಗಿ ನಾವು ಭಾವಿಸಬಹುದು. ಆತನ ಎರಡು ಕೃತಿಗಳಲ್ಲಿಯೂ ಸ್ವತಃ ಬರೆದಿರಬಹುದಾದ ನಾನಾ ಛಂದಸ್ಸಿನ ಸಂಸ್ಕೃತ[3] ಮತ್ತು ಪ್ರಾಕೃತ[4]ಪದ್ಯಗಳು ಕೆಲವು ಅಲ್ಲಲ್ಲಿ ಹರಡಿಕೊಂಡಿವೆ.

ಕನ್ನಡದಲ್ಲಿ ವಿರಳವಾಗಿರುವ ಲೌಕಿಕ ಕಥಾ ಸಾಹಿತ್ಯದಲ್ಲಿ 'ಕರ್ಣಾಟಕ ಕಾದಂಬರಿ'ಯಾದ ಮೇಲೆ ನೇಮಿಚಂದ್ರನ 'ಲೀಲಾವತಿ'ಯೇ ಪ್ರಸಿದ್ಧವಾದದ್ದು[5]. ಈ ಗ್ರಂಥದ ಕಥಾ ವಸ್ತುವಿನ ಬೆಳೆವಣಿಗೆಯಲ್ಲಿ ಸುಬಂಧುವಿನ ವಾಸವದತ್ತೆಯನ್ನೂ 'ಬಾಣಾಸುರಾಖ್ಯಾನ', 'ಸ್ವಪ್ನ ವಾಸವದತ್ತ', 'ಕಾದಂಬರಿ', 'ವಿಕ್ರಮೋರ್ವಶೀಯ' ಇವನ್ನೂ ರಾಜಶೇಖರನ 'ಕರ್ಪೂರ ಮಂಜರಿ'ಯನ್ನೂ ಕವಿ ಬಳಸಿಕೊಂಡಿದ್ದಾನೆ ಎಂಬುದಾಗಿ

---

2 ಇಂಥ ಹಲವು ಬಿರುದುಗಳನ್ನು ಹೆಣೆದು ಇಷ್ಟವ್ಯಕ್ತಿಗೆ ಪ್ರತಿನಾಮವಾಗಿ ಆರೋಪಿಸುವುದು ಕಾವ್ಯಗಳಲ್ಲಿ ಸಾಮಾನ್ಯ.

3 ಲೀಲಾವತಿ ; 7–59 : 8–46ವ., 49 ವ., 58, 97. 102ವ., ; 9–27ವ., 56, 57, 59. ನೇಮಿನಾಥ ಪುರಾಣ : 2–20 : 6–14ವ., 38, 70ವ.

4 ಲೀಲಾವತಿ : 4–91, 9–58 ; ನೇಮಿನಾಥ ಪುರಾಣ 6–39.

5 ಗುಣವರ್ಮನ 'ಶೂದ್ರಕ', ನಾಗವರ್ಮನ (990) 'ಕರ್ಣಾಟಕ ಕಾದಂಬರಿ', ನೇಮಿಚಂದ್ರನ (1190) 'ಲೀಲಾವತಿ', ದೇವಕವಿಯ (1200) 'ಕುಸುಮಾವಳಿ', ಚೌಂಡರಾಜನ (1300) 'ಅಭಿನವ ದಶಕುಮಾರ ಚರಿತೆ'–ಇವು ಒಂದು ಗುಂಪಿನ ರಚನೆಗಳು ; ಲೌಕಿಕ ಕಥಾ ಸಾಹಿತ್ಯಕ್ಕೆ ಸೇರಿದವು.

ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[6] ಹಾಗೆಯೇ ಸುಮಾರು 800 ರಲ್ಲಿದ್ದ ಕೋಊಹಲ (ಕೌತೂಹಲ) ನೆಂಬ ಕವಿ ಮಹಾರಾಷ್ಟ್ರೀ ಪ್ರಾಕೃತದಲ್ಲಿ ರಚಿಸಿದ 'ಲೀಲಾವಈ' ('ಲೀಲಾವತೀ') ಎಂಬ ಕಥಾ ಕಾವ್ಯವನ್ನು ಕೂಡ ಕೆಲವುಮಟ್ಟಿಗೆ ಬಳಸಿಕೊಂಡಿರಬಹುದು ಎನ್ನುವ ಅಭಿಪ್ರಾಯವಿದೆ.[7] 'ಪಂಪಭಾರತ', 'ಗದಾ ಯುದ್ಧ'ಗಳಂತೆಯೇ ಈ ಗ್ರಂಥವೂ ಕೆಲಮಟ್ಟಿಗೆ ಚಾರಿತ್ರಿಕ ಧ್ವನಿಕಾವ್ಯವೆಂದು ಸಕಾರಣವಾಗಿ ತೋರಿಸುವ ಪ್ರಯತ್ನವನ್ನು ವಿದ್ವಾಂಸರು ಮಾಡಿದ್ದಾರೆ. ಇವರ ಪ್ರಕಾರ, ಕಾವ್ಯದ ಕಂದರ್ಪದೇವ-ಲೀಲಾವತಿಯರಿಗೂ ಚರಿತ್ರೆಯ ಸೌಂದತ್ತಿಯ ರಟ್ಟರಾಜ ಲಕ್ಷ್ಮೀಧರ I-ಚಂದಲದೇವಿಯರಿಗೂ ಕವಿ ಅಭೇದಭಾವವನ್ನು ಕಲ್ಪಿಸಿ ದ್ದಾನೆ.[8] ಒಂದೇ ವರ್ಷದಲ್ಲಿ ಈ ಗ್ರಂಥವನ್ನು ಬರೆದುದಾಗಿ ಕವಿ ಹೇಳಿಕೊಂಡಿ ದ್ದಾನೆ (14-144).

ಕವಿಯ ಇನ್ನೊಂದು ಕೃತಿ 'ನೇಮಿನಾಥ ಪುರಾಣ' ವಾಡಿಕೆಯಲ್ಲಿ 'ಅರ್ಧ ನೇಮಿ ಪುರಾಣ'ವೆಂದು ಪ್ರಸಿದ್ಧವಾಗಿದೆ. 'ಜಿನಕಥೆಯೊಳ್ ಸಂದಿಸಿ ವಸುದೇವಾಚ್ಯುತ ಕಂದರ್ಪರ ಕಥೆಗಳನಿತುಮಂ ವಿರಚಿಸುವೆಂ...' ಎಂಬುದು ಕವಿಯ ಪ್ರತಿಜ್ಞೆ (1-40). 22ನೆಯ ತೀರ್ಥಂಕರನಾದ ನೇಮಿನಾಥನ ಕಥೆಯೂ ಅದರೊಡನೆ ಹೆಣೆದು ಕೊಂಡು ಬರುವ ಹರಿವಂಶ ಕುರುವಂಶದವರ ಕಥೆಯೂ, ಕೂಡಿ ಈ ಗ್ರಂಥದ ವಸ್ತು ವಾಗಿದೆ. ಆದರೆ ಯಾವ ಕಾರಣದಿಂದಲೋ ಏನೋ ಈ ಪುರಾಣವು ಕಂಸವಧೆ ಯಿಂದ ಮುಗಿಯುವ 8 ನೆಯ ಆಶ್ವಾಸದವರೆಗೆ ಮಾತ್ರ ಬಂದು ನಿಂತುಹೋಗಿದೆ. ಕವಿ ಬರೆದದ್ದು ಇಷ್ಟು ಮಾತ್ರವೇ ಇರಬಹುದು. ಮಂಗರಸ ಕವಿ (1508) ನೇಮಿ ಚಂದ್ರನನ್ನು 'ಅಂಗಿಕನೇಮಿ' ಎಂದು ಸ್ಮರಿಸಿರುವುದು (1-27) ಆ ಅನುಮಾನವನ್ನು ಬಲಪಡಿಸುತ್ತದೆ. 'ಅಸಮಗ್ರವಾಗಿ ಪುರಾಣವನ್ನು ರಚಿಸಿದ ನೇಮಿಚಂದ್ರ ಕವಿ' ಎಂಬುದು ಮಂಗರಸನ ಮಾತಿನ ಆಶಯವಾಗಿರಬಹುದು. ಅಸಮಗ್ರವಾದ ಅಥವಾ ಅಸಂಪೂರ್ಣವಾದ ನೇಮಿಪುರಾಣ ಎಂಬುದನ್ನು, ಆಧುನಿಕರು 'ಅರ್ಧ ನೇಮಿಪುರಾಣ' ಎಂಬುದಾಗಿ ರೂಢಿಯಲ್ಲಿ ಕರೆಯತೊಡಗಿದರೆಂದು ತೋರುತ್ತದೆ. ಇತರ ಕವಿಗಳ ನೇಮಿನಾಥ ಪುರಾಣಗಳಿಂದ ನೇಮಿಚಂದ್ರನ 'ನೇಮಿನಾಥ ಪುರಾಣ'ವನ್ನು ಬೇರೆಯಾಗಿ ಗುರುತಿಸುವುದಕ್ಕೆ ಇದರಿಂದ ಅನುಕೂಲವಾಯಿತು. ಈ ಗ್ರಂಥ ಗುಣಭದ್ರಾ

---

6 'ಲೀಲಾವತೀ ಪ್ರಬಂಧಂ' (1838), ಪೀಠಿಕೆ ii; 'ಕವಿಚರಿತೆ', ಸಂ. 1 (1961), ಪು. 291; ಎಂ. ಆರ್. ಶ್ರೀನಿವಾಸಮೂರ್ತಿ : ನೇಮಿಚಂದ್ರನ 'ಲೀಲಾವತಿ' (ಕಥಾವಸ್ತು), ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ 10-4, ಪು. 257-8; ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ (1964), ಪು. 198

7 A. N. Upadhye : *Livavi of Kouhala* (1949), Intr. pp. 38-39

8 M. Govinda Rao : Kannada Literature and the Ratta Kings, *A. O. R.*, Madras

ಚಾರ್ಯರ 'ಉತ್ತರ ಪುರಾಣ' (ಕ್ರಿ. ಶ. 890) ದ 'ನೇಮಿಸ್ವಾಮಿ ಚರಿತ' ಮುಂತಾದ ಕಥಾ ಮೂಲಗಳನ್ನು ಅನುಸರಿಸಿ ರಚಿತವಾಗಿದೆ.

ನೇಮಿಚಂದ್ರ ಕವಿಯ ಆಶ್ರಯದಾತೃಗಳ ಹಾಗೂ ಕಾಲದ ವಿಚಾರವನ್ನು ಈಗ ಗಮನಿಸಬಹುದು.

1. ರಾ. ನರಸಿಂಹಾಚಾರ್ಯರು : ಸುಮಾರು 1170, ನೇಮಿಚಂದ್ರನ 'ಲೀಲಾವತಿ'ಯಲ್ಲಿಯ 14–135, 149 ಈ ಪದ್ಯಗಳಲ್ಲಿ ಲಕ್ಷ್ಮಣದೇವ-ಚಂದಲ ದೇವಿಯರು ಅಥವಾ ಲಕ್ಷ್ಮೀಧರ ಚಂದ್ರಿಕಾದೇವಿಯರು ಎಂಬ ರಾಜದಂಪತಿಗಳು ಉಕ್ತರಾಗಿದ್ದಾರೆ. ಈ ಲಕ್ಷ್ಮಣ ಅಥವಾ ಲಕ್ಷ್ಮೀಧರ ಎಂಬರಸನು ಕರ್ಣಪಾರ್ಯನ ಪೋಷಕನಲ್ಲ, ಸೌಂದತ್ತಿಯ ರಟ್ಟರಾಜನಾದ 3ನೆಯ ಕಾರ್ತವೀರ್ಯನ ಮಗ. ಈ ಕಾರ್ತವೀರ್ಯ ಕ್ರಿ. ಶ. 1143 ರಲ್ಲಿಯೂ (ಫ್ಲೀಟ್) ಕ್ರಿ. ಶ. 1165 ರಲ್ಲಿಯೂ (ಎಕ್ಸಂಬಿ ಶಾಸನ) ಆಳುತ್ತಿದ್ದಂತೆ ತಿಳಿಯುತ್ತದೆ. ಇವನ ಮಗ ಲಕ್ಷ್ಮೀಧರನ ಆಳಿಕೆ ಸುಮಾರು 1170 ರಲ್ಲಿ ಆರಂಭವಾಗಬಹುದು.[9] ಅಲ್ಲದೆ ನೇಮಿಚಂದ್ರನು ತನ್ನ 'ನೇಮಿನಾಥ ಪುರಾಣ'ವನ್ನು ವೀರಬಲ್ಲಾಳನ ಪ್ರಧಾನನಾದ ಸೆಜ್ಜೆವಳ್ಳ ಪದ್ಮನಾಭನಿಗಾಗಿ ಬರೆದಂತೆ ಹೇಳುತ್ತಾನೆ. ವೀರಬಲ್ಲಾಳನು ಕ್ರಿ. ಶ. 1173 ರಿಂದ 1220 ರವರೆಗೆ ಆಳಿದಂತೆ ತಿಳಿಯುತ್ತದೆ. ಆದ್ದರಿಂದ ಈ ಕವಿ ಸು. 1170 ರಲ್ಲಿ ಇದ್ದಿರಬಹುದು. ಈತ 'ಲೀಲಾವತಿ'ಯನ್ನು ಬರೆದ ಮೇಲೆ ನೇಮಿನಾಥ ಪುರಾಣ ವನ್ನು ಬರೆದಿರಬೇಕು.

2. ಡಾ. ಎ. ವೆಂಕಟಸುಬ್ಬಯ್ಯನವರು : ಕ್ರಿ. ಶ. 1185-95. ಕರ್ಣ ಪಾರ್ಯಸ್ತುತನಾದ ಲಕ್ಷ್ಮಣನು (ಲಕ್ಷ್ಮೀಧರನು) ಕರಹಾಟದ ಅಧಿಪನಾದ ವಿಜಯಾದಿತ್ಯನ ಕರಣಾಗ್ರಣಿಯೂ ಮಂತ್ರಿಯೂ ಆಗಿದ್ದವನು. ನೇಮಿಚಂದ್ರ ಸ್ತುತನಾದ ಲಕ್ಷ್ಮಣನು (ಲಕ್ಷ್ಮೀಧರನು) ಸಿಂಹಾಸನಾರೂಢನಾಗಿ ರಾಜ್ಯಭಾರ ಮಾಡುತ್ತಿದ್ದಂಥ ಒಬ್ಬ ರಾಜ. ಅಂದಮೇಲೆ ಈ ಇಬ್ಬರೂ ಬೇರೆ ಬೇರೆ. ನೇಮಿ ಚಂದ್ರನು 'ನೇಮಿನಾಥಪುರಾಣ'ದ ಆಶ್ವಾಸಾಂತ್ಯದಲ್ಲಿ 'ಶ್ರೀಮತ್ಪ್ರತಾಪ ಚಕ್ರವರ್ತಿ ಶ್ರೀ ವೀರಬಲ್ಲಾಳದೇವ'ನನ್ನು ಸ್ತುತಿಸಿರುವುದರಿಂದ ಈತ ರಾಜ್ಯವಾಳುತ್ತಿದ್ದ ಕಾಲದಲ್ಲಿಯೇ ಅದಕ್ಕೆ ಸ್ವಲ್ಪ ಹಿಂದೆಯೋ ಮುಂದೆಯೋ 'ಲೀಲಾವತಿ' ಕಾವ್ಯದಲ್ಲಿ ಸ್ತುತ್ಯನಾಗಿರುವ ಲಕ್ಷ್ಮಣ ಅಥವಾ ಲಕ್ಷ್ಮೀಧರ ರಾಜನು ರಾಜ್ಯಭಾರಮಾಡುತ್ತಿದ್ದಿ ರಬೇಕು. ವೀರಬಲ್ಲಾಳನಿಗೆ ಸುಮಾರಾಗಿ ಸಮಕಾಲೀನನಾದ ಈ ಲಕ್ಷ್ಮಣನು (ಲಕ್ಷ್ಮೀಧರನು) ಯಾರೆಂದು ಪ್ರಕೃತದಲ್ಲಿ ಕಂಡುಹಿಡಿಯಬೇಕಾಗಿದೆ. ಫ್ಲೀಟ್ ಮತ್ತು ಕೀಲ್‌ಹೋರ್ನ್ ಅವರ ಲೇಖನಾಧಾರಗಳ ಮೇಲೆ ಸೌಂದತ್ತಿಯ ರಟ್ಟವಂಶದಲ್ಲಿ

9 ತಿದ್ದಿಕೊಂಡ ಅಭಿಪ್ರಾಯ : ಕವಿಚರಿತೆ, ಸಂ. 1 (1961), ಪು. 287

ಲಕ್ಷ್ಮಣ (ಲಕ್ಷ್ಮೀಧರ, ಲಕ್ಷ್ಮೀದೇವ) ಎಂಬ ಹೆಸರಿನ ಇಬ್ಬರು ಅರಸರಿದ್ದುದು ತಿಳಿದು ಬಂದಿದೆ. ಇವರಲ್ಲಿ 1ನೆಯ ಲಕ್ಷ್ಮೀದೇವನು ಅದೇ ವಂಶದ 3ನೆಯ ಕಾರ್ತ ವೀರ್ಯನ ಮಗನಾಗಿ ಅವನ ಅನಂತರ ರಾಜ್ಯವಾಳಿದನೆಂದೂ, 2ನೆಯ ಲಕ್ಷ್ಮೀದೇವನು 1ನೆಯ ಲಕ್ಷ್ಮೀದೇವನ ಮಗ 4ನೆಯ ಕಾರ್ತವೀರ್ಯನ ಮಗನಾಗಿ ಅವನ ಅನಂತರ ರಾಜ್ಯವಾಳಿದನೆಂದೂ ಅವೇ ಲೇಖನಾಧಾರಗಳಿಂದ ತಿಳಿಯಬಹುದಾಗಿದೆ. ಅವರಲ್ಲಿ 3ನೆಯ ಕಾರ್ತವೀರ್ಯ 1143, 1165ರಲ್ಲಿಯೂ 4ನೆಯ ಮಲ್ಲಿಕಾರ್ಜುನನು[10] 1199, 1218 ರಲ್ಲಿಯೂ, 2ನೆಯ ಲಕ್ಷ್ಮೀದೇವನು 1228 ರಲ್ಲಿಯೂ ಆಳುತ್ತಿದ್ದರೆಂದು ಹೇಳುವ ಶಾಸನಗಳು ದೊರೆತಿವೆ. ಆದರೆ ಅವುಗಳಿಂದ ಈಯರಸರ ರಾಜ್ಯಾವಧಿಯು ಕಾಲ ಎಷ್ಟೆಂದು ತಿಳಿಯದು. 1ನೆಯ ಲಕ್ಷ್ಮೀದೇವನ ಕಾಲದ ಶಾಸನವಂತೂ ಒಂದೂ ಈವರೆಗೆ ದೊರೆತಿಲ್ಲ. ಆದ್ದರಿಂದ 3ನೆಯ ಕಾರ್ತ ವೀರ್ಯನು 1165ರವರೆಗೂ 1ನೆಯ ಲಕ್ಷ್ಮೀದೇವನು 1190ರವರೆಗೂ 4ನೆಯ ಕಾರ್ತವೀರ್ಯನು 1218ರವರೆಗೂ ('ಪಾರ್ಶ್ವನಾಥ ಪುರಾಣ'ದ ಒಂದು ಆಧಾರ ದಂತೆ 1222 ಅಥವಾ 1218 ರಲ್ಲಿ ಈತ ಆಳುತ್ತಿದ್ದನೆಂದು ತಿಳಿಯುವುದು.) ಆಳುತ್ತಿದ್ದರೆಂದು ಊಹಿಸಿದರೆ ವಸ್ತುಸ್ಥಿತಿಗೆ ವಿರೋಧವಿರಲಾರದು. ವೀರಬಲ್ಲಾಳನು 1173 ರಿಂದ 1220 ರವರೆಗೆ ಆಳುತ್ತಿದ್ದುದರಿಂದ 1ನೆಯ 2ನೆಯ ಲಕ್ಷ್ಮೀದೇವ ರಿಬ್ಬರೂ ಪ್ರಾಯಶಃ ಇದೇ ಕಾಲದಲ್ಲಿ ತಾವೂ ಆಳುತ್ತಿದ್ದರೆಂದಾಯಿತು. ವೀರ ಬಲ್ಲಾಳನ ಆಳಿಕೆಯ ಅಂತ್ಯದಲ್ಲಿಯ 2ನೆಯ ಲಕ್ಷ್ಮೀದೇವನ ರಾಣಿಯ ಹೆಸರು ನಮಗೆ ತಿಳಿಯದು ; ಆದಿಯಲ್ಲಿಯ 1ನೆಯ ಲಕ್ಷ್ಮೀದೇವನಿಗಾದರೋ ಚಂದಲದೇವಿ ಅಥವಾ ಚಂದ್ರಿಕಾದೇವಿಯೆಂಬ ರಾಣಿಯಿದ್ದಳೆಂದು ಶಾಸನಗಳಲ್ಲಿ ಹೇಳಿದೆ. ಆದ್ದರಿಂದ 'ಲೀಲಾವತಿ'ಯಲ್ಲಿ ಕೀರ್ತಿತರಾದ ಲಕ್ಷ್ಮೀಧರ ಚಂದ್ರಿಕಾದೇವಿಯರು ರಟ್ಟಮಹಾ ಮಂಡಲೇಶ್ವರನಾದ 1ನೆಯ ಲಕ್ಷ್ಮೀಧರ ಮತ್ತು ಅವನ ರಾಣಿ ಚಂದ್ರಿಕಾದೇವಿಯರೇ ಎಂಬುದರಲ್ಲಿ ಸಂದೇಹವಿಲ್ಲ. ಈ ಲಕ್ಷ್ಮೀದೇವನ ಕಾಲದಲ್ಲಿ, ಎಂದರೆ ಸು. 1165–90ರಲ್ಲಿ ನೇಮಿಚಂದ್ರನು ತನ್ನ 'ಲೀಲಾವತಿ'ಯನ್ನು ಬರೆದನೆಂಬುದು ಇದರಿಂದ ಸ್ಪಷ್ಟವಾಗುವುದು. ಇನ್ನು 'ನೇಮಿನಾಥ ಪುರಾಣ'ದ ಆಶ್ವಾಸಾಂತ್ಯದಲ್ಲಿ 'ಶ್ರೀ

10 4ನೆಯ ಕಾರ್ತವೀರ್ಯನಿಗೆ ಮಲ್ಲಿಕಾರ್ಜುನನೆಂಬ ಒಬ್ಬ ಸೋದರನಿದ್ದುದಾಗಿಯೂ ಆತನು ಯೌವರಾಜ್ಯಪದವಿಯಲ್ಲಿದ್ದುಕೊಂಡು ಕಾರ್ತವೀರ್ಯನೊಡನೆ ಸಾಮ್ರಾಜ್ಯ ಸುಖ ವನ್ನು ಅನುಭವಿಸುತ್ತಿದ್ದುದಾಗಿಯೂ ತಿಳಿಸುವ ಶಾಸನಗಳಿವೆಯಾದರೂ (ಎಪಿಗ್ರಾಫಿಯ ಇಂಡಿಕ 13, ಪು. 25. 33 ; ಇಂಡಿಯನ್ ಆಂಟಿಕ್ವೆರಿ 19, ಪು. 248) ಈತನನ್ನು 4ನೆಯ ಮಲ್ಲಿಕಾರ್ಜುನನೆಂದು ಡಾ. ಅಯ್ಯನವರು ನಿರ್ದೇಶಿಸಿರುವ ಕಾರಣ - ಸೌಂದತ್ತಿಯ ರಟ್ಟವಂಶಗಲ್ಲಿ ತಿಳಿದು ಬಂದಿರುವ ಮಲ್ಲಿಕಾರ್ಜುನ ಒಬ್ಬನೇ - ಇಲ್ಲಿ ಬರೆದಿರುವುದು ಪ್ರಮಾದವೆಂದೂ 4ನೆಯ ಕಾರ್ತವೀರ್ಯ ಎಂಬುದೇ ಅಯ್ಯನವರ ಆಶಯವೆಂದೂ ಸಹಜವಾಗಿ ಊಹಿಸಬಹುದು.

ಮತ್ಪ್ರತಾಪ ಚಕ್ರವರ್ತಿ ಶ್ರೀ ವೀರಬಲ್ಲಾಳದೇವ...' ಎಂದಿರುವುದರಿಂದ ಈ ವೀರ ಬಲ್ಲಾಳನು ಚಕ್ರವರ್ತಿ ಬಿರುದುಗಳನ್ನು ವಹಿಸಿದನಂತರ, ಎಂದರೆ 1189 ರನಂತರ (ಪ್ರಾಯಶಃ 1190 ರ ಮೇಲೆ), ಆ ಪುರಾಣವನ್ನು ಬರೆದನೆಂದು ವ್ಯಕ್ತವಾಗುವುದು. ಪ್ರಾಯಶಃ 1ನೆಯ ಲಕ್ಷ್ಮೀದೇವನ ಆಳಿಕೆಯ ಅಂತ್ಯಭಾಗದಲ್ಲಿ 'ಲೀಲಾವತಿ'ಯನ್ನೂ ವೀರಬಲ್ಲಾಳನು ಚಕ್ರವರ್ತಿ ಬಿರುದುಗಳನ್ನು ಧರಿಸಿ ಚಕ್ರವರ್ತಿಯಾಗಿ ಆಳುವುದಕ್ಕೆ ಪ್ರಾರಂಭಿಸಿದ ಸಮಯದಲ್ಲಿ 'ನೇಮಿನಾಥ ಪುರಾಣ'ವನ್ನೂ ಬರೆದಿರಬಹುದು. ಎಂದರೆ, ಕ್ರಿ.ಶ. 1185-1195 ರಲ್ಲಿ ಈ ಕವಿ ತನ್ನ ಕಾವ್ಯಗಳನ್ನು ಬರೆದನೆಂದು ನಾವು ಹೇಳಬಹುದು.[11]

ಈ ಎರಡು ಅಭಿಪ್ರಾಯಗಳನ್ನು[12] ಇಲ್ಲಿ ಸ್ವಲ್ಪಮಟ್ಟಿಗೆ ವಿಮರ್ಶಿಸಬಹುದು. 2ನೆಯ ಬಲ್ಲಾಳನ ಕಾಲ ಕ್ರಿ.ಶ. 1173 ರಿಂದ 1220 ಎಂದು ಖಚಿತವಾಗಿದ್ದು ಆ ಅವಧಿಯಲ್ಲಿ ಕವಿಯ ಹೇಳಿಕೆಯಂತೆ 'ನೇಮಿನಾಥ ಪುರಾಣ'ವು ರಚಿತವಾಗಿರುವುದು ಸ್ಪಷ್ಟವಾಗಿದ್ದರೂ ಸರಿಯಾದ ಆಧಾರಗಳು ದೊರೆಯದೆ ಅನಿರ್ದಿಷ್ಟವಾಗಿರುವ 1ನೆಯ ಲಕ್ಷ್ಮೀಧರನ ಕಾಲವನ್ನು ಸ್ಥೂಲವಾಗಿ 1170 ಎಂದಿರಿಸಿಕೊಂಡು ಅದೇ ಕಾಲವನ್ನು, ನೇಮಿಚಂದ್ರನಿಗೆ ಕವಿಚರಿತೆಕಾರರು ಕೊಟ್ಟಿದ್ದಾರೆ. ಆದ್ದರಿಂದ ಅವರ ನಿರ್ಣಯ ಸ್ಥೂಲಮಾನದ್ದು ಎಂದು ಮಾತ್ರ ಹೇಳಬಹುದು. ಡಾ. ಎ. ವೆಂಕಟಸುಬ್ಬಯ್ಯ ನವರು 1165ರ 3ನೆಯ ಕಾರ್ತವೀರ್ಯನ ಶಾಸನವೂ 1199ರ 4ನೆಯ ಕಾರ್ತ ವೀರ್ಯನ ಶಾಸನವೂ ದೊರೆತಿದೆಯೆಂಬುದರಿಂದ 3ನೆಯ ಕಾರ್ತವೀರ್ಯನ ಮಗ 1ನೆಯ ಲಕ್ಷ್ಮೀದೇವನ ಕಾಲ 1165-90 ಎಂದು ಸ್ಥೂಲವಾಗಿ ಗ್ರಹಿಸಿ 'ಲೀಲಾವತಿ'ಯ ಹೇಳಿಕೆಗೆ ಸರಿಹೊಂದುವಂತೆ (14–135, 149) ಚಂದಲದೇವಿ ಅಥವಾ ಚಂದ್ರಿಕಾದೇವಿಯೆಂಬ ಪತ್ನಿ ಈ ಲಕ್ಷ್ಮೀದೇವನಿಗೇ ಇದ್ದುದಾಗಿ ಶಾಸನ ಗಳಲ್ಲಿ ಹೇಳಿದೆಯಾದ್ದರಿಂದ ನೇಮಿಚಂದ್ರೋಕ್ತನಾದವನು ಈತನೇ ಎಂದು ಕಂಡು ಹಿಡಿದು ಈ ಅವಧಿಯಲ್ಲಿ 'ಲೀಲಾವತಿ'ಯನ್ನು ಬರೆದದ್ದು ಸ್ಪಷ್ಟವೆಂದಿದ್ದಾರೆ. ಸಮಕಾಲೀನನಾದ 2ನೆಯ ಬಲ್ಲಾಳನು 1173 ರಿಂದ 1220 ರವರೆಗೆ ಆಳುತ್ತಿ ದ್ದುದು ಖಚಿತವಾದರೂ 'ನೇಮಿನಾಥ ಪುರಾಣ'ದಲ್ಲಿ ಆತನಿಗೆ ಚಕ್ರವರ್ತಿ ವಿಶೇಷಣ

---

11 ಡಾ. ಎ. ವೆಂಕಟಸುಬ್ಬಯ್ಯ, ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ (1927), ಪು. 87-91.

12 ಲೀಲಾವತೀ ಪ್ರಬಂಧ'ದ ಈಚಿನ ಪರಿಷ್ಕರಣದಲ್ಲಿ (1966, ಮೈಸೂರು) ಅದರ ಸಂಪಾದಕರಲ್ಲಿ ಒಬ್ಬರಾದ ಪ್ರೊ. ದೇ. ಜವರೇಗೌಡ ಅವರು 'ಕವಿ-ಕಾವ್ಯ ವಿಮರ್ಶೆ'ಯೆಂಬ ವಿಸ್ತಾರವಾದ ಹಾಗೂ ಉಪಯುಕ್ತವಾದ ಉಪೋದ್ಘಾತದ ಆದಿಭಾಗದಲ್ಲಿ, ನೇಮಿಚಂದ್ರನ ಪದ್ಯಗಳನ್ನು ಉದ್ಧರಿಸದ 'ಕಾವ್ಯಾವಲೋಕನ' ಕರ್ತೃ ನಾಗವರ್ಮನಿಗೂ, ನೇಮಿಚಂದ್ರನನ್ನು ಸ್ಮರಿಸಿರುವ ಜನ್ನಕವಿಗೂ ನಡುವೆ ಎಂದರೆ 1145 ರಿಂದ 1209 ರವರೆಗಿನ ನಡುವಣ ಅವಧಿಯಲ್ಲಿ ನೇಮಿಚಂದ್ರನು ಜೀವಿಸಿದ್ದಿರಬೇಕೆಂದು ಊಹಿಸಿದ್ದಾರೆ.

ವನ್ನು ಹೇಳಿರುವುದರಿಂದ ಆತ ಚಕ್ರವರ್ತಿ ಬಿರುದುಗಳನ್ನು ವಹಿಸಿದಮೇಲೆ ಎಂದರೆ 1189 ರನಂತರ, ಆ ಪುರಾಣವನ್ನು ಬರೆದಿರಬೇಕೆಂದು ಗ್ರಹಿಸಿದ್ದಾರೆ. 1ನೆಯ ಲಕ್ಷ್ಮೀದೇವನ ಆಳಿಕೆಯ ಅಂತ್ಯಭಾಗದಲ್ಲಿ 'ಲೀಲಾವತಿ'ಯೂ 2ನೆಯ ಬಲ್ಲಾಳನು ಚಕ್ರವರ್ತಿಯಾಗಿ ಆಳಲು ಪ್ರಾರಂಭಿಸಿದ ಸಮಯದಲ್ಲಿ 'ನೇಮಿನಾಥ ಪುರಾಣ'ವೂ ಪ್ರಾಯಶಃ ರಚಿತವಾಗಿರಬಹುದೆಂದು ಊಹಿಸಿದ್ದಾರೆ. ಅವರ ಗ್ರಹಿಕೆ ಸಾಧಾರ ವಾಗಿದೆ; ಹೆಚ್ಚು ವಿವರಗಳ ಬೆಂಬಲದಿಂದ ವಿಶದವಾಗಿದೆ.

1ನೆಯ ಲಕ್ಷ್ಮೀದೇವನ (ಲಕ್ಷ್ಮಣನ ಅಥವಾ ಲಕ್ಷ್ಮೀಧರನ) ಕಾಲದ ಶಾಸನ ವೊಂದು ಸಂಪಗಾವ್‌ದ ಬಳಿಯ ಹಣ್ಣಿಕೇರಿಯಲ್ಲಿ ದೊರೆತಿದೆ.[13] ಇಲ್ಲಿ ಈತನಿಗೆ ಹೇಳಿರುವ 1209 ಮತ್ತು 1257 ಈ ಎರಡು ವರ್ಷಗಳೂ ಅತೃಪ್ತಿಕರವೆಂದೂ ದೋಷಯುಕ್ತವೆಂದೂ ವಿದ್ವಾಂಸರು ಕಂಡುಹಿಡಿದಿರುವ ಕಾರಣ[14] ಈತನ ಕಾಲ ನಿರ್ಣಯಕ್ಕೆ ಆ ಶಾಸನ ಸಾಧನವಾಗುವಂತಿಲ್ಲ. ಈ ಲಕ್ಷ್ಮೀದೇವನ ತಂದೆ 3ನೆಯ ಕಾರ್ತವೀರ್ಯನು 1188ರವರೆಗೆ ಆಳುತ್ತಿದ್ದಂತೆಯೂ ಮಗ 4ನೆಯ ಕಾರ್ತ ವೀರ್ಯನು 1199ರಿಂದ ಆಳಲಾರಂಭಿಸಿದಂತೆಯೂ ಗುರುತಿಸಿ, ಈತನ ಕಾಲವನ್ನು ಈ ಎರಡು ವರ್ಷಗಳ ನಡುವೆಯೆಂದು ಚರಿತ್ರಕಾರರು ಅನುಮಾನಿಸಿದ್ದಾರೆ.[15] 1165ರ ಎಕ್ಸಂಬಿ ಶಾಸನದಲ್ಲಿ 3ನೆಯ ಕಾರ್ತವೀರ್ಯನ ನಾಮೋಲ್ಲೇಖವಿದೆ. ಅದಕ್ಕೆ ಈಚೆಯದೆಂದು ತಕ್ಕಮಟ್ಟಿಗೆ ದೃಢವಾಗಿ ಹೇಳಬಹುದಾದ ಕೊಣ್ಣೂರು ಶಾಸನದಲ್ಲಿ ಕಾರ್ತವೀರ್ಯನನ್ನು ಮಹಾಮಂಡಲೇಶ್ವರ ಎಂದೇ ಅಲ್ಲದೆ ಚಕ್ರವರ್ತಿ ಯೆಂದೂ ಹೇಳಿದೆ. 1187ರ ತೇರದಾಳದ ಶಾಸನದಲ್ಲಿ ಕಾರ್ತವೀರ್ಯನ ಹೆಸರು ಕಾಣದಿದ್ದರೂ ಅದು ಪಶ್ಚಿಮ ಚಾಳುಕ್ಯರ ದೆಸೆಯಿಂದಾದ ಒಂದು ಅಪಜಯವನ್ನೂ 4ನೆಯ ಸೋಮೇಶ್ವರನ ಪರಮಾಧಿಕಾರದ ಮಾನ್ಯತೆಯನ್ನೂ ಸೂಚಿಸುತ್ತದೆ. ಈ ಕಾರಣದಿಂದ 1188, 3ನೆಯ ಕಾರ್ತವೀರ್ಯನ ಆಳಿಕೆಯ ಕೊನೆಗಾಲವೆಂದು ಗಣಿಸಿದೆ. ಇನ್ನು ಈ ಕಡೆ 1ನೆಯ ಲಕ್ಷ್ಮೀದೇವನ ಮಗ 4ನೆಯ ಕಾರ್ತವೀರ್ಯನು ವೇಣುಗ್ರಾಮದಲ್ಲಿ ಆಳುತ್ತಿದ್ದಂತೆ ತಿಳಿಸುವ 1204ರ ಎರಡು ಬೆಳಗಾಮಿನ ಶಾಸನಗಳು ದೊರೆತಿರುವುದರಿಂದ ಸಾಧಾರಣವಾಗಿ ಈತನು ಸು. 1199 ರಲ್ಲಿ ಪಟ್ಟಾಭಿಷಿಕ್ತನಾದಂತೆ ಭಾವಿಸಲಾಗಿದೆ. ಆದ್ದರಿಂದ ಕ್ರಿ. ಶ. 1188ರಿಂದ 1199ರ ನಡುಗಾಲವನ್ನು 1ನೆಯ ಲಕ್ಷ್ಮೀದೇವನಿಗೆ ಹೇಳಿದೆ. ಈ ಅವಧಿಯಲ್ಲೇ

---

13 P. B. Desai : *Jainism in South Inida*, p. 118 ; K. G. Kundangar : *Inscriptions in Northern Karnataka and Kolhapur State*, No. 22, pp. 99-104 ; ಅಲ್ಲದೆ ಇದೇ ಗ್ರಂಥದ ಇಂಗ್ಲಿಷ್ ಉಪೋದ್ಘಾತದ ಪು. 55 ನೋಡಿ.

14-15 Dinkar Desai : *The Mahamandalesvaras under the Chalukyas of Kalyani*, p. 179

'ಲೀಲಾವತಿ' ಯನ್ನು ರಚಿಸಿದ್ದು ಸ್ಪಷ್ಟ. ನಿರ್ದಿಷ್ಟ ಕಾಲವನ್ನು ತಿಳಿಯುವುದಕ್ಕೆ ಬೇರೆ ಆಧಾರಗಳು ಬೇಕಾಗಿವೆ. ಹೊಯ್ಸಳ ಚಕ್ರವರ್ತಿ 2ನೆಯ ಬಲ್ಲಾಳನ ಕಾಲ 1173ರಿಂದ 1220 ಎಂದು ನಿಶ್ಚಿತವಾಗಿದೆ.[16] ಈತನಿಗೆ 1173ರ ಜುಲೈ 21 ರಂದು ದೋರಸಮುದ್ರದಲ್ಲಿ ಪಟ್ಟವಾಯಿತೆಂದೂ ಈತನು 1220ರಲ್ಲಿ ತೀರಿಕೊಂಡ ನೆಂದೂ ತಿಳಿದು ಬರುತ್ತದೆ. ಈತನು ಚಾಳುಕ್ಯರ ಬ್ರಹ್ಮನೆಂಬ ಸೇನಾಪತಿಯನ್ನು ಸು. 1189ರಲ್ಲಿ ಸೋಲಿಸಿ ಸ್ವತಂತ್ರನಾದರೂ 1191-92ರಲ್ಲಿ ಸೊರಟೂರು ಯುದ್ಧದಲ್ಲಿ (ಯಾದವ ಭಿಲ್ಲಮನ ಸೇನಾಪತಿ ಜೈತ್ರಸಿಂಹನೊಡನೆ ಬಲ್ಲಾಳನ ಕಾಳಗವು ಸ್ವಲ್ಪ ಮೊದಲು ಎಂದರೆ 1189-90ರಲ್ಲಿಯೇ ತೊಡಗಿತು.) ಸಂಪೂರ್ಣ ವಾಗಿ ಯಾದವರನ್ನು ಗೆದ್ದ ಮೇಲೆಯೇ ಚಕ್ರವರ್ತಿಯ ಬಿರುದುಗಳನ್ನು ವಹಿಸಿದಂತೆ ತಿಳಿಯುತ್ತದೆ. 1190ರಲ್ಲಿ ಆತನು ಮೊದಲು 'ನಿಶ್ಶಂಕ ಪ್ರತಾಪ ಚಕ್ರವರ್ತಿ' ಎಂಬ ಬಿರುದನ್ನು ವಹಿಸಿದನು. ಆದ್ದರಿಂದ 1190ರ ಮೇಲೆ 'ನೇಮಿನಾಥ ಪುರಾಣ'ವನ್ನು ರಚಿಸಿದ್ದು ಎಂಬುದು ಸಯುಕ್ತಿಕವಾಗಿದೆ.

ಜನ್ನನು 'ಅನಂತನಾಥ ಪುರಾಣ'ದಲ್ಲಿ (1230)

ಎನಗನುಕೂಲಮಕ್ಕೆ ಗುಣವರ್ಮನ ಜಾಣ್ಣುಡಿ ಪಂಪನಿಂಪು ಪೊ
ನ್ನನ ಬಗೆ ನಾಗವರ್ಮನ ಬಹುಜ್ಞತೆ ರನ್ನನ ಕಾಂತಿ ನಾಗಚಂ
ದ್ರನ ರಸಭಾವಮುಗ್ಗಳನ ವಕ್ರತೆ ನೇಮಿಯ ದೇಸೆ ಪುಷ್ಪಬಾ
ಣನ ಮೃದುಬಂಧಮೀ ಕವಿಗಳಲ್ತೆ ಜಿನೇಂದ್ರ ಪುರಾಣ ಕರ್ತೃಗಳ್

ಎಂಬ ಒಂದು ಪದ್ಯದಲ್ಲಿ (1–35) ನೇಮಿಚಂದ್ರನನ್ನು ಜಿನೇಂದ್ರ ಪುರಾಣ ಕರ್ತೃ ಗಳಲ್ಲಿ ಒಬ್ಬನನ್ನಾಗಿ ಉಲ್ಲೇಖಿಸಿದ್ದಾನೆ. ಇಲ್ಲಿ ಪುರಾಣ ಕರ್ತೃಗಳ ಪರಿವಿಡಿಯನ್ನು ಕವಿಗಳ ಕಾಲಾನುಕ್ರಮವನ್ನು ಅನುಸರಿಸಿ ಕೊಟ್ಟಿರುವುದು ಗಮನಿಸತಕ್ಕದ್ದಾಗಿದೆ. ಇದನ್ನೊಪ್ಪಿದರೆ ನೇಮಿಚಂದ್ರನು ಅಗ್ಗಳನಿಂದ ಈಚೆಗೆ (1189) ಎಂದು ಸಿದ್ಧ ವಾಗುತ್ತದೆ. 'ಚಂದ್ರಪ್ರಭ ಪುರಾಣ'ದಲ್ಲಿ ಕಂಡುಬರುವ 'ಸಾಹಿತ್ಯವಿದ್ಯಾವಿನೋದ', "ಸುಲಲಿತ ಕವಿತಾ ನರ್ತಕೀ ನೃತ್ಯರಂಗ' ಮುಂತಾದ ಬಿರುದುಗಳು ಸ್ವಲ್ಪ ವ್ಯತ್ಯಾಸ ಹೊಂದಿ 'ವಿಶ್ವವಿದ್ಯಾವಿನೋದ', 'ಸರಸ ಕೃತಿ ಕಲಾ ನರ್ತಕೀ ನೃತ್ಯರಂಗ' ಎಂದು ಲೀಲಾವತಿಯಲ್ಲಿಯೂ ಕಂಡುಬರುವುದಲ್ಲದೆ (7–118–1–110) ಇಬ್ಬರ ಪುರಾಣ ಗಳಲ್ಲಿಯೂ ಅಂಕಿತಗದ್ಯದಲ್ಲಿ 'ನಿಧಾನ ದೀಪವರ್ತಿ' ಎಂಬ ಮಾತು ಬಂದಿರುವುದು ಕೂಡ ಗಮನಾರ್ಹವಾಗಿದೆ. 'ಪಾರ್ಶ್ವನಾಥ ಪುರಾಣ'ದಲ್ಲಿ (1222) ಪಾರ್ಶ್ವ ಪಂಡಿತನು ನೇಮಿಚಂದ್ರನ 'ಲೀಲಾವತಿ' ಯನ್ನು ಶ್ಲಾಘಿಸಿದ್ದಾನೆ (1-67); ತಾನೇ ರಚಿಸಿರುವ ಕಲ್ಹೊಳೆ ಶಾಸನದಲ್ಲಿ (1204) 1ನೆಯ ಲಕ್ಷ್ಮೀಧರನಿಗೆ 'ರೂಪ

---

16 William Coelho : *The Hoysala Vamsa*, p. 333. ಹಾಗೆಯೇ ಇದೇ ಗ್ರಂಥದಲ್ಲಿ ಪು. 135, 154-160 ಇವನ್ನೂ ನೋಡಿ.

ಕಂದರ್ಪದೇವ'ನೆಂದಿದ್ದಾನೆ. ಈ ಮಾತು 'ಲೀಲಾವತಿ'ಯಲ್ಲಿ ಬರುವುದು ಸರಿ; 'ನೇಮಿನಾಥ ಪುರಾಣ'ದಲ್ಲಿ ವಸುದೇವನಿಗೂ ಅನ್ವಯಿಸಿದೆ (6-37). ಜನ್ನನ ಪತ್ನಿಗೆ ಗುರುವಾದ ಬಾಳಚಂದ್ರನು ರಚಿಸಿರುವ ಎರಡು ಬೆಳಗಾಮಿನ ಶಾಸನಗಳಲ್ಲಿ (1204) ಕವಿ ತನ್ನನ್ನು 'ಚತುರ್ಭಾಷಾ ಕವಿ ಚಕ್ರವರ್ತಿ'ಯೆಂದೂ 'ಕವಿಕಂದರ್ಪ'ನೆಂದೂ ಕರೆದುಕೊಂಡಿದ್ದಾನೆ.

ಈ ಸಂಗತಿಗಳನ್ನು ಪರಿಶೀಲಿಸಿದರೆ ನೇಮಿಚಂದ್ರನು 1ನೆಯ ಲಕ್ಷ್ಮೀಧರನ ಆಶ್ರಯದಲ್ಲಿ 1188ರಿಂದ 1192ರ ಅವಧಿಯೊಳಗೆ 'ಲೀಲಾವತಿ'ಯನ್ನೂ 1192 ರಿಂದ 1200ರ ಅವಧಿಯೊಳಗೆ ವೀರಬಲ್ಲಾಳನ ಮಹಾಪ್ರಧಾನನಾದ ಸಜ್ಜೆವಳ್ಳ ಪದ್ಮನಾಭನ ಆಶಯದಂತೆ 'ನೇಮಿನಾಥಪುರಾಣ'ವನ್ನೂ ಬರೆದಿರುವುದು ಸಾಧ್ಯ ಎಂದು ಹೇಳಬಹುದು.

ರಟ್ಟರಾಜ 1ನೆಯ ಲಕ್ಷ್ಮೀಧರನ ಪ್ರತ್ಯಕ್ಷ ರಾಜಾಶ್ರಯದಲ್ಲಿ 'ಲೀಲಾವತಿ'ಯನ್ನು ಬರೆದ ನೇಮಿಚಂದ್ರನು 'ನೇಮಿನಾಥ ಪುರಾಣ'ವನ್ನು ಹೊಯ್ಸಳ ಚಕ್ರವರ್ತಿಯ ಪ್ರಧಾನನೊಬ್ಬನ ಅಥವಾ ಸೆಜ್ಜೆವಳನೊಬ್ಬನ ಪ್ರೇರಣೆಯಂತೆ ಬರೆಯುವ ಸಂದರ್ಭವೇಕೆ ಬಂತು? ಒಂದು ಆಶ್ರಯವನ್ನು ತೊರೆದು ಇನ್ನೊಂದು ಆಶ್ರಯದ ನೆರಳಿಗೆ ಸೇರುವಂತೆ ಸಂದರ್ಭವೇನಾದರೂ ಘಟಿಸಿತೇ? ಈ ಸೆಜ್ಜೆವಳ್ಳ ಪದ್ಮನಾಭನು ಯಾರು? ಇವು ವಿಚಾರಣೀಯವಾದ ವಿಷಯಗಳು.

12ನೆಯ ಶತಮಾನದ ಕಡೆಯ ದಶಕದಲ್ಲಿ ಹೊಯ್ಸಳ ವೀರಬಲ್ಲಾಳನು ಒಂದು ಕಡೆ ಪಶ್ಚಿಮ ಚಾಳುಕ್ಯ ಚಕ್ರವರ್ತಿ ನಾಲ್ವಡಿ ಸೋಮೇಶ್ವರನ, ಇನ್ನೊಂದು ಕಡೆ ಯಾದವರಾಜ ಭಿಲ್ಲಮನ ಪ್ರತಾಪವನ್ನಡಗಿಸಿ ಸ್ವತಂತ್ರನಾಗಲು ಯತ್ನಿಸುತ್ತಿದ್ದನು. ಈ ಹೋರಾಟವು ಒಂದು ದೃಷ್ಟಿಯಿಂದ ಲಕ್ಷ್ಮೀಧರನು ತನ್ನಮಟ್ಟಿಗೆ ಸ್ವತಂತ್ರನಾಗಿ ಹೊಸ ರಾಜಧಾನಿ ಬೆಳಗಾಮಿನಲ್ಲಿದ್ದುಕೊಳ್ಳಲು ಅಡ್ಡಿಯಾಗಲ್ಲಿಲ್ಲ. ಅಲ್ಲದೆ ಆತನ ಸೈನಿಕ ಶಕ್ತಿಯೂ ಪ್ರಬಲವಾಗಿತ್ತು. ಯಾದವರ ಸಂಪೂರ್ಣ ಪರಾಜಯವು ಘಟಿಸುವ ತನಕ ಎಂದರೆ 1192ರ ವರೆಗೆ ಲಕ್ಷ್ಮೀಧರನ ಆಶ್ರಯ ನೇಮಿಚಂದ್ರನಿಗೆ ಅನುಕೂಲಕರವಾಗಿದ್ದು ಆತನು ಈಯವಧಿಯೊಳಗೆ 'ಲೀಲಾವತಿ'ಯನ್ನು ಆ ದೊರೆಯ ಪ್ರೋತ್ಸಾಹದಿಂದ ರಚನೆಮಾಡಿದನು. ಅವನು ಅದೇ ಆಶ್ರಯದಲ್ಲಿರುತ್ತಿದ್ದರೂ ಸ್ವತಃ ಜೈನಮತೀಯರೂ ಜಿನ ಬಸದಿಗಳನ್ನು ನಿರ್ಮಿಸಿದವರೂ ಅವುಗಳಿಗೆ ದಾನದತ್ತಿಗಳನ್ನು ಬಿಟ್ಟವರೂ ಜೈನ ಕವಿಜನಾಶ್ರಯರೂ ಆಗಿದ್ದ ರಟ್ಟರಾಜರ ಪ್ರೋತ್ಸಾಹದಿಂದ 'ನೇಮಿನಾಥ ಪುರಾಣ'ವನ್ನು ರಚಿಸುವುದಕ್ಕೆ ಕೂಡ ವಾತಾವರಣ ಅನುಕೂಲವಾಗಿಯೇ ಇರುತ್ತಿತ್ತು. ಆದರೆ ಹಾಗೇಕೆ ಆಗಲಿಲ್ಲ? 2ನೆಯ ಬಲ್ಲಾಳನು ಚಕ್ರವರ್ತಿಯಾಗಿ ಪ್ರವರ್ಧಮಾನಕ್ಕೆ ಬಂದಮೇಲೆ ಮಹಾಮಂಡಲೇಶ್ವರರಾದ ರಟ್ಟರ ಆಶ್ರಯವನ್ನು ಬಿಟ್ಟುಕೊಟ್ಟು ದೊರ

ಸಮುದ್ರವನ್ನು ಸೇರಿ ವೀರಬಲ್ಲಾಳನ ಪ್ರಧಾನ ಸೆಜ್ಜೆವಳ್ಳ ಪದ್ಮನಾಭನ ಪ್ರೇರಣೆಯಂತೆ 'ನೇಮಿನಾಥ ಪುರಾಣ'ವನ್ನು ರಚಿಸಿರಬಹುದು. ಆದರೆ ರಾಜಾಶ್ರಯವನ್ನು ತೊರೆದು ಬಂದು ಚಕ್ರವರ್ತಿಯ ಅಧಿಕಾರಿಯೊಬ್ಬನ ಆಶ್ರಯವನ್ನು ಪಡೆದು ಕೃತಿ ರಚನೆ ಮಾಡಿದನೆಂದರೆ ನಂಬುವುದು ಕಷ್ಟವಾಗುತ್ತದೆ. ವೀರಬಲ್ಲಾಳನ ಆಸ್ಥಾನವನ್ನು ಸೇರಿ ಅಲ್ಲಿಯೇ ಕವಿಯಾಗಿ ಚಕ್ರವರ್ತಿಯಿಂದ ಮನ್ನಣೆಪಡೆದಂತೆ ನಿಶ್ಚಿತವಾಗಿ ತಿಳಿಯದು. ಅತಿಶಯ ಸಂಪದಭ್ಯುದಯಗಳಿಂದ ಚಕ್ರವರ್ತಿಯಾಗಿ ಮೆರೆದ ವೀರಬಲ್ಲಾಳನ ಹಲವು ಸಚಿವರ ಪಸಾಯ್ತರ ಹೆಸರುಗಳು ಶಾಸನಗಳಿಂದ ನಮಗೆ ತಿಳಿದುಬಂದಿದ್ದರೂ ಸಚಿವನೆಂದೂ ಪ್ರಧಾನನೆಂದೂ ಮಹಾಪ್ರಧಾನನೆಂದೂ ನೇಮಿಚಂದ್ರನಿಂದ ಪರಿಕೀರ್ತಿತನಾಗಿರುವ ಸೆಜ್ಜೆವಳ್ಳ ಪದ್ಮನಾಭನ ಹೆಸರು ನಮಗೆ ಎಲ್ಲಿಯೂ ಕಾಣಿಸುವುದಿಲ್ಲ.[17]

---

17 ವೀರಬಲ್ಲಾಳನ ಕೈಕೆಳಗೆ ರಾಜಪ್ರತಿನಿಧಿಯಾಗಿ ಬನವಾಸಿಯಲ್ಲಿ 1194ರಿಂದ ಪ್ರಾಯಶಃ 1204ರವರೆಗೆ ಇರುತ್ತಿದ್ದ ಪದ್ಮಿದೇವನೆಂಬ ಒಬ್ಬ ವ್ಯಕ್ತಿಯ ಹೆಸರೇನೋ ಶಾಸನವೊಂದರಿಂದ ತಿಳಿದುಬಂದಿದೆ (ಎಪಿಗ್ರಾಫಿಯ ಕರ್ನಾಟಿಕ, VII SK. 138). ಶಾಸನದ ಕಾಲ 1194. ಈ ಪದ್ಮಿದೇವ ಚಾವಣ ದಂಡಾಧಿಪತಿ-ಚಂದಲದೇವಿಯರ ಮಗ. 'ಈತನ ಗುಣಗಣನೆಗೆ ಸಮರ್ಥವಾದ ಕವಿ ಯಾರು ? ಈತನ ವಿಕ್ರಮ ದಾನಗುಣಗಳು ಸಿಂಹವನ್ನೂ ಕರ್ಣನನ್ನೂ ಮರಸುವಂತಿದ್ದವು. ಈತ ಪ್ರಖ್ಯಾತ ರಾಯದಂಡನಾಥ, ಗಂಡಪೆಂಡೇರ ಲಾಂಛನ, ದ್ವಾಸಪತ್ತಿಯೋಗ ನಿಪುಣ, ಶೂರಾಗ್ರಣಿ ಎಂದು ಗಾಯಕರಿಂದ ಪರಿಕೀರ್ತಿತನಾದವನು, ಬನವಾಸಿ 12000ವನ್ನು ವೀರಬಲ್ಲಾಳನಿಂದ ಪಡೆದು ಆಳುತ್ತಿದ್ದು ಬಲಿಪುರದಲ್ಲಿ ಠಾಣೆಯನ್ನು ಹೂಡಿ ಇರುತ್ತಿದ್ದನು - ಎಂದು ಮುಂತಾಗಿ ಈತನ ವಿಚಾರವನ್ನು ಆ ಶಾಸನದಲ್ಲಿ ಹೇಳಿದೆ. ಈತನೇ ಸೆಜ್ಜೆವಳ್ಳ ಪದ್ಮನಾಭನೇ ಹೇಗೆ ಎಂದು ತಿಳಿಯುವುದು ಕಷ್ಟ.

ಅಮೆರಿಕೆಯಲ್ಲಿನ ಸಾಮಾಜಿಕ ಪಕ್ಷಪಾತ

ಎನ್. ಪ್ರಭುಸ್ವಾಮಿ

1

ಭಾರತದಲ್ಲಿ ಹಿಂದುಗಳೊಳಗೆ ಅಸ್ಪೃಶ್ಯತೆ ಕಂಡುಬರುವುದರಿಂದ ಇಲ್ಲಿ ಅನೇಕ ವಿದ್ಯಾವಂತರು ಮತ್ತು ವಿದ್ಯಾರ್ಥಿಗಳು ನಮ್ಮ ಸಮಾಜವನ್ನೇ ಕಟುವಾಗಿ ಟೀಕಿಸುವುದನ್ನು ಕಾಣುತ್ತೇವೆ. ಜೊತೆಗೆ, ಅನೇಕ ವಿದ್ವಾಂಸರು ಪಾಶ್ಚಾತ್ಯ ದೇಶಗಳನ್ನು ಮತ್ತು ಕ್ರೈಸ್ತಮತವನ್ನು ಪ್ರಶಂಸಿಸುತ್ತಾರೆ. ಏಕೆಂದರೆ, ಆ ದೇಶಗಳಲ್ಲಿ ಅಸ್ಪೃಶ್ಯತೆಯಂತಹ ಸಾಮಾಜಿಕ ಅರಿಷ್ಟ ಕಂಡುಬರುವುದಿಲ್ಲ ಎಂಬುದೇ ಅವರ ವಾದ. ಹೀಗೆ ನಮ್ಮ ದೇಶದ ವಿದ್ವಾಂಸರೇ ವಾದ ಮಾಡುವುದರಿಂದ ನಮ್ಮ ವಿದ್ಯಾರ್ಥಿಗಳ ಮನದಲ್ಲಿ ಒಂದು ವಿಚಿತ್ರವಾದ ಅಭಿಪ್ರಾಯ ಮೂಡಿದೆ. ವಿದ್ಯಾರ್ಥಿಗಳು ನಮ್ಮ ಸಮಾಜವನ್ನು ನಿಕೃಷ್ಟ ಮನೋಭಾವದಿಂದ ನೋಡುವುದರ ಜೊತೆಗೆ ಪಾಶ್ಚಾತ್ಯ ರೀತಿಯ ಜೀವನವನ್ನು ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಕಂಡುಬರುವ ನಡವಳಿಕೆಗಳನ್ನು ಅನುಕರಿಸಲು ಪ್ರಾರಂಭಿಸಿದ್ದಾರೆ. ಹೀಗೆ ಮಾಡುವುದರಿಂದ ತಮಗೆ ಸಮಾಜದಲ್ಲಿ ಗೌರವ ದೊರೆಯುವುದೆಂದೂ, ತಾವು ಸಮಾಜದಲ್ಲಿ ವಿಶಿಷ್ಟ ವರ್ಗಕ್ಕೆ ಸೇರಿದವರೆಂಬ ಮನ್ನಣೆ ದೊರೆಯುವುದೆಂದೂ ಭಾವಿಸುತ್ತಾರೆ.

ಪಾಶ್ಚಾತ್ಯ ದೇಶಗಳ ಜನರ ವಿಷಯವಾಗಿ ಮತ್ತು ಬೇರೆ ಜನಾಂಗಗಳ ವಿಷಯದಲ್ಲಿ ಪಾಶ್ಚಾತ್ಯರು ಹೊಂದಿರುವ ಅಭಿಪ್ರಾಯವನ್ನು ನಮ್ಮ ವಿದ್ಯಾರ್ಥಿಗಳು ಸರಿಯಾಗಿ ತಿಳಿದುಕೊಂಡಿಲ್ಲ ಎಂಬ ಅಭಿಪ್ರಾಯದಿಂದ ಈ ಲೇಖನವನ್ನು ಬರೆಯಲಾಗಿದೆ. ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಯಂತಹ ಅರಿಷ್ಟಗಳು ಭಾರತದಲ್ಲಿ ಮಾತ್ರವೇ ಕಂಡುಬರುವುದಿಲ್ಲ, ಇಲ್ಲಿ ಈ ಅರಿಷ್ಟಗಳು ಎದ್ದು ಕಾಣಬಹುದು. ಆದರೆ ಪಾಶ್ಚಾತ್ಯ ದೇಶಗಳಲ್ಲಿಯೂ ಅಲ್ಲಿಯ ಜನರ ಮಧ್ಯೆ ವಿವಿಧ ರೀತಿಯ ಪಕ್ಷಪಾತ ಮನೋಭಾವ ಇರುವುದನ್ನು ಕಾಣುತ್ತೇವೆ. ಆ ದೇಶಗಳನ್ನು ನೋಡಿದಾಗ ಅಲ್ಲಿಯ ಜನರಲ್ಲಿ ಕಂಡುಬರುವ ಪಕ್ಷಪಾತ ಮನೋಭಾವವು ನಮ್ಮ ದೇಶದ ಜಾತಿ ಮನೋಭಾವಕ್ಕಿಂತಲೂ ತೀವ್ರವಾದುದು ಎಂಬುದನ್ನು ನಾವು ಮನಗಾಣಬಹುದು. ಕೆಲವು ದೇಶಗಳಲ್ಲಿ ಪಕ್ಷಪಾತ ಮನೋಭಾವವು ಭಾರತದಲ್ಲಿ ಕಂಡುಬರುವಂತೆ ಮತಧರ್ಮದ ಆಧಾರದ ಮೇಲೆ ಉದ್ಭವಿಸಿರುವುದನ್ನು ನೋಡಬಹುದು. ಇನ್ನು ಕೆಲವು ದೇಶಗಳಲ್ಲಿ ಜನರ ಬಣ್ಣದ ಆಧಾರದ ಮೇಲೆ ಅಥವಾ ಜನರ ಬುಡ

ಕಟ್ಟಿನ ಆಧಾರದ ಮೇಲೆ ಪಕ್ಷಪಾತ ಮನೋಭಾವವು ಬೆಳೆದು ಬಂದಿರುವುದನ್ನು ಕಾಣಬಹುದು. ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಮತ್ತು ಕೆನಡಾ ದೇಶದಲ್ಲಿ ನಾನು ಒಬ್ಬ ವಿದೇಶಿ ವಿದ್ಯಾರ್ಥಿಯಾಗಿ ವಾಸಮಾಡುತ್ತಿದ್ದಾಗ ಪಡೆದ ಸ್ವಂತ ಅನುಭವದ ಆಧಾರದ ಮೇಲೆ ಪಾಶ್ಚಾತ್ಯ ದೇಶಗಳಲ್ಲಿ ಕಂಡುಬರುವ ಪಕ್ಷಪಾತ ಮನೋಭಾವ ಮತ್ತು ಅದರ ಪರಿಣಾಮಗಳನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಜನಾಂಗ ಪಕ್ಷಪಾತ ಮನೋಭಾವದ ವಿಷಯವಾಗಿ ಸಾಮಾನ್ಯ ನಿರೂಪಣೆಯನ್ನು, ಪಕ್ಷಪಾತ ಮನೋಭಾವದ ಕಾರಣಗಳನ್ನು ಮತ್ತು ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಕಂಡುಬರುವ ಜನಾಂಗ ಸಮಸ್ಯೆಯನ್ನು ಈ ಲೇಖನದ ಮುಂದಿನ ಭಾಗಗಳಲ್ಲಿ ವಿವರಿಸಲಾಗಿದೆ.

2

ವಿವಿಧ ವರ್ಗದ ಜನರ ಮಧ್ಯೆ ಕಂಡುಬರುವ ತೋರಿಕೆಯ ಲಕ್ಷಣಗಳು ಭಾಷೆಗಳು, ಬಣ್ಣ ಅಥವಾ ಸಂಸ್ಕೃತಿಯ ಆಧಾರದ ಮೇಲೆ ಜನಗಳನ್ನು ವಿಂಗಡಿಸುವಾಗ ಜನಾಂಗಗಳು ಎಂಬ ಪದವನ್ನು ಸಾಮಾನ್ಯವಾಗಿ ಉಪಯೋಗಿಸುವ ವಾಡಿಕೆಯಿದೆ. ಅನೇಕ ವಿದ್ವಾಂಸರು ತಾವು ನಡೆಸಿದ ಅಧ್ಯಯನದ ಆಧಾರದ ಮೇಲೆ ಪ್ರಪಂಚದ ವಿವಿಧ ಭಾಗಗಳಲ್ಲಿರುವ ಜನರನ್ನು ವಿಂಗಡಿಸಲು ಮಾಡಿರುವ ಯತ್ನವನ್ನು 18 ನೆಯ ಶತಮಾನದಿಂದಲೂ ಕಾಣುತ್ತೇವೆ. ಪ್ರಪಂಚದಲ್ಲಿರುವ ಜನಗಳನ್ನು ಐದು ಜನಾಂಗಗಳಿಗೆ ಸೇರಿದವರು ಎಂದು ಬ್ಲೂಮ್‌ಬಾಕ್ ವಿಂಗಡಿಸಿದನು. ಅವನು ಮಾಡಿದ ವಿಂಗಡಣೆ ಹೀಗಿದೆ: (1) ಕಾಕೇಷನ್‌ರು (ಯೂರೋಪಿಯನರು), (2) ಮಂಗೋಲಿಯನರು (3) ಅಮೆರಿಕನರು, (4) ಈತಿಯೋಪಿಯನರು ಮತ್ತು (5) ಮಲಯನರು. ವಿವಿಧ ಜನರ ಬಣ್ಣ, ತಲೆಗೂದಲು ಮತ್ತು ಅವರ ತಲೆ ಬುರುಡೆಗಳಲ್ಲಿ ಕಂಡುಬಂದ ಲಕ್ಷಣಗಳ ಆಧಾರದ ಮೇಲೆ ಮೇಲ್ಕಂಡ ವಿಂಗಡಣೆಯನ್ನು ಬ್ಲೂಮ್‌ಬಾಕ್‌ನು ಮಾಡಿದನು. ಹಕ್ಸ್‌ಲೆಯು ಈ ಕೆಳಗೆ ಕಂಡಂತೆ ವಿಂಗಡಣೆ ಮಾಡಿದನು. (1) ಆಸ್ಟ್ರೇಲಿಯಾದ ಮೂಲ ನಿವಾಸಿಗಳು (2) ನೀಗ್ರೋಗಳು (3) ಮಂಗೋಲಿಯನರು (4) ಬಿಳಿಚಾದ ಮೈ ಬಣ್ಣವುಳ್ಳ ಮನುಷ್ಯವರ್ಗದವರು (ಮೆಲನಾಕ್ರೊಐ), ಮತ್ತು (5) ಅಂದವಾದ ಮೈ ಬಣ್ಣದವರು (ಸ್ಯಾಂತೋಕ್ರಾಯ್).

ಮೇಲ್ಕಂಡ ರೀತಿಯ ವಿಂಗಡಣೆಗಳು 18ನೆಯ ಶತಮಾನ ಮತ್ತು 19ನೆಯ ಶತಮಾನದ ಆದಿಭಾಗದಲ್ಲಿ ಮಾಡಲ್ಪಟ್ಟವು. ಆಗ ಜನಾಂಗದ ಆಧಾರದ ಮೇಲೆ ರಾಷ್ಟ್ರಗಳನ್ನು ರೂಪಿಸುವ ಅಭಿಪ್ರಾಯ ಇನ್ನೂ ಬೆಳೆದು ಬಂದಿರಲಿಲ್ಲ. ಅದರ ಪರಿಣಾಮವಾಗಿ ಜನಾಂಗಗಳ ನಡುವೆ ದ್ವೇಷ ಮನೋಭಾವವು ಕಂಡುಬರುತ್ತಿರಲಿಲ್ಲ. ಯೂರೋಪು ಮತ್ತು ಅಮೆರಿಕಾ ಖಂಡಗಳಲ್ಲಿ ರಾಷ್ಟ್ರೀಯ ಮನೋಭಾವ ಬೆಳೆ

ದಂತೆಲ್ಲಾ ಮಾನವ ಕುಲದ ಆಧಾರದ ಮೇಲೆ ರಾಷ್ಟ್ರಗಳು ರೂಪಿಸಲ್ಪಟ್ಟವು. ಇದರಿಂದ ಜನಾಂಗ ದ್ವೇಷ ಬೆಳೆಯಲಾರಂಭವಾಯಿತು. ಯೂರೋಪ್ ಖಂಡದ ಜನರೆಲ್ಲರೂ, ಬಿಳಿ ಜನಾಂಗವೇ ಪ್ರಪಂಚದಲ್ಲಿರುವ ಇತರ ಜನಾಂಗಗಳಿಗಿಂತ ಉತ್ಕೃಷ್ಟವಾದುದು ಎಂಬ ಮನೋಭಿಪ್ರಾಯ ಬೆಳೆಸಿಕೊಂಡರು. ಅವರು ಆಫ್ರಿಕಾ, ಏಷ್ಯಾ ಮತ್ತು ಅಮೆರಿಕಾ ಖಂಡಗಳಲ್ಲಿದ್ದ ದೇಶಗಳನ್ನು ಗೆದ್ದು ತಮ್ಮ ವಸಾಹತುಗಳನ್ನಾಗಿ ಮಾಡಿಕೊಳ್ಳಲಾರಂಭಿಸಿದರು. ಸ್ವಲ್ಪ ಕಾಲಾನಂತರ ವಸಾಹತುಗಳಲ್ಲಿದ್ದ ಜನರಲ್ಲಿ ಜಾಗೃತಿ ಉಂಟಾಗಿ ತಮ್ಮ ದೇಶಗಳ ಸ್ವಾತಂತ್ರ್ಯ ರಕ್ಷಿಸಿಕೊಳ್ಳಲು ಯತ್ನಿಸಿದರು. ಆದರೆ ಆರ್ಥಿಕ ಮತ್ತು ರಾಜಕೀಯ ಕಾರಣಗಳಿಂದ ಯೂರೋಪಿನ ಶಕ್ತಿಬಣಗಳು ತಮ್ಮ ವಸಾಹತುಗಳನ್ನು ಬಿಟ್ಟುಕೊಡಲು ಇಷ್ಟಪಡಲಿಲ್ಲ. ಆಫ್ರಿಕಾ ಮತ್ತು ಏಷ್ಯಾ ದೇಶಗಳ ನಾಯಕರು ಯೂರೋಪಿನ ದೇಶಗಳನ್ನು ಟೀಕಿಸಲಾರಂಭಿಸಿದರು. ತಾವು ಬೇರೆ ವರ್ಣದ ಜನಾಂಗದವರಾದ್ದರಿಂದ ಬಿಳಿಯ ಜನಾಂಗಕ್ಕೆ ಸೇರಿದ ಯೂರೋಪಿಯನರು ತಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ ಎಂಬ ಆರೋಪಣೆಯನ್ನು ಆಫ್ರಿಕಾ ಮತ್ತು ಏಷ್ಯಾದ ನಾಯಕರು ಮಾಡಲಾರಂಭಿಸಿದರು. ಹೀಗೆ ಜನಾಂಗ ದ್ವೇಷ ಬೆಳೆಯಲಾರಂಭವಾಯಿತು. ಇದರ ಪರಿಣಾಮ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿಯೂ ಕಾಣಿಸಿಕೊಂಡಿತು. ಏಷ್ಯಾ ಮತ್ತು ಆಫ್ರಿಕಾದ ನಾಯಕರು ಜನಾಂಗ ದ್ವೇಷದ ಪರಿಣಾಮಗಳನ್ನು ಮುಂದಿಟ್ಟುಕೊಂಡು ತಮ್ಮ ದೇಶಗಳ ಸ್ವಾತಂತ್ರ್ಯ ಚಳುವಳಿಯನ್ನಾರಂಭಿಸಿದರು, ಮತ್ತು ತಮ್ಮ ದೇಶಗಳ ಜನಬೆಂಬಲ ಗಳಿಸಿದರು. ಕಡೆಯಲ್ಲಿ ತಮ್ಮ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಗಳಿಸಿಕೊಂಡರು. ಈಗಲೂ ಆಫ್ರಿಕಾ ಮತು ಏಷ್ಯಾದ ಕೆಲಭಾಗಗಳಲ್ಲಿ ಇಂತಹ ಹೋರಾಟ ನಡೆಯುತ್ತಿರುವುದನ್ನು ಕಾಣಬಹುದು.

ಇಪ್ಪತ್ತನೆಯ ಶತಮಾನದಲ್ಲಿ ಉಂಟಾಗಿರುವ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಂಡು ಪ್ರಪಂಚದಲ್ಲಿರುವ ಜನರನ್ನು ಈ ಕೆಳಗೆ ಕಂಡಂತೆ ವಿಂಗಡಿಸಬಹುದು. ಈಗ ವಿವಿಧ ಜನಾಂಗಗಳ ಮಧ್ಯೆ ಯಾವರೀತಿ ಪಕ್ಷಪಾತ ಮನೋಭಾವ ಉಳಿದುಬಂದಿದೆ ಎಂಬುದನ್ನು ತೋರಿಸಬಹುದು.

1. ಬಿಳಿ ಜನಾಂಗದವರು—ಯೂರೋಪು, ಉತ್ತರ ಅಮೆರಿಕಾ ಮತ್ತು ಆಸ್ಟ್ರೇಲಿಯಾ ಖಂಡಗಳಲ್ಲಿರುವವರು.

2. ಕಪ್ಪು ಜನಾಂಗದವರು—ಆಫ್ರಿಕಾದ ಜನರು, ಉತ್ತರ ಅಮೇರಿಕಾದಲ್ಲಿರುವ ನೀಗ್ರೋಗಳು ಮತ್ತು ಏಷ್ಯಾದ ಕೆಲವು ಭಾಗಗಳಲ್ಲಿರುವವರು.

3. ಹಳದಿ ಜನಾಂಗದವರು—ಜಪಾನ್, ಕೊರಿಯಾ, ಚೈನಾ, ಫಾರ್ಮೋಸ್, ಬರ್ಮಾ, ಥೈಲ್ಯಾಂಡ್, ಲಾವೋಸ್, ಕ್ಯಾಂಬೋಡಿಯಾ ಮತ್ತು ವಿಯಟ್ನಾಂಗಳ ಜನರು.

4. ಕಂದು ಬಣ್ಣದ ಜನಾಂಗದವರು_ಇಂಡಿಯಾ, ಪಾಕಿಸ್ತಾನ, ಅರಬ್ಬ ದೇಶಗಳು ಮತ್ತು ದಕ್ಷಿಣ ಅಮೆರಿಕಾದ ಜನರು.

5. ಅಮೆರಿಕಾದ ರೆಡ್ ಇಂಡಿಯನ್ ಜನಾಂಗದವರು.

ಪ್ರಪಂಚದ ಯಾವ ದೇಶವನ್ನೇ ಸೂಕ್ಷ್ಮವಾಗಿ ಪರಿಶೀಲಿಸಿದರೆ ಅಲ್ಲಿಯ ಸಮಾಜದಲ್ಲಿ ಒಂದಲ್ಲ ಒಂದು ರೀತಿಯ ಪಕ್ಷಪಾತ ಮನೋಭಾವ ಇರುವುದನ್ನು ಕಾಣಬಹುದು. ಕೀಳು ಪ್ರಾಣಿಗಳಲ್ಲಿ ಕಂಡುಬರುವ ಸಹಜ ಪ್ರವೃತ್ತಿಯಂತೆ ವಯಸ್ಕರೂ ಮತ್ತು ವಿದ್ಯಾವಂತರೂ ಆದ ಜನರಲ್ಲಿ ಪಕ್ಷಪಾತ ಮನೋಭಾವವನ್ನು ಕಾಣಬಹುದು. ಆದರೆ ಯಾವ ದೇಶದಲ್ಲೇ ಆಗಲಿ ಚಿಕ್ಕವಯಸ್ಸಿನ ಮಕ್ಕಳನ್ನು ಪರಿಶೀಲಿಸಿದರೆ ಅವರಲ್ಲಿ ಜಾತಿಯ ದ್ವೇಷ ಭಾವವಾಗಲೀ ಅಥವಾ ಜನಾಂಗ ದ್ವೇಷ ವಾಗಲೀ ಕಂಡು ಬರುವುದಿಲ್ಲ ಎಂಬುದನ್ನು ಅರಿತುಕೊಂಡಾಗ ನಮಗೆ ಆಶ್ಚರ್ಯ ವಾಗುತ್ತದೆ ಅಮೆರಿಕಾದಲ್ಲಿ ಬಿಳಿ ಜನಾಂಗದ ಮಕ್ಕಳು ಯಾವ ಭೇದ ಭಾವವೂ ಇಲ್ಲದೆ ನೀಗ್ರೋ ಮಕ್ಕಳೊಡನೆ ಆಡುತ್ತಿರುವುದನ್ನು ಕಾಣಬಹುದು. ಅದೇ ರೀತಿ ಇಂಡಿಯಾದಲ್ಲಿ ಹರಿಜನರ ಮಕ್ಕಳು ಸಂತೋಷದಿಂದ ಉಳಿದ ಜಾತಿಗಳ ಜನರ ಮಕ್ಕಳೊಡನೆ ಕುಣಿದಾಡುವುದನ್ನು ಕಾಣಬಹುದು. ಮಕ್ಕಳಾಗಿರುವಾಗ ಯಾವ ರೀತಿಯಾದ ದ್ವೇಷ ಪ್ರವೃತ್ತಿಯೂ ಇರುವುದಿಲ್ಲ. ಆದರೆ ವಯಸ್ಕರಾದಂತೆಲ್ಲಾ ದ್ವೇಷ ಪ್ರವೃತ್ತಿ ಬೆಳೆಸಿಕೊಳ್ಳುತ್ತಾರೆ ಎಂಬ ಭಾವನೆ ಮೇಲಿನ ಅಂಶದಿಂದ ಕಂಡುಬರುತ್ತದೆ. ನಮ್ಮ ದೇಶದಲ್ಲಿ ನಮ್ಮ ಮಕ್ಕಳಿಗೆ ವಯಸ್ಸಾದಂತೆಲ್ಲಾ ಬೇರೆಯವರನ್ನು ಮುಟ್ಟಿ ಕೊಳ್ಳಬಾರದು, ಅವರು ಹರಿಜನರು, ನಮಗಿಂತ ಕೀಳು ಜಾತಿಯವರು ಎಂಬುದಾಗಿ ಯಾವ ರೀತಿ ಹೇಳಿಕೊಡುತ್ತೇವೆಯೋ ಅದೇ ರೀತಿ ಅಮೆರಿಕಾದಲ್ಲಿರುವ ಮಕ್ಕಳಿಗೆ ಅವರ ತಂದೆ ತಾಯಂದಿರು ಹೇಳಿಕೊಡುತ್ತಾರೆ. ನೀಗ್ರೋಗಳಿಗಿಂತ ತಾವು ಉತ್ತಮರು ಎಂಬ ಭಾವನೆಯನ್ನು ಬಿಳಿಯವರ ಮಕ್ಕಳಲ್ಲಿ ಉಂಟಾಗುವಂತೆ ಅವರ ತಂದೆ ತಾಯಂದಿರು ಮಾಡುತ್ತಾರೆ. ಅಮೆರಿಕಾದಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ನನ್ನ ಸ್ನೇಹಿತರ ಪೈಕಿ ಒಬ್ಬನಿಗೆ ಜನಾಂಗ ಪಕ್ಷಪಾತದ ವಿಷಯವಾಗಿ ಪ್ರಶ್ನೆಹಾಕಿದೆ. ಅವನ ಉತ್ತರ ಹೀಗಿತ್ತು : "ನೀಗ್ರೋಗಳ ವಿರುದ್ಧವಾಗಿ ನನಗೇನೂ ದುರಭಿಪ್ರಾಯವಿಲ್ಲ ; ಆದರೆ ನನಗೆ ಹದಿನಾಲ್ಕು ವರ್ಷ ವಯಸ್ಸಾಗಿದ್ದಾಗ ನಾನು ನೀಗ್ರೋಗಳಿಗಿಂತ ಉತ್ತಮ ವಂಶದವನು ಎಂದು ನನ್ನ ತಂದೆ ತಾಯಿಗಳು ಹೇಳಿದರು." ಯಾವ ರೀತಿ ಪ್ರತಿಯೊಬ್ಬ ವಯಸ್ಕನ ಮನಸ್ಸಿನಲ್ಲಿಯೂ ಜನಾಂಗ ಪಕ್ಷಪಾತ ಮನೋಭಾವನೆ ಉದಯವಾಗುತ್ತದೆ ಎಂಬ ಅಂಶ ಮೇಲಿನ ನಿರೂಪಣೆಯಿಂದ ಗೊತ್ತಾಗುತ್ತದೆ.

ಅಮೆರಿಕಾ ಸಮಾಜವನ್ನು ವೀಕ್ಷಿಸಿದನಂತರ ಜನಾಂಗ ಪಕ್ಷಪಾತವು ಅನೇಕ ಕಾರಣಗಳಿಂದ ಉದ್ಭವಿಸಿದೆ ಎಂದು ಹೇಳಬಹುದು. ಅವುಗಳನ್ನು ವಿಶ್ಲೇಷಿಸಿ ಅವುಗಳ ಪರಿಣಾಮಗಳನ್ನು ತಿಳಿದುಕೊಳ್ಳೋಣ.

3

ಜನಾಂಗ ಪಕ್ಷಪಾತ ಮನೋಭಾವನೆಯು ಆರ್ಥಿಕ ಕಾರಣಗಳಿಂದಾಗಿ ಮೊದಲು ಕಾಣಿಸಿಕೊಂಡಿತು ಎನ್ನಬಹುದು. ತಮ್ಮ ಕೈಗಾರಿಕಾ ಮತ್ತು ಬಂಡವಾಳ ಶಾಹಿ ಪದ್ಧತಿಯನ್ನು ಕಾಪಾಡಿಕೊಳ್ಳಬೇಕಾದರೆ ಯೂರೋಪಿಯನರು ಕಚ್ಚಾವಸ್ತುಗಳು ದೊರೆಯುವ ಮತ್ತು ಹೊಸ ಮಾರುಕಟ್ಟೆ ಪ್ರದೇಶಗಳ ಮೇಲೆ ತಮ್ಮ ಹತೋಟಿ ಯನ್ನಿಟ್ಟುಕೊಳ್ಳಬೇಕಾಗಿತ್ತು. ಅದಕ್ಕೋಸ್ಕರ ಏಷ್ಯಾ, ಆಫ್ರಿಕಾ ಮತ್ತು ಅಮೆರಿಕಾ ಖಂಡಗಳ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡು ತಮ್ಮ ಹತೋಟಿಯಲ್ಲಿಟ್ಟು ಕೊಂಡರು. ತಮ್ಮ ಹಿತಕ್ಕಾಗಿ ಏಷ್ಯಾದ ದೇಶಗಳನ್ನು ಯೂರೋಪಿಯನರು ಶೋಷಣೆ ಮಾಡಿದರು. ಸ್ವಹಿತ ಸಾಧಿಸಿಕೊಳ್ಳಲು ಏಷ್ಯಾದ ವಸಾಹತುಗಳು ಸದಾಕಾಲದಲ್ಲಿಯೂ ಬಡತನದಿಂದ ನರಳುವಂತೆ ಮಾಡಿದರು. ಇದರಿಂದ ಬಿಳಿಯ ಜನಾಂಗಕ್ಕೆ ಸೇರಿದ ಯೂರೋಪಿಯನರ ಜನಾಂಗಕ್ಕೆ ಸೇರಿದ ಯೂರೋಪಿಯನರ ವಿರುದ್ಧ ಏಷ್ಯನರ ದ್ವೇಷ ಭಾವನೆ ಬೆಳೆಯಿತು. ಆಫ್ರಿಕಾದ ಕೆಲವು ಭಾಗಗಳಲ್ಲಿ ಖಾಯಂ ಆಗಿ ನೆಲಸಲು ಯುರೋಪಿಯನರು ಯತ್ನಿಸಿದರು. ಆಫ್ರಿಕಾದಲ್ಲಿದ್ದ ನೀಗ್ರೋಗಳನ್ನು ಅವರ ವಾಸಸ್ಥಳಗಳಿಂದ ಓಡಿಸಿ ಆಫ್ರಿಕಾದ ಕೆಲವು ಭೂ ಭಾಗವನ್ನು ಯೂರೋಪಿಯನರು ಆಕ್ರಮಿಸಿಕೊಂಡರು. ನೀಗ್ರೋಗಳನ್ನು ಹಿಡಿದು ಅವರನ್ನು ಗುಲಾಮರನ್ನಾಗಿ ಬೇರೆ ದೇಶಗಳಿಗೆ ಮಾರಿದರು. ಇದರಿಂದ ಬಿಳಿ ಜನಾಂಗದ ವಿರುದ್ಧ ನೀಗ್ರೋಗಳ ದ್ವೇಷ ಭಾವನೆ ಬೆಳೆಯಿತು ದಕ್ಷಿಣ ಅಮೆರಿಕಾ ಖಂಡದಲ್ಲಿ ಸ್ಥಳೀಯ ಜನರ ಸಂಖ್ಯೆ ಬಹಳ ಕಡಿಮೆ ಇದ್ದುದರಿಂದ ಸುಲಭವಾಗಿ ಪೋರ್ಚುಗೀಸರು ಮತ್ತು ಸ್ಪಾನಿಷರು ಅಲ್ಲಿಹೋಗಿ ವಸಾಹತುಗಳನ್ನು ಸ್ಥಾಪಿಸಿದರು. ಆದರೆ ಕ್ರಮೇಣ ಆರ್ಥಿಕ ಹಿತಾಸಕ್ತಿಯನ್ನು ಮುಂದಿಟ್ಟುಕೊಂಡು ಅವರೇ ಹೊಡೆದಾಡಲು ಆರಂಭಿಸಿದರು. ಯೂರೋಪಿಯನರು ದಕ್ಷಿಣ ಅಮೆರಿಕಾದ ವಸಾಹತುಗಳ ಮೇಲೆ ತಮ್ಮ ಹತೋಟಿ ಇಟ್ಟುಕೊಳ್ಳಲು ಯತ್ನಿಸಿದರು. ಆದರೆ ಮೊದಲೇಹೋಗಿ ಅಲ್ಲಿ ನೆಲಸಿದ್ದ ಯೂರೋಪಿಯನರು ಇದರ ವಿರುದ್ಧ ಪ್ರತಿಭಟಿಸಿದರು. ಹೀಗೆ ಆರ್ಥಿಕ ಕಾರಣದಿಂದಾಗಿ ಎಲ್ಲಾ ಕಡೆಯೂ ಜನಾಂಗ ದ್ವೇಷ ಹುಟ್ಟಿಕೊಂಡಿರುವುದನ್ನು ನಾವು ಕಾಣಬಹುದು.

ರಾಜಕೀಯ ಕಾರಣಗಳು ಜನಾಂಗ ಪಕ್ಷಪಾತ ಮನೋಭಾವದ ಬೆಳವಣಿಗೆಗೆ ಕಾರಣವಾಗಿವೆ. ಪ್ರತಿಯೊಂದು ರಾಷ್ಟ್ರದಲ್ಲಿಯೂ ರಾಷ್ಟ್ರೀಯ ಮನೋಭಾವ ಬೆಳೆದಂತೆಲ್ಲಾ ಪರಕೀಯರು ತಮ್ಮ ರಾಷ್ಟ್ರಗಳ ಮೇಲೆ ನಡೆಸುತ್ತಿರುವ ಆಡಳಿತವನ್ನು ಏಷ್ಯಾ ಮತ್ತು ಆಫ್ರಿಕದ ಜನರು ಖಂಡಿಸಲಾರಂಭಿಸಿದರು. ತಮ್ಮ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳಲು ಏಷ್ಯಾ ಮತ್ತು ಆಫ್ರಿಕದ ಜನರು ಬಿಳಿ ಜನಾಂಗದವರ ವಿರುದ್ಧ ಹೋರಾಡಲಾರಂಭಿಸಿದರು.

ಕೆಲವು ಅಧಿಕಾರ ವರ್ಗದವರ ಧೋರಣೆಯ ಫಲವಾಗಿ ಜನಾಂಗ ಪಕ್ಷಪಾತ ಮನೋಭಾವವು ಹುಟ್ಟಿಕೊಂಡಿದೆ. ಯೂರೋಪಿಯನರು ವಸಾಹತುಗಳಲ್ಲಿ ಅಧಿಕಾರ ಚಲಾಯಿಸುತ್ತಿದ್ದಾಗ ಏಷ್ಯಾದಲ್ಲಿ ರೂಢಿಯಲ್ಲಿದ್ದ ಸಾಮಾಜಿಕ ಮತ್ತು ಮತೀಯ ನಡವಳಿಕೆಗಳನ್ನು ತಾತ್ಸಾರ ದೃಷ್ಟಿಯಿಂದ ನೋಡಲಾರಂಭಿಸಿದರು. ಹಿಂದೂಗಳ, ಬೌದ್ಧರ ಮತ್ತು ಜೈನರ ಆಚಾರ ಪದ್ಧತಿಗಳನ್ನು ಕೀಳುಮಟ್ಟದ ಪದ್ಧತಿಗಳೆಂದು ಖಂಡಿಸಲಾರಂಭಿಸಿದರು. ಅವರು ಕ್ರೈಸ್ತ ಮತವೇ ಉತ್ಕೃಷ್ಟ ಮತಧರ್ಮವೆಂದು ಸಾರಿ ಕ್ರೈಸ್ತ ಮತವನ್ನು ಏಷ್ಯಾದ ಜನರ ಮೇಲೆ ಹೇರಲಾ ರಂಭಿಸಿದರು. ಇದರಿಂದ ಏಷ್ಯಾದ ಜನರ ಮನಸ್ಸಿನಲ್ಲಿ ಬಿಳಿ ಜನಾಂಗದವರ ವಿರುದ್ಧ ದ್ವೇಷ ಭಾವನೆ ಬೆಳೆಯಲಾರಂಭವಾಯಿತು.

ಬಿಳಿಯ ಜನಾಂಗದವರು ತಾವು ಅತ್ಯುತ್ತಮ ಮಾನವ ವರ್ಗದವರೆಂದು ಭಾವಿಸಿ, ಇತರರು ಕೀಳು ವರ್ಗದವರೆಂದು ಪರಿಗಣಿಸಲಾರಂಭಿಸಿದುದರಿಂದ ಜನಾಂಗ ದ್ವೇಷ ಭಾವನೆಯು ಅಧಿಕಗೊಂಡಿತು. ಆಸ್ಟ್ರೇಲಿಯಾ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾದ ಆಡಳಿತಗಾರರು ಬಹುಮಟ್ಟಿಗೆ ಇಂತಹ ಮನೋಭಾವವನ್ನು ಬಹಿರಂಗ ವಾಗಿ ಪ್ರದರ್ಶಿಸುತ್ತಾರೆ. ಕೆನಡಾ, ಅಮೆರಿಕಾದ ಸಂಯುಕ್ತ ಸಂಸ್ಥಾನಗಳು ಮತ್ತು ಬ್ರಿಟನ್ನಿನ ಆಡಳಿತಗಾರರು ಸ್ವಲ್ಪಮಟ್ಟಿಗೆ ಇಂತಹ ಮನೋಭಾವವನ್ನು ಈಗಲೂ ವ್ಯಕ್ತಪಡಿಸುತ್ತಿದ್ದಾರೆ. ಬೇರೆ ದೇಶಗಳಿಗೆ ಸೇರಿದ ಜನರಿಗೆ ತಮ್ಮ ದೇಶಕ್ಕೆ ಬಂದು ನೆಲಸಲು ಅವಕಾಶ ಮಾಡಿಕೊಟ್ಟರೆ ತಮ್ಮ ಸಂಸ್ಕೃತಿ ಮತ್ತು ಜೀವನ ವಿಧಾನವನ್ನೇ ಅವರು ನಾಶಗೊಳಿಸುವರೆಂಬ ಭೀತಿ ಬಿಳಿ ಜನಾಂಗದವರನ್ನು ಆವರಿಸಿದೆ. ಆದುದ ರಿಂದ ಅವರು ಬಿಳಿ ಜನಾಂಗದವರಲ್ಲದೆ ಬೇರೆ ಜನರು ವಲಸೆ ಬರುವುದನ್ನು ತಡೆಯು ತ್ತಾರೆ. ಇದರಿಂದ ಜನಾಂಗ ದ್ವೇಷ ಭಾವನೆ ಇಂದಿಗೂ ಉಳಿದುಕೊಂಡಿದೆ.

ಮಾನವ ಕುಲದ ಇತಿಹಾಸವನ್ನು ಆರಂಭದಿಂದ ವೀಕ್ಷಿಸಿದರೆ ಪ್ರಬಲ ಜನಾಂಗ ದವರು ದುರ್ಬಲ ಜನಾಂಗದವರ ಮೇಲೆ ದಬ್ಬಾಳಿಕೆ ನಡೆಸಿರುವುದು ಕಂಡುಬರುತ್ತದೆ. ದುರ್ಬಲ ಜನಾಂಗದವರ ಮೇಲೆ ಹೋರಾಟ ನಡೆಸಿ ಪ್ರಬಲ ಜನಾಂಗದವರು ದುರ್ಬಲ ಜನರ ರಾಜ್ಯಗಳನ್ನು ಗೆದ್ದುಕೊಂಡಿದ್ದಾರೆ. ಅವರನ್ನು ನಿಶ್ಯಸ್ತ್ರಗೊಳಿಸಿ ಅವರ ಜನಾಂಗವನ್ನೇ ನಿರ್ಮೂಲಗೊಳಿಸಲು ಯತ್ನಿಸಿದ್ದಾರೆ. ಅವರನ್ನು ಅನೇಕ ವೇಳೆ ಗುಲಾಮರನ್ನಾಗಿ ಅಥವಾ ಜೀತಾಳುಗಳನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ಇಂತಹ ವರ್ತನೆಯನ್ನು ಬಿಳಿ ಜನಾಂಗದವರ ಚರಿತ್ರೆಯಲ್ಲಿ ಅನೇಕ ಸಂದರ್ಭಗಳಲ್ಲಿ ಕಾಣಬಹುದು. ಅವರು ಮೇಲ್ಕಂಡ ನಡವಳಿಕೆ ಅನುಸರಿಸಿದ ಪರಿಣಾಮವಾಗಿ ಬೇರೆ ಜನರ ದ್ವೇಷಕ್ಕೆ ಪಾತ್ರರಾದರು.

ಮೇಲ್ಕಂಡ ವಿವರಣೆಯನ್ನು ವಿಶ್ಲೇಷಿಸಿದಾಗ ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವ ಬಿಳಿ ಜನಾಂಗ ಮತ್ತು ಕ್ರೈಸ್ತ ಧರ್ಮದಲ್ಲಿಯೂ ಜನಾಂಗ ಅಥವಾ ಮತೀಯ

ಆಧಾರದ ಮೇಲೆ ಬೆಳೆದುಬಂದಿರುವ ದ್ವೇಷ ಭಾವನೆ ಎದ್ದು ಕಾಣುತ್ತದೆ. ಭಾರತ ದೇಶದ ವಿದ್ಯಾರ್ಥಿಗಳು ಈ ಪ್ರಮುಖ ವಿಷಯವನ್ನು ಗ್ರಹಿಸಲಾರದೆ ಪಾಶ್ಚಾತ್ಯ ಸಮಾಜ ಮತ್ತು ಕ್ರೈಸ್ತ ಧರ್ಮವು ನಮ್ಮ ಸಮಾಜ ಮತ್ತು ಧರ್ಮಕ್ಕಿಂತ ಉತ್ತಮ ಎಂಬ ಮನೋಭಾವನೆಯನ್ನು ಬೆಳೆಯಿಸಿಕೊಂಡು ನಮ್ಮ ಸಮಾಜವನ್ನು ಕೀಳು ದೃಷ್ಟಿಯಿಂದ ನೋಡುತ್ತಾರೆ. ಆದರೆ ವಾಸ್ತವಿಕ ದೃಷ್ಟಿಯಿಂದ ಅವಲೋಕಿಸಿದರೆ ಯಾವ ಸಮಾಜವೂ ಮತೀಯ ಅಥವಾ ಜನಾಂಗ ದ್ವೇಷ ಭಾವನೆಯಿಂದ ಹೊರತಾಗಿಲ್ಲ ಎನ್ನಬಹುದು.

4

ಪ್ರಪಂಚದಲ್ಲೇ ಅತ್ಯುನ್ನತ ಸ್ಥಾನ ಪಡೆದಿರುವ ರಾಷ್ಟ್ರವಾದ ಅಮೆರಿಕಾದ ಸಂಯುಕ್ತ ಸಂಸ್ಥಾನಗಳು ರಾಷ್ಟ್ರದ ಸಂಪತ್ತನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಆರ್ಥಿಕವಾಗಿ ತನ್ನ ಜನರ ಶ್ರೇಯೋಭಿವೃದ್ಧಿಯನ್ನು ಬಹಳ ಮಟ್ಟಿಗೆ ಸಾಧಿಸಿವೆ. ಅಂತಹ ಸಮಾಜದಲ್ಲಿ ಕಂಡುಬರುವ ಜನಾಂಗ ದ್ವೇಷ ಮನೋಭಾವನೆಯನ್ನು ವಿಶ್ಲೇಷಿಸಿದಾಗ, ದ್ವೇಷದ ಮೂಲ ಜನಾಂಗ ನೀತಿಯನ್ನು ಆಧರಿಸಿಲ್ಲ, ಅದರ ಬದಲು ನೈತಿಕ ಆಧಾರದ ಮೇಲೆ ದ್ವೇಷ ಭಾವನೆ ರೂಪಗೊಂಡಿದೆ ಎನ್ನಬಹುದು. ಅಮೆರಿಕಾದ ಜನಾಂಗ ಪಕ್ಷಪಾತ ಮನೋಭಾವವನ್ನು ಎರಡು ದೃಷ್ಟಿಯಿಂದ ನೋಡಬಹುದು : (1) ವಿಮರ್ಶಕನಾಗಿ, ಮತ್ತು (2) ಧರ್ಮನಿಷ್ಠನಾಗಿ.

ವಿಮರ್ಶಕನಾಗಿ ಯಾವ ವಿದ್ವಾಂಸನೇ ಆಗಲಿ ಯಾವುದೇ ಸಮಾಜವನ್ನಾಗಲೀ ಅಥವಾ ಸಂಸ್ಕೃತಿಯನ್ನಾಗಲೀ ವೀಕ್ಷಿಸಿದರೆ ತಪ್ಪನ್ನು ಕಂಡುಹಿಡಿಯಬಹುದು. ಅನೇಕ ಪಾಶ್ಚಾತ್ಯರು ಮತ್ತು ನಮ್ಮ ದೇಶದ ವಿದ್ಯಾವಂತರು ಏಷ್ಯಾ ದೇಶಗಳ ಸಮಾಜವನ್ನು ವೀಕ್ಷಿಸುವಾಗ ವಿಮರ್ಶಾತ್ಮಕ ದೃಷ್ಟಿಯಿಂದ ನೋಡುತ್ತಾರೆ. ಆದುದರಿಂದ ನಮ್ಮ ದೇಶದ ವಿಷಯದಲ್ಲಿ ಸದಭಿಪ್ರಾಯ ಮೂಡಿಸಲು ವಿಫಲರಾಗಿದ್ದಾರೆ. ಮಹಾತ್ಮಾಗಾಂಧಿಯವರ ಪ್ರಕಾರ ಯಾವುದೇ ಸಮಾಜ ಸಂಪೂರ್ಣವಾಗಿ ಒಳ್ಳೆಯದೂ ಅಲ್ಲ ಅಥವಾ ಕೆಟ್ಟದ್ದೂ ಅಲ್ಲ. ಪ್ರತಿಯೊಂದು ಸಂಸ್ಕೃತಿಯಲ್ಲೂ ಒಳ್ಳೆಯ ಮತ್ತು ಕೆಟ್ಟ ಅಂಶಗಳನ್ನು ಗಮನಿಸಬಹುದು. ಆದುದರಿಂದ ಬೇರೆ ಸಮಾಜಗಳನ್ನು ಕುರಿತು ಮಾತನಾಡುವಾಗ ಪ್ರತಿಯೊಬ್ಬ ಭಾರತೀಯನೂ ಧರ್ಮನಿಷ್ಠನಾಗಿ ವರ್ತಿಸಬೇಕೆಂದು ಅವರು ಪದೇ ಪದೇ ಆಗ್ರಹ ಪೂರ್ವಕವಾಗಿ ಹೇಳುತ್ತಿದ್ದರು. ಅಮೆರಿಕಾದಲ್ಲಿ ಕಂಡುಬರುವ ಜನಾಂಗ ಪಕ್ಷಪಾತ ಸಮಸ್ಯೆಯನ್ನು ಮೇಲ್ಕಂಡ ದೃಷ್ಟಿಯಿಂದ ಈಗ ಪರಿಶೀಲಿಸೋಣ.

ಚಾರಿತ್ರಿಕ ಕಾರಣಗಳಿಂದಾಗಿ ಅಮೆರಿಕಾವು ನೀಗ್ರೋ ಸಮಸ್ಯೆಯನ್ನು ಎದಿರುಸುತ್ತಿದೆ. ಪ್ರಪಂಚದ ವಿವಿಧ ಭಾಗಗಳಿಂದ ಅಮೆರಿಕಾದ ವಿಶ್ವವಿದ್ಯಾನಿಲಯ

ಗಳಲ್ಲಿ ಓದಲು ಬರುವ ವಿದ್ಯಾರ್ಥಿಗಳು ನೀಗ್ರೋ ಸಮಸ್ಯೆಯನ್ನೆತ್ತಿಕೊಂಡು ಅಮೆರಿಕಾದ ಸಮಾಜವನ್ನು ಟೀಕಿಸುತ್ತಾರೆ. ಆದರೆ ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಿದರೆ ಈಗಿನ ಅಮೆರಿಕದ ಪ್ರಜೆಗಳು ಯಾವ ರೀತಿಯೂ ನೀಗ್ರೋ ಸಮಸ್ಯೆಗೆ ಕಾರಣರಲ್ಲ ಎನ್ನಬಹುದು. ಆರ್ಥಿಕ ಕಾರಣಗಳಿಗಾಗಿ ಅಮೆರಿಕಾದ ಪೂರ್ವಜರು ನೀಗ್ರೋಗಳನ್ನು ಕರೆದುಕೊಂಡು ಬಂದು ಗುಲಾಮರನ್ನಾಗಿ ಉಪಯೋಗಿಸಿ ಕೊಂಡರು. ಆಗಿನ ಕಾಲದಲ್ಲಿದ್ದ ವಾತಾವರಣವು ಅಂತಹ ನಡವಳಿಕೆಗೆ ಸಮ್ಮತಿ ಸೂಚಿಕವಾಗಿತ್ತು. ಬಿಳಿಯ ಜನಾಂಗವು ಕಪ್ಪುಜನರಿಗಿಂತ ಉತ್ಕೃಷ್ಟ ಜನಾಂಗ ವೆಂಬ ಮನ್ನಣೆ ಪಡೆದಿತ್ತು. ಆಗಿನ ಕಾಲದ ಜನರಿಗೆ ತಮ್ಮ ಧೋರಣೆಯನ್ನು ಮತ್ತು ಮನೋಭಾವವನ್ನು ವಿಕಾಸಗೊಳಿಸಿಕೊಳ್ಳಲು ಸಾಕಷ್ಟು ಅವಕಾಶವಿರಲಿಲ್ಲ. ಬಿಳಿ ಜನಾಂಗದವರಲ್ಲಿ ನೈತಿಕ ಮೌಲ್ಯಗಳು ಬೇರೂರುವಂತೆ ಮಾಡಲು ಕ್ರೈಸ್ತ ದೇವಾಲಯದ ಅಧಿಕಾರಿಗಳು ವಿಫಲಗೊಂಡಿದ್ದರು. ತಾವು ಮಾಡುತ್ತಿರುವ ಕೃತ್ಯಗಳು ಅನೈತಿಕವೆಂದು ಒತ್ತಿ ಹೇಳುವುದರ ಬದಲು, ಕ್ರೈಸ್ತ ಧರ್ಮಾಧಿ ಕಾರಿಗಳು, ಸಾಮ್ರಾಜ್ಯ ಕಟ್ಟಿ ಬೇರೆ ದೇಶಗಳ ಜನರನ್ನು ತಮ್ಮ ಆಡಳಿತಕ್ಕೆ ವಹಿಸಿ ಕೊಂಡ ಬಿಳಿ ಜನಾಂಗದ ನಾಯಕರನ್ನು ಹೊಗಳಿ ಪ್ರೋತ್ಸಾಹಿಸುತ್ತಿದ್ದರು. ಆಗಿನ ಕಾಲದ ಅಮೆರಿಕಾದ ಪ್ರಜೆಗಳೆಲ್ಲಾ ಯೂರೋಪಿನ ವಿವಿಧ ಭಾಗಗಳಿಂದ ಬಂದ ವಲಸೆ ಗಾರರಾಗಿದ್ದರು.ಅವರು ತಮ್ಮ ಮಾತೃ ದೇಶಗಳಲ್ಲಿದ್ದಾಗ ಸಾಮ್ರಾಜ್ಯಶಾಹಿ ಮನೋ ಭಾವವನ್ನು ಬೆಳೆಯಿಸಿಕೊಂಡಿದ್ದರು. ಅಂತಹ ಜನರು ಅಮೆರಿಕಾಕ್ಕೆ ಬಂದ ಮೇಲೂ ಅದೇ ರೀತಿ ಮನೋಭಾವವನ್ನು ಉಳಿಸಿಕೊಂಡು ನೀಗ್ರೋಗಳ ವಿಷಯದಲ್ಲಿ ಪಕ್ಷಪಾತ ಧೋರಣೆ ಬೆಳೆಸಿಕೊಂಡರು. ಅಂತಹ ಜನರ ಮನೋಧರ್ಮವನ್ನು ಬದಲಾಯಿ ಸುವುದು ಬಹಳ ಕಷ್ಟ. ಅವರಲ್ಲಿ ನೀಗ್ರೋಗಳ ಬಗ್ಗೆ ಬೆಳೆದು ಬಂದಿರುವ ದ್ವೇಷ ಭಾವನೆಯು ರಕ್ತಗತವಾದದ್ದು ಎನ್ನುವಷ್ಟು ಬೇರುಬಿಟ್ಟಿತು. ಆದುದರಿಂದ ಇಂದಿಗೂ ಅಮೆರಿಕಾದ ಪ್ರಜೆಗಳ ಪೈಕಿ ಮುದುಕರಾಗಿರುವವರಲ್ಲಿ ಜನಾಂಗ ದ್ವೇಷ ಭಾವನೆಯನ್ನು ಕಾಣುತ್ತೇವೆ.

ಆದರೆ ಅಮೆರಿಕಾದ ಯುವ ಜನಾಂಗದ ಮನೋಧರ್ಮವನ್ನು ಪರೀಕ್ಷಿಸಿದಾಗ ಅವರಲ್ಲಿ ಮಹತ್ತರ ಬದಲಾವಣೆಯನ್ನು ಕಾಣಬಹುದು. ಅಮೆರಿಕಾದ ವಿಶ್ವವಿದ್ಯಾ ನಿಲಯಂಗಳಲ್ಲಿ ನೂರಾರು ಜನ ನೀಗ್ರೋ ವಿದ್ಯಾರ್ಥಿಗಳಿದ್ದು, ಸಹಸ್ರಾರು ಬಿಳಿ ಜನಾಂಗದ ವಿದ್ಯಾರ್ಥಿಗಳಿದ್ದರೂ ಅವರ ಮಧ್ಯೆ ಯಾವರೀತಿಯಾದ ದ್ವೇಷ ಭಾವನೆ ಇರುವುದನ್ನು ನಾವು ಕಾಣುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಬಿಳಿ ಜನಾಂಗದ ವಿದ್ಯಾರ್ಥಿಗಳು ನೀಗ್ರೋ ವಿದ್ಯಾರ್ಥಿಗಳ ವಿಷಯದಲ್ಲಿ ಸಹಾನುಭೂತಿ ತೋರಿಸಿ ಸಹಾಯ ಮಾಡುತ್ತಾರೆ.

ಜನಾಂಗ ದ್ವೇಷ ಭಾವನೆಯನ್ನು ವ್ಯಕ್ತಪಡಿಸುವುದು ಅಮೆರಿಕಾ ಸಮಾಜ ದಲ್ಲಿ ನ್ಯಾಯ ಬಾಹಿರವಾದುದು ಎಂದು ಘೋಷಿಸುವುದರ ಮೂಲಕ ಅಮೆರಿಕಾ ಸರ್ಕಾರ ಈ ದಿಶೆಯಲ್ಲಿ ತಕ್ಕ ಕಾರ್ಯಕ್ರಮ ಕೈಗೊಂಡಿದೆ. ಮಂತ್ರದಂಡ ಉಪ ಯೋಗಿಸುವುದರ ಮೂಲಕ ಪ್ರತಿ ಅಮೆರಿಕಾದ ಪ್ರಜೆಯ ಮನಃಪರಿವರ್ತನೆ ಮಾಡಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಅಮೆರಿಕನರ ಮನೋಧರ್ಮವನ್ನು ಸಂಪೂರ್ಣವಾಗಿ ಬದಲಾಯಿಸಬೇಕಾದರೆ ಸಾಕಷ್ಟು ಕಾಲಾವಕಾಶ ಮತ್ತು ತಾಳ್ಮೆ ಇರಬೇಕು. ಜನರ ಮನೋಧರ್ಮವನ್ನು ಸಂಪೂರ್ಣವಾಗಿ ಪರಿವರ್ತಿಸುವುದರಲ್ಲಿ ಅಮೆರಿಕಾದ ಸರ್ಕಾರ ಯಶಸ್ಸು ಗಳಿಸಿಲ್ಲವಾದ್ದರಿಂದ ಅಮೆರಿಕಾದ ವಿವಿಧ ಭಾಗಗಳಲ್ಲಿ ಆಗಿಂದಾಗ್ಗೆ ನೀಗ್ರೋಗಳು ದಂಗೆ ಏಳುವುದನ್ನು ಈಗಲೂ ಕಾಣಬಹುದು. ದಂಗೆ ಗಳು ಉದ್ಭವಿಸಿದಕೂಡಲೇ ಸರ್ಕಾರ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಕೈಗೊಂಡು ಕೂಡಲೇ ದಂಗೆ ಅಡಗಿಸುವುದನ್ನೂ ನಾವು ಕಾಣಬಹುದು.

5

ಮೇಲ್ಕಂಡ ಘಟನೆಗಳನ್ನು ಪರಿಶೀಲಿಸಿದಾಗ ಇಂಡಿಯಾದಲ್ಲಿ ಹರಿಜನ ಸಮಸ್ಯೆ ಇರುವಂತೆಯೆ ಅಮೆರಿಕಾದಲ್ಲಿ ನೀಗ್ರೋ ಸಮಸ್ಯೆ ಇದೆ ಎಂಬುದನ್ನು ಯಾವ ವಿದೇಶಿ ವಿದ್ಯಾರ್ಥಿಯಾದರೂ ಮನಗಾಣಬಹುದು. ಅಮೆರಿಕಾದಲ್ಲಿರುವ ನೀಗ್ರೋ ಗಳು ಮತ್ತು ಬಿಳಿ ಜನಾಂಗದವರು ಕ್ರೈಸ್ತ ಮತಾವಲಂಬಿಗಳಾಗಿ ಅಂತಹ ಸಮೃದ್ಧಿ ಹೊಂದಿದ ದೇಶದಲ್ಲಿ ವಾಸವಾಗಿದ್ದರೂ ಸಮಸ್ಯೆಯನ್ನು ಬಗೆಹರಿಸಲಾಗಿಲ್ಲ, ನಮ್ಮ ದೇಶ ಎದುರಿಸುತ್ತಿರುವಂತೆ ವಿವಿಧ ಮತ ಧರ್ಮಗಳ ಸಮಸ್ಯೆಯನ್ನು ಅಮೆರಿಕಾ ಎದುರಿಸುತ್ತಿಲ್ಲ. ಕ್ರೈಸ್ತ ಧರ್ಮವೊಂದೇ ಅಮೆರಿಕಾದಲ್ಲಿ ಬೆಳೆದು ಬಂದಿರುವುದಾ ದರೂ ನೀಗ್ರೋ ಸಮಸ್ಯೆ ಉಳಿದಿದೆ. ನೀಗ್ರೋಗಳು ಸ್ವಧರ್ಮಿಗಳೆಂದೇ (ಕ್ರೈಸ್ತರು) ತಿಳಿದುಕೊಂಡು ಬಿಳಿಯ ಜನಾಂಗದವರು ಅನೇಕ ವೇಳೆ ನೀಗ್ರೋಗಳ ವಿಷಯದಲ್ಲಿ ಸಹನೆ ತೋರುವುದಿಲ್ಲ. ಸುಮ್ಮನೆ ಪಾಶ್ಚಾತ್ಯ ರೀತಿಯ ಜೀವನವನ್ನು ಅನುಕರಣೆ ಮಾಡುವುದರಿಂದ ನಮ್ಮ ದೇಶದ ಸಮಸ್ಯೆಯನ್ನು ಬಗೆಹರಿಸಲಾಗುವುದಿಲ್ಲ ಎಂಬುದು ಮೇಲ್ಕಂಡ ಅಂಶದಿಂದ ನಮಗೆ ಮನದಟ್ಟಾಗುತ್ತದೆ. ನಮ್ಮ ಸಮಾಜ ವನ್ನು ಟೀಕೆ ಮಾಡುವುದರ ಬದಲು ನಮ್ಮ ಜನರ ಮನೋಪರಿವರ್ತನೆ ಮಾಡುವುದಕ್ಕೆ ನಮ್ಮ ಗಮನ ಹರಿಸುವುದು ಒಳ್ಳೆಯದು. ಹರಿಜನರ ವಿಷಯದಲ್ಲಿ ನಮ್ಮ ಜನರು ಉದಾರ ಭಾವನೆ ತೋರುವಂತೆ ಮಾಡಬೇಕು. ನಮ್ಮ ಮತ ಧರ್ಮದ ಮತ್ತು ಸಂಸ್ಕೃತಿಯ ನಿಜವಾದ ಆಚಾರ ಪದ್ಧತಿಗಳೇನು ಎಂಬುದು ನಮ್ಮ ಜನರಿಗೆ ಮನದಟ್ಟಾಗುವಂತೆ ಮಾಡಬೇಕು.

ಮೇಲೆ ತಿಳಿಸಿದಂತಹ ರಚನಾತ್ಮಕ ಕಾರ್ಯಕ್ರಮ ಕೈಗೊಳ್ಳದೆ ಕೆಲವು ನಾಯಕರು ನಮ್ಮ ದೇಶದಲ್ಲಿ ಪ್ರತಿಪಾದಿಸುತ್ತಿರುವಂತೆ ಎಲ್ಲಾ ಹರಿಜನರನ್ನು

ಬೌದ್ಧರನ್ನಾಗಿ ಅಥವಾ ಮಹಮದೀಯರನ್ನಾಗಿ ಅಥವಾ ಕ್ರೈಸ್ತರನ್ನಾಗಿ ಪರಿವರ್ತಿಸುವುದರ ಮೂಲಕ ಸಮಸ್ಯೆ ಬಗೆಹರಿಸಲಾಗುವುದಿಲ್ಲ. ಹಿಂದಿನ ಭಾಗಗಳಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿದಾಗ ಎಲ್ಲಾ ಜನರು ಕ್ರೈಸ್ತಮತಾವಲಂಬಿಗಳಾದರೂ ಸಮಸ್ಯೆ ಬಗೆಹರಿಸಲು ಸಾಧ್ಯವಾಗಿಲ್ಲ ಎಂಬುದು ಕಂಡುಬರುತ್ತದೆ. ನಮ್ಮದೇಶ ಮತ್ತು ಪಾಕಿಸ್ಥಾನಗಳ ಸ್ಥಿತಿಯನ್ನು ಅವಲೋಕಿಸಿದಾಗಲೂ ನಮಗೆ ತಿಳುವಳಿಕೆ ಮೂಡಿಬರುತ್ತದೆ. ಪಾಕಿಸ್ಥಾನ ಮತ್ತು ಬಂಗ್ಲಾದೇಶಗಳು ಪ್ರತ್ಯೇಕ ರಾಷ್ಟ್ರಗಳಾಗುವುದಕ್ಕೆ ಮುನ್ನ ಸಮಗ್ರ ಪಾಕಿಸ್ಥಾನದಲ್ಲಿದ್ದವರೆಲ್ಲಾ ಮುಸ್ಲಿಮರೇ ಆಗಿದ್ದರು. ಆದಾಗ್ಯೂ ಮುಸ್ಲಿಮರ ನಡುವೆ ಹೋರಾಟ ತಪ್ಪಿಸಲು ಆಗಲಿಲ್ಲ. ಕಡೆಗೆ ಅವರೊಳಗಿದ್ದ ದ್ವೇಷದ ಪರಿಣಾಮವಾಗಿ ದೇಶವೇ ಇಬ್ಭಾಗವಾಗಿ ಬಂಗ್ಲಾದೇಶ ಅಸ್ತಿತ್ವಕ್ಕೆ ಬಂದಿತು. ಇದೇ ರೀತಿ ನಮ್ಮ ದೇಶದ ಅನೇಕ ಕಡೆ ಹಿಂದೂಗಳೇ ಅಧಿಕ ಸಂಖ್ಯೆಯಲ್ಲಿದ್ದರೂ, ಹಿಂದೂ ಜನರ ನಡುವೆ ಹೋರಾಟ ತಪ್ಪಿಸಲಾಗಿಲ್ಲ. ನಮ್ಮ ದೇಶದಲ್ಲಿಯೂ ಐಶ್ವರ್ಯವಂತ ಮುಸ್ಲಿಮರು ಬಡ ಮುಸಲ್ಮಾನರನ್ನು ಪ್ರೀತಿ ಭಾವನೆಯಿಂದ ಕಾಣುವುದಿಲ್ಲ. ಇದೇ ರೀತಿಯ ಮನೋಭಾವನೆ ಹರಿಜನರಲ್ಲಿಯೂ ಕಂಡುಬರುತ್ತದೆ. ಕಳೆದ 25 ವರ್ಷಗಳ ಅವಧಿಯಲ್ಲಿ ನಮ್ಮ ದೇಶದಲ್ಲಿ ಕೈಗೊಳ್ಳಲಾಗಿರುವ ಆರ್ಥಿಕಾಭಿವೃದ್ಧಿ ಕಾರ್ಯಗಳ ಪರಿಣಾಮವಾಗಿ ಅನೇಕ ಹರಿಜನ ಕುಟುಂಬಗಳ ಆರ್ಥಿಕ ಸ್ಥಿತಿಯಲ್ಲಿ ಬಹಳ ಪ್ರಗತಿ ಉಂಟಾಗಿದೆ. ಅನೇಕ ಹರಿಜನ ಕುಟುಂಬಗಳು ಈಗ ಐಶ್ವರ್ಯವಂತರಾಗಿ ರಾಜಕೀಯ ವಲಯದಲ್ಲಿಯೂ ಪ್ರಭಾವಶಾಲಿಗಳಾಗಿವೆ. ಆದರೆ ಈ ಕುಟುಂಬಗಳು ಬಡ ಹರಿಜನರ ವಿಷಯದಲ್ಲಿ ಅನುಕಂಪ ತೋರಿ ಅವರ ನೆರವಿಗೆ ಅಷ್ಟಾಗಿ ಹೋಗುವುದಿಲ್ಲ. ಹರಿಜನ ನಾಯಕರು ತಮ್ಮ ಜನರ ಮಧ್ಯೆಯೆ ಪಕ್ಷಪಾತ ಮನೋಭಾವನೆ ತೋರಿಸುತ್ತಾರೆ. ಇದರಿಂದ ನಮಗೆ ಈ ಕೆಳಗೆ ಕಂಡ ಅಂಶ ಮನದಟ್ಟಾಗುತ್ತದೆ. ನಮ್ಮ ದೇಶದಲ್ಲಾಗಲೀ ಅಥವಾ ಬೇರೆ ಯಾವ ದೇಶದಲ್ಲಾಗಲೀ ಜನರ ಮಧ್ಯೆ ಕಂಡುಬರುವ ಪಕ್ಷಪಾತ ಮನೋಭಾವನೆಗೆ ಜಾತಿ ಮುಖ್ಯ ಆಧಾರವಲ್ಲ ಎನ್ನಬಹುದು. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಎಲ್ಲಾ ಜನರೂ ಅಭಿವೃದ್ಧಿ ಹೊಂದಿದರೆ ತಾನಾಗಿಯೇ ಪಕ್ಷಪಾತ ಮನೋಭಾವ ಅದೃಶ್ಯವಾಗುತ್ತದೆ ಎನ್ನಬಹುದು.

ಆರ್ಥಿಕಾಭಿವೃದ್ಧಿ ಸಾಧಿಸುವುದರ ಮೂಲಕ ನಮ್ಮ ದೇಶದ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂಬ ಅಂಶವನ್ನು ಮನಗಂಡರೂ, ತಮ್ಮ ಸ್ವಾರ್ಥಸಾಧನೆಗಾಗಿ ನಮ್ಮ ಕೆಲವು ವಿದ್ವಾಂಸರು ಮತ್ತು ರಾಜಕೀಯ ನಾಯಕರು ಪದೇ ಪದೇ ನಮ್ಮ ಸಮಾಜವನ್ನು ಟೀಕಿಸುತ್ತಿರುತ್ತಾರೆ. ಈಗಲಾದರೂ ದೇಶಾಭಿಮಾನ ಬೆಳೆಯಿಸಿಕೊಂಡು, ಜನರ ನಡುವೆ ದ್ವೇಷ ಮನೋಭಾವನೆ ಬೆಳೆಸುವುದು ದೇಶಕ್ಕೇ ಅಪಾಯಕಾರಿ ಎಂದು ಮನಗಂಡು, ರಚನಾತ್ಮಕ ಕಾರ್ಯಕ್ರಮಗಳ ಮೂಲಕ ನಮ್ಮ ಸಮಾಜದ ಅಭಿವೃದ್ಧಿಗೆ ಅವರು ಕಾರಣರಾಗಬೇಕಾಗಿದೆ.

ನಾಯಿಹುಚ್ಚು

ಎಂ. ಸತ್ಯನಾರಾಯಣರಾವ್

ಹುಚ್ಚು ನಾಯಿಯನ್ನು ಕಂಡರೆ ಯಾರಿಗೆ ತಾನೇ ಭಯವಿಲ್ಲ. ಜನರು ಹಿಂದಿನ ಕಾಲದಲ್ಲಿ ಎಷ್ಟೊಂದು ಹೆದರುತ್ತಿದ್ದರೋ ಇಂದೂ ಅಷ್ಟೇ ಹೆದರುತ್ತಿದ್ದಾರೆ ಎಂದರೆ ಉತ್ಪ್ರೇಕ್ಷೆಯೇನಿಲ್ಲ. ನಾಯಿ ಹುಚ್ಚು ಆ ಪ್ರಾಣಿ ಜಾತಿಯೊಂದಕ್ಕೆ ಸೀಮಿತವಾಗಿದ್ದಲ್ಲಿ ಜನರು ಅಷ್ಟೊಂದು ಹೆದರುವ ಅವಶ್ಯಕತೆ ಇರಲಿಲ್ಲವೇನೋ. ಆದರೆ ನಾಯಿಯಿಂದ ಮನುಷ್ಯರಿಗೂ ಮತ್ತು ಇತರ ಸಾಕುಪ್ರಾಣಿಗಳಿಗೂ ಹರಡುವ ಅತಿ ಭಯಾನಕ ಸೋಂಕು ರೋಗವಾದ ಇದು ಪ್ರತಿಯೊಬ್ಬರ ಪ್ರಾಣಭಯಕ್ಕೆ ಕಾರಣವಾಗಿದೆ. ದಿನಪತ್ರಿಕೆಗಳ ವಾಚಕರವಾಣಿ, ಮತ್ತು ಇತರ ಕಾಲಂಗಳಲ್ಲಿ ಬೀದಿ ನಾಯಿಗಳು ಮತ್ತು ರೇಬೀಸಿನ ಬಗ್ಗೆ ಬರೆದಿರುವ ವಾಚಕರ ಪತ್ರಗಳು ಎಲ್ಲರ ಗಮನವನ್ನು ಸೆಳೆಯುವಂತಹವು.

ಬೀದಿನಾಯಿಗಳ ನಿರ್ನಾಮಕ್ರಮಗಳಿಲ್ಲದ ಮತ್ತು ಪ್ರಾಣಿಗಳಲ್ಲಿ ಸರಿಯಾದ ಹಾಗೂ ಸಕ್ರಮವಾದ ರೇಬೀಸ್ ಸೋಂಕು ನಿವಾರಣಾ ಕ್ರಮಗಳು ಅನುಷ್ಠಾನದಲ್ಲಿಲ್ಲದ ನಮ್ಮ ದೇಶದಲ್ಲಿ ಜನರ ಹಾಗೂ ಪ್ರಾಣಿಗಳ ಹಿತದೃಷ್ಟಿಯಿಂದ ರೇಬೀಸ್ ರೋಗ ಬಹಳ ಗಮನ ಸೆಳೆಯುವಂತಹದಾಗಿದೆ. ರೇಬೀಸ್ ರೋಗದಿಂದಾಗಿ ನಮ್ಮ ದೇಶದಲ್ಲಿ ಪ್ರತಿವರ್ಷ 15,000 ಮಂದಿ ಸಾಯುತ್ತಿದ್ದಾರೆಂದು ದೊರೆತ ಅಂಕಿ ಅಂಶಗಳು ತಿಳಿಸುತ್ತವೆ. ಇದಲ್ಲದೆ ಲೆಕ್ಕಕ್ಕೆ ಸಿಗದೆಹೋದ ವಿದ್ಯಮಾನಗಳು ಅದೆಷ್ಟೋ. ಪ್ರತಿವರ್ಷ ಮೂವತ್ತು ಲಕ್ಷಕ್ಕಿಂತಲೂ ಹೆಚ್ಚು ಮಂದಿ ರೇಬೀಸಿನ ಚಿಕಿತ್ಸೆ (anti-rabic treatment) ಪಡೆಯುತ್ತಿದ್ದಾರೆ. ಇದರಿಂದಾಗಿಯೇ ಪ್ರತಿವರ್ಷ ಜನರ 42,00,000 ಕೆಲಸದ ದಿನಗಳು ವ್ಯರ್ಥವಾಗುತ್ತಿದ್ದು 21 ಕೋಟಿ ಹಣ ನಷ್ಟವಾಗುತ್ತಿದೆ. ವಿವಿಧ ಪ್ರಾಣಿಗಳಲ್ಲಿ ರೇಬೀಸ್ ರೋಗದ ಸಂಭವಗಳ ಹಾಗೂ ಅದರಿಂದಾಗಿ ಸಂಭವಿಸುತ್ತಿದ್ದ ನಷ್ಟದ ಬಗ್ಗೆ ಗಣನೆಯಿಟ್ಟಿಲ್ಲ. ಇದರ ಬಗ್ಗೆ ಸಾಕಷ್ಟು ವರದಿಗಳು ದೊರೆಯದಿರುವುದೇ ಇದಕ್ಕೆ ಕಾರಣ.

ಪ್ರಾಣಿಗಳಿಂದ ಮನುಷ್ಯನಿಗೆ ಹರಡುವ ಬಹು ಮುಖ್ಯ ಹಾಗೂ ಭಯಾನಕ ರೋಗವಾದ ನಾಯಿಹುಚ್ಚಿನ ಪರಿಚಯ ಬಹಳ ಪುರಾತನ ಕಾಲದಿಂದಲೂ ಇದೆ. ಅರಿಸ್ಟಾಟಲ್ ಮತ್ತು ಡೆಮಾಕ್ರಿಟಸ್ ಕ್ರಮವಾಗಿ 3 ಮತ್ತು 5ನೆಯ ಶತಮಾನಗಳಲ್ಲಿಯೇ ಪ್ರಾಣಿಗಳಲ್ಲಿನ ನಾಯಿಹುಚ್ಚನ್ನು ವರ್ಣಿಸಿದ್ದಾರೆ. ಸೆಲ್ಲಸ್ ಎಂಬ

ವಿಜ್ಞಾನಿ ಕ್ರಿ.ಶ. 100ರಲ್ಲಿಯೇ ನಾಯಿಹುಚ್ಚು, ಹುಚ್ಚು ನಾಯಿಗಳ ಕಡಿತದಿಂದ ಹರಡುವುದೆಂಬುದನ್ನು ಸೂಚಿಸಿದ್ದಾನೆ.

'ನಾಯಿಹುಚ್ಚು' ಅಥವಾ 'ಹುಚ್ಚು ನಾಯಿ ಕಡಿತ' ಎಂಬ ಪದಗಳು ರೂಢಿಯಲ್ಲಿದ್ದರೂ ವೈಜ್ಞಾನಿಕ ಪರಿಭಾಷೆಯಲ್ಲಿ 'ರೇಬೀಸ್' ಎಂಬ ಹೆಸರು ಪ್ರಚಾರದಲ್ಲಿದೆ. ಇದು ರೇಬೀಸ್ ಎನ್ನುವ ವಿಷಾಣುಗಳಿಂದ ಬರುವ ಒಂದು ಸೋಂಕು ರೋಗ. ರೇಬೀಸ್ ರೋಗವು ಎಲ್ಲಾ ತರದ ಬಿಸಿರಕ್ತ ಪ್ರಾಣಿಗಳಲ್ಲೂ ಕಂಡು ಬಂದರೂ ಪ್ರಾಥಮಿಕವಾಗಿ ಇದು ನಾಯಿ, ಬೆಕ್ಕು ಮತ್ತು ಕೆಲವು ವನ್ಯಪ್ರಾಣಿಗಳ ರೋಗ. ಇವುಗಳಿಂದ ದನ, ಎಮ್ಮೆ, ಕುರಿ, ಕುದುರೆ ಮುಂತಾದ ಇತರೇ ಸಾಕು ಪ್ರಾಣಿಗಳಿಗೂ ಹರಡುವುದು. ಸಾಕು ಪ್ರಾಣಿಗಳಲ್ಲಿ ನಾಯಿಯನ್ನು ಬಿಟ್ಟರೆ ಅನಂತರದ ಹೆಚ್ಚಿನ ರೋಗಗ್ರಾಹಕ ಪ್ರಾಣಿಗಳೆಂದರೆ ದನಗಳು.

ಮನುಷ್ಯನು ರೇಬೀಸ್ ರೋಗದ ಯಾವದೇ ಪ್ರಾಣಿಯಿಂದಲಾದರೂ ರೋಗ ವನ್ನು ಪಡೆಯಬಹುದು. ಸಾಕು ಪ್ರಾಣಿಗಳಲ್ಲಿ ನಾಯಿಯನ್ನು ಸೇರಿಸಿಕೊಂಡಂತೆ ದನ, ಎಮ್ಮೆ, ಕುರಿ, ಕುದುರೆ, ಬೆಕ್ಕು ಮುಂತಾದವುಗಳೂ, ಕಾಡುಪ್ರಾಣಿಗಳಾದ ನರಿ, ತೋಳ ಮುಂತಾದವುಗಳೂ ಮತ್ತು ಬಾವುಲಿಗಳೂ ಮನುಷ್ಯನಿಗೆ ರೇಬೀಸ್ ರೋಗವನ್ನು ಹರಡುತ್ತವೆ. ಆದರೆ ಜನರು ನಾಯಿಯಿಂದ ರೇಬೀಸ್ ರೋಗವನ್ನು ಪಡೆಯುವ ಸಂಭವಗಳೇ ಹೆಚ್ಚು. ಮನುಷ್ಯನ ರೇಬೀಸ್ ರೋಗಕ್ಕೆ ಬೀದಿ ನಾಯಿಗಳು ಅಥವಾ ಸಾಕು ನಾಯಿಗಳೇ ಮುಖ್ಯ ಕಾರಣವಾಗಿರುತ್ತವೆ. ಬೀದಿ ನಾಯಿಗಳಿಗೆ ಕೊರತೆಯಿಲ್ಲದ ನಮ್ಮ ದೇಶದಲ್ಲಿ ರೇಬೀಸ್ ರೋಗದ ಬರಗಾಲವಿಲ್ಲ ವೆನ್ನಬಹುದು. ಜನರ ಒಟ್ಟು ರೇಬೀಸ್ ವಿದ್ಯಮಾನಗಳಲ್ಲಿ ಶೇ. 90ರಷ್ಟು ನಾಯಿ ಗಳ ಕಡಿತದಿಂದಲೂ ಇನ್ನುಳಿದವು ನರಿ, ತೋಳ, ಬೆಕ್ಕು ಮುಂತಾದವುಗಳ ಕಡಿತ ದಿಂದಲೂ ಹರಡಿದವು ಎಂದು ಅಂದಾಜು ಮಾಡಲಾಗಿದೆ.

ರೇಬೀಸ್ ಸೋಂಕು ಹರಡುವ ಬಗೆ

ಮನುಷ್ಯನ ರೇಬೀಸ್ ಸೋಂಕಿಗೆ ಮುಖ್ಯ ಮೂಲ ಹುಚ್ಚು ನಾಯಿ ಅಥವಾ ರೇಬೀಸಿನ ಇನ್ನಾವುದೇ ಪ್ರಾಣಿ. ಹುಚ್ಚು ನಾಯಿಗಳು ಸಾಮಾನ್ಯವಾಗಿ ಕಂಡದ್ದನ್ನೆಲ್ಲಾ ಕಡಿಯುವುದು ಸ್ವಾಭಾವಿಕ. ಇವು ಮನುಷ್ಯರನ್ನೂ, ಇತರ ಪ್ರಾಣಿಗಳನ್ನೂ ಕಚ್ಚುತ್ತಾ ಹೋಗುತ್ತವೆ. ಹುಚ್ಚು ನಾಯಿಗಳ ಜೊಲ್ಲಿನಲ್ಲಿ ವಿಸರ್ಜಿತವಾಗುತ್ತಿರುವ ರೇಬೀಸ್ ವಿಷಾಣುಗಳು ಕಡಿತ ಗಾಯಗಳ ಮೂಲಕ ಶರೀರವನ್ನು ಪ್ರವೇಶಿಸುತ್ತವೆ. ವಿಷಾಣುಭರಿತ ಜೊಲ್ಲು ಚರ್ಮದ ಗಾಯಗಳ ಮೂಲಕ ಪ್ರವೇಶಿಸಿದಲ್ಲದೆ ಸೋಂಕು ಸ್ಥಾಪನೆಯಾಗದು. ರೋಗ ಲಕ್ಷಣಗಳು ಪ್ರಕಟವಾಗುವುದಕ್ಕೆ 3-8 ದಿನಗಳ ಮುಂಚೆಯೇ ಹುಚ್ಚುನಾಯಿಗಳ ಜೊಲ್ಲಿನಲ್ಲಿ

ರೇಬೀಸ್ ವಿಷಾಣುಗಳ ವಿಸರ್ಜನೆಯಾಗುತ್ತಿರುವುವು. ಕೆಲವು ನಾಯಿಗಳು ರೋಗದ ಯಾವ ರೀತಿಯ ಲಕ್ಷಣಗಳನ್ನೂ ತೋರಿಸದೆ ಬಾಹ್ಯತಃ ಚರ್ಯೆಯಲ್ಲಿ ಆರೋಗ್ಯ ದಿಂದಿರುವಂತೆ ಕಂಡುಬಂದರೂ ಅವುಗಳ ಜೊಲ್ಲಿನಲ್ಲಿ ರೇಬೀಸ್ ವಿಷಾಣುಗಳ ವಿಸರ್ಜನೆಯಾಗುತ್ತಿದ್ದು, ಅವು ಸೋಂಕುವಾಹಕಗಳಾಗಿ ಮೌನವಾಗಿಯೇ ಸೋಂಕು ಪ್ರಸಾರ ಮಾಡುವುದುಂಟು. ಅಂತಹ ನಾಯಿಗಳ ಕಡಿತದಿಂದಲೂ ಮತ್ತು ಆ ನಾಯಿಗಳ ಬಾಯಲ್ಲಿ ಗಾಯಗಳ ಕೈಯಿಡುವುದರಿಂದಲೂ ಜನರು ರೇಬೀಸ್ ರೋಗವನ್ನು ಪಡೆಯುವುದುಂಟು. ಇದಲ್ಲದೆ ಪಶುವೈದ್ಯಶಾಲೆಗೆ ಚಿಕಿತ್ಸೆಗಾಗಿ ಬರುವ ಪ್ರಾಣಿಗಳ ಚಿಕಿತ್ಸೆಯಲ್ಲಿ ತೊಡಗುವ ಪಶುವೈದ್ಯರು, ಆಸ್ಪತ್ರೆಯ ಇತರೇ ಸಿಬ್ಬಂದಿಯೂ ಮತ್ತು ಪ್ರಾಣಿಗಳ ಮಾಲೀಕರೂ ಪ್ರಾಣಿಗಳಿಂದ ರೇಬೀಸ್ ರೋಗ ವನ್ನು ಪಡೆಯಬಹುದು.

ಹುಚ್ಚು ನಾಯಿಯ ಕಡಿತ ಮತ್ತು ಅದರ ಪರಿಣಾಮ

ರೇಬೀಸ್ ವಿಷಾಣುಗಳಿಗೂ ನರಗಳಿಗೂ ಮೈತ್ರಿ ಹೆಚ್ಚು. ಸೋಂಕು ಸ್ಥಾಪನೆ ಮುಖ್ಯವಾಗಿ ಹುಚ್ಚುನಾಯಿ ಮನುಷ್ಯನ ಶರೀರದ ಯಾವ ಭಾಗದಲ್ಲಿ ಕಚ್ಚುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ತಲೆ, ಕತ್ತು ಮತ್ತು ಮುಖದ ಮೇಲಾಗುವ ಕಡಿತ ಗಾಯಗಳು ಹೆಚ್ಚು ಅಪಾಯಕರ. ಇದರ ನಂತರ ಕೈಕಾಲುಗಳ ಮೇಲಾಗುವವೂ, ಕೊನೆಯದಾಗಿ ಮುಂಡ ಭಾಗದ ಮೇಲಾಗುವವೂ ಅಪಾಯಕರ ರೋಗಿಯಲ್ಲಿನ ರೋಗ ಪರಿಪಕ್ವಾವಧಿ ಆತನ ಶರೀರದಲ್ಲಿ ಗಾಯವಾದ ಭಾಗ ಮತ್ತು ಆದರ ಮೂಲಕ ವಿಷಾಣುಗಳ ಪ್ರವೇಶ–ಇವೆರಡು ಅಂಶಗಳನ್ನು ಅವಲಂಬಿಸಿರುತ್ತದೆ. ತಲೆ, ಮುಖ, ಕತ್ತು–ಈ ಭಾಗಗಳಲ್ಲಿ ಕಚ್ಚಿದಲ್ಲಿ ರೋಗ ಪರಿಪಕ್ವಾವಧಿ ಬಹಳ ಕಡಿಮೆ ಇದ್ದು ಆ ವ್ಯಕ್ತಿ ಬಹು ಬೇಗ ಸಾವನ್ನಪ್ಪುವನು. ಹುಚ್ಚು ನಾಯಿಗಳು ಜನರನ್ನು ಕಚ್ಚಿದಾಗ ಅವರಲ್ಲಿ ರೋಗಸ್ಥಾಪನೆಯಾಗಲು ಪ್ರಭಾವಿಸುವ ಅಂಶಗಳೆಂದರೆ, (1) ಕಡಿಯುವ ಸೋಂಕುಪ್ರಾಣಿಗಳ ಜೊಲ್ಲಿನಲ್ಲಿರುವ ವಿಷಾಣುಗಳ ಮತ್ತು ಅವುಗಳ ಪ್ರಮಾಣ (2) ಕಡಿತದ ಬಿರುಸು (3) ಶರೀರವನ್ನು ಮುಚ್ಚಿರುವ ಬಟ್ಟೆ. ಸೋಂಕು ಪ್ರಾಣಿಗಳ ಜೊಲ್ಲಿನಲ್ಲಿ ರೇಬೀಸ್ ವಿಷಾಣುಗಳು ಅಧಿಕ ಪರಿಮಾಣದಲ್ಲಿದ್ದಾಗಲೂ, ಕಡಿತದ ಬಿರುಸು ಹೆಚ್ಚಾಗಿಯೂ, ಆಳವಾಗಿಯೂ ಇದ್ದಾಗಲೂ ಮತ್ತು ಬಟ್ಟೆ ಮುಚ್ಚದಿರುವ ಶರೀರ ಭಾಗಗಳಲ್ಲಿ ಪ್ರಾಣಿಗಳು ಕಚ್ಚಿದಾಗಲೂ ಸುಲಭವಾಗಿ ರೋಗ ಸ್ಥಾಪನೆಯಾಗುವುದು. ಶರೀರವನ್ನು ಮುಚ್ಚಿರುವ ಬಟ್ಟೆ ದಪ್ಪವಾಗಿದ್ದಷ್ಟೂ ಮತ್ತು ಹೆಚ್ಚು ಪದರಗಳಿದ್ದಷ್ಟೂ, ಜೊಲ್ಲು ಶರೀರವನ್ನು ಪ್ರವೇಶಿಸದಂತೆ ಆದಷ್ಟೂ ತಡೆಯುವುದು.

ಗಾಯಗಳಿಂದ ವಿಷಾಣುಗಳು ಸಮೀಪದ ನರಗಳನ್ನು ಸೇರಿ ಅವುಗಳ ಮೂಲಕ ಹಾಯ್ದು ಬೆನ್ನುಹುರಿಯನ್ನು ತಲುಪಿ ಅಲ್ಲಿ ಮೇಲೆ ಸಾಗಿ ಕೊನೆಗೆ

ಮಿದುಳನ್ನು ಮುಟ್ಟುತ್ತವೆ. ಇದಕ್ಕೆ ಸಾಕಷ್ಟು ಕಾಲಾವಕಾಶ ಹಿಡಿಯುತ್ತದೆ. ಮಿದುಳನ್ನು ಪ್ರವೇಶಿಸಿ ವಿಷಾಣು ನರಕೋಶಗಳನ್ನು ನಾಶಪಡಿಸುತ್ತದೆ. ಅದರ ಪರಿಣಾಮವಾಗಿ ಹುಚ್ಚಿನ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ಈ ಸಮಯದಲ್ಲಿ ವಿಷಾಣುಗಳು ಕೇಂದ್ರ ನರಮಂಡಲದಿಂದ ಹೊರಹೊಮ್ಮಿ ನರಗಳ ಮೂಲಕ ಇತರ ಅಂಗಾಂಗಗಳನ್ನು ಮುಖ್ಯವಾಗಿ ಲಾಲಾರಸ ಗ್ರಂಥಿಗಳನ್ನು ತಲುಪುತ್ತವೆ.

ರೋಗ ನಿಯಂತ್ರಣ

ರೇಬೀಸ್ ರೋಗ ನಿಯಂತ್ರಣ ಮುಖ್ಯವಾಗಿ ಎರಡು ರೀತಿಯಲ್ಲಿ ಸಿದ್ಧಿಸ ಬಹುದು : (1) ಸ್ಥಳಿಕ ಗಾಯಗಳ ಚಿಕಿತ್ಸೆ, (2) ರೋಗ ನಿರ್ಮೂಲನೆ. ಹುಚ್ಚು ನಾಯಿ ಅಥವಾ ಇತರೇ ಯಾವುದೇ ಸಂಶಯಾತ್ಮಕ ನಾಯಿ ಕಡಿದ ತಕ್ಷಣ ಜನರು ವೈದ್ಯಾಧಿಕಾರಿಗಳನ್ನು ಕಂಡು ಅವರಿಂದ ಚಿಕಿತ್ಸೆ ಪಡೆಯುವುದು ಅವಶ್ಯಕ ; ನಾಯಿ ಯಿಂದ ಕಡಿಸಿಕೊಂಡವನು ಆಸ್ಪತ್ರೆಯಲ್ಲಿ ಗಾಯಗಳ ಚಿಕಿತ್ಸೆ ಮತ್ತು ವ್ಯಾಕ್ಸಿನೇಷನ್ ಪಡೆಯುವುದೇ ಅಲ್ಲದೆ, ಸೋಂಕು ಪ್ರಾಣಿಗಳ ಸಂಪರ್ಕ ಹೊಂದಿರುವವರೂ ಮುಂಜಾಗ್ರತಾ ಕ್ರಮವಾಗಿ ರೋಗನಿರೋಧಕ ವ್ಯಾಕ್ಸಿನೇಷನ್ ಪಡೆಯಬೇಕು. ಒಮ್ಮೆ ರೋಗ ಲಕ್ಷಣಗಳು ಬೇರೂರಿದ ಮೇಲೆ ರೇಬೀಸಿನ ಚಿಕಿತ್ಸೆ ನಿಷ್ಪ್ರಯೋಜಕ. ಆದ್ದರಿಂದ ಹುಚ್ಚು ಹಿಡಿದ ಅಥವಾ ಹುಚ್ಚು ಹಿಡಿದವು ಎಂದು ಕಂಡುಬಂದ ಪ್ರಾಣಿ ಗಳಿಂದಾಗುವ ಕಡಿತಗಾಯಗಳನ್ನು ಸೋಪು ಅಥವಾ ಶುದ್ಧಿಕಾರಕ ದ್ರಾವಕಗಳಿಂದ ಆದಷ್ಟು ಬೇಗ ತೊಳೆಯಬೇಕು. ಸೋಪಿನಿಂದ ತೊಳೆಯಲಾಗದ ಆಳವಾದ, ಕಿರಿದಾದ ಮತ್ತು ರಂಧ್ರಾಕೃತಿಯಲ್ಲಿರುವ ಗಾಯಗಳನ್ನು ನೈಟ್ರಿಕ್ ಆಮ್ಲ ಮುಂತಾದ ಪ್ರಬಲ ಖನಿಜಾಮ್ಲಗಳಿಂದ ತೊಳೆಯುವುದು ಒಳ್ಳೆಯದು. ಗಾಯದ ಒಳಗೂ ಮತ್ತು ಅದರ ಸುತ್ತಲೂ ಅತಿರಕ್ಷ ರಕ್ತಸಾರ (Hyper Immune Serum) ಸೋಸಣೆ ರೇಬೀಸ್ ರೋಗದ ಒಂದು ಪರಿಣಾಮಕಾರಿ ಚಿಕಿತ್ಸೆ. ಹುಚ್ಚು ನಾಯಿ ಯಿಂದಾಗುವ ಕಡಿತಗಾಯಗಳನ್ನು ಕಾದ ಕಬ್ಬಿಣ ಸಲಾಕೆಯಿಂದ ಸುಡುವುದು ಹಳೆಯ ಪದ್ಧತಿ ಮತ್ತು ಅಮಾನುಷ ಕಾರ್ಯವೆನಿಸಿದರೂ, ಸುಲಭ, ತಕ್ಷಣದ ಹಾಗೂ ಗುಣಕಾರಿ ಚಿಕಿತ್ಸೆಯೆನ್ನಬಹುದು.

ರೋಗ ನಿರ್ಮೂಲನ

ಜನರ ನಾಯಿಹುಚ್ಚು ರೋಗದ ಮುಖ್ಯ ಮೂಲ ಪ್ರಾಣಿಗಳು. ಆದ್ದರಿಂದ ಪ್ರಾಣಿಗಳಲ್ಲಿ ಈ ರೋಗವನ್ನು ನಿರ್ಮೂಲನಗೊಳಿಸಿದಲ್ಲದೆ ಮತ್ತು ಸೋಂಕು ವಾಹಕ ಪ್ರಾಣಿಗಳನ್ನು ನಾಶಪಡಿಸಿದಲ್ಲದೆ ಜನರನ್ನು ಈ ರೋಗದಿಂದ ವಿಮುಕ್ತಿ ಗೊಳಿಸುವುದು ಸಾಧ್ಯವಿಲ್ಲ. ಅದರಲ್ಲೂ ಜನರಲ್ಲಿ ಮತ್ತು ಇತರ ಸಾಕುಪ್ರಾಣಿಗಳಲ್ಲಿ ಈ ರೋಗ ಪ್ರಸಾರವಾಗಲು ನಾಯಿಗಳೇ ಕಾರಣ ಎಂಬುದು ನಿರ್ವಿವಾದ ಸಂಗತಿ.

ಆದ್ದರಿಂದ ಈ ರೋಗದ ನಿಯಂತ್ರಣ ಯಾವುದೇ ಯೋಜನೆಯನ್ನು ರಚಿಸಲಿ ಅದರ ಮುಖ್ಯ ಕೆಲಸ—ಬೀದಿ ನಾಯಿಗಳನ್ನು ನಿರ್ನಾಮ ಮಾಡುವುದು, ಮನೆಯಲ್ಲಿನ ಎಲ್ಲಾ ಸಾಕು ನಾಯಿಗಳಿಗೂ ವ್ಯಾಕ್ಸಿನೇಷನ್ (ಆಂಟಿರೇಬೀಸ್) ಮಾಡಿಸುವುದು—ಇವೇ ಆಗಿರಬೇಕು. ಪ್ರಗತಿಪರ ದೇಶಗಳಲ್ಲಿ ರೇಬೀಸ್ ಹತೋಟಿಯ ಯೋಜನೆಗಳು ಅಸ್ತಿತ್ವದಲ್ಲಿದ್ದು ಸಾಕಷ್ಟು ಯಶಸ್ವಿಯಾಗಿ ಕಾರ್ಯಗತವಾಗಿವೆ. ನಮ್ಮ ದೇಶದಲ್ಲೂ ಅಂತಹವೇ ಯೋಜನೆಗಳ ಆಗತ್ಯವಿದೆ, ಮುಕ್ತೇಶ್ವರದಲ್ಲಿ (ಉತ್ತರ ಪ್ರದೇಶ). ಪಶುವೈದ್ಯಕೀಯ ಜನರಾರೋಗ್ಯತೆಯ ಅಂಗವಾಗಿ 1970ರಲ್ಲಿ ನಡೆದ ಪ್ರಾದೇಶಿಕ ಶಿಕ್ಷಣ ಗೋಷ್ಠಿಯಲ್ಲಿ ಪ್ರಾಣಿಗಳಿಂದ ಮನುಷ್ಯನಿಗೆ ಹರಡುವ ರೇಬೀಸಿನ ಬಗ್ಗೆ ಚರ್ಚೆ ನಡೆದು, ಅದರ ನಿವಾರಣೆಗೆ ರೇಬೀಸ್ ಹತೋಟಿ ಸಮಿತಿಯ ನಿರೂಪಣೆಯ ಮೇರೆಗೆ ಆಯಾ ರಾಜ್ಯಗಳಲ್ಲಿ ಸ್ಥಳಿಕ ಸಲಹಾ ಯೋಜನೆಯೊಂದನ್ನು ಸ್ಥಾಪಿಸಲು ಸೂಚಿಸಲಾಯಿತು. ಹಾಗೆ ಸ್ಥಾಪಿತವಾಗುವ ಸ್ಥಳಿಕ ಸಲಹಾ ಯೋಜನೆ ಪಶುವೈದ್ಯಕೀಯ ಜನರಾರೋಗ್ಯತಾ ಇಲಾಖೆಯ ಮೇಲಧಿಕಾರಿಯನ್ನು ಅಧ್ಯಕ್ಷನನ್ನಾಗಿಯೂ ಮತ್ತು ಪಶುವೈದ್ಯಕೀಯ ಅಥವಾ ವೈದ್ಯಕೀಯ ಇಲಾಖೆಯ ಅಧಿಕಾರಿಯನ್ನು ಕಾರ್ಯದರ್ಶಿಯನ್ನಾಗಿಯೂ ಹೊಂದಿದ್ದು, ಈ ಕೆಳಗಿನ ಮಂದಿಯನ್ನೂ ಮತ್ತು ಸಂಘ, ಸಂಸ್ಥೆ, ಇಲಾಖೆಗಳಿಂದ ಒಬ್ಬೊಬ್ಬರನ್ನು ಸದಸ್ಯರನ್ನಾಗಿಯೂ ಒಳಕೊಂಡಿರಬೇಕು ಎಂದು ಸೂಚಿಸಲಾಯಿತು. ಮುನಿಸಿಪಲ್ ಕಾರ್ಪೊರೇಷನ್, ಎಸ್.ಪಿ.ಸಿ.ಎ., ಪೋಲೀಸ್ ಇಲಾಖೆ; ವಿದ್ಯಾಸಂಸ್ಥೆ, ವಾರ್ತಾಸಂಸ್ಥೆ (ರೇಡಿಯೋ, ದಿನಪತ್ರಿಕೆ ಮುಂತಾದ) ಧಾರ್ಮಿಕ, ಸಾಮಾಜಿಕ ಮತ್ತಿತರ ಸಂಘಗಳು, ವೈದ್ಯಕೀಯ, ಪಶುವೈದ್ಯಕೀಯ ಕಾಲೇಜುಗಳು, ಪುರಪ್ರಮುಖರು, ಸ್ಥಳಿಕ ವೈದ್ಯರು, ಪಶುವೈದ್ಯರು—ಇವರೇ ಮೊದಲಾದವರು. ರೇಬೀಸ್ ರೋಗ ನಿಯಂತ್ರಣಕ್ಕೆ ಸಂಬಂಧಿಸಿದ ಎಲ್ಲಾ ಕ್ರಮಗಳನ್ನು ನಿರೂಪಿಸುವುದು, ಸುಸಂಘಟಿಸುವುದು, ರೇಬೀಸ್ ವಿದ್ಯಮಾನಗಳ ಹಾಗೂ ರೇಬೀಸ್ ರೋಗ ನಿಯಂತ್ರಣಾ ಕಾರ್ಯಗಳ ಮೇಲ್ವಿಚಾರಣೆ ನಡೆಸುವುದು ಮತ್ತು ಎಲ್ಲಾ ಕಾರ್ಯಕಲಾಪಗಳನ್ನೂ ಕಾರ್ಯರೂಪಕ್ಕೆ ತರುವುದು—ಇವೇ ಈ ಸಲಹಾ ಯೋಜನೆಯ ಮುಖ್ಯ ಕೆಲಸಗಳು.

ರೇಬೀಸ್ ರೋಗ ನಿರ್ಮೂಲನಾ ಕ್ರಮಗಳು

(ಅ) ಮನೆಯಲ್ಲಿನ ಎಲ್ಲಾ ಸಾಕು ನಾಯಿಗಳ ದಾಖಲೆ ಮತ್ತು ಅವುಗಳ ವ್ಯಾಕ್ಸಿನೇಷನ್ ಕ್ರಮಗಳು: ಎಲ್ಲಾ ಸಾಕುನಾಯಿಗಳನ್ನೂ ದಾಖಲೆ ಮಾಡಿಸಬೇಕು. ನಾಯಿಯ ಮಾಲೀಕರೆಲ್ಲರಿಗೂ ಅವರವರ ನಾಯಿಗಳ ಅಂಕೆ, ವಯಸ್ಸು, ಲಿಂಗ, ಜಾತಿ, ಬಣ್ಣ, ಮತ್ತಿತರ ಗುರುತಿನ ಚೀಟಿಯನ್ನು ನೀಡಬೇಕು. ದಾಖಲೆ ಮಾಡಲ್ಪಟ್ಟ ಎಲ್ಲಾ ನಾಯಿಗಳಿಗೂ ಸೂಕ್ತ ರೋಗ ನಿರೋಧಕ ವ್ಯಾಕ್ಸಿನಿಂದ

ವ್ಯಾಕ್ಸಿನೇಷನ್ ಮಾಡಿಸಬೇಕು ಮತ್ತು ಆದಷ್ಟು ಕಡಿಮೆ ಕಾಲಾಂತರದಲ್ಲಿ ಈ ವಾಕ್ಸಿನೇಷನ್ ಮಾಡುತ್ತಿರಬೇಕು.

(ಅ) ಬೀದಿನಾಯಿಗಳ ನಾಶಕ್ರಮಗಳು: ಎಲ್ಲಾ ಬೀದಿನಾಯಿಗಳನ್ನೂ ಹಿಡಿದು ದೊಡ್ಡಿಯೊಂದರಲ್ಲಿ ಕೂಡಿಹಾಕಿ ಅವುಗಳನ್ನು ಮಾನವಿಕ ರೀತಿಯಲ್ಲಿ ಸಾಯಿಸಬೇಕು.

(ಇ) ರೋಗಪ್ರಸಾರ ನಿಯಂತ್ರಣೆ: ಯಾವುದೇ ಪ್ರದೇಶ ಅಥವಾ ಸ್ಥಳದಲ್ಲಿ ರೇಬೀಸಿನ ಹೊಸದೊಂದು ವಿದ್ಯಮಾನ ಕಂಡುಬಂದಾಗ ಅದು ತಕ್ಷಣ ಸ್ಥಳಿಕ ಸಲಹಾ ಯೋಜನೆಗೆ ತಿಳಿಯುವಂತಾಗಬೇಕು. ಹುಚ್ಚುನಾಯಿಗಳನ್ನೂ,ಅವು ಕಚ್ಚಿದ ಇತರ ನಾಯಿಗಳನ್ನೂ ಕೂಡಲೇ ಸಾಯಿಸಬೇಕು. ಒಂದು ವೇಳೆ ಮಾಲೀಕರು ಹುಚ್ಚುನಾಯಿಂದ ಅಥವಾ ಸಂಶಯಾತ್ಮಕ ನಾಯಿಂದ ಕಡಿಯಲ್ಪಟ್ಟ ತಮ್ಮ ನಾಯಿಗಳನ್ನು ಸಾಯಿಸಲು ಒಪ್ಪದಿದ್ದರೆ ತಕ್ಷಣವೇ ಅವುಗಳನ್ನು ಪಶುವೈದ್ಯ ಶಾಲೆಗೆ ಸೇರಿಸಿ, ಚಿಕಿತ್ಸೆ ಕೊಡಿಸುವುದು ಮಾತ್ರವೇ ಅಲ್ಲ, ಆರು ತಿಂಗಳವರೆಗೆ ಆಸ್ಪತ್ರೆಯಲ್ಲಿ ಪ್ರತ್ಯೇಕವಾದ ಕೋಣೆಯಲ್ಲಿಟ್ಟು ಗಮನಿಸಬೇಕು. ಇದರಿಂದಾಗಿ ರೇಬೀಸ್ ರೋಗ ಪ್ರಸಾರವಾಗುವುದನ್ನು ತಡೆಯಬಹುದು.

(ಈ) ವನ್ಯ ಪ್ರಾಣಿಗಳಿಂದ ರೋಗಪ್ರಸಾರ ನಿಯಂತ್ರಣ.

(ಉ) ಪ್ರತಿಯೊಂದು ರಾಜ್ಯದಲ್ಲೂ ರೋಗ ನಿರ್ಣಯ ಕೇಂದ್ರಗಳ ಅನುಕೂಲತೆಗಳು. ಅಧಿಕ ಪ್ರಮಾಣದಲ್ಲಿ ಸೂಕ್ತ ವ್ಯಾಕ್ಸೀನ್ ತಯಾರಿಕೆಗೆ ಅನುಕೂಲಗಳು ಮತ್ತು ಆಸ್ಪತ್ರೆಗಳಲ್ಲಿ ಅವುಗಳ ಲಭ್ಯತೆ.

(ಊ) ಜನಜಾಗೃತಿಕ ಶಿಕ್ಷಣ: ರೇಬೀಸ್ ರೋಗ ನಿಯಂತ್ರಣಾ ಕಾರ್ಯ ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಹೃತ್ಪೂರ್ವಕ ಸಹಕಾರ, ಉತ್ತೇಜನ ಮತ್ತು ಸಹಾಯ ಅವಶ್ಯಕ. ಅದಕ್ಕಾಗಿ ಅವರಿಗೆ ರೇಬೀಸ್ ರೋಗದ ಬಗ್ಗೆ ಪ್ರಚಾರ ಶಿಕ್ಷಣ ಅವಶ್ಯಕ. ಈ ಶಿಕ್ಷಣವನ್ನು ಅಲ್ಲಲ್ಲಿ ಶಿಕ್ಷಣ ಕೇಂದ್ರಗಳಲ್ಲೂ ಮತ್ತು ರೇಡಿಯೋ, ಪತ್ರಿಕೆ, ಸಿನಿಮಾ ಮತ್ತು ಡಾಕ್ಯುಮೆಂಟರಿ ಫಿಲಂಗಳ ಮೂಲಕವೂ ವ್ಯಾಪಕ ರೀತಿಯಲ್ಲಿ ಕೊಡಬೇಕು.

ಕೆಲವು ನೋವಿನ ಪದ್ಯಗಳು

ಎಂ. ಎಸ್. ಜೈ ಪ್ರಕಾಶ್

ಮಂಜುಳಾ

ಜನ ಕಾರು ಆಟೋ ಬೈಸಿಕಲ್ ಎಲ್ಲದರ ಸದ್ದು
ನಡುರಾತ್ರಿಯು ಗಡುವಿೀರಿದಂತೆ ಹೀಗೇ ನಿಧಾನ ಕರಗಿ
ಬೀದಿ ದೀಪಗಳ ಗೈರು ಹಾಜರಿಯಲ್ಲಿ ತಂಪುಹುಣ್ಣಿಮೆ ಈ
ನಿರ್ಜನ ದಾರಿಗಳಲ್ಲೆಲ್ಲ ಎಲ್ಲಿಂದಲೊ ತಣ್ಣಗೆ ಇಳಿದು ತಾನೇ
ತಾನಾಗಿ ತುಂಬಿ ವಿಜೃಂಭಿಸುವಾಗ, ಮಂಜುಳಾ—ನಿನ್ನ
ನೆನಪು ; ನಿನ್ನ ಹಾವಭಾವದ ನೆನಪು ; ಕೊರಳ ದನಿ ಜೇನು ;
ಗಿಲಿಗಿಚ್ಚಿ ನಗು ; ಕಿಂಕಿಣಿ ಕಾಲುಂಗರ ; ಸೊಂಟದ ಬಳಿ
ನುಣುಪು ; ಅಂಗಾಲ ಕೆಂಪು ಹೊಳಪು ; ಮೇಲೆಲ್ಲೋ ಒಂದು ಫಕ್ಕನೆ
ಮಿನುಗುವ ಮೂಗಿನ ನತ್ತು—ಮಂಜುಳಾ, ಎಲ್ಲವೂ ಒತ್ತೊತ್ತಿ
ನಿಂತ ನೆಲಕಚ್ಚಿ ಕೊರಳ ಸರ ಬಿಗಿಯುವುದು ನೋಡಾ...

ಆ ಹೊತ್ತಿನಲ್ಲಿ

ಮಾವಿತ್ತು ಜೇನಿತ್ತು ಸಂಪಿಗೆಯು ಸುವಾಸವಿತ್ತು
ಮೇಲೆ ಜೊಂಕೆಜೊಂಕೆಗೆ ಜೀಕುವ ಕಾಜಾಣವೆಷ್ಟಿತ್ತು !
ಎಲ್ಲ ಕಳಚಿ ಮರ ಮರದ ಕೊನೆಗೆ ದಿಗಿಲಿಕ್ಕುವ ಬರಿ ಮೌನ
ಕುಂತೀಗ ಓ, ಸಶ್ರುತ, ಹೋಯಿತೆತ್ತ ಆ ವಸಂತ ?
ಅಯ್ಯೋ, ಹೇಳು, ಎತ್ತಹೋಯ್ತು—ಇತ್ತ ಮರೆತು ?

ಸ್ಥೈರ್ಯ

ಬಿಸಿಲಿಗೆ ಬೆದರಿದವ ನಾನು
ಗುಡ್ಡದ ಬುಡದಲ್ಲಿ ಬಳಲಿ ಮುಖವೆತ್ತಿದೆ :
ಹಸಿರು ಹಳದಿಗೆ ಸೋತು
ಗುಡ್ಡದ ತುತ್ತತುದಿಯ ನೀರವತೆಗೆ
ಗಿರಿಯಾಗಿ ನಿಶ್ಶಬ್ದ ನಿಂತ ಕಣಿಗಲೆಗೆ
ಎಲೆಯಿಲ್ಲ ಹಸುರಿಲ್ಲ ಎಲಬುಗಳ ಗೋಳು.

ಸೀರಡಿಕೆಯ ಕೊಂಬೆಕವಲುಗಳ ತೊಟ್ಟುತೊಟ್ಟಿಗೆ
ಮಾತ್ರ ಎಲ್ಲ ಧಿಕ್ಕರಿಸಿ ಸುತ್ತ ತಟ್ಟನೆ ಮೊಗವೆತ್ತಿ ನಿಂತು
ವ್ಹಾ ! ನಗುವ ನೂರುನೂರು ಬೆಳ್ಳಾನೆ ಹೂವು !

ಒಡೆದ ಹಾಡು

ನೂರು ನೂರು ನೋವಿನಲ್ಲಿ
ಅಸಂಖ್ಯ ಮುಖಭಂಗದಲ್ಲಿ ಮತ್ತೆ
ಈ ಅಸಹಾಯಕ ಭೀತಿಯಲ್ಲಿ
ಸೊರಸೊರ ಸೋರಿಹೋಯ್ತು ನನ್ನಬದುಕು.
ಅದರ ಎಲ್ಲ ವ್ಯಥೆಯ
ಸೇರಿ ಆದ ಕಥೆಯ
ಹೇಳು, ಈಗ ಹೇಗೆ ಬಸಿದುಕೊಡಲಿ
ಉಸಿರು ಹಿಡಿದು ರೂಕ್ಷವಾದ ಈ ಎದೆಯ ಮರಿಗೆಯಿಂದ ?

ನಾಲ್ಕು ಹನಿ ಕಣ್ಣೀರು

ಸಿಗರೇಟಿನ ಸುರುಳಿಸುರುಳಿ ದಟ್ಟ ಹೊಗೆಯ ನಡುವೆ
ಸಲೀಸು ಹರಿಯುತ್ತಿದ್ದ ಧಾರಾಳ ವಿಶ್ವಾಸ ಮಾತು
ನಗುಗಳ ಉಲ್ಲಾಸದ ಹಿಂದೆ ಎಲ್ಲೋ ಅಡಗಿಕೂತ
ಆಳದ ವಿಷಾದ ನಮಗೆ ಗೊತ್ತೇ ಆಗಲಿಲ್ಲ. (ಆದ್ದರಿಂದ
ನಕ್ಕೆವು, ಛೇಡಿಸಿದೆವು, ಕಂಡಲ್ಲಿ ಆಡಿಕೊಂಡೆವು)
ಗೊತ್ತಾದಾಗ ನೀವೆಲ್ಲಿ–ಎಲ್ಲಿ–ಎಲ್ಲಿ ? ವಿಷಾದ
ಉಕ್ಕುಕ್ಕಿ ವಿಶಾಲ ಎದೆದಾಟಿ ಚೆಲ್ಲಿ ಚೆಲ್ಲಿ ಹಾ
ನೋವು ಎನ್ನುವುದರಲ್ಲೇ ಇಲ್ಲ–ಇಲ್ಲಾ–ನೀವಿಲ್ಲಿ

(To J. S. V. Rao)

ತೇಜಸ್ವಿಯವರ "ನಿಗೂಢ ಮನುಷ್ಯರು"

ಶಿವರಾಮಯ್ಯ

ಅಬಚೂರಿನ ಪೋಸ್ಟ್‌ಆಫೀಸ್, ಕುಬಿ ಮತ್ತು ಇಯಾಲ, ನಿಗೂಢ ಮನುಷ್ಯರು–ಈ ಕತೆಗಳನ್ನು ಓದಿದ ಯಾರಿಗೂ ತೇಜಸ್ವಿಯವರ ಬಗ್ಗೆ ವಿಶೇಷ ಆದರ ಹುಟ್ಟುವುದಲ್ಲದೆ ಹೆಮ್ಮೆಯೆನಿಸುತ್ತದೆ. ಇಲ್ಲಿನ ಮೊದಲ ಎರಡಕ್ಕಿಂತ 'ನಿಗೂಢ ಮನುಷ್ಯರು' ಕತೆಯು ಅರ್ಥವಂತಿಕೆ, ಸಂಕೀರ್ಣತೆ, ಅಪೂರ್ವವಾಗಿ ಅದರ ಸಾವಯುವ ಶಿಲ್ಪ ಅಭ್ಯಾಸಯೋಗ್ಯವಾಗಿದೆ. ತೇಜಸ್ವಿಯವರು ಪ್ರಕೃತಿಯನ್ನು ಆ ಪ್ರಕೃತಿಯಲ್ಲಿ ಚಿರಂತನವಾಗಿ ಸೆಣಸಾಡಿ ಬದುಕುವ ಜೀವಜಾಲದ ಸಂಘರ್ಷವನ್ನು ಎಚ್ಚರಿಕೆಯಿಂದ, ವಿಜ್ಞಾನಿಯಂತೆ ಬುದ್ಧಿಪೂರ್ವಕವಾಗಿ ಮತ್ತು ಕವಿಯ ಹೃದಯ ವಂತಿಕೆಯಿಂದ ನಿರೀಕ್ಷಿಸಿ, ಪರೀಕ್ಷಿಸಿ ಅಲ್ಲದೆ ಪರಿಭಾವಿಸಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡುತ್ತಿದ್ದಾರೆ. ಅವರ ಅನ್ವೇಷಣೆಯ ದೃಷ್ಟಿಗೆ ಏನೆಲ್ಲವೂ ವಸ್ತುವಾಗುತ್ತವೆ. ಉದಾ : ಇಬ್ಬನಿ, ಜೇಡ-ಜಾಲ, ಹಾತೆ, ಪತಂಗ, ಜೀರುಂಡೆ, ಮಿಂಚುಹುಳ, ಇತ್ಯಾದಿ. ಇವುಗಳ ಚಲನವಲನ ಜೀವನ ವಿಧಾನವನ್ನು ಚಿತ್ರಸಮೇತ ಸೆರೆಹಿಡಿದಿರುವ 'ಚಿತ್ರ-ವಿವರ'ಗಳು ತುಷಾರ, ಕಸ್ತೂರಿ ಮುಂತಾದ ಸಂಚಿಕೆಗಳಲ್ಲಿ ಕಾಣುತ್ತಿವೆ. ಅಪೂರ್ವವಾದೊಂದು ಅತೀಂದ್ರಿಯ ಜಗತ್ತಿನ ರಹಸ್ಯಗಳನ್ನು ಪರಿಚಯಿಸಲು ಪ್ರಯತ್ನಿಸುತ್ತಿದ್ದಾರೆ.

ತೇಜಸ್ವಿಯವರು 'ನಿಗೂಢ ಮನುಷ್ಯರ'ಲ್ಲಿ ಸಹ ಇಂಥ ಪ್ರಕೃತಿಯ ಮಡಿಲಲ್ಲಿ ಕೂಡಿ ಬಾಳುತ್ತಿರುವ ಮತ್ತು ಬಾಳಬೇಕೆಂದಿರುವ ಮಾನವ ಬದುಕಿನ ಅರ್ಥವನ್ನು ಅದರ ಪರಿಸರದಲ್ಲಿಯೇ ಆಗುವ ಅನುಭವವನ್ನು ಹುಡುಕಹೊರಟಿದ್ದಾರೆ,

ತರುಣ ಬರಹಗಾರ ಜಗನ್ನಾಥ ಮತ್ತು ಆತನ ಸ್ನೇಹಿತ ಎಕ್ಸೈಜ್ ಇನ್ಸ್‌ಪೆಕ್ಟರ್ ರಂಗಪ್ಪ ಉಗ್ರಗಿರಿಯ ತಪ್ಪಲಿನ ಕಾಡಿನಲ್ಲಿ ದಾರಿತಪ್ಪಿ ಭಯಂಕರ ಮಳೆಗೆ ಸಿಕ್ಕಿ ಅವರ ಲಟಾರಿ ಕಾರು ಕೆಟ್ಟುಹೋಗಿ ಆಕಸ್ಮಾತ್ತಾಗಿ ಅಲ್ಲೆಲ್ಲೋ ಇದ್ದ ಗೋಪಾಲಯ್ಯ ಎಂಬುವನ ಮನೆಯಲ್ಲಿ ಮೂರು ದಿನಗಳನ್ನು ಕಳೆಯಬೇಕಾಗುತ್ತದೆ. ಅಲ್ಲಿ ಒದಗಿದ ಅನುಭವಗಳನ್ನು ಕಥೆಯ ಪಾತ್ರಗಳಲ್ಲಿ ಒಂದಾದ ರಂಗಪ್ಪನ ಪ್ರಜ್ಞೆಯ ಮುಖಾಂತರ ಅವಲೋಕನಗೊಳಿಸಿ ಈ ಕತೆಯನ್ನು ಬರೆಯಲಾಗಿದೆ. ಇಂಥ ಕತೆಯ ಕೆಲವಂಶಗಳನ್ನು ಕುರಿತು ಇಲ್ಲಿ ವಿವರಿಸಲಾಗಿದೆ. ಜಗನ್ನಾಥನ ಲಟಾರಿಕಾರು ನುಗುಬೀಡಿಗೆ ಹೋಗುವ ಮಾರ್ಗಮಧ್ಯದಲ್ಲಿ ಹೂತುಹೋಗುತ್ತದೆ.

ಧಾರಕಾರವಾಗಿ ಸುರಿಯುತ್ತಿರುವ ಮಲೆನಾಡಿನ ಮಳೆ, ರಸ್ತೆಯ ಬದಿಗಳಲ್ಲಿ ಕಾಲಿಟ್ಟರೆ ಜಾರುವ ಹೂಳುವ ಕೆಸರು. ಸ್ಟಾರ್ಟ್‌ಮಾಡಿ ಅಲುಗಿಸಿದಂತೆಲ್ಲಾ ಕಾರಿನ ಚಕ್ರಗಳು ಇನ್ನೂ ಕೆಳಗೆ ಒಳಗೆ ಇಳಿದುಬಿಡುತ್ತವೆ. ಕತ್ತಲಾಗುತ್ತೆ. ಆ ಭಯಂಕರ ಟಾರು ಮೆತ್ತಿದಂತಿರುವ ಕತ್ತಲಲ್ಲಿ ಪ್ರೇತಗಳಂತೆ ಬಂದ ಗೋಪಾಲಯ್ಯನ ಆಳುಗಳಿಂದಲೂ ಆ ಕಾರನ್ನು ದೂಡಲು ಆಗಲಿಲ್ಲ. ಬೆಳಗಾಯಿತು. ಗೋಪಾಲಯ್ಯ ಅವನ ಆಳುಗಳು ಎಲ್ಲಾ ಬಂದು ಅದನ್ನು ದೂಡಲು ಪ್ರಯತ್ನಿಸಿ ಸೋತರು. ಎತ್ತು ಕೋಣಗಳಿಂದ ಕಟ್ಟಿ ಎಳೆಯಿಸಲು ಹಿಡಿದ ಮಳೆ ಬಿಡುವಂತಿಲ್ಲ; ಬಿರುಗಾಳಿ ನಿಲ್ಲುವಂತಿಲ್ಲ. ಎಲ್ಲರೂ ಗೋಪಾಲಯ್ಯನ ಮನೆಗೆ ಹೋದರು. ಮೂರನೆ ದಿನ ಬಂದು ನೋಡಿದರೆ ನಿರಾಶೆಯ ಪ್ರತೀಕದಂತೆ ಹಾಗೆಯೆ ನಿಂತಿದೆ. ಅಲ್ಲದೆ ಚಕ್ರಗಳಿಂದ ಬೇರು ಬಿಟ್ಟುಕೊಂಡು ಅಲ್ಲೇ ಇರುವ ಯಾವುದೇ ಸನಾತನ ವಸ್ತುವಿನಂತೆ ಕಾಣುತ್ತಿದೆ. ಪುರುಷ ಪ್ರಯತ್ನ ಪ್ರಕೃತಿಯ ಎದುರು ಚಲಿಸುವಂತಿಲ್ಲ. ಇದು ಇಂದಿನ ಯಂತ್ರಯುಗದ ಸಾಧನಗಳು ಮಾನವನ ಪ್ರಗತಿಪಥಕ್ಕೆ ಅನೇಕ ವೇಳೆ ಸಹಾಯವಾಗುವ ಬದಲು ಕಷ್ಟವನ್ನೇ ತಂದೊಡ್ಡುತ್ತದೆ ಎಂಬುದರ ಸೂಚನೆಯಾಗಿದೆ. ಅಲ್ಲದೆ ಜಗನ್ನಾಥ, ರಂಗಪ್ಪರು ಕತೆಯ ಅಂತ್ಯದಲ್ಲಿ ಈ ಕಾರಿನ ನೆನಪೂ ಸಹ ತೆಗೆಯಲಾರರು. ಬಹುಶಃ ಅದರ ನೆನಪೇ ಇಲ್ಲದಂತಾಗಿರಬೇಕು.

ಆ ಕಾರು ಕೆಟ್ಟುನಿಂತ ರಸ್ತೆಯಾದರೋ ಮುಂದೆ ನವಿಲುಗುಂದ ಎನ್ನುವ ಊರಿನವರೆಗೆ ಮಾತ್ರ ಹೋಗುತ್ತದೆ; ಅನಂತರ ಅದೆಲ್ಲಿಗೂ ಹೋಗದೆ ಕೊನೆಯಾಗುತ್ತದೆ. ಹೀಗೆ ನೇರವಾಗಿ ಹೋಗಿ ಸಹ್ಯಾದ್ರಿ ಶ್ರೇಣಿಯಲ್ಲಿ ಹಾಗೆ ಹೇಳದೆ ಕೇಳದೆ ಕೊನೆಯಾಗಿಬಿಡುವ, ಪಥಿಕರನ್ನು ಅನಾಥರನ್ನಾಗಿ ಮಾಡುವ ಈ ರಸ್ತೆಯ ಬಗ್ಗೆ ಜಗನ್ನಾಥನಿಗೆ ಪಿಚ್ಚೆನಿಸುವುದು ಸಹಜ. ಒಂದು ದಾರಿ ಎಂದರೆ ಒಂದು ಆಶ್ವಾಸನೆ ಇದ್ದಂತೆ. ಎರಡರ ತುದಿಗೂ ಒಂದೊಂದು ನಾಗರಿಕತೆ ಇರುತ್ತದೆ ಎಂದು ಅವನ ನಂಬಿಕೆ. ಇದು ತಲೆಕೆಳಕಾಗುತ್ತದೆ. ನಾವು ಬಂದುದೆಲ್ಲಿಂದ ಹೋಗುವುದೆಲ್ಲಿಗೆ ? ಯಾರಿಗೆ ಗೊತ್ತು ? ಯಾರಿಗೆ ಯಾರಿಲ್ಲ ದಾರಿಗೆ ದಿಕ್ಕಿಲ್ಲ. ಆದರೆ ಬಂದ ದಾರಿಯೇ ನಮ್ಮ ಬಾಳಿನ ಸುಂಕವನ್ನು ಕೇಳುತ್ತಿದೆ. ಅದು ನಮ್ಮನ್ನು ಅನಾಥರನ್ನಾಗಿ ಮಾಡುತ್ತದೆ ಎಂಬ ಪ್ರಜ್ಞೆ ಮೂಡುತ್ತದೆ. ಆದ್ದರಿಂದ ಸವೆದ ಸಂಪ್ರದಾಯದ ಮಾರ್ಗವನ್ನು ನಂಬಬಾರದು, ಪ್ರಗತಿಯ ಹೊಸ ಮಾರ್ಗದ ಅನ್ವೇಷಣೆಯನ್ನು ಕೊಲಂಬಸ್‌ನಂತೆ ನಾವೇ ಕಂಡುಕೊಳ್ಳಬೇಕು ಎನ್ನುವ ಧ್ವನಿ ಈ 'ರಸ್ತೆಕೊನೆ' ಯಾಗುವುದರಿಂದ ಸೂಚಿತವಾಗುವ ಅಂಶ.

ಉಗ್ರಗಿರಿ ಮತ್ತು ಭೂಕಂಪ ಇವು ಕತೆಯಲ್ಲಿ ಮಹತ್ತರ ಪಾತ್ರ ವಹಿಸಿವೆ. ಸಾವಿನ ಛತ್ರಿಯಂತಿರುವ ಆ ಮಲೆನಾಡಿನ ಬೆಟ್ಟಕ್ಕೆ ಉಗ್ರಗಿರಿ ಎಂಬುದು ತಕ್ಕ ಹೆಸರು. ಅದು ಮೇಲೆ ನೋಡಿದರೆ ಕಣ್ಣು ತಿರುಗಿಸುವ ಮೋಡಮಂಜುಗಳಲ್ಲಿ

ಕಣ್ಣು ಮುಚ್ಚಾಲೆಯಾಡುವ ರುಂದ್ರ ಸುಂದರ ಕಲಾ ಶಂಕರ ಗಿರಿ. ಭೂಕಂಪನಕ್ಕೆ ಅದುರಿ ಇದರ ಸ್ವಲ್ಪಭಾಗ ಕಲ್ಲು ಮಣ್ಣು ಮರಸಮೇತ ಹಾಗೆ ಹಾಗೆ ಜಾರಿ ಗೋಪಾಲಯ್ಯನ ತೋಟದ ಮೇಲೆ ಕೂರುತ್ತದೆ. ಈ ಸರಕಾರಿ ಕಾಡು ಖಾಸಗಿ ತೋಟದಮೇಲೆ ಕೂಡುವುದು ಯಾವ ಸಂಕೇತವೋ! ಈಗ ಭೂಸುಧಾರಣೆಯ ಅನೇಕ ಮಸೂದೆಗಳು ಜಾರಿಗೆ ಬರುತ್ತಿವೆ. ಖಾಸಗಿ ಯಾವುದು? ಸರ್ಕಾರಿ ಯಾವುದು? ಉಳುವವನೇ ಭೂಪಾಲ! ಇರುವವನೇ ಮನೆಯೊಡೆಯ–ಇಂಥ ಘೋಷಣೆಗಳು ಕೇಳಿಬರುತ್ತಿವೆ, ನಿಜ; ಗೋಪಾಲಯ್ಯ ಉಳುವುದಿಲ್ಲ. ಆದ್ದರಿಂದ ಆತನ ತೋಟ ಸರ್ಕಾರದ್ದು; ಸರ್ಕಾರದ ಒಡೆತನವೆಂದರೆ ಕಾಡುಬೀಳುವುದು ತಾನೆ? ಕಾಡು ಎಂದರೆ ಸಂಸ್ಕಾರವಿಲ್ಲದ್ದು, ಪಾಳು (ಬಂಜರು) ಬೀಳುವುದು ಎಂಬುದಾಗಿ ಗುಮಾನಿ ಹುಟ್ಟುವುದು. ಅಲ್ಲದೆ ಇಂದು ಅನೇಕ ದೃಷ್ಟಿಯಿಂದ ಪ್ರಜಾಪ್ರಭುತ್ವದ ಅಂಕಿತದಲ್ಲಿ ನಾವು 'ಕಮ್ಯೂನಿಸಂ' ಆಳ್ವಿಕೆಗೆ ಒಳಪಡುತ್ತಿದ್ದೇವೆ ಎಂಬುವ ವ್ಯಂಗ್ಯ ಇಲ್ಲಿದೆ.

ಈ ಉಗ್ರಗಿರಿಯು ಆಗಾಗ ಎಚ್ಚರಗೊಂಡಿರುವುದಕ್ಕೆ ಮಾಹಿತಿಗಳುಂಟು. ಅದು ಕಥೆಯಲ್ಲಿ ಸಾವಯವ ಸಂಬಂಧದಿಂದ ಕೂಡಿ ಅನಿವಾರ್ಯವಾದ ಮಾನವ ಸಂಕಟಗಳಿಗೆ ಕೇಂದ್ರಗಿರಿಯಾಗಿದೆ. ಆ ಮೃತ್ಯುಛಾಯೆಯ ಶಿಖರಕ್ಕೆ ಭೂಕಂಪನದ ನೆರವು ಬೇರೆ ಇದೆ; ಅಂದಾಗ 'ಕೊಂದು ಕೂಗದೆ ನರರಂ?'

ಭೂಕಂಪಗಳು, ಅಗ್ನಿಪರ್ವತಗಳು, ಚಂಡಮಾರುತಗಳು, ಪ್ರಚಂಡಪ್ರವಾಹ ಗಳು, ಅತಿವೃಷ್ಟಿ–ಅನಾವೃಷ್ಟಿಗಳು ಈ ಪ್ರಕೃತಿ ಶಕ್ತಿಗಳ ಪ್ರಕೋಪ ವಿಕೋಪಗಳು ಮಾನವಪ್ರಯತ್ನವನ್ನು ಬಗ್ಗು ಬಡಿಯುತ್ತವೆ. ಅನೇಕವೇಳೆ ಮನುಷ್ಯ ಸೋತು ಕೈ ಚೆಲ್ಲಿ ಕೂರಬೇಕಾಗುತ್ತದೆ. ಉಗ್ರಗಿರಿ ಆಸುಪಾಸಿನಲ್ಲಾದ ಭೂಕಂಪನಕ್ಕೆ, ಗಾಳಿಗೆ, ಮಳೆಗೆ ಗೋಪಾಲಯ್ಯಮತ್ತಿತರರು ನಡುಗಿ ನೀರಾಗಿ ಹೋಗುತ್ತಾರೆ. ಆದರೆ ಶಿಲಾ ಯುಗದ ತುಣುಕುಗಳಂತೆ ಕಾಣುವ ಆತನ ಆಳುಗಳು ಅಷ್ಟು ಹೆದರಿದಂತೆ ಕಾಣುವು ದಿಲ್ಲ. ಭೂಕಂಪನಕ್ಕೆ ಇತ್ತ ಉಗ್ರಗಿರಿಯ ಕಾಡು ಸ್ವಲ್ಪಜಾರಿ ಖಾಸಗಿ ತೋಟದ ಮೇಲೆ ಕೂತರೆ ಅತ್ತ ನವಿಲುಗುಂದ (ಹೆಸರ ಸೊಗಸನ್ನು ಗಮನಿಸಿ)ದಲ್ಲಿ ಆದ ಅನಾ ಹುತ ನರಕ ಭಯಂಕರವಾಗಿದೆ. ಕೆಲವು ಬಂಡೆಗಳುರುಳಿ ಊರಿನ ಮನೆಗಳು ನೆಲ ಸಮಾಧಿಯಾಗಿವೆ. ಅಲ್ಲಿಂದ ಬಯಲುಸೀಮೆಯ ಕಡೆಗೆ ಹೋಗುವ ದಾರಿ ಭಾರಿ ಪ್ರವಾಹದಿಂದ ಕಟ್ಟಾದರೆ, ಘಟ್ಟದಕೆಳಗೆ ಇಳಿಯಲು ಯಾರಿಗೂ ಗೊತ್ತಿಲ್ಲ. ಹೀಗೆ ನವಿಲುಗುಂದ, ಊರಗಡಿ ಗ್ರಾಮಗಳು ಕಾಡದ್ವೀಪಗಳಾಗಿಬಿಟ್ಟಿವೆ. ಹೊಸದಾರಿಯ ಅನ್ವೇಷಣೆಯನ್ನು ಯಾರಾದರೂ ಮಾಡಬೇಕು ಇಲ್ಲವೆ ಪ್ರಕೃತಿಯೆ ಶಾಂತವಾಗಿ ದಾರಿಬಿಟ್ಟುಕೊಡಬೇಕು. ಅಲ್ಲಿದ್ದರೆ ಮಾತ್ರ ಸರ್ವನಾಶ. ಅಂತೂ ನಿಗೂಢ

ಮನುಷ್ಯರಲ್ಲಿ ಉಗ್ರಗಿರಿ ಮತ್ತು ಅದರ ಸುವ್ಯಕ್ತ ರುದ್ರಾಭಿನಯದ ಭಂಗಿಗಳಾದ ಭೂಕಂಪ, ಸುರಿಮಳೆ, ಬಿರುಗಾಳಿ ವಿಶೇಶ ಪಾತ್ರವಹಿಸಿವೆ.

'ನಿಗೂಢಮನುಷ್ಯರ'ಲ್ಲಿ ಜಗನ್ನಾಥ, ರಂಗಪ್ಪ ಮತ್ತು ಗೋಪಾಲಯ್ಯ ಇವು ಮುಖ್ಯಪಾತ್ರಗಳು; ಶೌರಿ, ಪಂಚಮರು, ದೂಜ-ಪಬ್ಜುಗಳು ಇತ್ಯಾದಿ ಗೌಣ ಪಾತ್ರಗಳು.

ಜಗನ್ನಾಥನು ಅವಿವಾಹಿತ ತರುಣ ಬರಹಗಾರ. ಅನೇಕ ಕಾದಂಬರಿ ಬರೆದು ದೇಶಾಂತರ ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದವನು. ಕಾರಣ ಇಂದಿನ ಪ್ರಕಾಶಕರು ಹಿರಿಯ ಕಿರಿಯ ವಿಮರ್ಶಕರು, ವಿರೋಧಿಗಳು, ಪೋಷಕರು, ಬಾಲಬಡುಕರು, ಬಾಲಕರು ಇತ್ಯಾದಿ ಇವರ ಅವಾಂತರ. ಆದ್ದರಿಂದ ಇವರಿಂದ ದೂರ ದೇಶಾಂತರ ಬಂದು, ಸಾಹಿತ್ಯೋಪಜೀವಿಗಳ ಸಾಹಿತ್ಯದಿಂದ ಬೇರೆಯಾಗಿ ಮಲೆನಾಡಿನಮಧ್ಯೆ ಜಮೀನುಕೊಂಡು ವ್ಯವಸಾಯಮಾಡಿ ಹೊಸ ಅನುಭವವನ್ನು ಪಡೆಯಬೇಕೆಂಬ ಅಭಿಲಾಷೆಯಿಂದ ಹೊರಟುಬಂದಿದ್ದಾನೆ. ಆದರೆ ಆತ ತನ್ನ ಯೋಜನೆಯನ್ನು ಕಾರ್ಯಗತಗೊಳಿಸುವ ಮೊದಲೇ ಒದಗಿಬಂದ, ಬರುವ, ಎದುರಿಸಲೇಬೇಕಾದ ಅನೇಕ ಕಷ್ಟಗಳ ಪ್ರತ್ಯಕ್ಷ ಅನುಭವವುಂಟಾಗುತ್ತದೆ. ಮಲೆನಾಡಿನ ಮಳೆ, ಗಾಳಿ, ಕಾನನ, ಉಗ್ರಗಿರಿ, ಭೂಕಂಪ ಮತ್ತು ಅಲ್ಲಿನ ನಾಗರಿಕ, ಅನಾಗರಿಕ ಜನರ ಜೀವನವನ್ನು ಕಂಡು, ಕೇಳಿ ಮೂಕವಿಸ್ಮಿತನಾಗುತ್ತಾನೆ; ತಲ್ಲಣಿಸಿ ತತ್ತರಿಸಿ ಹೋಗುತ್ತಾನೆ. ಜಗನ್ನಾಥ ಗೋಪಾಲಯ್ಯನ ಭೂತಕ್ಕೆ ಭ್ರಾಂತನಾದ; ವರ್ತಮಾನಕ್ಕೆ ಚಕಿತನಾದ; ಭವಿಷ್ಯಕ್ಕೆ ಶರಣಾದ. ಒಟ್ಟಿನಲ್ಲಿ ತನ್ನ ಕನಸು ಮನಸ್ಸಿನಲ್ಲೂ ಆತನ ಪ್ರಭಾವಕ್ಕೆಸಿಲುಕಿದ. ಕೊನೆಯಲ್ಲಿ ಗೋಪಾಲಯ್ಯ ಹೇಳುವ ಒಂದು ಮಾತಿದು: "ನಿನ್ನೆರಾತ್ರಿ ನಿಮ್ಮನ್ನು ಎಬ್ಬಿಸಿದವನು ನಾನೇ! ನೀವು ಕೇಳಿದ ಅಶರೀರವಾಣಿ ನನ್ನ ಮಾತು. ಅನುಭವವನ್ನು ಹುಡುಕಿಕೊಂಡು ಹೊರಟವರು ಅದರ ಕರಾಳ ರಹಸ್ಯಗಳಿಗೆ ಇಷ್ಟೊಂದು ಹೆದರಿದರೆ ಹೇಗೆ?" ಜಗನ್ನಾಥ ಈ ಮೊದಲೇ ಕೇಳಿದ ಗೋಪಾಲಯ್ಯನ ಪೂರ್ವವೃತ್ತಾಂತದ ಬಗ್ಗೆ ಎಷ್ಟೊಂದು ಹೆದರಿದ್ದಾನೆ ಎನ್ನುವುದು ಈ ಮಾತಿನಿಂದ ತಿಳಿದುಬರುತ್ತದೆ. ಗೋಪಾಲಯ್ಯನ ನಿಗೂಢತೆಗೆ ಆತ ಸಂಪೂರ್ಣಪರವಶನಾಗುತ್ತಾನೆ. ಉಗ್ರಗಿರಿಯಲ್ಲಿ ಲೀನವಾದಂತೆ ಕಂಡ ಆತನ ವ್ಯಕ್ತಿತ್ವಕ್ಕೆ ಜಗನ್ನಾಥನ ಅಹಂಕಾರ ಲಯವಾಗಿ ಹೋಗುತ್ತದೆ. 'ಅರಿಯುವಿಕೆ' ಎನ್ನುವ 'ಅಹಂ' ಇಲ್ಲವಾಗಿ ಕೇವಲ 'ಇರು'ತ್ತಾನೆ. ಇಲ್ಲಿ ಜಗನಾಥ ಬಹುಮಟ್ಟಿಗೆ ಓದುಗರ ಪ್ರತಿನಿಧಿಯಾಗುತ್ತಾನೆ.

ಗೋಪಾಲಯ್ಯ ಅನೇಕ ವ್ಯಕ್ತಿತ್ವಗಳ ಮುಖವಾಡಗಳನ್ನು ಧರಿಸಿ ಧರಿಸಿ ಬೇಸತ್ತು ರೋಸಿ ಹೋದವನು. ಅವನು ವಿಶ್ರಾಂತಿ ಜೀವನಕ್ಕೆಂದು ಮಲೆನಾಡಿನಲ್ಲಿ ತೋಟ ಮಾಡಿಕೊಂಡು ಬೀಡುಬಿಟ್ಟಿದ್ದ. ಪ್ರವೃತ್ತಿ ಮತ್ತು ನಿವೃತ್ತಿ ಬದುಕು

ಇವನಲ್ಲಿ ಮುಖಾಮುಖಿಯಾಗಿ ಹೇಗೆ ಬಲಿ ಕೇಳುತ್ತಿದೆ ನೋಡಿ: "ಒಡೆದ ಬದುಕುಗಳನ್ನು ಬದುಕಿ ಸಾಕಾಗಿದೆ ಜಗನ್ನಾಥ; ಈ ವ್ಯಕ್ತಿತ್ವವಿಸಳನದಲ್ಲಿ ಯಾವುದೇ ಸ್ವಾರಸ್ಯವೂ ಇಲ್ಲ. ಇನ್ನು ಬರಲಾರೆ; ಹೆಸರು ಬದಲಿಸಲಾರೆ! ಈಗ ನಾನು ಬಂದರೆ ನನ್ನ ನೆತ್ತಿಯ ಮೇಲೆ ಒಂದು ಗಿರಿ ಸದಾ ಕಾಳನಾಗರನಂತೆ ಹೆಡೆ ಎತ್ತಿಕೊಂಡಿರುತ್ತದೆ, ಬರುತ್ತೇನೆ ನಮಸ್ಕಾರ" ಎಂದು ಗೋಪಾಲಯ್ಯ ಹೇಳುತ್ತಾ ದೂಜಪರ್ಬುಗಳು ತೊಡಗಿರುವ ಅಕ್ಷಯ ಕೆಸರೆತ್ತುವ ಭಯಂಕರ ಅರ್ಥಹೀನ ಕಾರ್ಯದಲ್ಲಿ ತೊಡಗುತ್ತಾನೆ. ಉಗ್ರಗಿರಿ, ಭೂಕಂಪ, ಮಳೆ, ಗಾಳಿ ಇವೆಲ್ಲಾ ಅವನ ಕಳೆದ ಬದುಕಿನ ಮೈನಸ್ ಗೋಪಾಲಯ್ಯ, ಮೈನಸ್ ಜಾಧವ್, ಮೈನಸ್ ಗೋವಿಯಸ್, ಮುಂತಾದ ಮುಖವಾಡಗಳಲ್ಲಿ ಗೈದ ಪಾಪಕ್ಕೆ ಒಡ್ಡಿದ ಉಗ್ರಸಂಕೇತಗಳಾಗಿವೆ. ಹೊಸ ಅನುಭವಗಳನ್ನು ಅನುಭವಗಳಿಗಾಗಿಯೇ ಪಡೆಯಬೇಕೆಂದು, ವಿನೋದಕ್ಕಾಗಿ ಅನೇಕ ವ್ಯಕ್ತಿತ್ವಗಳನ್ನು ತಾಳಿ ಬಾಳುವುದು ಕಡೆಗೆ ಎಲ್ಲವೂ ಮೈನಸ್ (—) ಎಷ್ಟು ಭಯಾನಕವಾದುದು ಎಂಬುದಕ್ಕೆ ಗೋಪಾಲಯ್ಯನ ಸ್ವಗತ ಲಹರಿ (ಕಥಾಭಾಗ 9 ಮತ್ತು 11) ನಿದರ್ಶನವಾಗಿದೆ. ಅದರ ಪರಿಣಾಮ ಜಗನ್ನಾಥನಮೇಲೆ ಎಷ್ಟಾಗಿತ್ತೆಂಬುದನ್ನು ಆತನ ಸ್ವಪ್ನಭಾಗ (10 ನೆಯದು) ದಿಂದ ತಿಳಿಯುತ್ತದೆ. ಆದರೆ ರಂಗಪ್ಪನ ಮೇಲೆ ಗೋಪಾಲಯ್ಯ ತನ್ನ ಪ್ರಭಾವವನ್ನು ಬೀರದಾದ ಕಾರಣವನ್ನು ರಂಗಪ್ಪನ ಪಾತ್ರ ಚರ್ಚೆಯಲ್ಲಿ ನೋಡಬಹುದು. ಗೋಪಾಲಯ್ಯನಿಗೆ ಚಿರಂತನ ವ್ಯಕ್ತಿತ್ವವೇ ಇಲ್ಲ. ಅವನ ಜೀವನ ಚರಿತ್ರೆ ನಿಗೂಢವಾದುದು. ಅಲ್ಲಿ ಬರಹಗಾರರು, ಅಧಿಕಾರಿಗಳು, ಜೈಲಿಗೆ ಹೋದವರು, ಬಂದವರು, ಗುಪ್ತಚಾರರು ಎಲ್ಲಾ ಇದ್ದಾರೆ. ಆತನ ದೇಹ ಮಾಂಸಾಹಾರ, ಮದ್ಯಪಾನ, ವ್ಯಭಿಚಾರ ಎಲ್ಲ ಎಲ್ಲ ಅನುಭವಿಸಿದೆ. ರಂಗಪ್ಪನಂಥ ಮೌನ ವಿಚಾರಜ್ಞನಿಗೆ ಇಂಥವರ ಜೀವನ ಚರಿತ್ರೆಯ ಬಗ್ಗೆ ಇನ್ನೂ ಆಳವಾದ ಗುಮಾನಿಗಳು ಹುಟ್ಟುವುದು ಸಹಜವೆ.

ಮೊದಮೊದಲು ರಂಗಪ್ಪನೂ ಗೋಪಾಲಯ್ಯನಂತೆಯೆ ವಿದಳನ ವ್ಯಕ್ತಿತ್ವದಲ್ಲಿ ಪ್ರವೇಶಿಸಲು ಪ್ರಯತ್ನಿಸುತ್ತಿದ್ದಾನೆ ಎನಿಸುತ್ತದೆ. ಯಾವುದೋ ಅತೀಂದ್ರಿಯ ಶಕ್ತಿಯಿಂದ ಗೋಪಾಲಯ್ಯ ರಂಗಪ್ಪನ ಅಂತರಂಗವನ್ನು ಪ್ರವೇಶಿಸಲು ತೊಡಗಿರುವಂತೆ ಆತನಿಗೇ ಭಾಸವಾಗುತ್ತದೆ. ಆದರೆ ಈ ಮೊದಲೇ ಸೂಚಿಸಿದಂತೆ ರಂಗಪ್ಪ ಪ್ರಜ್ಞಾಪೂರ್ವಕವಾಗಿ ಅವನ ಪ್ರಭಾವದಿಂದ ಆಚೆ ಉಳಿಯುತ್ತಾನೆ. ಇಬ್ಬರೂ ಮೊದಲು ಜೊತೆಗೆ ಹೋಗುವಾಗ ಪರಸ್ಪರ ನಡಿಗೆಯನ್ನು ಅನುಕರಿಸುವಂತೆ ಕಾಣುವುದು. ಆದರೆ ರಂಗಪ್ಪ ಅನುಕರಿಸುತ್ತಿರಲಿಲ್ಲ. ವಾಸ್ತವವಾಗಿ ಇಬ್ಬರ ನಡಿಗೆಯ ಶೈಲಿಗೂ ಏನೋ ಸಾದೃಶ್ಯವಿದ್ದಂತಿತ್ತು. ಹೆಜ್ಜೆ ಹೆಜ್ಜೆಗೂ ರಂಗಪ್ಪನಿಗೆ ಎಲ್ಲಿ ತಾನು ಗೋಪಾಲಯ್ಯನ 'ಕಾರ್ಬನ್ ಕಾಪಿ' ಆಗುತ್ತೇನೊ ಎಂಬ ಭಯ ಆವರಿಸಿದೆ. ಅವನ ಪ್ರತಿಕ್ರಿಯೆ ಹೀಗಿದೆ: "ಅಲ್ಲಿ ದಿನಗಳೆದಂತೆ ಮುಖಕ್ಷೌರವಿಲ್ಲದೆ ತೆಳ್ಳಗೆ ಗಲ್ಲದ

ಮೇಲೆ ಕೂದಲುಗಳೂ ರಂಗಪ್ಪನಿಗೆ ಬರತೊಡಗಿತ್ತು. ಗೋಪಾಲಯ್ಯನ ಮನೆಯೊಳಗೆ ನೇತುಕೊಂಡಿದ್ದ ಕನ್ನಡಿಯೊಳಗೆ ಇಣುಕಲೂ ರಂಗಪ್ಪನಿಗೆ ಭಯವಾಯ್ತು. ಎಲ್ಲಿ ಗೋಪಾಲಯ್ಯನ ಹಾಗೆ ತದ್ರೂಪವಾಗುತ್ತಾ ನಡೆದಿದ್ದೇನೋ ಎಂದು". ಅಂದರೆ ಗೋಪಾಲಯ್ಯನ ಪ್ರಭಾವವನ್ನು ಆಂತರಿಕವಾಗಿಯೇ ರಂಗಪ್ಪ ವಿರೋಧಿಸುತ್ತಾ ತನ್ನತನವನ್ನು ಉಳಿಸಿಕೊಳ್ಳಲು ಪ್ರಯತ್ನ ಪಡುತ್ತಿರುವುದು ಗೊತ್ತಾಗುತ್ತದೆ. ಹೆಬ್ಬಾವಿನ ನೇತ್ರಸೂತ್ರದ ಸೂಜಿಗಲ್ಲಿನ ಸೆಳೆತಕ್ಕೆ ಸಿಕ್ಕಿ ವಿಲಿವಿಲಿ ಒದ್ದಾಡುವ ಮೃಗಶಿಶುವಿನಂತೆ ಜಗನ್ನಾಥ ಇನ್ನೊಬ್ಬರ ಪ್ರಭಾವಲಯಕ್ಕೆ ಸಿಕ್ಕಿ ಭಯವಿಸ್ಮಿತ ಮೂಕನಾಗಿ ಉಗುಳು ನುಂಗದೆ ಬಾಯಿ ತೆರೆದಿರುವಾಗ ರಂಗಪ್ಪ ಇನ್ನೊಬ್ಬರ ಪ್ರಭಾವವನ್ನು ವಿರೋಧಿಸಿ ಸ್ವಂತಿಕೆಯನ್ನು ಕಾಪಾಡಿಕೊಳ್ಳುವುದು ಅರ್ಥವತ್ತಾಗಿದೆ. ರಂಗಪ್ಪನ ಪಾತ್ರ ಒಟ್ಟಿನಲ್ಲಿ ಕಥಾಮೌಲ್ಯವನ್ನು ಹೆಚ್ಚಿಸುತ್ತದೆ. ಕೇವಲ ಲಗ್ಜುರಿಗಾಗಿ ಅನುಭವವನ್ನು ಅನುಭವಕ್ಕಾಗಿಯೇ ಹುಡುಕಿಕೊಂಡು ಹೋದಾಗ ಅದರ ರಹಸ್ಯಗಳು ಎಷ್ಟು ಕರಾಳವಾಗಿರಬಲ್ಲುವು ಎಂಬುದನ್ನು ಸೂಚಿಸಲು ಗೋಪಾಲಯ್ಯ ಮತ್ತು ಜಗನ್ನಾಥನ ಪಾತ್ರಗಳನ್ನೂ, ಅಂಥ ಆಮಿಷಕ್ಕೆ ಒಳಗಾಗದೆ ಎಚ್ಚರವಹಿಸಬೇಕೆನ್ನುವ ಮಹತ್ತರ ವಿಚಾರವನ್ನು ಸೂಚಿಸಲು ರಂಗಪ್ಪನ ಪಾತ್ರವನ್ನೂ ಸೃಷ್ಟಿಸಲಾಗಿದೆ.

ಜಗನ್ನಾಥ, ರಂಗಪ್ಪ, ಗೋಪಾಲಯ್ಯ, ಮೂವರೂ ಮೊದಮೊದಲು ಯೋಚಿಸಿದಷ್ಟೂ ಒಬ್ಬೊಬ್ಬರೂ ಮತ್ತೊಬ್ಬರಿಗೆ ರಹಸ್ಯವಾಗುತ್ತಾ ನಡೆದರು. ಅನಂತರ ಜಗನ್ನಾಥ ಮತ್ತು ಗೋಪಾಲಯ್ಯ ಇವರು ತಮ್ಮ ಮೊಗವಾಡಗಳನ್ನು ಕಿತ್ತೊಗೆಯುತ್ತಾ ನಡೆದರು. ಆದರೆ ರಂಗಪ್ಪನಾದರೊ ಮೌನವಾಗಿಯೆ ಇದ್ದು ಅನಾವರಣಗೊಂಡ. ಜಗನ್ನಾಥನು ಗೋಪಾಲಯ್ಯನ ಈರುಳ್ಳಿಪದರ ಸುಲಿದಂತಹ ವ್ಯಕ್ತಿತ್ವ ಕಂಡು ದಂಗಾಗಿಬಿಟ್ಟ. ಇವರಿಬ್ಬರೂ ಭ್ರಾಂತರಾಗಿದ್ದಾರೆ ಎಂದು ರಂಗಪ್ಪ ಗುಮಾನಿಸಿದ. ಅಲ್ಲದೆ ನಾಗರಿಕರೆನಿಸಿಕೊಂಡವರ ಆತ್ಮವಂಚನೆಯ ಬದುಕು ಹೀಗಿದ್ದರೆ ಪಂಚಮರ ಅನಾಗರಿಕ ಬದುಕು ಮತ್ತೆಷ್ಟು ಘೋರವಾಗಿರಬಲ್ಲುದು ಎಂಬುದನ್ನು 'ನಿಗೂಢ ಮನುಷ್ಯರ'ಲ್ಲಿ ನೋಡಬಹುದು.

ಶಾರಿ (ಶಾರದೆ) ಹೆಸರಿನಂತೆಯ ಈಕೆಯ ಪಾತ್ರವೂ ಹ್ರಸ್ವಗೊಂಡಿದೆ. ಈ ಪಾತ್ರ ಸೃಷ್ಟಿ ಬಹು ಮಾರ್ಮಿಕವಾಗಿದೆ. ಹೆಣ್ಣು ಎಂದರೆ ಗಂಡಿಗೆ ಆಶ್ಚರ್ಯ! ಅವಳ ಮೌನ ಏಕಾಂತ ಇನ್ನೂ ಪರಮಾಶ್ಚರ್ಯ!! ರಂಗಪ್ಪ ಮತ್ತು ಜಗನ್ನಾಥರಿಗೆ ಗೋಪಾಲಯ್ಯನ ನಿಗೂಢತೆಯ ಬಗ್ಗೆ ಕಲ್ಪಿಸಿಕೊಳ್ಳಲು ಕತ್ತಲಕೋಣೆಯಲ್ಲಿ ಸುಳಿದಾಡುವ ಇವಳ ಅಸ್ಪಷ್ಟ ಆಕೃತಿ ಮತ್ತಷ್ಟು ಸಹಾಯಕವಾಗಿದೆ. ಆದರೆ ಅವರು ಬಾಯಿಬಿಟ್ಟು ಈಕೆಯ ಬಗ್ಗೆ ಕೇಳಲೊಲ್ಲರು. ಕೊನೆಯಲ್ಲಿ ಗೋಪಾಲಯ್ಯನೆ ಇವಳ ರಹಸ್ಯವನ್ನು ಬಯಲು ಮಾಡುತ್ತಾನೆ. ಶಾರಿಗೆ ನಾಲಗೆಯಿಲ್ಲ; ಮೂಗಿ;

ಹುಟ್ಟುವುದಿಲ್ಲ. ಇವಳ ನಾಲಿಗೆಯನ್ನು ಗಂಧದ ತುಂಡಿನ ಕಳ್ಳ ವ್ಯಾಪಾರದ ತಂಡದವರು ಕತ್ತರಿಸಿ ಹಾಕಿದ್ದಾರೆ. ಕಾರಣ ಇವಳು ಮೊದಲು ಸ್ಕೂಲ್ ಮಾಸ್ತರನ ಹೆಂಡತಿಯಾಗಿದ್ದು ಈ ತಂಡದವರ ಸಹವಾಸ ಮಾಡಿದಳು. ಅವರು ಎಲ್ಲಾದರೂ ತಮ್ಮ ರಹಸವನ್ನು ಬಯಲು ಮಾಡಿಯಾಳೆಂಬ ಭಯದಿಂದ ಇವಳ ನಾಲಿಗೆ ತುಂಡರಿಸಿದರು. ಕರುಣಾಜನಕ ಪರಿಸ್ಥಿತಿಯಲ್ಲಿದ್ದ ಈ ಹೆಂಗಸನ್ನು ಗೋಪಾಲಯ್ಯ ಕರೆತಂದು ಇಟ್ಟುಕೊಂಡ. ಅವಳಿಗೆ ಗಂಡಿನ ಅನೇಕ ರಹಸ್ಯ ರಹದಾರಿಗಳು ಗೊತ್ತಿರಬೇಕು! "ಅವಳ ಚರ್ಯೆ ನೋಡಿದರೆ ಯಾವುದೇ ಬಗೆಯ ಅಬಲತೆಯಾಗಲಿ, ದೈನ್ಯವಾಗಲಿ ಕಾಣುವುದಿಲ್ಲ." ಹೆಣ್ಣು ಬೇಕಾದರೆ ಸರ್ವನಾಶದಲ್ಲೂ ಕಡೆಹಾಯಿಸುವ ದಾರಿ ತೋರಬಲ್ಲಳು, ಇಲ್ಲವೆ ತನ್ನನ್ನೆ ಪ್ರಲಯ ಸನ್ನಿವೇಶದಲ್ಲಿ ಮೌನವಾಗಿ ಲಯಗೊಳಿಸಿ ಕೊಳ್ಳಲು ಸಮರ್ಥಳು ಎಂಬುದು ಈ ಪಾತ್ರ ಸೃಷ್ಟಿಯ ಇಂಗಿತವಾಗಿದೆ. ಅಥವಾ ಎಲ್ಲವೂ ಅವಳ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಎಂದು ಸರಳೀಕರಿಸಬಹುದು. ಅದೇನೆ ಇರಲಿ, ತನಗೆ ಕಷ್ಟದಲ್ಲಿ ಆಶ್ರಯನೀಡಿ ಕಾಪಾಡಿದ ಗೋಪಾಲಯ್ಯ ಭೂಕಂಪದ ಸರ್ವನಾಶದಲ್ಲಿ ಅರ್ಥಹೀನ ಕೆಲಸದಲ್ಲಿ ತೊಡಗಿರುವಾಗ ತಾನು ಜಗನ್ನಾಥ ಮತ್ತು ಇತರರ ಹಿಂದೆ ಘಟ್ಟವನ್ನು ಇಳಿದು ಹೋಗಿ ಜೀವ ಉಳಿಸಿಕೊಳ್ಳಲು ಕೊಂಚವೂ ಯತ್ನಿಸದೆ ಮೌನಸಾಕ್ಷಿಯಾಗಿ ನಿಂತಿರುವ ಶಾರಿಯ ಪಾತ್ರದ ಬಗ್ಗೆ ಗೌರವ ಭಾವನೆ ಮೂಡುತ್ತದೆ.

ಶೂದ್ರಾತಿಶೂದ್ರರಾದ ಪಂಚಮರ ಬದುಕಿನ ನಗ್ನಚಿತ್ರ ಈ ಕತೆಯಲ್ಲಿದೆ. ಅವರ ಅನಾಗರಿಕ ಪೈಶಾಚಿಕ ರೀತಿ ಬೆಚ್ಚಿಬೀಳಿಸುತ್ತದೆ. ಕುಳ್ಳ ಆಕೃತಿ, ಉಬ್ಬಿದ ಹಲ್ಲು, ಕರಿಯ ಮುಖ ಇದು ಅವರ ಲಕ್ಷಣ. ಗೋಪಾಲಯ್ಯನ 'ಊರಗಡಿ'ಯ ಅಚೆಗಡಿಯಲ್ಲಿ ಇದ್ದ ಈ ಪಂಚಮರು ಆತನ ಆಳುಗಳು. ಮರಸರ, ಕುಳುಪ, ಕಾಂಪ್ರ, ಕರಿಯ ಇತ್ಯಾದಿ ಹೆಸರುಗಳು ಆ ಅನಾಮಿಕರಿಗೆ. ಕರ್ನಾಟಕದಲ್ಲಿ ಯಾವ ನಾಗರಿಕರೂ ಇಂದು ತಮ್ಮ ಮಕ್ಕಳನ್ನು ಇಂಥ ಹೆಸರುಗಳಿಂದ ಕರೆಯೊಲ್ಲ. ಶಿಲಾಯುಗದ ಮಾನವರಂತೆ ಕಾಣುವ ಇವರು ಮುಂಗಸನ್ನು ಹೊಡೆದು ತಿನ್ನುತ್ತಾರೆ. ಸಾವು, ನೋವು, ಭೂಕಂಪ, ಬಿರುಗಾಳಿ, ಚಳಿ, ಮಳೆ ಯಾವುವೂ ಇವರ ಮೇಲೆ ಪ್ರಭಾವ ಬೀರುವಂತೆ ಕಾಣುವುದಿಲ್ಲ. ಅಥವಾ ಯಾವುದಕ್ಕೂ ಪ್ರತಿಕ್ರಿಯೆ ತೋರಿಸದ ನಿರ್ಭಾವ ಮಟ್ಟಕ್ಕೇ ಇದ್ದಾರೆ. ಮರಸರನ ಮಗ 'ಸತ್ತರೆ ತೀರಿ ಹೋತಂತೆ' ಕತ್ತೆಯೋ ಕರುವೋ ಸತ್ತಂತೆ, ಅಷ್ಟೆ. ಮರಸರನು ಆ ಹೆಣವನ್ನು ಹಿತ್ತಲಲ್ಲಿ ಎಸೆದು ಅವರಲ್ಲಿ ಪಟಾಸು ಉಂಡೆ ಇಟ್ಟು ಅದನ್ನು ಹಂದಿ ಬಂದು ಕಡಿದು ಸತ್ತರೆ ಅದರ ಬಾಡಿಗೆ ಕಾದು ಕೂತಿದ್ದಾನೆ. ಪಶು ಪ್ರವೃತ್ತಿಗೂ ಮೀರಿದ, ಆತ ಮಾಡುವ ಕಾರ್ಯ ಜುಗುಪ್ಸೆ ಹುಟ್ಟಿಸುತ್ತದೆ. "ನೋಡಿ ಹೇಗಿದೆ ಈ ವಿಚಿತ್ರ ಪ್ರಪಂಚ! ವರ್ಣಾಶ್ರಮಗಳ ಬಗ್ಗೆ ಇಣುಕುನೋಟ ಇಲ್ಲಿ ಕಾಣಿಸುತ್ತದೆ. ಬ್ರಾಹ್ಮಣ

ಪ್ರಪಂಚಕ್ಕೆ ಹೇಸಿದರೆ, ಲೇವಾದೇವಿಯ ಲೆಕ್ಕಾಚಾರದ ವೈಶ್ಯ ಪ್ರಪಂಚ. ಅಲ್ಲಿಂದ ಕೆಳಗಿಳಿದರೆ ಕಿರಾತ ಪ್ರಪಂಚ. ಇನ್ನೂ ಕೆಳಗಿಳಿದರೆ ಪಿಶಾಚ ನರಭಕ್ಷಕ ಪ್ರಪಂಚ.'' ಗೋಪಾಲಯ್ಯನ ಈ ಮಾತು ಗಮನಾರ್ಹ. ಪಂಚಮರ ಆ ಪ್ರಪಂಚ ಈ ಆಧುನಿಕ ಕಾಲದಲ್ಲೂ ಇಷ್ಟರಮಟ್ಟಿಗೆ ಸತ್ತು ಅಲ್ಲೇ ಸ್ಥಿರವಾಗಿದೆ. ಸಾಕ್ಷರರು ಒಂದು ಕಡೆ ರಾಕ್ಷಸರಾದರೆ ನಿರಕ್ಷರರು ಮತ್ತೊಂದು ಕಡೆ ನರಭಕ್ಷಕರ ಮಟ್ಟಕ್ಕೆ ಇದ್ದಾರೆ. ಈ ಅಂತರ ಹೋಗಿ ಮಾನವ ಸಂಸ್ಕೃತಿ ಉಳಿಯುವ ಬಗೆ ಹೇಗೆಂಬ ವಿಷಾದದ ಛಾಯೆ ಕವಿಯುತ್ತದೆ. ಗೋಪಾಲಯ್ಯನು ನಾಗರಿಕತೆಯ ಈ ತುದಿಗೂ, ಪಂಚಮರು ಆ ತುದಿಗೂ ನಿಲ್ಲುತ್ತಾರೆ. ಜಗನ್ನಾಥ, ರಂಗಪ್ಪ ಇವರು ಅವರ ಸಂಸರ್ಗದ ಸ್ಪರ್ಶಾನುಭವವನ್ನು ಪಡೆದು ಅನಾಥರಾಗುತ್ತಾರೆ. ಅನುಭವವೂ ಮನುಷ್ಯನನ್ನು ಹೇಗೆ ಅನಾಥರನ್ನಾಗಿ ಮಾಡಬಲ್ಲುದು ಎಂಬುದಕ್ಕೆ ಒತ್ತು ಬೀಳುತ್ತದೆ. ಇದೇ ಕತೆಯ ಮಹತ್ವ.

ಇನ್ನುಳಿದ ಪಾತ್ರಗಳಲ್ಲಿ ದಾರಿಕಾಣದೆ ತಲೆಮೇಲೆ ಕೈಹೊತ್ತು ಸ್ಥಂಭೀಭೂತನಾಗಿ ಕುಳಿತ ನವಿಲುಗುಂದದ ಸಗಣೇಗೌಡ, ನೆಲಸಮಾಧಿಗೊಂಡ ಮಗನನ್ನು ನೆನೆದು ಹುಚ್ಚರಂತಾದ ದೂಜ-ಪರ್ಬು ವೃದ್ಧದಂಪತಿಗಳು, ಒಂದೇ ಕ್ಷಣದಲ್ಲಿ ನಮ್ಮನ್ನು ಸೆರೆಹಿಡಿಯುತ್ತಾರೆ. ಆ ತಂದೆ ತಾಯಿಗಳು 'ಎಲ್ಲೋ ಒಂದು ಕಡೆ ಸಾಯಬೇಕಷ್ಟೆ' ಎಂದು ಮಣ್ಣಿನಡಿಯಾಗಿ ಹೋದ ಮಗನನ್ನು ಹುಡುಕಲು ಒಂದೇ ಸಮ ಅಕ್ಷಯ ಕೆಸರನ್ನು ತೆಗೆದು ತೆಗೆದು ಆಚೆಗೆ ಹಾಕುತ್ತಿರುವ ದೃಶ್ಯ ಕರುಳು ಮಿಡಿಯುವಂತಹುದು.

'ನಿಗೂಢ ಮನುಷ್ಯರು' ಕತೆಯ ಅಂತ್ಯ ದೃಶ್ಯ ಎರಡು ಮುಖವಾಗಿದೆ. ಒಂದು ದೂಜ-ಪರ್ಬುಗಳ ಜೊತೆಗೆ ಗೋಪಾಲಯ್ಯ ಸೇರಿಕೊಂಡು ಅವರ ಮಗನ ಶೋಧನೆಗೆ ತೊಡಗಿರುವುದು ಮಾನವನ ಅಸಹಾಯಕತೆಯ ನಾಟ್ಯೀಕರಣವನ್ನೂ ; ಇನ್ನೊಂದು, ಜಗನ್ನಾಥ ಮತ್ತಿತರರು ಘಟ್ಟದನೆತ್ತಿಯ ಮೇಲೆ ಹತ್ತಿ ಕೆಳಗೆ ಇಣುಕಿ ನೋಡಿದಾಗ ದ.ಕ. ಜಿಲ್ಲೆಯ ಉಜರೆಯು ಆಕಾಶನಕ್ಷತ್ರದಂತೆ ಕಾಣುವುದು ಮಾನವನ ಗೆಲುವಿನ ಸಾಧ್ಯತೆಯನ್ನು ಧ್ವನಿಸುತ್ತವೆ. ನಾಗರಿಕತೆಯ ಎತ್ತರಕ್ಕೆ ಏರಿದ ಮನುಷ್ಯ ತನ್ನ ಸಂಸ್ಕೃತಿಯ ಕೇಂದ್ರದ ಕಣಿವೆಗೂ ಇಳಿಯ ಬೇಕಾಗುತ್ತದೆ. ಈ ಅನ್ವೇಷಣೆಯ ಹಾದಿಯ ಆರೋಹಣ ಅವರೋಹಣ ಕ್ರಿಯೆಯ ಮೊತ್ತವೆ ಮಾನವ ಬದುಕು. ಅದರೊಳಗಿನಿಂದ ಒಂದು ಸಂಸ್ಕೃತಿ ತನ್ನ ರೂಪಧಾರಣೆ ಮಾಡುವುದಷ್ಟೆ—ಎಂಬ ಅಂಶ ವಿದಿತವಾಗುತ್ತದೆ.

ಅಲ್ಲದೆ ಪ್ರಯಾಣದಿಂದ ಆರಂಭಗೊಂಡ ಕತೆ ಮಧ್ಯೆ ಮೂರುದಿನ ಸ್ಥಗಿತವಾಗಿ ಮತ್ತೆ ಪ್ರಯಾಣದಿಂದಲೇ ಅಂತ್ಯವಾಗುವುದೂ ಮತ್ತು ಯಂತ್ರ ಸಾಧನದಿಂದ ಹೊರಟವರು ಬರಿಗಾಲಿನಲ್ಲಿ ನಡೆಯುವುದೂ ಅರ್ಥವತ್ತಾಗಿವೆ. ಜಂಗಮ ಜಗತ್ತು

ನಿಲ್ಲುವುದಿಲ್ಲ. ನಿಂತರೆ ಪ್ರಳಯ ; ನಡೆದರೆ ಸೃಷ್ಟಿ. ಅಂದರೆ ಸೃಷ್ಟಿ ಶೀಲವಾದ ಈ ಕತೆ ಇತ್ತೀಚಿನ ಕನ್ನಡದ ಸಣ್ಣ ಕತೆಗಳಲ್ಲಿ ಒಂದು ಮುಖ್ಯ ಕೃತಿ.

ಅಂತೂ "ಅನುಭವಗಳನ್ನು ಹುಡುಕಿಕೊಂಡು ಹೊರಟವರು ಅದರ ಕರುಳ ರಹಸ್ಯಗಳಿಗೆ ಇಷ್ಟೊಂದು ಹೆದರಿದರೆ ಹೇಗೆ? " ಎಂಬುದಕ್ಕೆ ಈ ಕತೆ ಸಾಕಷ್ಟು ದಾಖಲೆಗಳನ್ನು ಒದಗಿಸುವುದು. ಗೋಪಾಲಯ್ಯ ಹೇಳುವ ಜೀಜ್ಞಾಸೆಗೆ ಯೋಗ್ಯ ವಾದ ಕೆಲವು ಮಾತುಗಳನ್ನು ನೋಡಿ:

"ಅನುಭವಸಹಿತ ಮನುಷ್ಯನನ್ನು ಆತ್ಮಹತ್ಯೆಗೂ ಕರೆದೊಯ್ದೀತು."
"ಈ ಒಂದೇ ದೇಹದಲ್ಲಿ ಅಸಂಖ್ಯ ಆತ್ಮಗಳು ಹೊಕ್ಕು ಹೊರಬಿದ್ದಿವೆ."
"ನಾನೆಂದರೆ ಅನುಭವಗಳನ್ನೆಲ್ಲಾ ಸೇರಿಸಿದ ಜ್ಞಾಪಕ."
"ಈಗ ನನ್ನ ಗುರುತು ನನಗೇ ಇಲ್ಲ"
"ನನಗೆ ಆತ್ಮವೆನ್ನುವುದೊಂದು ಇದ್ದರೆ (ಆತ್ಮ) ವಂಚನೆ."
"ಈ ವ್ಯಕ್ತಿತ್ವ ವಿದಳನದಲ್ಲಿ ಯಾವುದೇ ಸ್ವಾರಸ್ಯವೂ ಇಲ್ಲ."

ಬಸರಿ ಮರದ ಹಾಲನ್ನು ಸವರಿದ ಕಡ್ಡಿಯ ತುದಿಗೆ ಅಂಟಿಕೊಂಡು ಬಿಡಿಸಿ ಕೊಳ್ಳಲು ಪ್ರಯತ್ನಿಸಿ ಒದರಾಡಿ ಕೊನೆಗೆ ಉಂಡೆಯಾಗಿ ಕಟ್ಟೆಯ ನೀರಿಗೆ ಉರುಳುವ ಪಕ್ಕಿಯ ಚಿತ್ರ-ಮಾನವ ಬದುಕಿನ ಹೋರಾಟಕ್ಕೆ ಒಡ್ಡಿದ ಸಮಗ್ರ ಪ್ರತಿಮೆಯಾಗು ತ್ತದೆ; ಅಪೂರ್ವವಾಗಿದೆ. ಹೀಗೆ ಗೋಪಾಲಯ್ಯನ ಅನುಭವದ ಅಭಿವ್ಯಕ್ತಿ ಒಮ್ಮೊಮ್ಮೆ ಅನುಭಾವದ ಆಗಸದಲ್ಲಿ ಮಿಂಚಿದಂತಾಗಿ ವಚನಕಾರರನ್ನು ನೆನಪಿಗೆ ತರುತ್ತದೆ.

ಕತೆಯ ಭಾಷಾ ಪ್ರಯೋಗವೂ ಸಂಯಮಶೀಲವಾಗಿದೆ. ಇದರಲ್ಲಿ ತೇಜಸ್ವಿ ಯವರ ಗದ್ಯ ಶೈಲಿಯ ಸಾಧ್ಯತೆಗಳನ್ನು ಗುರ್ತಿಸಬಹುದು. ಮೇಲೆ ಆರಿಸಿ ಕೊಟ್ಟಿ ರುವ ಮಾತುಗಳ ಜೊತೆಗೆ ಇನ್ನೂ ಕೆಲವು ಭಾಗಗಳನ್ನು ಇಲ್ಲಿ ನಿದರ್ಶನಕ್ಕೆ ನೋಡ ಬಹುದು :

1. ಮರಸರನ ಮಗನ ಹೆಣ: ಜುಗುಪ್ಸೆಗೆ—"ಅದರ ಮೂಗಿನಿಂದ ಬಿಳಿಯ ಎರೆಹುಳುವಿನಂಥ ಹುಳುಗಳು ಹೊರಬರುತ್ತಿದ್ದವು. ವಿಪರೀತ ಹೊಟ್ಟೆ ಹುಳುವಾದುದರಿಂದ ಆ ಮಗು ಸತ್ತಿತ್ತು. ಆ ಹುಳುಗಳೆಲ್ಲಾ ಅನ್ನನಾಳದ ಮುಖಾಂತರ ಗಂಟಲಿಗೆ ಬಂದು ಅಲ್ಲಿಂದ ಮೂಗಿನಿಂದ ಹೊರ ಬರಲಾರಂಭಿಸಿದ್ದವು"—ಭೀಭತ್ಸ. (ಕತೆಯ ಐದನೆಯ ಭಾಗ ನೋಡಿ).

2. ಭೂಕಂಪದ ನಿರೀಕ್ಷಣೆಯ : ಭಯಕ್ಕೆ- "ಅವರು ಸುಮ್ಮನೆ ಒಳಬಂದರು. ಮರುಕಳಿಸಿದ ಮಲೇರಿಯ ಜ್ವರದಂತೆ ಆಗಾಗ ಬರುತ್ತಿದ್ದ ಭೂಕಂಪವನ್ನು ನಿರೀಕ್ಷಿಸುತ್ತಾ ಅಗುಳನ್ನು ನುಂಗತೊಡಗಿದರು. ಯಾವುದೋ ಶವಸಂಸ್ಕಾರ ಮಾಡಿ ಬಂದವರಂತೆನಿಸಿತು ಅವ ರೆಲ್ಲರಿಗೂ"-ಭಯಾನಕ (9ನೆಯ ಭಾಗ ನೋಡಿ)

3. ಉಗ್ರಗಿರಿಯಪ್ರತಾಪಕ್ಷೇತ್ರ : ಕ್ರೋಧಕ್ಕೆ-ಎಂದಿನಂತೆ ಗಿರಿ ಅಷ್ಟೇ ಅಪಾಯಕಾರಿಯಾಗಿ, ಕಡಿದಾಗಿ, ಅಷ್ಟೇ ಹತ್ತಿರದಲ್ಲಿದ್ದಂತೆ ಕಾಣುತ್ತಿದ್ದಿತು. ಜಗನ್ನಾಥನಿಗೆ ಅರ್ಥವೇ ಆಗಲಿ

ಇಲ್ಲಿ ಎಲ್ಲೆಲ್ಲಿ ಸುತ್ತುಹಾಕಿದರೂ ಅದರ ಮೃತ್ಯು ಛಾಯೆಯ ಅಡಿಯೇ ಓಡಾಡಿದಂತೆ, ಅದರ ಅಯಸ್ಕಾಂತ ಕ್ಷೇತ್ರದಲ್ಲೇ ಸತತ ಬಂದಿಯಾಗಿರುವಂತೆ ಜಗನ್ನಾಥನಿಗೆ ಅನ್ನಿಸಿತು.'' (ಆ ಉಗ್ರಗಿರಿ ಕೆಟ್ಟಶಾಪದಂತೆ, ಸಾವಿನ ಛತ್ರಿಯಂತೆ, ಕಾಳನಾಗರ ಹೆಡೆಯಂತೆ, ಮೃತ್ಯು ಛಾಯೆಯಂತೆ ಇತ್ತು)—ರೌದ್ರ. (11ನೆಯ ಭಾಗದಲ್ಲಿ)

4. ಪುತ್ರಶೋಕದ ದೂಜದಂಪತಿಗಳು : **ಶೋಕಕ್ಕೆ**-''ವಯಸ್ಸಾದ ದೂಜ-ಪರ್ಬುಗಳು ಹಾರೆ (?) ಯೊಂದನ್ನು ತೆಗೆದುಕೊಂಡು ಒಂದೇಸಮ ಕೆಸರನ್ನು ತೆಗೆದು ತೆಗೆದು ಆಚೆಗೆ ಹಾಕುತ್ತಿದ್ದರು ......ಯಾರೋ ಒಂದಿಬ್ಬರು ಏನೇನೋ ಹೇಳಿ ದೂಜರನ್ನು ಕೆಲಸದಿಂದ ವಿಮುಖ ಮಾಡ ಲೆತ್ನಿಸಿದರು. ಆದರೆ ದೂಜರು ಯಾವ ಮಾತನ್ನೂ ಆಡಲಿಲ್ಲ. ಕೆಲಸದಿಂದ ಹಿಂದೆಗೆಯಲೂ ಇಲ್ಲ.

'ಎಲ್ಲೋ ಒಂದುಕಡೆ ಸಾಯಬೇಕಷ್ಟೆ' ಎಂದು ಮಾತ್ರ ಒಂದು ಸಾರಿ ಹೇಳಿದರು'' — ಕರುಣ (11ನೆಯ ಭಾಗದಲ್ಲಿ).

ಹೀಗೆ ಉತ್ಸಾಹ ಮತ್ತು ವಿಸ್ಮಯ ಭಾವಗಳಿಗೂ ಉದಾಹರಿಸುತ್ತಾ ಹೋಗ ಬಹುದು.

'ನಿಗೂಢ ಮನುಷ್ಯರು' ಶೈಲಿಯ ಸಾಚಾತನ ಮತ್ತು ಪ್ರಾಮಾಣಿಕತೆಯಿಂದ ಬಾಂಡ್ ಮಾದರಿಯ ಪತ್ತೆದಾರಿಕತೆಯಾಗುವ ದೌರ್ಬಲ್ಯದಿಂದ ದೂರ ಉಳಿದಿದೆ. ಅದರ ಸಾವಯುವ ಶಿಲ್ಪ ನಮ್ಮ ಸಂವೇದನೆಯನ್ನು ತೀವ್ರಗೊಳಿಸಿ, ವಾಸನಾಗ್ರಹಣ ಶಕ್ತಿ (Feel) ಯನ್ನು ಸೂಕ್ಷ್ಮಗೊಳಿಸುತ್ತದೆ.

ಒಟ್ಟಿನಲ್ಲಿ 'ನಿಗೂಢ ಮನುಷ್ಯರು' ಒಂದು ಸತ್ವಯುತವಾದ ಕಾದಂಬರಿ ಯೊಂದನ್ನು ಛಟ್ಟಿಇಳಿಸಿ ಕಸ್ತೂರಿಯ ಪುಸ್ತಕವಿಭಾಗ (ಏಪ್ರಿಲ್ 1974)ಕ್ಕೆ ಕೊಟ್ಟಿರು ವಂತಿದೆ. ತೇಜಸ್ವಿಯವರ ಪ್ರಜ್ಞೆ ಮಲೆನಾಡಿನ ಪರಿಸರದಲ್ಲಿ ಗರಿಗೆದರಿದರೆ ಕತೆ ಎಷ್ಟು ಮಹತ್ವದ್ದಾಗಬಲ್ಲುದು ಎಂಬುದನ್ನು ಈ ಕತೆ ತೋರಿಸಿಕೊಟ್ಟಿದೆ. ಇಷ್ಟಾಗಿಯೂ ಈ ಕತೆಯ ಬಗ್ಗೆ ಇನ್ನೂ ಹೇಳಬೇಕಾದುದಿದೆ ಎನಿಸುತ್ತದೆ.

ಒಂದು ಟಿಪ್ಪಣಿ

ಇಂದು ಕನ್ನಡಭಾಷೆಯಲ್ಲಿ ಬರೆಯುವ ತರುಣ ಲೇಖಕರ ಹಣೆಯುಬರಹವನ್ನು ತೇಜಸ್ವಿಯವರು 'ನಿಗೂಢ ಮನುಷ್ಯರ'ಲ್ಲಿ ಅರ್ಥವತ್ತಾಗಿ ವಿಡಂಬನೆಗೆ ಗುರಿಪಡಿಸಿ ದ್ದಾರೆ. ಪತ್ರಿಕಾಕರ್ತರು, ಅಧ್ಯಾಪಕರು, ಬರಹಗಾರರು, ವಿಮರ್ಶಕರು ಇವರ ನಡುವೆ ಲೇಖಕನದು ವಟುಜೀವನವಾಗಿದೆ. (ವಟುಪದವನ್ನು ಗಮನಿಸಿ). ಅಧ್ಯಾಪ ಕರೆಂದರೆ ಆದನ್ನೇ ಓದಿ, ಅದನ್ನೇ ಕೇಳಿ, ಅದನ್ನೇ ಪಾಠಹೇಳಿ ಅವುಗಳಿಂದಲೇ ಏನೇನ್ನೊ ಸೃಷ್ಟಿಸುತ್ತಿರುವರು. ಹಾಗಾಗಿ ಇಂದಿನ ಸಾಹಿತ್ಯ ಬಹುಮಟ್ಟಿಗೆ **ಸಾಹಿತ್ಯೋಪಜೀವಿಗಳ ಸಾಹಿತ್ಯ** ಎಂಬುದರಲ್ಲಿ ಸತ್ಯಾಂಶವಿದೆ. ಅಲ್ಲದೆ ಸಾಂಕೇತಿಕ ಸಂಪ್ರದಾಯ ಒಂದು ಅನುಭವರಾಹಿತ್ಯವೂ ಅನುಭಾವ ಸಾಹಿತ್ಯವಾಗತೊಡಗಿದೆ.

ಕುಳಿತದ್ದು, ನಿಂತದ್ದು, ಗುಂಡಿ ಬಿಚ್ಚಿದ್ದು ಎಲ್ಲ ಈ ಸಾಹಿತಿಗಳಿಗೆ ಮಹದರ್ಥವನ್ನು ಬಿಚ್ಚುತ್ತಿದೆ. ಜಗನ್ನಾಥನ ಟೀಕೆ ಹೀಗೆ ಇನ್ನೂ ಮುಂದುವರಿದು "ನಾನೂ ಕೊಂಚ ಕಾಲ, ಈತರ ಬರೆದೆ, ಅಷ್ಟರಲ್ಲಿ ಕಿರಿಸಾಹಿತಿಗಳು, ಮರಿಸಾಹಿತಿಗಳು, ದಡ್ಡರು, ಹೆಡ್ಡರು ಎಲ್ಲರೂ ಎಲ್ಲದನ್ನು ಅನುಕರಿಸಿ ಪೂರ್ಣವಿರಾಮ, ಕಾಮ, ಎಲ್ಲಕ್ಕೂ ಅರ್ಥ ಕಲ್ಪಿಸಿ ಈ ಸಂಪ್ರದಾಯವನ್ನು ಲೇವಡಿಎಬ್ಬಿಸಿದರು" ನನ್ನನ್ನು ಸ್ಫೂರ್ತಿದಾತನೆಂದು ಕೀರ್ತಿ ಶಿಲುಬೆಗೇರಿಸಿದರು ಎಂದು ಜಗನ್ನಾಥ ಸರ್ವಾವಯವಗಳೂ ಸ್ತಬ್ಧವಾದ ಸಂಗೀತಗಾರ ರಾಮಯ್ಯನ ದೃಷ್ಟಾಂತವನ್ನು ಕೊಡುತ್ತಾನೆ. ಈ ಹಿಂದೆ ಪ್ರಜಾವಾಣಿಯ ವಿಶೇಷ ಸಂಚಿಕೆ ಇತ್ಯಾದಿಗಳಲ್ಲಿ ಲೇಖಕರ ಹಣೆಯ ಬರಹದ ಬಗ್ಗೆ ತೇಜಸ್ವಿಯವರು ಹೇಳಿದ್ದ ಅಭಿಪ್ರಾಯಗಳನ್ನು ಜಗನ್ನಾಥನ ಮೇಲಿನ ವಿಚಾರಗಳೊಂದಿಗೆ ಹೋಲಿಸಿದರೆ ಬಹುಮಟ್ಟಿಗೆ ಸಾಮ್ಯ ಕಂಡುಬರುತ್ತದೆ. ಅಷ್ಟೇ ಏಕೆ ? ತೇಜಸ್ವಿಯವರೇ ಜಗನ್ನಾಥನಲ್ಲಿ ತನ್ನನ್ನು ಗುರ್ತಿಸಿಕೊಂಡಿದ್ದರೆ ಆಶ್ಚರ್ಯವೇನೂ ಇಲ್ಲ. ಇಂಥ ಆರೋಗ್ಯಕರ ವಿಶ್ಲೇಷಣೆ 'ನಿಗೂಢ ಮನುಷ್ಯರ'ಲ್ಲಿ ಹರಡಿಕೊಂಡು ಸ್ವಲ್ಪ ಅತಿ ಎನಿಸಿದರೂ ಪ್ರತ್ಯೇಕವಾಗದೆ ಸಂದರ್ಭದ ಶೋಭೆಯನ್ನು ಹೆಚ್ಚಿಸಿದೆ. ಇದೂ ಸಹ ಶೈಕ್ಷಣಿಕ ವಿಚಾರವಾಗಿ ಅಭ್ಯಾಸ ಯೋಗ್ಯವಾಗಿದೆ.

ಅಸ್ತಿತ್ವವಾದ ಮತ್ತು ಸಾಹಿತ್ಯ

ಮೂಲ : ಮೀರಾ ಚಕ್ರವರ್ತಿ
ಅನು : ಬಿ. ವೈ. ಲಲಿತಾಂಬ

ಅಸ್ತಿತ್ವವಾದ ಯುರೋಪಿನಲ್ಲಿ ಎಷ್ಟು ಜನಪ್ರಿಯವೋ ಅಷ್ಟೇ ಅಪಗ್ರಹಿತವೂ ಆಗಿದೆ. ಅದರ ಪ್ರಮುಖ ಪ್ರವರ್ತಕ ಜ್ಯಾ ಪಾಲ ಸಾತ್ರ್ರ ಪ್ಯಾರಿಸ್ಸಿನಲ್ಲಿ ಒಂದು ಸಲ ಮಾತನಾಡುತ್ತ "... ಈಗ ಈ ಶಬ್ದ ಎಷ್ಟು ಬಳಕೆಯಲ್ಲಿದೆ ಎಂದರೆ ಒಬ್ಬ ಸಂಗೀತಗಾರನ ಕೃತಿಯನ್ನು ಅಥವಾ ಚಿತ್ರಕಾರನ ಚಿತ್ರವನ್ನು ಸಹ 'ಅಸ್ತಿತ್ವವಾದಿ' ಎನ್ನಲಾಗುತ್ತಿದೆ"[1] ಎಂದು ವಿಷಾದಪಟ್ಟನು. ಸಾಹಿತ್ಯ ಮಾತ್ರ 'ಅಸ್ತಿತ್ವವಾದಿ' ಆಗಬಲ್ಲುದು, ಸಂಗೀತವಾಗಲಿ, ಚಿತ್ರವಾಗಲಿ ಅಲ್ಲ. ಏಕೆಂದರೆ "ಇಬ್ಬರೂ (ತತ್ವಚಿಂತಕ ಹಾಗೂ ಸಾಹಿತಿ) ಶಬ್ದ ಹಾಗೂ ವಸ್ತುಗಳ ಮಧ್ಯೆ ಮೂಲಭೂತ ವಾಗಿರುವ ಅಂತರವನ್ನು ಅನುಭವಿಸುತ್ತಾರೆ. ಚಿತ್ರಕಾರ ಅಥವಾ ಶಿಲ್ಪಿ ಅರಿಯದ ಒಂದು ದ್ವಂದ್ವವನ್ನವರು ಅರಿತಿರುತ್ತಾರೆ."[2]

ಪ್ರಾಯಶಃ ಸಾಹಿತ್ಯವನ್ನು ಅಸ್ತಿತ್ವವಾದ ಆವರಿಸಿಕೊಂಡಷ್ಟು ಬೇರೆ ಯಾವ ತತ್ವಚಿಂತನೆಯೂ ಆವರಿಸಿಕೊಂಡಿಲ್ಲ. ಸಾತ್ರ್ರನಲ್ಲಿ ಕಡಿಮೆಯಾಗುತ್ತ ಹೋಗುವ ತತ್ವಚಿಂತನೆ ಹಾಗೂ ಸಾಹಿತ್ಯಗಳ ನಡುವಣ ಅಂತರ ಅವನ 'ನಾಸಿಯು' ಕಾದಂಬರಿ ಯಲ್ಲಿ ಸಂಪೂರ್ಣ ಇಲ್ಲದಂತಾಗುತ್ತದೆ. 'ನಾಸಿಯು'ವನ್ನು ತತ್ವಚಿಂತನೆ ಎಂದಾಗಲೀ, ಸಾಹಿತ್ಯದ ಪ್ರಕಾರವೆಂದಾಗಲೀ ವಿಂಗಡಿಸುವುದು ಬಹಳ ಕಷ್ಟ. ಬಹುಶಃ ಇದಕ್ಕೆ ತತ್ವಚಿಂತಕ ಹಾಗೂ ಸಾಹಿತಿ ಇಬ್ಬರೂ ಶಬ್ದ ಹಾಗೂ ವಸ್ತುಗಳ ಮಧ್ಯದ ಅಂತರವನ್ನು ಅರ್ಥ ಮಾಡಿಕೊಂಡಿರುವುದೇ ಕಾರಣವಾಗಿರಬಹುದು. ಅವರಿಬ್ಬರೂ ವಸ್ತು ಮತ್ತು ಪ್ರಜ್ಞೆಯ ದ್ವಂದ್ವವನ್ನು ದಾಟಲು ಪ್ರಯತ್ನಿಸುತ್ತಾರೆ ಹಾಗೂ ಅವುಗಳ ಮಧ್ಯೆ ಸಾಮಂಜಸ್ಯವನ್ನು ಕಾಣದಾದಾಗ ಒಬ್ಬ 'ಶೂನ್ಯ'ವನ್ನೂ ಇನ್ನೊಬ್ಬ 'ಅಸಂಗತಿ'ಯನ್ನೂ ಅನುಭವಿಸುತ್ತಾನೆ.

ಯುದ್ಧದಿಂದ ಸಂತಪ್ತವಾದ ಯುರೋಪಿನಲ್ಲಿ ಅನುಭವ ಹಾಗೂ ವಾಸ್ತವಿಕತೆಗೆ ಸಂಬಂಧವೇ ಇಲ್ಲದಂತಾಗಿ ಜೀವನ 'ಅಸಂಗತ'ವೂ ಅರ್ಥಹೀನವೂ ಆಗಿ ಕಾಣಿಸಿತು. ಧರ್ಮದ ಆಶ್ವಾಸನೆ ನಿಜವಾಗದೆ ಅದಕ್ಕಾಗಿ ಆಸೆ ಇಟ್ಟುಕೊಂಡಿರುವುದು ಅರ್ಥ ಶೂನ್ಯವಾಯಿತು. ಹೀಗಾಗಿ ಬುದ್ಧಿಜೀವಿ ಯುರೋಪು ತತ್ವಚಿಂತಕ ನೀತ್ಸೆಯ "ದೇವರು ಸತ್ತಿದ್ದಾನೆ", ಎಂಬ ನಿರೀಶ್ವರವಾದಕ್ಕೆ ಜೋತು ಬಿದ್ದಿತು. 'ಸುಖಾಂತ'

ಹಾಗೂ 'ದುಃಖಾಂತ'ಗಳ ನಡುವಣ ಅಂತರ ಅರ್ಥಹೀನವಾಗಿ ಅದು ಬೆಕೆಟ್‌ನಲ್ಲಿ 'ಸುಖದುಃಖಾಂತವೂ' ಅಯನೆಸ್ಕೋನಲ್ಲಿ 'ಹಿಂಸ್ರರಂಗಮಂಚ'ವೂ ಆಗಿ ಪರಿಣಮಿಸಿತು.

ಅಸ್ತಿತ್ವವಾದ ಹಾಗೂ ಫ್ರಾಯಿಡ್‌ನ ಮನೋವಿಶ್ಲೇಷಣ ಸಿದ್ಧಾಂತಗಳೂ ವಿಚಾರವೆಂಬ ಕಲ್ಪನೆಯನ್ನು ಭಗ್ನಗೊಳಿಸಿದ್ದವು. ಭಾವನಾಪರ ಮಾನವ ವಿವೇಕಪರ ಮಾನವನಿಗಿಂತ ಅಗ್ರಸ್ಥಾನ ಪಡೆದ. "ಇದರಿಂದ ಪ್ರಜ್ಞೆ ಚೂರು ಚೂರಾಗಿ ಅದರ ಪರಿಣಾಮವಾಗಿ ಪ್ರಜ್ಞೆ ಹಾಗೂ ಜಗತ್ತಿನ ನಡುವಣ ಸಂಬಂಧದ ಪ್ರಾತಿನಿಧಿಕ ದೃಷ್ಟಿಕೋನ ಅಸಾಧ್ಯವಾಯಿತು."[2] ಕೋಪರ್ನಿಕಸನ ಕ್ರಾಂತಿ, ಸಾಹಿತ್ಯ ಹಾಗೂ ತತ್ವಶಾಸ್ತ್ರವನ್ನು ವಿಶ್ವಕೇಂದ್ರಿತವನ್ನಾಗಿ ಮಾಡಿದಂತೆ, ಫ್ರಾನ್ಸಿನ ಆಕ್ರಮಣ ಹಾಗೂ ಪರಾಭವ, ಅಲ್ಲಿ ಸಾಹಿತ್ಯ ಹಾಗೂ ತತ್ವಶಾಸ್ತ್ರವನ್ನು 'ಅಸ್ತಿತ್ವವಾದಿ'ಯನ್ನಾಗಿ ಮಾಡಿತು.

ಅಸ್ತಿತ್ವವಾದಿಗಳು ಸಾಹಿತ್ಯಕ್ಕೆ ಹಲವಾರು ಪರಿಭಾಷೆಗಳನ್ನು ನೀಡಿದ್ದಾರೆ. ಅವೆಲ್ಲವೂ ಸಾಹಿತ್ಯವನ್ನು ಸಮಗ್ರವಾಗಿ ಅಸ್ತಿತ್ವವಾದಿ ತತ್ವಚಿಂತನೆಯ ದೃಷ್ಟಿಯಿಂದ ನೋಡಲು ಮಾಡಿದ ಪ್ರಯತ್ನಗಳು. ಅಸ್ತಿತ್ವವಾದಿಗಳಿಗೆ ಜಗತ್ತನ್ನು ಅವಲೋಕಿಸಲು ಹಲವಾರು ಶಿಖರ ಸ್ಥಾನಗಳಿವೆ. "ಸಾಹಿತ್ಯ ಅಂತಹ ಶಿಖರ ಪ್ರಾಂತಗಳಲ್ಲೊಂದು. ಹಾಗೂ ಸಾಹಿತ್ಯದ ಪ್ರಯೋಜನ ಅದು ಎಷ್ಟರಮಟ್ಟಿಗೆ ವಾಸ್ತವಿಕ ಜಗತ್ತನ್ನು ನೋಡುತ್ತದೆ ಅಥವಾ ಕಾಲ್ಪನಿಕ ಜಗತ್ತನ್ನು ನೋಡುತ್ತದೆ ಎಂಬುದರ ಮೇಲೆ ಅವಲಂಬಿಸುತ್ತದೆ.[3] ಗತ ಶತಮಾನಗಳ ಸಾಹಿತ್ಯ ವಿಶ್ವದ ಕಿಂಡಿ ನೋಟವನ್ನು ಮಾತ್ರ ತೋರಿಸುವುದರಿಂದ ಸಾರ್ತ್ರ್ ಅದನ್ನು "ಬರಿ ಕಣ್ಣಿನಿಂದ ಗ್ರಹಿಸಿದ ಹಾಗೆ, ಆದರೆ ನಿಜವಾಗಿಯೂ ಅನುಭವಿಸಿದ ಹಾಗಲ್ಲ"[4] ವೆಂದು ದೂಷಿಸಿದ್ದಾನೆ. ಮಾನವ ಮಾತ್ರ ವಸ್ತುನಿಷ್ಠ ವೀಕ್ಷಕನಲ್ಲ. ಅವನು ಅನುಭವಿಸುತ್ತಾನೆ. ಅವನು "ಜಗತ್ತಿನಲ್ಲಿ" ಇರುತ್ತಾನೆ. "ಜಗತ್ತಿನ–ಮಧ್ಯೆ" ಅಲ್ಲ. ಇದು ಸಾರ್ತ್ರ್‌ನ ಪಾತ್ರಗಳ ಮೊದಲ ವಿಶೇಷತೆ. 'ನಾಸಿಯ' ಕಾದಂಬರಿಯ ರೋಕ್ವೆಂಟಿನ್ ಇದರ ಉತ್ತಮ ಉದಾಹರಣೆ.

"ನಾಸಿಯ" ವಾಸ್ತವಿಕತೆಯನ್ನು ಫಿನಾಮಿನಾಲಜಿಯ (ಪ್ರಜ್ಞೆಯ ರಚನಾ ಮೂಲ ವಿಶ್ಲೇಷಣೆಯ) ದೃಷ್ಟಿಯಿಂದ ನೋಡುವ ಒಂದು ಪ್ರಯತ್ನ, ಅಥವಾ ವಾಸ್ತವಿಕತೆಯನ್ನು 'ಜಗತ್ತಿನಲ್ಲಿ' ಇರುವವನಿಗೆ ಇಂದ್ರಿಯ ಗೋಚರವಾಗುವಂತೆ ತೋರಿಸುವ ಯತ್ನ. ಆದುದರಿಂದ ''ತಲೆಕೆಳಗಾದ ರಕ್ತಮಯ ಬಾತ ಉಬ್ಬಿದ ಈ ದೊಡ್ಡ ಹೊಟ್ಟೆ, ಅದರಲ್ಲೆ ಸತ್ತ ಕಾಲುಗಳು ಸಹಿತವಾಗಿ ಈ ಡಬ್ಬದಲ್ಲಿ, ಈ ಬೂದು ಆಕಾಶದಲ್ಲಿ ತೇಲುತ್ತಿರುವ ಈ ದೊಡ್ಡ ಹೊಟ್ಟೆ ಬೆಂಚಲ್ಲ".[5] ಇದು ನಿಜವಾಗಿಯೂ ಬಸ್ಸಿನಲ್ಲಿಯ ಬೆಂಚಿನ ವಿವರಣೆ. ರೋಕ್ವೆಂಟಿನ್‌ಗೆ ಕಾಣಿಸಿದಂತೆ ನಾಸಿಯದ ರಾಕ್ವೆಂಟಿನ್ 'ಜಗತ್ತಿನಲ್ಲಿ' ಇರುವವ 'ಜಗತ್ತಿನ ಮಧ್ಯೆ' ಅಲ್ಲ.

'ಮುಕ್ತಿಗೆ ದಾರಿಗಳು' ಎಂಬ ತನ್ನ ಕಾದಂಬರಿ-ಸರಣಿಯಲ್ಲಿ ದ್ವಿತೀಯ ಕಾದಂಬರಿಯಾದ 'ದ ರಿಪ್ರೈವ್'ನಲ್ಲಿ ಸಾರ್ತ್ರ್ ದಂಗು ಬಡಿಸುವ ಶೈಲಿಯನ್ನು ಪ್ರಯೋಗಮಾಡುತ್ತಾನೆ. ಅರಿಸ್ಟಾಟಲನ 'ಯುನಿಟಿ' ತತ್ವವನ್ನು ಧ್ವಂಸಮಾಡು ತ್ತಾನೆ.

ಈ ಕಾದಂಬರಿಯ ಹಲವಾರು ಪ್ಯಾರಾಗಳಲ್ಲಿ ಎಷ್ಟೋ ಸಲ ಒಂದೊಂದೇ ವಾಕ್ಯಗಳಲ್ಲಿ ಹಲವಾರು ಸ್ಥಳಗಳ, ಹಲವಾರು ವ್ಯಕ್ತಿಗಳ, ಹಾಗೂ ಹಲವಾರು ಸಮಯಗಳ ಉಲ್ಲೇಖವನ್ನೂ ಕಾಣಬಹುದು. ಒಂದರಿಂದೊಂದು ಸಾವಿರಾರು ಮೈಲಿ ದೂರದಲ್ಲಿರುವ ಪಾತ್ರಗಳು, ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳ ಬಗ್ಗೆ ಒಂದೇ ವಾಕ್ಯದಲ್ಲಿ ಮಾತನಾಡುತ್ತವೆ. ಮೊದಲ ನೋಟಕ್ಕೆ ಇದೆಲ್ಲವೂ ಅಸಂಬದ್ಧವಾಗಿ ಕಂಡರೂ ಸಹ ಇದು ಸಾರ್ತ್ರ್‌ನ ಮೂರ್ತ ಅಭಿವ್ಯಕ್ತಿಯ ಪ್ರಯತ್ನಕ್ಕೆ ಪ್ರಭಾವಪೂರ್ಣ ಶೈಲಿ.

ಸಾರ್ತ್ರ್‌ನ ಪಾತ್ರಗಳನ್ನು 'ಬೆನ್ನೆಲುಬಿಲ್ಲದವುಗಳು' ಎಂದು ಟೀಕಿಸಿ ಸಾರ್ತ್ರ್‌ನನ್ನು 'ಎಷ್ಟು ಹೇಳಿದರೂ ಈ ಪಾತ್ರಗಳೆಲ್ಲ ಬೆನ್ನೆಲುಬಿಲ್ಲದವುಗಳು, ಹೇಡಿಗಳು, ಅಂಥ ಪಾತ್ರಗಳಿಂದ ನೀವು ಹೇಗೆ ಕಥಾನಾಯಕನನ್ನು ಸೃಜಿಸಬಲ್ಲಿರಿ' ಎಂದು ಕೇಳಲಾಗು ತ್ತಿತ್ತು. ಸಾರ್ತ್ರ್ ಈ ಟೀಕೆಗೆ ''ಈ ಆಕ್ಷೇಪಣೆ ನನಗೆ ನಗು ಬರಿಸುತ್ತದೆ, ಏಕೆಂದರೆ ಅದು, ಜನರು ಹುಟ್ಟಾ ನಾಯಕರಾಗಿರುತ್ತಾರೆ ಎಂಬ ಪೂರ್ವಕಲ್ಪನೆಯಿಟ್ಟು ಕೊಂಡಿರುತ್ತದೆ''[1] ಎಂದು ಉತ್ತರಿಸುತ್ತಾನೆ. ಮನುಷ್ಯ ಹುಟ್ಟುವಾಗಲೇ ಶೂರ ಅಥವಾ ಹೇಡಿಯಾಗಿರುವುದಿಲ್ಲ. ಅವನ ಅಸ್ತಿತ್ವಕ್ಕಿಂತ ಮುಂಚೆ ಅವನ ಸತ್ವದ ಕಲ್ಪನೆ ಮಾಡಲು ದೇವರು ಇಲ್ಲವಾದುದರಿಂದ ಅವನು ಮೊದಲು ಮನುಷ್ಯ, ನಂತರ ಹೇಡಿ ಅಥವಾ ಶೂರ. ನಾಜಿಗಳೊಡನೆ ಹೋರಾಡಲು ನಿರ್ಧರಿಸುವುದರ ಮೂಲಕ ಅವನು ಶೂರನಾಗುತ್ತಾನೆ ಅಥವಾ ಹೋರಾಡದಿರಲು ನಿರ್ಧರಿಸುವುದರ ಮೂಲಕ ಹೇಡಿಯಾಗುತ್ತಾನೆ. ಸಾರ್ತ್ರ್‌ನ ಪಾತ್ರಗಳಲ್ಲಿ ಮುಕ್ತವಾಗಿ ಆಯ್ಕೆ ಮಾಡುವ, 'ಆಗುವ', ಸಾರ್ತ್ರ್‌ನ ಮಾತಿನಲ್ಲೇ ಹೇಳುವುದಾದರೆ 'ಆವಿಷ್ಕರಿಸುವ' ಯೋಗ್ಯತೆ ಮೂಲಭೂತವಾಗಿದೆ, ಈ ಪಾತ್ರಗಳು ಶೇಕ್ಸ್‌ಪಿಯರನ ಶೈಲಾಕ್‌ನಂತಲ್ಲ. 'ದ ಫ್ಲೈಸ್'ನ ಒರೆಸ್ಟಸ್‌ನಂತೆ "ಓ, ನೀನು ಹೇಗೆ ಬದಲಾಗಿದ್ದೀಯ......ಆದರೀಗ ನೀನು ನನ್ನ ಕನಸಿನ ಒರೆಸ್ಟಸ್ಸಿನಂತೆ ಮಾತನಾಡುತ್ತಿದ್ದೀಯ.[6] ಒರೆಸ್ಟಸ್ಸಿನ ತನ್ನನ್ನು ತಾನೇ ಬದಲಿಸಿಕೊಳ್ಳುವ ಈ ಶಕ್ತಿಯನ್ನು ಎಲೆಕ್ಟ್ರಾ ಸ್ಪಷ್ಟವಾಗಿ ಹೇಳು ತ್ತಾಳೆ: ಸಾರ್ತ್ರ್‌ನ ಪಾತ್ರಗಳು ಹೇಡಿಗಳಂತೆ ಕಂಡರೂ ಶೂರರಾಗಬಲ್ಲವು, ಅವುಗಳು ತಮ್ಮನ್ನು ತಾವೇ ಬದಲಾಯಿಸಿಕೊಳ್ಳಬಲ್ಲವು. 'ದ ರಿಪ್ರೈವ್' ಕಾದಂಬರಿಯ ಮ್ಯಾಥ್ಯೂವಿನಂತೆ ತಮ್ಮ ಮುಕ್ತತೆಯನ್ನು ಸಾಧಿಸಿಕೊಳ್ಳಬಲ್ಲವು. ಆದುದರಿಂದ ಸಾರ್ತ್ರ್‌ನಲ್ಲಿ ಸಿದ್ಧ ಪಾತ್ರಗಳೆಂಬುವಿಲ್ಲ ; ಅವನ ನಾಯಕರೆಲ್ಲಾ ನಿರ್ದಿಷ್ಟ ಗುಣಬದ್ಧ

ರಲ್ಲ. ಆದುದರಿಂದ "ಸಾಹಿತ್ಯ ಮುಕ್ತಿ (freedom) ಯನ್ನು ಧ್ಯೇಯವನ್ನಾಗಿಸಿಕೊಂಡ ಒಂದು ಮುಕ್ತ ಸ್ಥಿತಿ"[7].

"ಬರಹಗಾರನಿಗೆ — ಮುಕ್ತ ವ್ಯಕ್ತಿಗಳನ್ನು ಉದ್ದೇಶಿಸುತ್ತಿರುವ ಮುಕ್ತ ವ್ಯಕ್ತಿಗೆ—ಇರುವುದು ಒಂದೇ ಒಂದು ವಿಷಯ—ಮುಕ್ತಿ.[7]" ಆದರೆ ಸಮಾಜದ ವಾಸ್ತವಿಕ ರಚನೆ ಪೀಡನಾಪರವಾದುದರಿಂದ ಕಾದಂಬರಿಕಾರ ತನ್ನ ಪಾಠಕರಿಗೆ ಬಿಡುಗಡೆಯ ದಾರಿಗಳನ್ನು ಮಾತ್ರ ತೋರಿಸಬಲ್ಲ[3]. ಆದುದರಿಂದಲೇ ಸಾರ್ತ್ರ್‌ನ ಕಾದಂಬರಿ ಸರಣಿಯ ಹೆಸರು 'ಲೇ ಕೆಮಿನ್ಸ್ ದ ಲಾ ಲಿಬರ್ತೆ'—ಬಿಡುಗಡೆಯ ದಾರಿಗಳು.

ಸಾರ್ತ್ರ್ ಬರಹಗಾರನ ಈ ಮುಕ್ತಿಯ ಕರೆಯನ್ನು ಸಾಹಿತ್ಯದಲ್ಲಿ ಬರಹಗಾರನ 'ಆಸ್ಥೆ' ಎಂದು ಕರೆಯುತ್ತಾನೆ. "ಇನ್ನು ನಾವು ಜಗತ್ತನ್ನು ವಶಪಡಿಸಿಕೊಳ್ಳಬೇಕೆನುವವರ ಜೊತೆ ಇಲ್ಲ. ಜಗತ್ತನ್ನು ಬದಲಿಸಬೇಕೆನ್ನುವವರ ಜೊತೆ"[7] ಎಂದು ಘೋಷಿಸಿದ್ದಾನೆ. ಆದುದರಿಂದ "ಬರಹಗಾರ ಅಂತಿಮ ಧ್ಯೇಯವಾದ ಸಮಾಜವಾದಿ ಪ್ರಜಾಪ್ರಭುತ್ವದ ಸಾಧನೆಗಾಗಿ ಬರೆಯಬೇಕು".[7] ಈ ರೀತಿ ಅಸ್ತಿತ್ವವಾದದಲ್ಲಿ "ವಿವರಣಾತ್ಮಕ ಹಾಗೂ ಕಥಾತ್ಮಕ ಸಾಹಿತ್ಯದ ಪ್ರಾಚೀನ ಕಲ್ಪನೆಯಿಂದ ಮುಕ್ತಿಯ ನಿಶ್ಚಿತ ಯೋಜನೆಯಲ್ಲಿ ತೊಡಗಿದ ಕ್ರಿಯಾತ್ಮಕ ಸಾಹಿತ್ಯದವರೆಗಿನ ಪರಿವರ್ತನೆ"[8] ಕಾಣುತ್ತೇವೆ.

ಈರೀತಿ ಸಾಹಿತ್ಯ ಮುಕ್ತಿಯ ಒಂದು ವಿಸ್ತಾರ. "ಪ್ರತಿಯೊಂದು ಪುಸ್ತಕ ಒಂದು ವಿಶಿಷ್ಟ 'ಏಕಾಕಿತನ' ದಿಂದ ಮೂರ್ತ ಮುಕ್ತಿಯನ್ನು ಸಾಧಿಸುವ ಗುರಿಯಿಟ್ಟುಕೊಂಡಿರುತ್ತದೆ."[7] ಬಿಳಿಯರ ಬಗ್ಗೆ ತೀವ್ರ ದ್ವೇಷದಿಂದ ಕೂಡಿದ ನೀಗ್ರೋನ ಒಂದು ಕಾದಂಬರಿ ನೀಗ್ರೋಗಳ ಮುಕ್ತಿಗೆ ಕರೆ ನೀಡುವುದರಿಂದ ಒಂದು ಒಳ್ಳೆಯ ಕಾದಂಬರಿ. "ಈ ರೀತಿ ಕಾದಂಬರಿಗಳಲ್ಲಿ ಒಳ್ಳೆಯ ಹಾಗೂ ಕೆಟ್ಟ ಕಾದಂಬರಿಗಳು ಮಾತ್ರ ಇವೆ. ಕೆಟ್ಟ ಕಾದಂಬರಿಗಳು ಮುಖಸ್ತುತಿಯ ಮೂಲಕ ಆನಂದಪಡಿಸುವ ಗುರಿಯನ್ನಿಟ್ಟುಕೊಂಡಿರುತ್ತವೆ. ಆದರೆ ಒಳ್ಳೆಯ ಕಾದಂಬರಿ ಒಂದು ಬೇಡಿಕೆ ಹಾಗೂ ಶ್ರದ್ಧೆಯ ಒಂದು ಕೃತಿ."[7]

ಸಾರ್ತ್ರ್ ಸಾಹಿತ್ಯದ ಬಗ್ಗೆ ಸಾಮಾನ್ಯವಾಗಿ ಮಾತನಾಡುವಾಗ ಗದ್ಯದ ಬಗ್ಗೆ ಮಾತನಾಡುತ್ತಾನೆ, ಕವಿತೆಯ ಬಗ್ಗೆ ಅಲ್ಲ. ಕವಿತೆಯ ಬಗ್ಗೆ ಸಾರ್ತ್ರ್‌ನ ವಿಚಾರಗಳು ಪ್ಲೇಟೋವಿನ ವಿಚಾರಗಳಂತೆಯೇ. "ಕವಿತೆ ಬರಿ ಕಲ್ಪನೆ ಅವಾಸ್ತವಿಕದ, ಅಸತ್ತಿನ ಜಗತ್ತು".[7] "ಯಾವ ಕಾಲದಲ್ಲೇ ಆಗಲಿ, ಕವಿಯ ಕೆಲಸ ಮಾನವನ ದಂತಕತೆಯನ್ನು ಸೃಜಿಸುವುದು." ಆದುದರಿಂದ ಸಾರ್ತ್ರ್ ಕಾವ್ಯವನ್ನು ತ್ಯಜಿಸಿ ಗದ್ಯದಲ್ಲಿ ಬರೆಯುತ್ತಾನೆ. ಯಾವುದೇ ಕಾದಂಬರಿ ಸಾಮಾಜಿಕ ಕ್ರಿಯೆಯ ಕಾದಂಬರಿಯಾಗಿರ

ಬೇಕಾದರೂ, ಅದೊಂದು ವೈಯಕ್ತಿಕ ಪರ್ಯಾಲೋಚನೆಯ ಒಂದು ಉದಾಹರಣೆ ಮಾತ್ರ. ಆದುದರಿಂದ ಸಾರ್ತ್ರ್ ಕಾದಂಬರಿಗಳನ್ನು ತ್ಯಜಿಸಿ ಇನ್ನೂ ಒಳ್ಳೆಯ ಮಾಧ್ಯಮವಾದ ನಾಟಕವನ್ನು ಆಯ್ದುಕೊಳ್ಳುತ್ತಾನೆ. "ಕಾದಂಬರಿಯು 'ಕ್ರಿಯೆ' ಯನ್ನು ಪಾಠಕ ಮಾತ್ರ ಕಲ್ಪನೆ ಮಾಡುತ್ತಾನೆ. ಆದರೆ ನಾಟಕದಲ್ಲಿ 'ಕ್ರಿಯೆ' ನಟನ ಅಭಿನಯದಲ್ಲಿ ಅವಗತವಾಗಿರುತ್ತದೆ. ನಟ ತನ್ನ ಅಭಿನಯದ ಮೂಲಕ ತಾನು ಅಭಿನಯಿಸುತ್ತಿರುವ ಪಾತ್ರದೊಂದಿಗೆ ಸಾಮರಸ್ಯವನ್ನು ಹೊಂದುತ್ತಾನೆ. ಹಾಗೂ ಆ ಪಾತ್ರವನ್ನು ಪ್ರೇಕ್ಷಕರು ಅರಿತುಕೊಳ್ಳುತ್ತಾರೆ."[9] ಸಾರ್ತ್ರ್‌ನು ಕಾದಂಬರಿಗಳಿಗಿಂತ ಹೆಚ್ಚು ನಾಟಕಗಳನ್ನು ರಚಿಸುವುದನ್ನು ನಾವು ಕಾಣುತ್ತೇವೆ. ಅವನ 'ಮುಕ್ತಿಗೆ ದಾರಿಗಳು' ಕಾದಂಬರಿ ಸರಣಿಯಲ್ಲಿನ ನಾಲ್ಕನೆಯ ಕಾದಂಬರಿ ಇನ್ನೂ ಬರೆದಾಗಿಲ್ಲ, (ಅವನ ಕೊನೆಯ ಅಂದರೆ ಸರಣಿಯ ಮೂರನೆಯ ಕಾದಂಬರಿ ಲಾ ಮೋರ್ತ್ ದಾನ್ಸ ಎಮ್, ಅಥವಾ ಅಯರ್ನ್ ಇನ್ ದ ಸೋಲ್ ಪ್ರಕಾಶಿತ ವಾದದ್ದು 1949ರಲ್ಲಿ).

ಸಾಹಿತ್ಯದಲ್ಲಿ ಕಾರ್ಯಕಾರಣ ವಿಧಾನವಿಲ್ಲ. ಅಂತಿಮತೆ ಮಾತ್ರ ಇದೆ. ಆದುದರಿಂದ ಬರಹಗಾರ ತನ್ನದೇ ಕೃತಿಯನ್ನು 'ಓದಲು' ಸಾಧ್ಯವಿಲ್ಲ. ಏಕೆಂದರೆ ಏನು ಬರೆಯಲಾಗಿದೆ ಎಂಬುದು ಅವನಿಗೆ ಗೊತ್ತಿರುತ್ತದೆ. ಸಾರ್ತ್ರ್‌ನ ಸೌಂದರ್ಯ ತತ್ವ, ತತ್ವಬೋಧಕ ಕಾಂಟನ ಅಂತಿಮತಾವಾದ (finality principle) ಹಾಗೂ ಕ್ರೋಸೆಯ ಸಹಕಾರವಾದದ (doctrine of collaboration) ಸಮೀಕರಣ. ಸಾಹಿತ್ಯಕ್ಕೆ ಓದುಗನ ಸಹಕಾರ ಅಗತ್ಯ. ಏಕೆಂದರೆ ಬುಗುರಿ ಚಲನೆಯಲ್ಲಿ ಮಾತ್ರವೇ ಜೀವಿಸುವಂತೆ ಸಾಹಿತ್ಯ ಓದಿನಲ್ಲಿ ಮಾತ್ರವೇ ಜೀವಿಸುತ್ತದೆ, ಹಾಗೂ ಬರಹಗಾರ ಹೇಳುವುದನ್ನು ನಂಬಲು ಬಿಡಲು ಓದುಗ ಮುಕ್ತನಾದುದರಿಂದ, ಸಾಹಿತ್ಯ ಬರಹಗಾರನ ಮನದಲ್ಲಿ ಸೃಜನವಾದುದನ್ನು ಪುನಃ ಸೃಷ್ಟಿಸಲು ಓದುಗನ ಮುಕ್ತಿಗೆ ಬರಹಗಾರ ನೀಡುವ ಕರೆ "ಬರಹಗಾರ ತನ್ನ ಕೃತಿಯ ಅನುಸೃಷ್ಟಿಗೆ ಸಹಕರಿಸಲು ಓದುಗನ ಮುಕ್ತಿಗೆ ಕರೆ ನೀಡುತ್ತಾನೆ."[7] ಓದದಿದ್ದರೆ ಸಾಹಿತ್ಯ ಅಪೂರ್ಣ. ಅದು ಓದಿನಲ್ಲಿ ತನ್ನ ಸಾರ್ಥಕತೆಯನ್ನು ಪಡೆಯುತ್ತದೆ. 1964 ರಲ್ಲಿ ತನಗೆ ನೀಡಲಾದ ಸಾಹಿತ್ಯ ಕ್ಷೇತ್ರದ ಸರ್ವಶ್ರೇಷ್ಠ ಪುರಸ್ಕಾರ ನೊಬೆಲ್ ಬಹುಮಾನವನ್ನು ತಿರಸ್ಕರಿಸಿ, ಸಾರ್ತ್ರ್ "ನನಗೆ ಹಾಗೂ ಯಾವುದೇ ಅಕಾಡಮಿಗಾಗಲೀ, ಬಹುಮಾನಕ್ಕೇ ಆಗಲಿ ಸಂಬಂಧ ಇದೆ ಎಂದು ನಾನು ಭಾವಿಸಿಲ್ಲ. ನಾನು ಬರೆದುದನ್ನು ಓದುವುದೇ ನನಗೆ ಕೊಡಬಹುದಾದ ಶ್ರೇಷ್ಠ ಮರ್ಯಾದೆ ಎಂದು ನಾನು ಭಾವಿಸುತ್ತೇನೆ" ಎಂದ. ಈ ಮಾತು ಸಾರ್ತ್ರ್‌ನಿಗೆ ಮಾತ್ರವಲ್ಲ, ಅಸ್ತಿತ್ವವಾದದ ದೃಷ್ಟಿಕೋನದಲ್ಲಿ ಎಲ್ಲ ಸಾಹಿತ್ಯಕ್ಕೂ ಅನ್ವಯಿಸುತ್ತದೆ.

ಟಿಪ್ಪಣಿ

1 Existentialisme est un Humanisme—Sartre
2 The Existentialist Outlook—Margaret Chatterjee
3 Humans Being—The World of Jean-Paul-Sartre
—by Joseph H McMahan
4 Edith Kern introducing 'Sartre–a Collection of Critical Essays'
5 Nausea–Sartre
6 'The Flies'—a play by Sartre
7 What is Literature—Sartre
8 Sartre—Albert Stern
9 Robert D Cumming introducing—"The Philosophy of Jean-Paul-Sartre"

ಸಂಭವತೆಯ ಪರಿಚಯ

ಟಿ. ಶ್ರೀವೆಂಕಟರಮಣ

ಕ್ರಿಸ್ತಶಕ 17ನೆಯ ಶತಮಾನದಲ್ಲಿ ಜೂಜಿನ ಮೇಜುಗಳ ಮೇಲೆ ಹುಟ್ಟಿಕೊಂಡ ಸಂಭವತೆಯ ಪರಿಕಲ್ಪನೆ ಗಣಿತ ವಿದ್ವಾಂಸರ ಗಮನ ಸೆಳೆದು ಆಸಕ್ತಿ ಕುತೂಹಲ ಕೆದಕಿ ಫಲಿತವಾಗಿ ಬೆಳೆದು ಇನ್ನೂ ಬೆಳೆಯುತ್ತ ಈಗ ಸಂಖ್ಯಾಕಲನ ವಿಜ್ಞಾನದ ಬೆನ್ನೆಲುಬಾಗಿದೆ. ಸಂಭವತೆ ಸಿದ್ಧಾಂತ ಮೈತಳೆದುಬಂದ ಬಗೆ ದಾರಿಗಳನ್ನು ಪರಿಶೀಲಿಸಿದರೆ ಅದು ಉದ್ದಕ್ಕೂ ಗಮನ ಸೆರೆ ಹಿಡಿದಿಟ್ಟು ಓದಿಸಿಕೊಂಡು ಹೋಗುವ ಓದು. ಪ್ರಸ್ತುತ ಲೇಖನದಲ್ಲಿ ಗಣ ಮತ್ತು ಗಣ ಪರಿಕ್ರಿಯೆಗಳನ್ನು ಬಳಸಿ ಸಂಭವತೆ, ನಿರ್ಬಂಧಿತ ಸಂಭವತೆಗಳ ಪರಿಚಯ ಮಾಡಿಕೊಡಲು ಯತ್ನಿಸಲಾಗಿದೆ. ನಿರೂಪಣೆಯ ಸ್ಪಷ್ಟತೆ ಮತ್ತು ವಿಚಾರ ಬೇಗನೆ ಮನದಟ್ಟಾಗುವ ಸೌಲಭ್ಯಕ್ಕಾಗಿ ನಿದರ್ಶನಗಳನ್ನು ಅಲ್ಲಲ್ಲಿ ಬಳಸಲಾಗಿದೆ.

1. ಗಣಿತೀಯ ಪ್ರತಿರೂಪಗಳು

ಮೋಟಾರು ಕಾರುಗಳ ಓಟದ ಒಂದು ಸ್ಪರ್ಧೆ. ಒಬ್ಬ ಸ್ಪರ್ಧಿ ತನ್ನ ಕಾರಿನ ಓಟವನ್ನು ನಿಮಿಷಕ್ಕೆ u ಮೀ. ವೇಗದಲ್ಲಿ ಆರಂಭಿಸಿ, ವೇಗೋತ್ಕರ್ಷ a ಮೀ./sec.^{2} ದೊಂದಿಗೆ ಮುಂದುವರಿಸುತ್ತಾನೆಂದು ಭಾವಿಸಿ. ಆಗ t ನಿಮಿಷಗಳಲ್ಲಿ ಅವನು ಕ್ರಮಿಸಿದ ದೂರ

$$s = ut + \frac{1}{2} at^2.$$

u, a ಮತ್ತು t ಮೌಲ್ಯಗಳು ತಿಳಿದಿರುವಾಗ s ಮೌಲ್ಯವನ್ನು ಈ ಪ್ರತಿರೂಪ ನಿಖರವಾಗಿ ತಿಳಿಸುತ್ತದೆ. ಇದೇ ವಿಚಾರವನ್ನು ತುಸು ಬೇರೆ ರೀತಿಯಲ್ಲಿ ಹೇಳಬಹುದು : u, a, t ಮೌಲ್ಯಗಳನ್ನು ಸ್ಥಿರವಾಗಿರಿಸಿ, ಮೇಲಿನ ಪ್ರಯೋಗವನ್ನು ಹಲವು ಬಾರಿ ನಡೆಸಿದರೆ ಪ್ರತಿಸಲವೂ sನ ಅದೇ ಮೌಲ್ಯ ದೊರಕುವುದು. ಕಂಡುಬರುವ ಯಾವುದೇ ವ್ಯತ್ಯಾಸ ಹೆಚ್ಚಿನ ಉದ್ದೇಶಗಳಿಗೆ ನಿರ್ಲಕ್ಷಿಸಲ್ಪಡುವಷ್ಟು ಚಿಕ್ಕದಾಗಿರುವುದು. ಅಂದರೆ ಪ್ರಯೋಗದ ಪರಿಸರ ಮತ್ತು ನಿಬಂಧನೆಗಳು ಫಲಿತವನ್ನು ನಿರ್ಧರಿಸುತ್ತವೆ ಎಂಬುದು ಈ ಪ್ರತಿರೂಪದ ಹಿನ್ನೆಲೆಯಲ್ಲಿದೆ. ಆದ್ದರಿಂದ ಇದೊಂದು ನಿಶ್ಚಯಾತ್ಮಕ ಪ್ರತಿರೂಪ. ಇಂಥ ಪ್ರತಿರೂಪ ಅನ್ವಯಿಸುವ ಅನೇಕ ನಿದರ್ಶನಗಳು ಪ್ರಕೃತಿಯಲ್ಲಿವೆ : ಗುರುತ್ವಾಕರ್ಷಣದ ನಿಯಮಗಳು, ಗ್ರಹಗಳ ಚಲನೆ

ಯನ್ನು ಕುರಿತು ಕೆಪ್ಲರನ ನಿಯಮಗಳು ಅಂಥವು. ಆದರೆ, ಅಗತ್ಯವಿರುವ ವಿಶ್ಲೇಷಣೆ ನಡೆಸಲು ಬೇರೆಯೇ ತರಹದ ಗಣಿತೀಯ ಪ್ರತಿರೂಪ ಬೇಕಾಗುವ ಹಲವಾರು ವಿದ್ಯಮಾನಗಳೂ ಪ್ರಕೃತಿಯಲ್ಲಿವೆ. ವಿಕಿರಣಪಟುವಸ್ತು ನಿರ್ದಿಷ್ಟ ಕಾಲಾವಧಿಯಲ್ಲಿ ಹೊರಸೂಸುವ a – ಕಣಗಳ ಸಂಖ್ಯೆಯನ್ನು ಎಣಿಕೆ ಉಪಕರಣದ ಸಹಾಯದಿಂದ ತಿಳಿಯಬಹುದು. ಆದರೆ ಈ ಸಂಖ್ಯೆಯನ್ನು ಮೂಲ ವಸ್ತುವಿನ ತೂಕ, ಆಕಾರ, ರಾಸಾಯನಿಕ ರಚನೆ ಇತ್ಯಾದಿ ಸಂಬದ್ಧ ಲಕ್ಷಣಗಳ ಉತ್ಪನ್ನವಾಗಿ ನಿರೂಪಿಸುವ ಯಾವ ನಿಶ್ಚಯಾತ್ಮಕ ಪ್ರತಿರೂಪವೂ ಇಲ್ಲ. ಆದ್ದರಿಂದ ಈ ಸಂಖ್ಯೆಯನ್ನು ನಿಖರವಾಗಿ ಮುಂದಾಗಿ ಹೇಳಲು ಬರದು. ಅನಿಶ್ಚಯಾತ್ಮಕ ಅಥವಾ ಸಂಭವತಾ ಪ್ರತಿರೂಪದ ಬಳಕೆ ಇಲ್ಲಿ ಅನಿವಾರ್ಯ. ಪ್ರಯೋಗದ ಪರಿಸರ ಮತ್ತು ನಿಬಂಧನೆಗಳು ಫಲಿತವನ್ನು ನಿಖರವಾಗಿ ಮುಂದಾಗಿ ಇಲ್ಲಿ ತಿಳಿಸಲಾರವು ; ಅದರ ಸಂಭವತಾ ವರ್ತನೆಯನ್ನು ಮಾತ್ರ ತಿಳಿಸಬಲ್ಲವು. ಇಂಥ ಪ್ರಯೋಗಕ್ಕೆ ಯಾದೃಚ್ಛಿಕ ಪ್ರಯೋಗವೆಂದು ಹೆಸರು.

ವೀಕ್ಷಿಸಬಹುದಾದ ಯಾವುದೇ ವಿದ್ಯಮಾನವನ್ನು ಅಧ್ಯಯಿಸಲು ಗಣಿತವನ್ನು ಬಳಸುವಾಗಲೆಲ್ಲ ಸೂಕ್ತ ಗಣಿತೀಯ (ನಿಶ್ಚಯಾತ್ಮಕ ಅಥವಾ ಅನಿಶ್ಚಯಾತ್ಮಕ) ಪ್ರತಿರೂಪದ ರಚನೆಯಿಂದಲೇ ನಿಜವಾಗಿ ಆರಂಭಿಸಬೇಕು. ಈ ಪ್ರತಿರೂಪ ವಸ್ತು ವಿಚಾರಗಳನ್ನು ಸರಳೀಕರಿಸುವುದು ಮತ್ತು ಕೆಲವೊಂದು ವಿವರಗಳನ್ನು ನಿರ್ಲಕ್ಷಿಸುವುದು ಅವಶ್ಯ. ಅಧ್ಯಯಿಸಲಾಗುವ ವಿದ್ಯಮಾನದ ಅಭಿವೃದ್ಧಿಯಲ್ಲಿ ಈ ವಿವರಗಳು ನಿಜವಾಗಿ ಅಮುಖ್ಯವಾಗಿರುವುದರ ಮೇಲೆ ಪ್ರತಿರೂಪದ ಸಫಲತೆ ಅವಲಂಬಿಸಿದೆ. ಇಲ್ಲಿರುವ ಗಣಿತೀಯ ಸಮಸ್ಯೆಯ ಪರಿಹಾರ ಸರಿಯಾಗಿರುವಾಗಲೂ ಅದು ಹಿನ್ನೆಲೆಯ ಅಭಿಗೃಹೀತಗಳು ಸೂಕ್ತವಲ್ಲದ್ದರಿಂದ ದೊರೆತ ಅಂಶಗಳೊಡನೆ ತೀವ್ರವಾಗಿ ಘರ್ಷಿಸಬಹುದು. ವೀಕ್ಷಿತ ದತ್ತಾಂಶ ಸ್ವಲ್ಪಮಟ್ಟಿಗೆ ಶೇಖರವಾಗುವ ತನಕ ಯಾವುದೇ ಗಣಿತೀಯ ಪ್ರತಿರೂಪ ತೃಪ್ತಿಕರವೇ, ಅಲ್ಲವೇ ಎಂಬುದನ್ನು ಖಚಿತವಾಗಿ ತಿಳಿಯುವುದು ಕಷ್ಟಸಾಧ್ಯ. ಪ್ರತಿರೂಪದ ಸಿಂಧುತ್ವವನ್ನು ಪರೀಕ್ಷಿಸಲು ಅದರ ಹಲವು ಫಲಿತಗಳನ್ನು ಮೊದಲೇ ತೀರ್ಮಾನಿಸಿ ಅವನ್ನು ಮುಂದೆ ದೊರೆಯುವ ವೀಕ್ಷಣೆಗಳೊಂದಿಗೆ ಹೋಲಿಸಬೇಕು.

2. ಯದೃಚ್ಛಿಕ ಪ್ರಯೋಗದ ನಿದರ್ಶನಗಳು

E_1 : ನಾಣ್ಯವನ್ನು ಚಿಮ್ಮಿ ಯಾವ ಮುಖ ಮೇಲೆ ಕಾಣಿಸಿಕೊಳ್ಳುವುದೆಂದು ನೋಡುವುದು.

E_2 : ಒಂದು ಯಂತ್ರ 24 ಗಂಟೆಗಳ ಅವಧಿಯಲ್ಲಿ ಉತ್ಪಾದಿಸಿದ ವಸ್ತು ರಾಶಿಯಲ್ಲಿ ನ್ಯೂನತೆಯುಕ್ತ ವಸ್ತುಗಳ ಸಂಖ್ಯೆಯನ್ನು ತಿಳಿಯುವುದು.

E_3 : ಹತ್ತು ನ್ಯೂನತೆಮುಕ್ತ ವಸ್ತುಗಳು ದೊರೆಯುವವರೆಗೆ ಉತ್ಪಾದನೆ ಮುಂದುವರಿಸಿ ಉತ್ಪಾದಿಸಿದ ವಸ್ತುಗಳ ಒಟ್ಟು ಸಂಖ್ಯೆಯನ್ನು ಅರಿಯುವುದು.

E_4 : ಹುಡುಗನೊಬ್ಬನ ಎತ್ತರವನ್ನು ಅಳೆಯುವುದು.

E_5 : ವಿದ್ಯುದ್ದೀಪವನ್ನು ಸತತವಾಗಿ ಉರಿಸಿ ಅದರ ಬಾಳಿಕೆಯನ್ನು ಗಂಟೆಗಳಲ್ಲಿ ಅಳೆಯುವುದು.

E_6 : ಹೊಸತಾಗಿ ಹಾರಿಸಿದ ಕ್ಷಿಪಣಿಯೊಂದರ (ನೆಲಮಟ್ಟದಿಂದ) ಎತ್ತರವನ್ನು n ಬೇರೆಬೇರೆ ಕಾಲಗಳಲ್ಲಿ ಗುರುತಿಸಿಕೊಳ್ಳುವುದು.

ಯಾದೃಚ್ಛಿಕ ಪ್ರಯೋಗ ಮೂರು ಲಕ್ಷಣಗಳನ್ನು ಹೊಂದಿರುತ್ತದೆ :

(i) ತಾತ್ವಿಕವಾಗಿ ಬದಲಾಗದ ಸನ್ನಿವೇಶದಲ್ಲೇ ಆ ಪ್ರಯೋಗವನ್ನು ಎಷ್ಟು ಬಾರಿ ಬೇಕಾದರೂ ಆವರ್ತಿಸಬಹುದು.

(ii) ಯಾವುದೇ ಕುರಿತಾದ ಫಲಿತವೇನಾಗುವುದೆಂದು ಮುಂದಾಗಿ ಹೇಳಲು ಸಾರ್ವತ್ರಿಕವಾಗಿ ಬರದಿದ್ದರೂ, ಪ್ರಯೋಗದ ಸಾಧ್ಯವುಳ್ಳ ಎಲ್ಲ ಫಲಿತಗಳ ಯಾದಿಯನ್ನು ತಯಾರಿಸಲು ಬರುವುದು.

(iii) ಪ್ರಯೋಗವನ್ನು ಮತ್ತೆಮತ್ತೆ ನಡೆಸಿದಾಗ ವೈಯಕ್ತಿಕ ಫಲಿತಗಳು ನಿಯಮಹೀನವಾಗಿ ಸಂಭವಿಸುವಂತೆ ತೋರುತ್ತವೆ. ಆದರೆ ಪ್ರಯೋಗದ ಆವರ್ತನೆಗಳ ಸಂಖ್ಯೆ ಸಾಕಷ್ಟು ದೊಡ್ಡದಾಗುವಾಗ ಒಂದು ಸ್ಪಷ್ಟ ನಿಯಮಿತತೆ ಕಾಣಿಸಿಕೊಳ್ಳುತ್ತದೆ. ಪ್ರಯೋಗದ ವಿಶ್ಲೇಷಣೆಗೆ ನಿಖರ ಗಣಿತೀಯ ಪ್ರತಿರೂಪದ ರಚನೆ ಸಾಧ್ಯವಾಗುವಂತೆ ಮಾಡುವುದು ಈ ನಿಯಮಿತತೆಯೇ

ಮೇಲಿನ ಲಕ್ಷಣಗಳನ್ನು E_1, E_2, E_3, E_4, E_5, E_6 ಪಡೆದಿವೆಯೆಂಬುದನ್ನು ಗಮನಿಸಿ. ಕೊನೆಯ ಲಕ್ಷಣವನ್ನು ಪ್ರಯೋಗಮೂಲಕ ಮಾತ್ರ ತಾಳೆನೋಡಲು ಸಾಧ್ಯವೆಂಬುದನ್ನೂ ಗಮನಿಸಿ. ಯಾವುದೇ ಪ್ರಯೋಗವನ್ನು ವಿವರಿಸುವಾಗ ಅದನ್ನು ನಡೆಸುವ ವಿಧಾನ ಮತ್ತು ಅಲ್ಲಿ ನಮಗೆ ಆಸಕ್ತಿಯುಳ್ಳ ಚರ ಇವೆರಡನ್ನೂ ಸ್ಪಷ್ಟೀಕರಿಸಬೇಕು.

3. ಪ್ರತಿಚಯವ್ಯೋಮ

ಯಾವುದೇ ಯಾದೃಚ್ಛಿಕಪ್ರಯೋಗದ ಸಾಧ್ಯವುಳ್ಳ ಎಲ್ಲ ಫಲಿತಗಳ ಸಮಷ್ಟಿಗೆ ಆ ಪ್ರಯೋಗದ ಪ್ರತಿಚಯವ್ಯೋಮವೆಂದು ಹೆಸರು. ಇದನ್ನು S ಎಂದು ಸೂಚಿಸೋಣ. $E_1, E_2, E_3, E_4, E_5, E_6$ ಗಳ ಪ್ರತಿಚಯವ್ಯೋಮಗಳು ಅನುಕ್ರಮವಾಗಿ

S_1 : $\{H, T\}$ H : ತಲೆ (head), T : ಬಾಲ (tail)

S_2 : $\{0, 1, 2, \ldots, M\}$; ಇಲ್ಲಿ M, 24 ಗಂಟೆಗಳ ಅವಧಿಯಲ್ಲಿ ಉತ್ಪಾದಿಸಬಹುದಾದ ವಸ್ತುಗಳ ಗರಿಷ್ಠ ಸಂಖ್ಯೆ

S_3 : $\{10, 11, 12 \ldots\}$.

S_4 : $\{x \mid a \leqslant x \leqslant b\}$; ಯಾವುದೇ ಹುಡುಗನ ಎತ್ತರ x, ಕನಿಷ್ಠ ಎತ್ತರ a, ಗರಿಷ್ಠ ಎತ್ತರ b ಎಂದು ಭಾವಿಸಿ.

S_5 : $\{t \mid t \geqslant 0\}$ ವಿದ್ಯುದ್ದೀಪದ ಬಾಳಿಕೆ t ಗಂಟೆಗಳು.

S_6 : $\{h_1, h_2, \ldots, h_n \mid hi_i \geqslant 0, i = 1, 2, \ldots, n\}$.

ಪ್ರತಿಚಯವ್ಯೋಮದಲ್ಲಿರುವ ಫಲಿತಗಳ ಒಟ್ಟು ಸಂಖ್ಯೆಯ ಬಗ್ಗೆ ಚರ್ಚಿಸುವುದು ಮುಂದಿನ ಮುಖ್ಯ ವಿಚಾರ. ಇಲ್ಲಿ ಮೂರು ಸಾಧ್ಯತೆಗಳಿವೆ:

(i) S_1 ರಲ್ಲಿ 2 ಅಂಶಗಳಿವೆ; S_2 ರಲ್ಲಿ $(M+1)$ ಇವೆ. ಇವು ಸಾಂತ ಪ್ರತಿಚಯವ್ಯೋಮಗಳು.

(ii) S_3 ರಲ್ಲಿರುವ ಅಂಶಗಳನ್ನು ಒಂದು, ಎರಡು, ಮೂರು ಎಂದು ಎಣಿಸುತ್ತ ಹೋಗಬಹುದಾದರೂ ಈ ಎಣಿಕೆಗೆ ಕೊನೆಯಿಲ್ಲ. ಇದೊಂದು ಎಣಿಸಬಹುದಾದ ಅನಂತವ್ಯೋಮ.

(iii) S_4, S_5, S_6 ರಲ್ಲಿರುವ ಅಂಶಗಳ ಸಂಖ್ಯೆ ಎಣಿಸುತ್ತ ಹೋಗಲಾಗದ ಅನಂತ. ಇದು ಎಣಿಸಲಾಗದ ಅನಂತವ್ಯೋಮ.

4. ಘಟನೆಗಳು ಮತ್ತು ಅವುಗಳ ವಿಕಲ್ಪ

ಘಟನೆಯ ಪರಿಕಲ್ಪನೆ ಇನ್ನೊಂದು ಮೂಲ ವಿಚಾರ. ಪ್ರಯೋಗಕ್ಕೆ ಸಂಬಂಧಿಸಿದ ಪ್ರತಿಚಯವ್ಯೋಮವನ್ನು ಕುರಿತು ಸಾಧ್ಯವುಳ್ಳ ಫಲಿತಗಳ ಯಾವುದೇ

ಗಣಕ್ಕೆ ಘಟನೆಯೆಂದು ಹೆಸರು. ಅಂದರೆ ಅದು ಪ್ರತಿಚಯವ್ಯೋಮದ ಉಪಗಣ ಕೆಳಗಿನ ನಿದರ್ಶನಗಳು ವಿಚಾರವನ್ನು ವಿಶದಗೊಳಿಸುತ್ತವೆ:
(ಪ್ರಯೋಗ E_iಗೆ ಸಂಬಂಧಿಸಿದ ಘಟನೆ A_i).

A_1 . 'ತಲೆ' ದೊರೆಯುವುದು. $A_1 = \{H\}$.

A_2 : ನ್ಯೂನತೆಯುಕ್ತ ವಸ್ತುಗಳ ಸಂಖ್ಯೆ ಸೊನ್ನೆ $A_2 = \{0\}$.

A_3 : ಉತ್ಪಾದಿಸಿದ ವಸ್ತುಗಳ ಒಟ್ಟುಸಂಖ್ಯೆ 20 ಕ್ಕಿಂತ ಕಡಿಮೆ.
$A_3 = \{10, 11, \ldots, 19\}$.

A_4 : ಹುಡುಗನ ಎತ್ತರ 150 ಸೆ.ಮಿ. ಮತ್ತು 155 ಸೆ.ಮಿ.ಗಳ ಒಳಗಿದೆ. $A_4 = \{ 150 \leqslant x \leqslant 155 \}$. ಗಣಪರಿಕ್ರಿಯೆಗಳ ಬಳಕೆಯಿಂದ ಹೊಸ ಘಟನೆಗಳನ್ನು ರಚಿಸಬಹುದು :

(i) A ಮತ್ತು B ಯಾವುದೇ ಎರಡು ಘಟನೆಗಳಾಗಿರುವಾಗ, ಅವುಗಳ ಪೈಕಿ ಕನಿಷ್ಠಪಕ್ಷ ಒಂದು ಘಟನೆ ನಡೆದಾಗ ಮತ್ತು ಆಗ ಮಾತ್ರ ನಡೆಯುವ ಘಟನೆ $A \cup B$.

(ii) A ಮತ್ತು B ಯಾವುದೇ ಎರಡು ಘಟನೆಗಳಾಗಿರುವಾಗ, ಅವೆರಡೂ ನಡೆದಾಗ ಮತ್ತು ಆಗ ಮಾತ್ರ ನಡೆಯುವ ಘಟನೆ $A \cap B$.

(iii) A ಒಂದು ಘಟನೆಯಾಗಿರುವಾಗ, ಅದು ನಡೆಯದಿರುವಾಗ ಮತ್ತು ಆಗ ಮಾತ್ರ ನಡೆಯುವ ಘಟನೆ $\overline{A}$. ಇದು S ನ್ನು ಕುರಿತು A ಯ ಪೂರಕಘಟನೆ.

(iv) $A_1, \ldots, A_n$ ಘಟನೆಗಳ ಯಾವುದೇ ಸಾಂತವೃಂದವಾಗಿರುವಾಗ, ಅವರಲ್ಲಿರುವ ಘಟನೆಗಳ ಪೈಕಿ ಕನಿಷ್ಟಪಕ್ಷ ಒಂದು ಘಟನೆ ನಡೆದಾಗ ಮತ್ತು ಆಗ ಮಾತ್ರ ನಡೆಯುವ ಘಟನೆ $\bigcup_{i=1}^{n} A_i$.

(v) $A_1, \ldots, A_n$ ಘಟನೆಗಳ ಯಾವುದೇ ಸಾಂತವೃಂದವಾಗಿರುವಾಗ, ಅವರಲ್ಲಿರುವ ಎಲ್ಲ ಘಟನೆಗಳು ನಡೆದಾಗ ಮತ್ತು ಆಗ ಮಾತ್ರ ನಡೆಯುವ ಘಟನೆ

$$\bigcap_{i=1}^{n} A_i$$

(vi) $A_1, \ldots, A_n, \ldots$ ಘಟನೆಗಳ ಯಾವುದೇ ಎಣಿಸಬಹುದಾದ ಅನಂತ ವೃಂದವಾಗಿರುವಾಗ, ಅವರಲ್ಲಿರುವ ಘಟನೆಗಳ ಪೈಕಿ ಕನಿಷ್ಟಪಕ್ಷ ಒಂದು ಘಟನೆ

ನಡೆದಾಗ ಮತ್ತು ಆಗ ಮಾತ್ರ ನಡೆಯುವ ಘಟನೆ $\bigcup_{i=1}^{\infty} A_i$.

(vii) $A_1, \ldots, A_n, \ldots$ ಘಟನೆಗಳ ಯಾವುದೇ ಎಣಿಸಬಹುದಾದ ಅನಂತ ವೃಂದವಾಗಿರುವಾಗ, ಅದರಲ್ಲಿರುವ ಎಲ್ಲ ಘಟನೆಗಳು ನಡೆದಾಗ ಮತ್ತು ಆಗ ಮಾತ್ರ ನಡೆಯುವ ಘಟನೆ $\bigcap_{i=1}^{\infty} A_i$.

A ಮತ್ತು B ಜೊತೆಜೊತೆಗೆ ನಡೆಯಲಾರದಂಥ ಘಟನೆಗಳಾಗಿರುವಾಗ ಅವು ಪರಸ್ಪರವರ್ಜ್ಯ ಘಟನೆಗಳು. ಇದನ್ನು $A \cap B = \phi$ ಎಂದು ಸೂಚಿಸುತ್ತೇವೆ. ಅಂದರೆ A, B ಗಳ ಛೇದನ ಶೂನ್ಯಗಣ. ವಿದ್ಯುದ್ದೀಪದ ಬಳಕೆಗೆ ಸಂಬಂಧಿಸಿದ ಪ್ರಯೋಗದಲ್ಲಿ ಪ್ರತಿಚಯವ್ಯೋಮ $S_5 = \{ t \mid t \geq 0 \}$. ಘಟನೆ A, B, C ಗಳನ್ನು $A = \{ t \mid 0 \leq t < 100 \}$, $B = \{ t \mid 50 \leq t \leq 200 \}$ ಮತ್ತು $C = \{ t \mid t > 150 \}$ ಎಂದು ವ್ಯಾಖ್ಯಿಸಿದರೆ ಆಗ $A \cup B = \{ t \mid 0 \leq t \leq 200 \}$; $A \cap B = \{ t \mid 50 \leq t < 100 \}$. $\bar{A} = \{ t \mid t \geq 100 \}$ ಮತ್ತು $A \cap C = \phi$. ದೊರೆಯುವ ಫಲಿತ ಯಾವುದೆಂದು ಮುಂದಾಗಿ ಹೇಳಲಾಗದಿರುವುದು ಮೇಲೆ ವಿವರಿಸಿದ ಪ್ರಯೋಗಗಳ ಮೂಲಲಕ್ಷಣ. ಅಂದರೆ A ಒಂದು ಸಂಬಂಧಿಸಿದ ಘಟನೆಯಾಗಿರುವಾಗ ಅದು ನಡೆಯುವುದೇ, ಇಲ್ಲವೇ ಎಂದು ಖಚಿತವಾಗಿ ಭವಿಷ್ಯನುಡಿಯಲು ಸಾಧ್ಯವಿಲ್ಲ. A ನಡೆಯುವ ಪ್ರಾಯಿಕತೆಯನ್ನು ಯಾವುದೋ ಅರ್ಥದಲ್ಲಿ ಅಳೆಯುವ ಸಂಖ್ಯೆಯೊಂದನ್ನು ರಚಿಸಿ ಅದನ್ನು A ಯೊಡನೆ ಜೊತೆಗೂಡಿಸಲು ತವಕಿಸುವುದು ಸಹಜ. ಇದು ನಮ್ಮನ್ನು ಸಂಭವತೆ ಸಿದ್ಧಾಂತದೆಡೆಗೆ ಒಯ್ಯುತ್ತದೆ.

5. ಸಾಪೇಕ್ಷ ಆವರ್ತಾಂಕ

ಯಾದೃಚ್ಛಿತ ಪ್ರಯೋಗವೊಂದನ್ನು E ಮತ್ತು ಅದರ ಪ್ರತಿಚಯವ್ಯೋಮವನ್ನು S ಎಂದು ಸೂಚಿಸೋಣ. E ಯನ್ನು n ಬಾರಿ ಆವರ್ತಿಸಿದಾಗ S ಗೆ ಸಂಬಂಧಿಸಿದ ಘಟನೆ A, B ಕ್ರಮವಾಗಿ n_A, n_B ಬಾರಿ ನಡೆದವೆಂದು ಭಾವಿಸಿ. $f_A = \frac{n_A}{n}$ ಗೆ ಘಟನೆ A ಯ ಸಾಪೇಕ್ಷ ಆವರ್ತಾಂಕವೆಂದು ಹೆಸರು. ಅದಕ್ಕೆ ಐದು ಮುಖ್ಯ ಸ್ವಭಾವಗಳಿವೆ :

(i) $0 \leq f_A \leq 1$

(ii) ಪ್ರಯೋಗದ ಪ್ರತಿ ಆವರ್ತನೆಯಲ್ಲೂ **A** ನಡೆದರೆ ಮತ್ತು ಆಗ ಮಾತ್ರ $f_A = 1$.

(iii) ಪ್ರಯೋಗದ ಆವರ್ತನೆಗಳಲ್ಲಿ A ಒಮ್ಮೆಯೂ ನಡೆಯದಿದ್ದರೆ ಮತ್ತು ಆಗ ಮಾತ್ರ $f_A = 0$.

(iv) A, B ಪರಸ್ಪರ ವರ್ಜ್ಯಘಟನೆಗಳಾಗಿರುವಾಗ ಘಟನೆ $A \cup B$ ಯ ಸಾಪೇಕ್ಷ ಆವರ್ತಾಂಕ $f_{A \cup B} = f_A + f_B$.

(v) n ನ ಉತ್ಪನ್ನ f_A ಎಂದು ತಿಳಿದರೆ ಅದು, n ಅನಂತವನ್ನು ಸಮೀಪಿಸಿದಂತೆ,ಘಟನೆ A ಯ ಸಂಭವತೆಗೆ ಒಂದು ದೃಷ್ಟಿಯಲ್ಲಿ ಅಭಿಸರಿಸುತ್ತದೆ.

ಅನಭಿನತ ನಾಣ್ಯವನ್ನು ಹಲವು ಬಾರಿ ಮೇಲೆಸೆದಾಗ H, T ಗಳ ದೊರೆತ ಸರಣಿ ಈ ರೀತಿ ಇದೆಯೆಂದು ಭಾವಿಸಿ :

H H T H T T T H T T H .... ಈ ಕೈಎಸಕಗಳೊಂದಿಗೆ H ನ ಸಾಪೇಕ್ಷ ಆವರ್ತಾಂಕ $1, 1, \frac{2}{3}, \frac{3}{4}, \frac{3}{5}, \frac{3}{6}, \frac{3}{7}, \frac{4}{8}, \frac{4}{9}, \frac{4}{10}, \frac{5}{11}$ ಇತ್ಯಾದಿಯಾಗುತ್ತದೆ. ಮೊದಮೊದಲು ಇದು ಗಮನಾರ್ಹ ಏರಿಳಿತವನ್ನು ತೋರ್ಪಡಿಸಿದರೂ, ಬರ ಬರುತ್ತ ಕೈಎಸಕಗಳ ಸಂಖ್ಯೆ ಏರುತ್ತ ಹೋದಂತೆ ಈ ಸಾಪೇಕ್ಷ ಆವರ್ತಾಂಕ $\frac{1}{2}$ ದ ನೆರೆಯಲ್ಲಿ ಸ್ಥಿರಗೊಳ್ಳುವುದೆಂಬುದು ಸ್ವಯಂ ಸ್ಪಷ್ಟವಾಗುವ ವಿಚಾರ. ಸಾರ್ವತ್ರಿಕವಾಗಿ ಯಾವುದೇ ಪ್ರಯೋಗ ξ ಯ K_1, $(K_1 + K_2)$ ಇತ್ಯಾದಿಯಾಗಿ $(K_1 + K_2 + \dots + K_r)$ ಅನುಕ್ರಮ ಆವರ್ತನೆಗಳಲ್ಲಿ f_A ಯ ನಡತೆಯನ್ನು ಗಮನಿಸಬಹುದು. $K_1 + K_3 + \dots + K_r = n_r$ ಎಂದು ಸೂಚಿಸಿ. ξ ಯ n ಅವರ್ತನೆಗಳಲ್ಲಿ ಘಟನೆ A ಸಂಭವಿಸಿದ ಆವರ್ತನೆಗಳ ಸಂಖ್ಯೆ n_r ಆದರೆ ಆಗ $f_A = \frac{n_r}{n}$. r ನ ಮೌಲ್ಯ ಏರುತ್ತ ಹೋದಂತೆ ತನ್ನ ಹೆಚ್ಚಿನ ಏರಿಳಿತವನ್ನು ಕಳೆದುಕೊಂಡು f_A ಒಂದು ಖಚಿತಮೌಲ್ಯದ ಬಳಿ ಸ್ಥಿರಗೊಳ್ಳುತ್ತದೆ. ಈ ಲಕ್ಷಣಕ್ಕೆ ಸಂಖ್ಯಾಕಲನೀಯ ನಿಯಮಿತತೆ ಎಂದು ಹೆಸರು. ಇದು ಗಣಿತೀಯ ನಿಯಮವಲ್ಲ, ಕೇವಲ ಪ್ರಾಯೋಗಿಕಸತ್ಯ. ಅನಿಶ್ಚಯಾತ್ಮಕ ಪ್ರತಿರೂಪದ ಮೂಲಕ ಗಣಿತೀಯವಾಗಿ ಅಧ್ಯಯಿಸಲು ಪ್ರಯೋಗ ಅರ್ಹವಾಗಿರಬೇಕಾದರೆ ಅದನ್ನು ಮತ್ತೆಮತ್ತೆ ನಡೆಸಿದಾಗ ಅದು ಸಂಖ್ಯಾಕಲನೀಯ ನಿಯಮಿತತೆಯನ್ನು ಪ್ರದರ್ಶಿಸಬೇಕು.

6. ಸಂಭವತೆಯ ಮೂಲವಿಚಾರಗಳು

ಪ್ರಯೋಗ ξ ನಡೆಸಿದಾಗ ಘಟನೆ A ಯ ಪ್ರಾಯಿಕತೆಯನ್ನು ಅಳೆಯುವ ಸಂಖ್ಯೆಯನ್ನು ರಚಿಸುವುದು ನಮ್ಮ ಗುರಿ. ಅದರ ಸಾಧನೆಗೆ ಒಂದು ಮಾರ್ಗವಿದು ; ಪ್ರಯೋಗವನ್ನು ನೂರಾರು ಸಾರಿ ಆವರ್ತಿಸಿ, ಸಾಪೇಕ್ಷ ಆವರ್ತಾಂಕ f_A ಯನ್ನು ಗಣಿಸಿ ಅದನ್ನು ಬಳಸುವುದು. f_A ಯ ಸ್ವಭಾವಗಳಿಂದಾಗಿ ಅದು A ಯ ಪ್ರಾಯಿಕತೆಯ ಬಗ್ಗೆ ಖಚಿತ ಸೂಚನೆ ಕೊಡುತ್ತದೆಯೆಂಬುದು ಸ್ಪಷ್ಟ. ಅದೂ ಅಲ್ಲದೆ

ಪ್ರಯೋಗವನ್ನು ಹೆಚ್ಚು ಹೆಚ್ಚು ಸಾರಿ ಆವರ್ತಿಸಿದಾಗ f_A ನಿರ್ದಿಷ್ಟ ಮೌಲ್ಯ p ಯ ಬಳಿ ಸ್ಥಿರಗೊಳ್ಳುತ್ತದೆ. ಆದರೆ ಈ ಮಾರ್ಗವನ್ನು ಅನುಸರಿಸಲು ಎರಡು ಗಂಭೀರ ಅಡಚಣೆಗಳಿವೆ. (i) p ಯನ್ನು ರಚಿಸುವ ಮೊದಲು n ಎಷ್ಟು ದೊಡ್ಡದಿರಬೇಕೆಂಬುದು ಸ್ಪಷ್ಟವಿಲ್ಲ. 500 ? 1000 ? 10,000 ? (ii) ಪ್ರಯೋಗ ಯಾವುದೆಂದು ನಿರ್ಧಾರವಾಗಿ, ಘಟನೆ A ನಿಗದಿಗೊಂಡ ಬಳಿಕ ಪ್ರಯೋಗ ನಡೆಸುವ ವ್ಯಕ್ತಿ ಅಥವಾ ಅವನಿಗೆ ಅದೃಷ್ಟವಶಾತ್ ದೊರಕಬಹುದಾದ ಫಲಿತಗಳ ಮೇಲೆ ನಾವು ಅರಸುತ್ತಿರುವ ಸಂಖ್ಯೆ ಅವಲಂಬಿಸಿರಬಾರದು. ಉದಾಹರಣೆಗೆ, ಪೂರ್ಣವಾಗಿ ಅನಭಿನತ ನಾಣ್ಯದ ಹತ್ತು ಚಿಮ್ಮುವಿಕೆಗಳಲ್ಲಿ 9, 4 ಮತ್ತು 1 T ಸಿಗುವುದೂ ಸಾಧ್ಯ. ಆಗ H ನ ಸಾಪೇಕ್ಷ ಆವರ್ತಾಂಕ 9/10. ಆದರೂ ಮುಂದಿನ 10 ಚಿಮ್ಮುವಿಕೆಗಳಲ್ಲಿ H, T ಗಳ ಪ್ರರೂಪ ತಿರುಗುಮುರುಗಾಗಬಹುದು. ಅದೂ ಅಲ್ಲದೆ,. ಪ್ರಯೋಗ ನಡೆಸದೆಯೇ p ಯನ್ನು ಪಡೆಯುವ ಮಾರ್ಗದ ಆವಶ್ಯಕತೆ ಇದೆ ಅದಕ್ಕಾಗಿ ಕೆಳಗಿನಂತೆ ಮುಂದುವರಿಯುತ್ತೇವೆ :

ವ್ಯಾಖ್ಯೆ : 6.1 ಪ್ರಯೋಗ E ಗೆ ಅನುರೂಪವಾದ ಒಂದು ಪ್ರತಿಚಯ ವ್ಯೋಮ S ಆಗಿರಲಿ. ಪ್ರತಿ ಘಟನೆ A ಯೊಡನೆ ಒಂದು ನಿಜ ಸಂಖ್ಯೆ P (A) ಯನ್ನು ಸಂಬಂಧಿಸಿ ಅದನ್ನು A ಯ ಸಂಭವತೆಯೆಂದು ಕರೆಯಲಾಗುತ್ತದೆ. P (A) ಗೆ ನಾಲ್ಕು ಸ್ವಭಾವಗಳಿರಬೇಕು :

(i) $0 \leq P(A) \leq 1$

(ii) $P(S) = 1$

(iii) A, B ಪರಸ್ಪರ ವರ್ಜ್ಯ ಘಟನೆಗಳಾಗಿರುವಾಗ,

$$P(A \cup B) = P(A) + P(B)$$

(iv) $A_1, A_2, \ldots, A_n, \ldots$ ಜೊತೆಜೊತೆಯಾಗಿ ಪರಸ್ಪರ ವರ್ಜ್ಯ ಘಟನೆಗಳಾಗಿರುವಾಗ

$$P\left(\bigcup_{i=1}^{\infty} A_i\right) = P(A_1) + P(A_2) + \ldots + P(A_n) + \ldots$$

ಸಂಭವತೆಯ ಸ್ವಭಾವಗಳ ಈ ಆಯ್ಕೆ ಸಾಪೇಕ್ಷ ಆವರ್ತಾಂಕದ ಅನುರೂಪ ಸ್ವಭಾವಗಳಿಂದ ಪ್ರೇರಿತವೆಂಬುದು ತೀರ ಸ್ಪಷ್ಟ. ನೂರಾರು ಆವರ್ತನೆಗಳ ಮೇಲೆ f_A ಅವಲಂಬಿಸಿರುವಾಗ ಅದು ಮತ್ತು P (A) ಒಂದು ರೀತಿಯಲ್ಲಿ ಒಂದಕ್ಕೊಂದು ಸನ್ನಿಹಿತವಾಗಿರುತ್ತವೆ. A ಯ ಪ್ರಾಯಿಕತೆಯ ಮಾನವಾಗಿ P (A) ಯನ್ನು ಬಳಸಲು ಈ ಸತ್ಯಸಂಗತಿಯೇ ಆಧಾರ.

P (A) ಯನ್ನು ಗಣಿಸುವ ರೀತಿಯನ್ನು ತಿಳಿಸದೆಯೇ ಅದರ ಕೆಲವು ಸಾರ್ವತ್ರಿಕ ಸ್ವಭಾವಗಳ ಮೂದಿ ತಯಾರಿಸಲಾಯಿತು. ಈ ಸ್ವಭಾವಗಳ ನೇರ ಫಲಿತವಾಗಿ, ಅನುಭವವನ್ನು ಬಳಸದೆ ಕೇವಲ ತಾರ್ಕಿಕ ಅನುಮಾನದಿಂದ ಸಂಭವತೆಯ ಹಲವು ಪ್ರಮೇಯಗಳನ್ನು ಪಡೆಯಬಹುದು. ಅವುಗಳಲ್ಲಿ ಐದು ಈ ರೀತಿ ಇವೆ. ಅವುಗಳ ಸಾಧನೆಯನ್ನು ಇಲ್ಲಿ ಕೊಟ್ಟಿಲ್ಲ.

(i) ϕ ಶೂನ್ಯಗಣವಾಗಿರುವಾಗ $P(\phi) = 0$

(ii) A ಯ ಪೂರಕ ಘಟನೆ $\overline{A}$ ಆಗಿರುವಾಗ $P(A) = 1 - P(\overline{A})$. ಆದ್ದರಿಂದ P (A) ಯನ್ನು ಪಡೆಯಲು ಸುಲಭವೆನಿಸಿದರೆ $P(\overline{A})$ ಅನ್ನು ಮೊದಲು ಗಣಿಸಿ ಬಳಿಕ $P(A) = 1 - P(\overline{A})$ ಎಂದು ಗಣಿಸಬಹುದು.

(iii) A, B ಯಾವುದೇ ಎರಡು ಘಟನೆಗಳಾಗಿರುವಾಗ,

$$P(A \cup B) = P(A) + P(B) - P(A \cap B)$$

$A \cap B = \phi$ ಆಗಿರುವಾಗ ಇದು ಸಂಭವತೆಯ ಸ್ವಭಾವ (iii) ಆಗುತ್ತದೆ.

(iv) A, B, C ಯಾವುದೇ ಮೂರು ಘಟನೆಗಳಾಗಿರುವಾಗ

$$P(A \cup B \cup C) = P(A) + P(B) + P(C - P(A \cap B) - P(A \cap C) - P(B \cap C) + P(A \cap B \cap C).$$

ಇದನ್ನು $A_1, A_2, \ldots, A_K$ ಗಳಿಗೆ ವಿಸ್ತರಿಸಿದಾಗ,

$$P(A_1 \cup A_2 \cup \ldots \cup A_K) = \sum_{i=1}^{k} P(Ai) - \sum_{i<j=2}^{k} P(A_i \cap A_j) + \sum_{i<j<r=3}^{k} P(A_i \cap A_j \cap A_r) \ldots\ldots\ldots + (-1)^{k-1} P(A_1 \cap A_2 \cap \ldots\ldots\ldots\ldots \cap A_k)$$

(v) A, B ಯ ಉಪಗಣವಾಗಿರುವಾಗ $P(A) \leq P(B)$.

ಪ್ರಯೋಗದ ಪ್ರತಿಚಯವ್ಯೋಮಕ್ಕೆ ಸಂಬಂಧಿಸಿದ ಪ್ರತಿ ಘಟನೆ A ಯೊಡನೆ ಮೇಲೆ ತಿಳಿಸಿರುವ ಸ್ವಭಾವಗಳುಳ್ಳ P (A) ಮೌಲ್ಯವನ್ನು ಜೊತೆಗೂಡಿಸುತ್ತೇವೆ. ನಿರ್ದಿಷ್ಟ P (A) ಯನ್ನು ಗಣಿಸಲು ಇನ್ನೂ ಹೆಚ್ಚಿನ ಅಭಿಗೃಹೀತಗಳನ್ನು ಬಳಸಿ ಕೊಳ್ಳಬೇಕು. ಅಥವಾ ಪ್ರಯೋಗಜನ್ಯ ಸಾಕ್ಷ್ಯದಿಂದ P (A) ಗೆ ಸನ್ನಿಹಿತ ಮೌಲ್ಯ ಪಡೆಯಲು ಪ್ರಯತ್ನಿಸಬೇಕು. ಮೇಲಿರುವ ಪ್ರಮೇಯಗಳ ಸಿಂಧುತ್ವ P (A) ಯನ್ನು ಯಾವ ರೀತಿ ಪಡೆಯಲಾಯಿತು ಎಂಬುದರ ಮೇಲೆ ಅವಲಂಬಿಸಿಲ್ಲವೆಂಬುದು ಗಮನಿಸಬೇಕಾದ ಮುಖ್ಯ ವಿಚಾರ. ಉದಾಹರಣೆಗೆ P (AUB)=

$P(A)+P(B)$ ಯನ್ನು ಬಳಸಿ $P(A \cup B)$ ಯನ್ನು ಗಣಿಸಲು $P(A)$, $P(B)$ ಮೌಲ್ಯಗಳು ತಿಳಿದಿದ್ದರಾಯಿತು. ಅದನ್ನು ಹೇಗೆ ಗಣಿಸಿದೆವೆಂಬುದು ಅಮುಖ್ಯ. ಪ್ರಯೋಗ ಫಲಿತಗಳಿಂದ $P(A)$ ಯ ಅಂದಾಜಾಗಿ f_A ಯನ್ನು ಗಣಿಸಿ ಬಳಸಿ ಕೊಳ್ಳಬೇಕಾದ ಸನ್ನಿವೇಶಗಳು ಅನೇಕ. ಇಲ್ಲಿ ಸ್ಪಷ್ಟವಾಗಿ ನೆನಪಿನಲ್ಲಿಟ್ಟಿರಬೇಕಾದ ವಿಚಾರವಿದು : $P(A)$, f_A ಗಳು ಒಂದೇ ಅಲ್ಲ. ಎರಡನೆಯದು ಮೊದಲನೆಯದರ ಪ್ರಯೋಗಮೂಲಕ ಪಡೆದ ಸನ್ನಿಹಿತಮೌಲ್ಯ ಮಾತ್ರ. ಈ ಸನ್ನಿಹಿತಮೌಲ್ಯ ತೃಪ್ತಿ ಕರವೇ, ಅಲ್ಲವೇ ಎಂಬುದು ಪ್ರತಿರೂಪದ ತಾರ್ಕಿಕ ಸ್ವರೂಪದ ಮೇಲೆ ಪ್ರಭಾವ ಬೀರಲಾರದು. ಆದ್ದರಿಂದ ಪ್ರತಿರೂಪವನ್ನು ರಚಿಸುವಾಗ ಅದು ಪ್ರತಿನಿಧಿಸುವ ವಿದ್ಯಮಾನವನ್ನು ಗಮನದಲ್ಲಿಟ್ಟುಕೊಳ್ಳಬೇಕಾದರೂ, ಮುಂದೆ ಪ್ರತಿರೂಪದ ಅಧ್ಯ ಯನದಲ್ಲಿ ಅವನ್ನು ವಿದ್ಯಮಾನದಿಂದ (ತಾತ್ಕಾಲಿಕವಾಗಿಯಾದರೂ) ಪ್ರತ್ಯೇಕಿಸಿ ಕೊಳ್ಳಬಹುದು.

7. ಸಾಂತ ಪ್ರತಿಚಯನವ್ಯೋಮಗಳು

S ನಲ್ಲಿರುವ ಗಣಾಂಶಗಳ ಸಂಖ್ಯೆ ಸಾಂತವಾಗಿರುವಾಗ $S = \{a_1, a_2, \ldots a_k\}$ ಎಂದು ಬರೆಯಬಹುದು. ಒಂದೇ ಒಂದು ಫಲಿತವಿರುವ ಘಟನೆಗೆ ಪ್ರಾಥಮಿಕ ಘಟನೆ ಎಂದು ಹೆಸರು. ಅಂದರೆ $A = \{a_i\}$. ಇಂಥ ಸನ್ನಿವೇಶದಲ್ಲಿ $P(A)$ ಯನ್ನು ನಿರ್ಧರಿಸಲು ಈ ರೀತಿ ಮುಂದುವರಿಯುತ್ತೇವೆ : ಪ್ರತಿ ಪ್ರಾಥಮಿಕ $\{a_i\}$ ಗೆ ಕೆಳಗಿರುವ ನಿಬಂಧನೆಗಳಿಗೆ ಸರಿಹೊಂದುವಂತೆ p_i ಮೌಲ್ಯವನ್ನು ಜೊತೆ ಗೂಡಿಸಿ ಅದನ್ನು $\{a_i\}$ ಯ ಸಂಭವತೆಯೆನ್ನುತ್ತೇವೆ :

(i) $p_i \geqslant 0$, $i = 1, 2, \ldots\ldots, k$.

(ii) $p_1 + p_2 + \ldots\ldots\ldots + p_k = 1$.

ಘಟನೆ A, r $(1 \leqslant r \leqslant k)$ ಫಲಿತಗಳನ್ನೊಳಗೊಂಡಿದ್ದು

$A = \{a_{j1}, a_{j2}, \ldots\ldots\ldots\ldots a_{jr}\}$ ಆಗಿದ್ದರೆ, ಆಗ ಸಂಭವತೆಯ ಸ್ವಭಾವ (iv) ನ್ನು ಬಳಸಿಕೊಂಡು

$$P(A) = p_{j1} + p_{j2} + \ldots\ldots\ldots + p_{jr}$$

ಒಟ್ಟು ಇರುವ k ಸೂಚಕಗಳ ಪೈಕಿ ಯಾವುದೋ r ನ್ನು $j_1, j_2, \ldots\ldots\ldots j_r$ ಇಲ್ಲಿ ಪ್ರತಿನಿಧಿಸುತ್ತವೆ. ಹೀಗಾಗಿ, ಘಟನೆ A ಯ ಸಂಭವತೆ ಆ ಘಟನೆಯನ್ನು ರಚಿಸುವ ವೈಯಕ್ತಿಕ ಫಲಿತಗಳ ಸಂಭವತೆಗಳ ಮೊತ್ತಕ್ಕೆ ಸಮ. ಆದರೆ ವೈಯಕ್ತಿಕ p_j ಗಳನ್ನು ಗಣಿಸಲು ಮಾತ್ರ ಫಲಿತಗಳನ್ನು ಕುರಿತು ಸೂಕ್ತ ಅಭಿಗೃಹೀತ ಅಗತ್ಯ. ನಿಬಂಧನೆ (i), (ii) ಗಳಿಗನುಸಾರವಾಗಿ ಪ್ರತಿ ಪ್ರಾಥಮಿಕ

ಘಟನೆಗೂ ಸಂಭವತೆಯನ್ನು ಜೊತೆಗೂಡಿಸುವುದು ಯಾವುದೇ A ಗೆ ಏಕೈಕ P (A) ಯನ್ನು ನಿರ್ಧರಿಸುತ್ತದೆ.

ನಿದರ್ಶನ 7.1 ಮೂರೇ ಮೂರು ಫಲಿತ a_1, a_2, a_3 ಸಾಧ್ಯವಿರುವ ಪ್ರಯೋಗದಲ್ಲಿ a_1 ರ ಸಂಭವತೆ a_2 ರ ಸಂಭವತೆಯ ಇಮ್ಮಡಿ ಮತ್ತು a_2 ರದ್ದು a_3 ರದ್ದರ ಇಮ್ಮಡಿ ಎಂದಿರುವಾಗ

(i) $p_1 = 2p_2$ ಮತ್ತು $p_2 = 2p_3$,

(ii) $p_1 + p_2 + p_3 = 1$.

ಆದ್ದರಿಂದ $4p_3 + 2p_3 + p_3 = 1$ ಅಥವಾ $p_3 = \frac{1}{7}$, $p_2 + \frac{2}{7}$,

$$p_1 = \frac{4}{7}$$

$$A = \{ a_1, a_2 \} \text{ ಆಗಿದ್ದರೆ } P(A) = p_1 + p_2 = \frac{6}{7}$$

8. ಸಮಪ್ರಾಯಿಕ ಫಲಿತಗಳು

ಸಾಂತ ಪ್ರತಿಚಯವ್ಯೋಮದ ಎಲ್ಲ ಫಲಿತಗಳು ಸಮಪ್ರಾಯಿಕವೆಂದು ತಿಳಿದು ಮುಂದುವರಿಯುವ ಸನ್ನಿವೇಶಗಳೇ ಹೆಚ್ಚು. ಈ ಅಭಿಗೃಹೀತ ಯಾವಾಗಲೂ ಸರಿಯೆಂದಲ್ಲ. ಅದು ತೃಪ್ತಿಕರವಿರುವ ಸನ್ನಿವೇಶಗಳಿರುವಂತೆಯೇ ಅವಕ್ಕೆ ವ್ಯತಿರಿಕ್ತ ಸನ್ನಿವೇಶಗಳೂ ಇವೆ. ಯಾವುದಕ್ಕೂ ಜಾಗರೂಕ ಪರಿಶೀಲನೆ ಅಗತ್ಯ. ಇರುವ k ಫಲಿತಗಳು ಸಮಪ್ರಾಯಿಕವಾಗಿರುವಾಗ ಪ್ರತಿ $p_i = \frac{1}{k}$ ಎಂಬುದು ಸ್ಪಷ್ಟ ಆದ್ದರಿಂದ r ಫಲಿತಗಳನ್ನೊಳಗೊಂಡಿರುವ ಘಟನೆ A ಯ $P(A) = \frac{r}{k}$.

P (A) ಯನ್ನು ಪಡೆಯುವ ಈ ವಿಧಾನವನ್ನು ಹೀಗೆ ಬರೆಯಬಹುದು :

$$P(A) = \frac{\text{A ಗೆ } \xi \text{ ಅನುಕೂಲವಾಗಿರುವ ಫಲಿತಗಳ ಸಂಖ್ಯೆ}}{\xi \text{ ಯಲ್ಲಿ ಫಲಿತಗಳ ಒಟ್ಟು ಸಂಖ್ಯೆ}}$$

ಎಲ್ಲ ಫಲಿತಗಳೂ ಸಮಪ್ರಾಯಿಕವೆಂದು ತಿಳಿದುದರಿಂದಾಗಿ P (A) ಈ ಸರಳರೂಪ ತಳೆಯುತ್ತದೆ. P (A)ಯ ವ್ಯಾಖ್ಯೆ ಇದೆಂದು ಎಷ್ಟುಮಾತ್ರಕ್ಕೂ ತಿಳಿಯಲಾಗದು.

ನಿದರ್ಶನ 8.2 ಮುಖಗಳ ಮೇಲೆ ಅನುಕ್ರಮವಾಗಿ 1, 2,......6, ಗುರತುಗಳಿರುವ ಸಮಘನದಾಳವನ್ನು ಒಮ್ಮೆ ಉರುಳಿಸಿದಾಗ ಬೆಸಸಂಖ್ಯೆಯ ದೊರೆಯುವಿಕೆಯನ್ನು A ಸೂಚಿಸಲಿ. ಆದ್ದರಿಂದ A = { 1, 3, 5 }. ಈ ದಾಳದ ಆರು ಮುಖಗಳು ಸಮಪ್ರಾಯಿಕವೆಂದು ತಿಳಿದರೆ ಆಗ

$$P(A) = \frac{3}{6} = \frac{1}{2}$$

ನಿದರ್ಶನ 8.3 ಚೆನ್ನಾಗಿ ಕಲಸಿದ ಇಸ್ಪೀಟು ಎಲೆಗಳ ಕಟ್ಟಿನಿಂದ ಎರಡು ಎಲೆಗಳನ್ನು ಯಾದೃಚ್ಛಿಕವಾಗಿ ಆರಿಸಿದರೆ ಅವುಗಳಲ್ಲಿ ಒಂದು ಕಪ್ಪು ಇನ್ನೊಂದು ಕೆಂಪು ಬಣ್ಣದ್ದಾಗಿರುವ ಸಂಭವತೆ

$$\frac{\binom{26}{1}\binom{26}{1}}{\binom{52}{2}} = \frac{26 \times 26 \times 2}{52 \times 51} = \frac{26}{51}$$

ನಿದರ್ಶನ 8.4 ಅನಭಿನತ ನಾಣ್ಯವನ್ನು ಎರಡು ಬಾರಿ ಚಿಮ್ಮಿ ದೊರೆತ ತಲೆಗಳ ಸಂಖ್ಯೆಯನ್ನು ಎಣಿಸಿದರೆ S = { 0, 1, 2 }

A = { ಒಂದು ತಲೆ ದೊರೆಯುವುದು } ಎಂದಿರಲಿ. S ನಲ್ಲಿರುವ ಮೂರು ಫಲಿತಗಳೂ ಸಮಪ್ರಾಯಿಕವೆಂದು ತಿಳಿದರೆ $P(A) = \frac{1}{3}$. ಆದರೆ ಈ ಗಣನೆ ಸ್ಪಷ್ಟವಾಗಿ ತಪ್ಪು. ಇಲ್ಲಿ S ನಲ್ಲಿರುವ ಫಲಿತಗಳು ಸಮಪ್ರಾಯಿಕವಲ್ಲ. ಬದಲಾಗಿ S′ = { HH, HT, TH, TT } ಎಂದು ಬರೆದು ಈಗ ಫಲಿತಗಳು ಸಮಪ್ರಾಯಿಕವೆಂದು ತಿಳಿದರೆ $P(A) = \frac{2}{4} = \frac{1}{2}$ ಎಂದು ಸರಿಯಾದ ಪರಿಹಾರ ದೊರೆಯುತ್ತದೆ. ಫಲಿತಗಳು ಸಮಪ್ರಾಯಿಕವೆಂದು ತಿಳಿಯುವುದನ್ನು ಜಾಗರೂಕತೆಯಿಂದ ಪರಿಶೀಲಿಸಬೇಕಾದುದರ ಆವಶ್ಯಕತೆ ಮತ್ತು ಪ್ರತಿಚಯಪ್ರಯೋಗದ ಸೂಕ್ತ ನಿರೂಪಣೆಯಿಂದ ಫಲಿತಗಳು ಸಮಪ್ರಾಯಿಕವೆಂದು ತಿಳಿಯಬಹುದಾದ ಅನುಕೂಲ ಸನ್ನಿವೇಶದ ರಚನೆಯ ಸಾಧ್ಯತೆಗಳನ್ನು ಈ ನಿದರ್ಶನ ತಿಳಿಸುತ್ತದೆ.

n ವಸ್ತುಗಳ ಸಮುದಾಯದಿಂದ ಪ್ರತಿ ವಸ್ತುವಿಗೂ ಆಯ್ಕೆಯ ಸಂಭವತೆ ಸಮವಿರುವಂತೆ ಒಂದು ವಸ್ತುವನ್ನು ಆರಿಸುವುದಕ್ಕೆ ಆ ಸಮುದಾಯದಿಂದ ಯಾದೃಚ್ಛಿಕವಾಗಿ ಒಂದು ವಸ್ತುವಿನ ಆಯ್ಕೆಯೆಂದು ಹೆಸರು. ಆಗ ಯಾವುದೇ ವಸ್ತುವಿನ ಆಯ್ಕೆಯ ಸಂಭವತೆ $\frac{1}{n}$ ಎಂಬುದು ಸ್ಪಷ್ಟ. ಅದೇ ರೀತಿ ವಸ್ತುಗಳ ಸಾಧ್ಯವುಳ್ಳ $\binom{n}{2}$ ವಿಕಲ್ಪಗಳಿಗೆ ಸಮಸಂಭವತೆಯಿರುವಂತೆ 2 ವಸ್ತುಗಳನ್ನು ಆರಿಸುವುದಕ್ಕೆ ಆ ಸಮುದಾಯದಿಂದ ಯಾದೃಚ್ಛಿಕವಾಗಿ 2 ವಸ್ತುಗಳ ಆಯ್ಕೆಯೆಂದು ಹೆಸರು. ಆಗ ಯಾವುದೇ ವಿಕಲ್ಪದ ಆಯ್ಕೆಯ ಸಂಭವತೆ

$\frac{1}{\binom{n}{2}} = \frac{2}{n(n-1)}$. ಹೀಗೆಯೇ ಯಾದೃಚ್ಛಿಕವಾಗಿ r ವಸ್ತುಗಳನ್ನು ಆರಿಸಿದರೆ ಪ್ರತಿ ವಿಕಲ್ಪದ ಆಯ್ಕೆಯ ಸಂಭವತೆ $\frac{1}{\binom{n}{r}}$.

9. ನಿರ್ಬಂಧಿತ ಸಂಭವತೆ

ನಿದರ್ಶನ 9.1 ಎಂಭತ್ತು ನ್ಯೂನತೆಮುಕ್ತ ಮತ್ತು ಇಪ್ಪತ್ತು ನ್ಯೂನತೆಯುಕ್ತ ವಸ್ತುಗಳಿರುವ ನೂರು ವಸ್ತುಗಳ ಸಮುದಾಯದಿಂದ ಎರಡು ವಸ್ತುಗಳನ್ನು ಯಾದೃಚ್ಛಿಕವಾಗಿ ಕೆಳಗಿನಂತೆ ಆರಿಸಲಾಗಿದೆ : ಮೊದಲು ಆರಿಸಿದ ವಸ್ತುವನ್ನು ಎರಡನೆ ಆಯ್ಕೆಯ ಮೊದಲು ಸಮುದಾಯಕ್ಕೆ (i) ಹಿಂತಿರುಗಿಸಿ (ii) ಹಿಂತಿರುಗಿಸದೆ, ಮುಂದುವರಿಯುವುದು. ಇವಕ್ಕೆ ಕ್ರಮವಾಗಿ ವಾಪಸಾತಿ ಇರುವ, ವಾಪಸಾತಿ ಇಲ್ಲದಿರುವ ಪ್ರತಿಚಯನಗಳೆಂದು ಹೆಸರು. ಘಟನೆ A, B ಗಳನ್ನು ಈ ರೀತಿ ವ್ಯಾಖ್ಯಿಸಿ :

A = (ಮೊದಲ ವಸ್ತು ನ್ಯೂನತೆಯುಕ್ತ)

B = (ಎರಡನೆ ವಸ್ತು ನ್ಯೂನತೆಯುಕ್ತ)


ಮೊದಲ ವಿಧಾನವನ್ನು ಅನುಸರಿಸಿದಾಗ $P(A) = P(B) = \frac{20}{100} = \frac{1}{5}$.

ಎರಡನೆ ವಿಧಾನವನ್ನು ಅನುಸರಿಸಿದಾಗ $P(A) = \frac{20}{100} = \frac{1}{5}$.

ಆದರೆ P (B) ಯನ್ನು ಗಣಿಸಲು ಎರಡನೆ ಆಯ್ಕೆಯ ಸಮಯದಲ್ಲಿ ಸಮುದಾಯದ ರಚನೆ ತಿಳಿದಿರಬೇಕು. ಅಂದರೆ A ನಡೆಯಿತೇ, ಇಲ್ಲವೇ ಎಂಬುದು ಗೊತ್ತಿರಬೇಕು. ಈ ನಿದರ್ಶನ ಇನ್ನೊಂದು ಮುಖ್ಯ ಪರಿಕಲ್ಪನೆಯೆಡೆಗೆ ನಮ್ಮನ್ನು ಒಯ್ಯುತ್ತದೆ.

A, B ಪ್ರಯೋಗ E ಗೆ ಸಂಬಂಧಿಸಿದ ಘಟನೆಗಳಾಗಿದ್ದು, ಘಟನೆ A ನಡೆದಿದೆಯೆಂದು ಕೊಟ್ಟಿರುವಾಗ ಘಟನೆ **B** ಯ ನಿರ್ಬಂಧಿತ ಸಂಭವತೆಯನ್ನು ಪ್ರತೀಕ $P(B \mid A)$ ಇಂದ ಸೂಚಿಸುತ್ತೇವೆ. ನಿದರ್ಶನ 9.1 ರಲ್ಲಿ $P(B|A) = \frac{19}{99}$, ಯಾಕೆಂದರೆ A ನಡೆದಿದ್ದರೆ ಎರಡನೆ ಆಯ್ಕೆಯ ವೇಳೆ ಸಮುದಾಯದಲ್ಲಿರುವ 99

ವಸ್ತುಗಳ ಪೈಕಿ 19 ಮಾತ್ರ ನ್ಯೂನತೆ ಯುಕ್ತವಾದವು. P (B | A) ಯನ್ನು ಗಣಿಸುವಾಗ ನಿಜವಾಗಿ P (B) ಯನ್ನು ಮೂಲಪ್ರತಿಚಯವ್ಯೋಮ S ನ ಬದಲು ಕುಗ್ಗಿದ ಪ್ರತಿಚಯವ್ಯೋಮ A ಗೆ ಕುರಿತಾಗಿ ಗಣಿಸುತ್ತೇವೆ. ಅಂದರೆ P (B) ಯನ್ನು ಗಣಿಸುವಾಗ S ನಲ್ಲಿ ನಾವಿರಲೇಬೇಕೆಂಬುದು ತಿಳಿದಿದ್ದು, ಜೊತೆಗೆ B ಯಲ್ಲೂ ಇರುವ ಸಂಭವವನ್ನು ಪಡೆಯಲಾಗುತ್ತದೆ. P (B | A) ಯನ್ನು ನಿರ್ಧರಿಸುವಾಗ A ಯಲ್ಲಿ ನಾವಿರಲೇಬೇಕೆಂದು ತಿಳಿದಿದ್ದು, ಜೊತೆಗೆ B ಯಲ್ಲೂ ಇರುವ ಸಂಭವವನ್ನು ಗಣಿಸಲಾಗುತ್ತದೆ. ಹೀಗಾಗಿ, ಪ್ರತಿಚಯವ್ಯೋಮ ಇಲ್ಲಿ S ನಿಂದ A ಗೆ ಕುಗ್ಗಿದೆ. (ನೋಡಿ ಚಿತ್ರ 9.1). ನಿದರ್ಶನ 9.1 ರಲ್ಲಿ $P(B|A) = \frac{P(B \cap A)}{P(A)}$ ಎಂಬುದನ್ನು ತಾಳಿನೋಡಿ.



ಚಿತ್ರ 9.1

ನಿರ್ಬಂಧಿತ ಸಂಭವತೆಯ ವ್ಯಾಖ್ಯೆಯನ್ನು ರೂಪಿಸಲು ಸಾಪೇಕ್ಷ ಆವರ್ತಾಂಕದ ಪರಿಕಲ್ಪನೆಗೆ ಮರಳೋಣ. ಪ್ರಯೋಗ E ಯ n ಆವರ್ತನೆಗಳಲ್ಲಿ n_A, n_B, $n_{A\cap B}$ ಕ್ರಮವಾಗಿ A, B, $A\cap B$ ಗಳ ಆವರ್ತಾಂಕಗಳಾಗಿರಲಿ. ಆಗ A ನಡೆದಿರುವ ಫಲಿತಗಳಲ್ಲಿ B ಯ ಸಾಪೇಕ್ಷ ಆವರ್ತಾಂಕ $n_{A\cap B}/n_A$. ಅಂದರೆ ಇದು A ನಡೆದಿದೆಯೆಂದು ಕೊಟ್ಟಿರುವಾಗ B ಯ ನಿರ್ಬಂಧಿತ ಸಾಪೇಕ್ಷ ಆವರ್ತಾಂಕ. ಇದನ್ನು $\frac{n_{A\cap B}}{n_A} = \frac{n_{A\cap B}/n}{n_A/n} = \frac{f_{A\cap B}}{f_A}$ ಎಂದು ಪುನರ್ರಚಿಸಬಹುದು. ಇಲ್ಲಿ f_A, $f_{A\cap B}$ ಕ್ರಮವಾಗಿ A, $A\cap B$ ಗಳ ಸಾಪೇಕ್ಷ ಆವರ್ತಾಂಕಗಳು. n ದೊಡ್ಡದಾಗಿರುವಾಗ $f_{A\cap B}$, $P(A\cap B)$ ಗೆ ಮತ್ತು f_A, P (A)ಗೆ ಸಮೀಪವಿರುವುದರಿಂದ $n_{A\cap B}/n_A$, P (B/A) ಗೆ ಸಮೀಪವಾಗಿರುವುದು.

ವ್ಯಾಖ್ಯೆ 9.1 $P(A) > 0$ ಆಗಿರುವಾಗ $P(B|A) = \frac{P(B\cap A)}{P(A)}$; $P(A) = 0$ ಆಗಿರುವಾಗ P (B|A) ವ್ಯಾಖ್ಯಿತವಾಗಿಲ್ಲ. ಇದು ಒಂದು ಸಿದ್ಧಾಂತ ಅಥವಾ ಆದ್ಯುಕ್ತಿಯಲ್ಲ. ನಿರ್ಬಂಧಿತ ಸಂಭವತೆಯ ಪರಿಕಲ್ಪನೆಯನ್ನು ಕ್ರಮಬದ್ಧವಾಗಿ ಇಲ್ಲಿ ನಿರೂಪಿಸಲಾಗಿದೆಯಷ್ಟೆ. A ದತ್ತವಿರುವಾಗ, P (B|A) ಯು ಸಂಭವತೆಯ ನಾಲ್ಕೂ ಸ್ವಭಾವಗಳನ್ನೂ ಹೊಂದಿರುತ್ತದೆಂಬುದನ್ನು ತಾಳೆ ನೋಡಬಹುದು. ಆಚರಣೆಯಲ್ಲಿ P (B|A) ಯನ್ನು ನಿರ್ಧರಿಸಲು ಎರಡು ಮಾರ್ಗಗಳಿವೆ :

(i) ಕುಗ್ಗಿದ ಪ್ರತಿಚಯುವ್ಯೋಮ A ಯನ್ನು ಕುರಿತು B ಯ ಸಂಭವತೆಯನ್ನು ಗಣಿಸುವುದು.

(ii) $P(B \cap A)$, $P(A)$ ಗಳನ್ನು ಮೂಲಪ್ರತಿಚಯುವ್ಯೋಮ S ಅನ್ನು ಕುರಿತು ಪಡೆದು ವ್ಯಾಖ್ಯೆ 9.1 ಅನ್ನು ಬಳಸುವುದು.


ಆದರೆ ನಿರ್ಬಂಧಿತ ಸಂಭವತೆಯ ವ್ಯಾಖ್ಯೆಯು ಹೆಚ್ಚಿನ ಬಳಕೆ ಅದನ್ನು ತುಸು ಬೇರೆ ರೀತಿಯಲ್ಲಿ ಬರೆಯುವುದರಿಂದ ಆಗುತ್ತದೆ :

$$P(A \cap B) = P(B/A)\,P(A) \text{ ಅಥವಾ ಸಮನಾಗಿ}$$
$$P(A \cap B) = P(A/B)\,P(B).$$

ಇದಕ್ಕೆ ಸಂಭವತೆಯ ಗುಣಾಕಾರ ಪ್ರಮೇಯ ಎನ್ನುವುದೂ ಇದೆ. $P(A \cap B)$ ಯನ್ನು ಗಣಿಸಲು ಇದನ್ನು ಬಳಸಬಹುದು.

10. P (B/A) ಮತ್ತು P (B) ಗಳ ಸಾಪೇಕ್ಷ ಗಾತ್ರಗಳು

ಈ ಕುರಿತು ಸಾರ್ವತ್ರಿಕವಾಗಿ ಏನು ಹೇಳಲೂ ಬರುವುದಿಲ್ಲವೆಂಬುದು ಕೆಳಗಿನ ನಾಲ್ಕು ಸಂದರ್ಭಗಳಿಂದ ಸ್ಪಷ್ಟವಾಗುತ್ತದೆ :



(i) $A \cap B = \phi$ (ii) $A \subset B$ (iii) $B \subset A$ (iv) ಮಿಕ್ಕ ಸಂದರ್ಭಗಳು

(i) ಇಲ್ಲಿ A ನಡೆದಿರುವಾಗ B ನಡೆಯುವುದು ಅಸಾಧ್ಯವಾಗಿರುವುದರಿಂದ $P(B/A) = 0 < P(B)$.

(ii) $$P(B/A) = \frac{P(B \cap A)}{P(A)} = \frac{P(A)}{P(A)} = 1 \geq P(B).$$

(iii) $$P(B/A) = \frac{P(B \cap A)}{P(A)} = \frac{P(B)}{P(A)} \geq P(B)$$

$$\because \quad 0 < P(A) \leq 1.$$

(iv) ಇಲ್ಲಿ P (B/A) ಮತ್ತು P (B) ಗಳ ಸಾಪೇಕ್ಷ ಗಾತ್ರಗಳ ಬಗ್ಗೆ ಏನು ಹೇಳಲೂ ಬರುವು ದಿಲ್ಲ. ಒಟ್ಟಿನಲ್ಲಿ,ಮೇಲಿನ ನಾಲ್ಕು ಸಂದರ್ಭಗಳ ಪೈಕಿ ಎರಡರಲ್ಲಿ


$P(B/A) \geqslant P(B)$, ಒಂದರಲ್ಲಿ $P(B/A) < P(B)$ ಮತ್ತೆ ಇನ್ನೊಂದರಲ್ಲಿ ಇಂಥ ಹೋಲಿಕೆ ಅಸಾಧ್ಯ.

ಎರಡು ಘಟನೆಗಳ ಏಕಕಾಲಿಕ ಆಗುವಿಕೆಯ ಸಂಭವತೆಯನ್ನು [ಅಂದರೆ $P(A \cap B)$ ಯನ್ನು] ಗಣಿಸಲು ನಿರ್ಬಂಧಿತ ಸಂಭವತೆಯ ಪರಿಕಲ್ಪನೆಯನ್ನು ಸಂಭವತೆಯ ಗುಣಾಕಾರ ಪ್ರಮೇಯದಲ್ಲಿ ಬಳಸಿಕೊಳ್ಳಲಾಯಿತು. ಇದೇ ಪರಿಕಲ್ಪನೆಯನ್ನು ಒಂದೇ ಒಂದು ಘಟನೆಯ ಸಂಭವತೆಯನ್ನು ಪಡೆಯಲು ಕೂಡ ಉಪಯೋಗಿಸಬಹುದು. ಅದಕ್ಕೆ ಇನ್ನೊಂದು ವ್ಯಾಖ್ಯೆ ಅಗತ್ಯ : ಘಟನೆ $B_1, B_2, \ldots, B_k$ ಗಳು ಕೆಳಗಿರುವ ಮೂರು ನಿಬಂಧನೆಗಳನ್ನು ತೃಪ್ತಿಪಡಿಸುವಂತಿದ್ದರೆ ಅವು ಪ್ರತಿಚಯನ್ಯೋಮದ ಒಂದು ವಿಭಜನೆಯನ್ನು ಪ್ರತಿನಿಧಿಸುತ್ತವೆ :

(i) $i \neq j$ ಆಗಿರುವಾಗಲೆಲ್ಲ $B_i \cap B_j = \phi$

(ii) $\bigcup_{i=1}^{k} B_i = S$

(iii) ಪ್ರತಿ i ಗೆ $P(B_i) > 0$



ಚಿತ್ರ 10.1 Sನ ಒಂದು ವಿಭಜನೆ (k = 7)

ಆದ್ದರಿಂದ ಪ್ರಯೋಗ ε ಯನ್ನು ನಡೆಸಿದಾಗ ಘಟನೆ B_i ಗಳ ಪೈಕಿ ಒಂದೇ ಒಂದು ಮಾತ್ರ ಸಂಭವಿಸುವುದು. ಹೀಗಾಗಿ

$$A = (A \cap B_1) \cup (A \cap B_2) \cup \cdots \cup (A \cap B_k).$$

ಇಲ್ಲಿ ಕೆಲವು $A \cap B_i$ ಶೂನ್ಯ ಗಣಗಳಾಗಿರಬಹುದು ; $A \cap B_j$ ಜೊತೆಜೊತೆಯಾಗಿ ಪರಸ್ಪರ ವ್ಯರ್ಜ್ಯವೆಂಬುದು ಮಾತ್ರ ಮುಖ್ಯ ವಿಚಾರ. ಆದ್ದರಿಂದ

$$P(A) = P(A \cap B_1) + P(A \cap B_2) + \cdots + P(A \cap B_k)$$
$$= P(A/B_1)\,P(B_1) + P(A/B_2)\,P(B_2) + \cdots + P(A/B_k)P(B_k)$$

ಇದು ಸಂಭವತೆಯ ಸಂಕಲನ ಪ್ರಮೇಯ. ಇದೊಂದು ಉಪಯುಕ್ತ ಸೂತ್ರ. $P(A)$ ಯನ್ನು ನೇರವಾಗಿ ಗಣಿಸುವುದು ಕಷ್ಟವಾಗಿದ್ದು, B_j ಸಂಭವಿಸಿದೆಯೆಂಬ ಹೆಚ್ಚಿನ ಮಾಹಿತಿಯಿದ್ದಾಗ $P(A/B_j)$ ಯನ್ನು ಗಣಿಸಿ, ಬಳಿಕ ಮೇಲಿನ ಸೂತ್ರ ಬಳಸಿ $P(A)$ ಯನ್ನು ನಿರ್ಧರಿಸಬಹುದು.

ನಿದರ್ಶನ 10.1 ಇಪ್ಪತ್ತು ನ್ಯೂನ್ಯತೆಯುಕ್ತ ವಸ್ತುಗಳಿರುವ ನೂರು ವಸ್ತುಗಳ ಸಮುದಾಯದಿಂದ ಎರಡು ವಸ್ತುಗಳನ್ನು ಒಂದೊಂದಾಗಿ ಆಯ್ದು ವಸ್ತುವಿನ

ವಾಪಸಾತಿಯಿಲ್ಲದೆ, ಯಾದೃಚ್ಛಿಕವಾಗಿ ಆರಿಸಲಾಗಿದೆ. A = {ಮೊದಲ ವಸ್ತು ನ್ಯೂನತೆಯುಕ್ತ}. B = {ಎರಡನೆ ವಸ್ತು ನ್ಯೂನತೆಯುಕ್ತ }. ಆಗ

A, $\overline{A}$, S ನ ಒಂದು ವಿಭಜನೆಯಾದ್ದರಿಂದ

$$P(B) = P(B/A)P(A) + P(B/\overline{A})P(\overline{A});$$

$$= \frac{19}{99} \cdot \frac{1}{5} + \frac{20}{99} \cdot \frac{4}{5}$$

$$= \frac{1}{5}.$$

11. ಬೇಸನ ಸೂತ್ರ

$B_1, B_2, \cdots B_k$ ಪ್ರತಿಚಯವ್ಯೋಮ S ನ ಒಂದು ವಿಭಜನೆಯಾಗಿದ್ದು A, S ಗೆ ಸಂಬಂಧಿಸಿದ ಯಾವುದೇ ಘಟನೆಯಾಗಿರುವಾಗ ನಿರ್ಬಂಧಿತ ಸಂಭವತೆಯ ವ್ಯಾಖ್ಯೆಯನ್ನು ಬಳಸಿ ಈ ರೀತಿ ಬರೆಯಬಹುದು :

$$P(B_i/A) = \frac{P(B_i \cap A)}{P(A)}$$

$$= \frac{P(A/B_i)\,P(B_i)}{\sum_{i=1}^{K} P(A/B_i)\,P(B_i)} \quad i = 1, 2, \cdots, K_1$$

ಇದು ಬೇಸನ ಸೂತ್ರ. B_i ಗಳು ಪ್ರತಿಚಯವ್ಯೋಮದ ವಿಭಜನೆಯಾಗಿರುವುದರಿಂದ ಅವುಗಳ ಪೈಕಿ ಒಂದೇ ಒಂದು B_i ನಡೆಯುವುದು. ಆದ್ದರಿಂದ ಘಟನೆ A ನಡೆದಿದೆ ಯೆಂದು ಕೊಟ್ಟಿರುವಾಗ ನಿರ್ದಿಷ್ಟ B_i ಯ ನಿರ್ಬಂಧಿತ ಸಂಭವತೆಯನ್ನು ಈ ಸೂತ್ರ ನೀಡುತ್ತದೆ. $P(B_i)$ ಗಳ ಪೂರ್ವಜ್ಞಾನ ಆವಶ್ಯವಿರುವುದು ಇದರ ಉಪಯೋಗಕ್ಕೆ ಅಡಚಣೆ. ಬೇಸನ ಸೂತ್ರದ ಕುರಿತು ಸಾಕಷ್ಟು ವಿವಾದವೆದ್ದಿದೆ. ಗಣಿತೀಯವಾಗಿ ಅದು ದೋಷರಹಿತ. $P(B_i)$ ಗಳ ತಪ್ಪು ಆಯ್ಕೆ ಈ ಸೂತ್ರವನ್ನು ಸಂಶಯಾಸ್ಪದ ಗೊಳಿಸಬಹುದು.

ನಿದರ್ಶನ 11.1 ಮೂರು ಕಾರ್ಖಾನೆಗಳು (I, II, III) ನಿರ್ದಿಷ್ಟ ವಸ್ತು ವನ್ನು ಉತ್ಪಾದಿಸುತ್ತಿವೆ. ನಿರ್ದಿಷ್ಟ ಉತ್ಪಾದನಾ ಅವಧಿಯಲ್ಲಿ II ಮತ್ತು III ಉತ್ಪಾದಿಸಿದ ವಸ್ತುಗಳ ಸಂಖ್ಯೆ ಒಂದಕ್ಕೊಂದು ಸಮ ಮತ್ತು I ಈ ಎರಡು ಸಂಖ್ಯೆಗಳ ಮೊತ್ತದಷ್ಟು ವಸ್ತುಗಳನ್ನು ತಯಾರಿಸುತ್ತದೆಯೆಂದು ತಿಳಿದಿದೆ. ಅದಲ್ಲದೆ I, II ಉತ್ಪಾದಿಸಿದ ವಸ್ತುಗಳಲ್ಲಿ 2% ನ್ಯೂನತೆಯುಕ್ತವಾದುವು. ಆದರೆ III ತಯಾರಿಸಿದವು ಗಳಲ್ಲಿ 4% ನ್ಯೂನತೆಯುಕ್ತವಾದುವು ಎಂದೂ ಅಂದಾಜಿದೆ. ಉದ್ಪಾದಿಸಿದ ಎಲ್ಲ

ವಸ್ತುಗಳನ್ನೂ ಒಂದೇ ಸಮುದಾಯವಾಗಿಸಿ ಅದರಿಂದ ಒಂದು ವಸ್ತುವನ್ನು ಯಾದೃಚ್ಛಿಕವಾಗಿ ಆರಿಸಿದರೆ ಅದು ನ್ಯೂನತೆಯುಕ್ತವಾಗಿರುವ ಸಂಭವತೆಯೇನು ?

ಆಯ್ದ ವಸ್ತು ನಿಜವಾಗಿಯೂ ನ್ಯೂನತೆಯುಕ್ತವೆಂದು ಕಂಡುಬಂದರೆ ಅದು ಕಾರ್ಖಾನೆ I ರ ಉತ್ಪನ್ನವಾಗಿರುವ ಸಂಭವತೆಯೇನು ?

ಇಲ್ಲಿ ಘಟನೆಗಳನ್ನು ಕೆಳಗಿನಂತೆ ನಿರೂಪಿಸೋಣ :

A = {ಆಯ್ದ ವಸ್ತು ನ್ಯೂನತೆಯುಕ್ತ} ; B_2 = {ಅದು II ರಿಂದ ಬಂದಿದೆ}

B_1 = {ಅದು I ರಿಂದ ಬಂದಿದೆ} ; B_3 = {ಅದು III ರಿಂದ ಬಂದಿದೆ}

ಬೇಕಾಗಿರುವುದು $P(A)$ ಮತ್ತು $P(B_1/A)$. ಇಲ್ಲಿ B_1, B_2, B_3 ಪ್ರತಿಚಯವ್ಯೋಮದ ಒಂದು ವಿಭಜನೆ ಮತ್ತು

$$P(B_1) = \tfrac{1}{2},\quad P(B_2) = P(B_3) = \tfrac{1}{4}$$

$$P(A/B_1) = 0{\cdot}02,\quad P(A/B_2) = 0{\cdot}02,\quad P(A/B_3) = 0{\cdot}04$$

ಸಂಭವತೆಯ ಸಂಕಲನ ಪ್ರಮೇಯವನ್ನು ಬಳಸಿ

$$\begin{aligned} P(A) &= P(A/B_1)\, P(B_1) + P(A/B_2) + P(B_2)\ P(A/B_3)\ P(B_3) \\ &= (0{\cdot}02)(0{\cdot}05) + (0{\cdot}02)\ (0.25) + (0{\cdot}04)\ 0{\cdot}25) \\ &= 0{\cdot}025. \end{aligned}$$

ಬೇಸನ ಸೂತ್ರವನ್ನು ಉಪಯೋಗಿಸಿ

$$\begin{aligned} P(B_1/A) &= \frac{P(A/B_1)\ P(B_1)}{P(A_1/B_1)\ P(B_1) + P(A/B_2)\, P(B_2) + P(A/B_3) P(B_3)} \\ &= \frac{(0{\cdot}02)\ (0{\cdot}5)}{(0{\cdot}02)(0{\cdot}5) + (0{\cdot}02)\ (0{\cdot}25) + (0{\cdot}04)\ 0{\cdot}25)} \\ &= 0{\cdot}40. \end{aligned}$$

ಇದೇ ರೀತಿ $P(B_2/A)$, $P(B_3/A)$ ಗಳನ್ನು ಗಣಿಸಬಹುದು.

12. ಪರಸ್ಪರ ನಿರವಲಂಬಿ ಘಟನೆಗಳು


A, B ಪರಸ್ಪರವರ್ಜ್ಯವಾಗಿರುವಾಗ $P(A/B) = 0$. ಅಂದರೆ Bಯ ನಡೆಯುವಿಕೆ Aಯ ನಡೆಯುವಿಕೆಯನ್ನು ತಡೆಯುತ್ತದೆ. ಇದಕ್ಕೆ ವ್ಯಾಸೀಯ ವಿರುದ್ಧವಾಗಿ B, Aಯ ಉಪಗಣವಾಗಿರುವಾಗ $P(A/B) = 1$. ಈ ಎರಡು ಸಂದರ್ಭಗಳಲ್ಲೂ B ಯ ನಡೆಯುವಿಕೆ Aಯ ಸಂಭವತೆಯ ಕುರಿತು ಸ್ಪಷ್ಟ ಮಾಹಿತಿ ನೀಡುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ Bಯ ನಡೆಯುವಿಕೆ Aಯ ನಡೆಯುವಿಕೆ ಅಥವಾ ನಡೆಯದಿರುವಿಕೆಯ ಮೇಲೆ ಏನೂ ಪ್ರಭಾವ ಬೀರದ ಅನೇಕ ಸನ್ನಿವೇಶಗಳಿವೆ :

ನಿದರ್ಶನ 12.1 ಎರಡು ಅನಭಿನತ ದಾಳಗಳನ್ನು ಒಮ್ಮೆ ಹೊರಳಿಸಲಾಗಿದೆ.

A = {ಮೊದಲ ದಾಳ ಸರಿಸಂಖ್ಯೆ ತೋರಿಸುತ್ತದೆ}

B = {ಎರಡನೆ ದಾಳ ಸಂಖ್ಯೆ 5 ಅಥವಾ 6 ತೋರಿಸುತ್ತದೆ}.

A, B ಪೂರ್ಣವಾಗಿ ಅಸಂಬಂಧಿತವೆಂಬುದು ನಮ್ಮ ಕಲ್ಪನೆಗೂ ತೋಚುವ ಸಂಗತಿ. B ನಡೆದಿದೆಯೆಂಬುದು A ಯ ನಡೆದಿರುವಿಕೆ ಅಥವಾ ನಡೆಯದಿರುವಿಕೆಯ ಕುರಿತು ಏನೂ ತಿಳಿವಳಿಕೆ ನೀಡುವುದಿಲ್ಲ. ಈ ಪ್ರಯೋಗದ ಪ್ರತಿಚಯವ್ಯೋಮವನ್ನು ಚಿತ್ರ 12.1 ರಲ್ಲಿ ಅಡ್ಡ ಮತ್ತು ನೀಟಗೆರೆಗಳ ಛೇದನ ಬಿಂದುಗಳು ಪ್ರತಿನಿಧಿಸುತ್ತವೆ.



ಚಿತ್ರ 12.1 : ನಿದರ್ಶನ 12.1 ರ ಪ್ರತಿಚಯವ್ಯೋಮ

$$P(A) = \frac{18}{36} = \frac{1}{2} \; ; P(B) = \frac{12}{36} = \frac{1}{3}$$

$$P(A \cap B) = \frac{6}{36} = \frac{1}{6}$$

$$\therefore P(A/B) = \frac{P(A \cap B)}{P(B)} = \frac{1/6}{1/3} = \frac{1}{2} = P(A).$$

ಇಲ್ಲಿ A ಯ ಅನಿರ್ಬಂಧಿತ ಮತ್ತು ನಿರ್ಬಂಧಿತ ಸಂಭವತೆಗಳು ಪರಸ್ಪರ ಸಮ. ಅದೇ ರೀತಿ B ಯ ಅನಿರ್ಬಂಧಿತ ಮತ್ತು ನಿರ್ಬಂಧಿತ ಸಂಭವತೆಗಳೂ ಪರಸ್ಪರ ಸಮ. ಅಂದರೆ $P(A/B) = P(A)$, $P(B/A) = P(B)$. ಇಂಥ ಸಂದರ್ಭಗಳಲ್ಲಿ A, B ಪರಸ್ಪರ ನಿರವಲಂಬಿ ಘಟನೆಗಳು ಎನ್ನಬಹುದು. ಆದರೆ ಇಲ್ಲೊಂದು ತೊಡಕಿದೆ. ಮೇಲಿನ ಎರಡು ಸಮತೆಗಳು ಅರ್ಥಪೂರ್ಣವಾಗಿರಲು $P(B) \neq 0$ ಮತ್ತು $P(A) \neq 0$ ಆಗಿರಬೇಕು. ಈ ತೊಡಕಿನಿಂದ ಪಾರಾಗಲು A, B ಗಳ ಪರಸ್ಪರ ನಿರವಲಂಬನದ ನಿಬಂಧನೆಗಳನ್ನು

$$P(A \cap B) = P(A/B)\,P(B) = P(A)\,P(B) \text{ ಮತ್ತು}$$

$P(A \cap B) = P(B/A)\,P(A) = P(A)\,P(B)$ ಎಂದು ಬರೆಯುತ್ತೇವೆ. P(A), P(B) ಸೊನ್ನೆಯಿಂದ ಭಿನ್ನವಿರುವಾಗ ನಿರ್ಬಂಧಿತ ಸಂಭವತೆಗಳು ಅನುರೂಪ ಅನಿರ್ಬಂಧಿತ ಸಂಭವತೆಗಳಿಗೆ, $P(A \cap B) = P(A) \cdot P(B)$ ಆಗಿರುವಾಗ ಮತ್ತು

ಆಗ ಮಾತ್ರ ಸಮವಿರುತ್ತವೆ. ಹೀಗಾಗಿ ಕೆಳಗಿನ ಕ್ರಮಬದ್ಧ ವ್ಯಾಖ್ಯೆ ದೊರೆಯುತ್ತದೆ:

$P(A \cap B) = P(A) \cdot P(B)$ ಆಗಿರುವಾಗ ಮತ್ತು ಆಗ ಮಾತ್ರ A, B ಪರಸ್ಪರ ನಿರವಲಂಬಿ ಘಟನೆಗಳು.

P (A) ಅಥವಾ P (B) ಸೊನ್ನೆಯಾಗಿರುವಾಗಲೂ ಈ ವ್ಯಾಖ್ಯೆ ಅನ್ವಯಿಸುತ್ತದೆ.

13. ಕೆಲವು ಸಮಸ್ಯೆಗಳು

(i) ಒಂದು ಸಮುದಾಯದಲ್ಲಿರುವ 16 ವಸ್ತುಗಳ ಪೈಕಿ 2ರಲ್ಲಿ ಗಂಭೀರ ನ್ಯೂನತೆಗಳಿವೆ, 4 ರಲ್ಲಿ ಚಿಕ್ಕಪುಟ್ಟ ನ್ಯೂನತೆಗಳಿವೆ ಮತ್ತು ಉಳಿದವು ನ್ಯೂನತೆ ಮುಕ್ತ. ಆ ಸಮುದಾಯದಿಂದ ಒಂದು ವಸ್ತುವನ್ನು ಯಾದೃಚ್ಛಿಕವಾಗಿ ಆರಿಸಲಿದ್ದೇವೆ. ಆಗ ಕೆಳಗಿರುವ ಘಟನೆಗಳ ಸಂಭವತೆಗಳೇನು ?

ಆಯ್ದ ವಸ್ತುವಿನಲ್ಲಿ (ಅ) ನ್ಯೂನತೆಯಿಲ್ಲದಿರುವುದು (ಆ) ಗಂಭೀರನ್ಯೂನತೆಯಿಲ್ಲದಿರುವುದು (ಇ) ನ್ಯೂನತೆಯಿಲ್ಲದಿರುವುದು ಅಥವಾ ಗಂಭೀರ ನ್ಯೂನತೆಯಿರುವುದು.

(ii) ಒಬ್ಬನ ಬಳಿ n ಬೀಗದಕೈಗಳಿರುವ ಗೊಂಚಲಿದ್ದು ಅದರಲ್ಲಿ ಒಂದೇ ಒಂದು ಅವನು ತೆಗೆಯಬೇಕೆಂದಿರುವ ಬೀಗಕ್ಕೆ ಸರಿಹೊಂದುತ್ತದೆ. ಅವನು ಕ್ರಮವಾಗಿ ಒಂದೊಂದೇ ಕೈಯನ್ನು ಉಪಯೋಗಿಸುತ್ತ ಬರುತ್ತಾನೆ (ಉಪಸಾತಿಯಿಲ್ಲದೆ ಪ್ರತಿಚಯನ). ಈ ವಿಧಾನದಲ್ಲಿ ಬೀಗ ತೆಗೆಯಲು 1, 2, ⋯, n ಯತ್ನಗಳು ಬೇಕಾಗಬಹುದು. ಇಲ್ಲಿ ಪ್ರತಿ ಸಾಧ್ಯತೆಯ ಸಂಭವತೆಯೂ $\frac{1}{n}$ ಎಂದು ತೋರಿಸಿ.

(iii) ಒಂದು ಪಟ್ಟಣದಲ್ಲಿ (n+1) ನಿವಾಸಿಗಳಿದ್ದು, ಒಬ್ಬ ವ್ಯಕ್ತಿ ಇನ್ನೊಬ್ಬನಿಗೆ ವದಂತಿಯೊಂದನ್ನು ತಿಳಿಸುತ್ತಾನೆ, ಅವನು ಮತ್ತೊಬ್ಬನಿಗೆ ತಿಳಿಸುತ್ತಾನೆ, ಇತ್ಯಾದಿ. ಪ್ರತಿಹಂತದಲ್ಲೂ ವದಂತಿ ತಿಳಿಸುವವನು ಅದನ್ನು ತಿಳಿಯುವವನನ್ನು ಇರುವ ಇತರ n ನಿವಾಸಿಗಳಿಂದ ಯಾದೃಚ್ಛಿಕದಾಗಿ ಆಯ್ದರೆ, ಆ ವದಂತಿ r ಬಾರಿ (ಅ) ಮೂಲವ್ಯಕ್ತಿಗೆ ಮರಳದೆ (ಆ) ಯಾವನಿಗೂ ಪುನರಾವರ್ತಿಸದೆ ಹೇಳಲ್ಪಡುವ ಸಂಭವತೆಯೇನು ?

(iv) ಕೈಚೀಲ I ರಲ್ಲಿ x ಬಿಳಿ, y ಕಪ್ಪು ಗೋಲಿಗಳಿವೆ. ಕೈಚೀಲ II ರಲ್ಲಿ z ಬಿಳಿ, v ಕಪ್ಪು ಗೋಲಿಗಳಿವೆ. I ರಿಂದ ಒಂದು ಗೋಲಿಯನ್ನು ಯಾದೃಚ್ಛಿಕವಾಗಿ ಆರಿಸಿ ಅದನ್ನು II ಕ್ಕೆ ಸೇರಿಸಲಾಗುತ್ತದೆ. ಬಳಿಕ II ರಿಂದ ಒಂದು ಗೋಲಿಯನ್ನು ಯಾದೃಚ್ಛಿಕವಾಗಿ ಆರಿಸಿದರೆ ಅದು ಬಿಳಿಯಾಗಿರುವ ಸಂಭವತೆಯೇನು ?

(v) ಒಂದು ಕಾರ್ಖಾನೆಯಲ್ಲಿ ಯಂತ್ರ A, B, C ಗಳು ಒಟ್ಟು ಉತ್ಪಾದನೆಯ ಶೇಕಡ 25, 35 ಮತ್ತು 40 ಭಾಗವನ್ನು ಕೊಡುತ್ತವೆ. ಅವುಗಳಲ್ಲಿ ಕ್ರಮವಾಗಿ 5, 4 ಮತ್ತು 2 ಶೇಕಡ ನ್ಯೂನತೆ ಯುಕ್ತ ವಸ್ತುಗಳಿರುತ್ತವೆಂದು ಅಂದಾಜಿದೆ. ಯಾದೃಚ್ಛಿಕವಾಗಿ ಆರಿಸಿದ ಒಂದು ವಸ್ತು ನ್ಯೂನತೆಯುಕ್ತವಾಗಿದ್ದರೆ ಅದು ಯಂತ್ರ A, B, C ಗಳಿಂದ ಬಂದಿರುವ ಸಂಭವತೆಗಳೇನು ?

(vi) A, B ಒಂದು ಪ್ರಯೋಗಕ್ಕೆ ಸಂಬಂಧಿಸಿದ ಘಟನೆಗಳು. $P(A) = 0.4$ $P(AUB) = 0.7$ ಮತ್ತು $P(B) = \rho$ ಆಗಿರುವಾಗ, ಯಾವ ρ ಮೌಲ್ಯಕ್ಕೆ A, B ಪರಸ್ಪರ (ಅ) ವರ್ಜ್ಯಘಟನೆಗಳು ? (ಆ) ನಿರವಲಂಬಿ ಘಟನೆಗಳು ?

ಉತ್ತರಗಳು : (i) (ಅ) 5/8 (ಆ) 7/8 (ಇ) 3/4

(iii) $\left(1-\frac{1}{n}\right)^{r-1}$ (ಆ) $\binom{n}{r}/n^r$

(iv) $\left(\frac{z+1}{z+v+1}\right)\left(\frac{x}{x+y}\right) + \left(\frac{z}{z+v+1}\right)\left(\frac{y}{x+y}\right)$

(v) 0.362 ; 0.406 ; 0.232

(vi) (ಅ) 0.3 (ಆ) 0.5

14. ಸಂಬಂಧಿತ ಓದಿಗಾಗಿ

1. ಟಿ. ಶ್ರೀವೆಂಕಟರಮಣ : "ದ್ವಿಪದ ಮತ್ತು ಪ್ವಾಸೋನ್ ಸಂಭಾವ್ಯತಾ ವಿತರಣೆಗಳು" ಸಾಧನೆ. ಸಂಪುಟ 2, ಸಂಚಿಕೆ 4, ಪು. 167–197–ಅಕ್ಟೋಬರ್–ಡಿಸೆಂಬರ್ 1973.

15. ಆಧಾರಗಳು

2. Feller, W. : "An Introduction to Probability Theory and its Applications", Vol.I, John Wiley & Sons Inc., New York, 1957.

3. Meyer, P. L. : "Introductory Probability and Statistical Applications",

Addison—Wesley Publishing Company Inc. Reading, Massachusetts, 1966.

4. Parzen, E. "Modern Probability Theory and Its Applications," John Wiley & Sons Inc. New York, 1960.

ಪಾರಿಭಾಷಿಕ ಪದಗಳು

ಅನಭಿನತ : unbiased
ಅಭಿನತ : biased

ಅಭಿಗೃಹೀತ : assumption
ಆದ್ಯುಕ್ತಿ : axiom
ಕೃಏಸಕ : trial

ಗಣ : set

ಉಪಗಣ : subset
ಶೂನ್ಯಗಣ : nullset

ಘಟನೆ : event

ಪರಸ್ಪರ ನಿರವಲಂಬಿ ಘಟನೆಗಳು : mutually independent events
ಪರಸ್ಪರವರ್ಜ್ಯ ಘಟನೆಗಳು : mutually exclusive events
ಪ್ರಾಥಮಿಕ ಘಟನೆ : elementary event
ಪೂರಕ ಘಟನೆ : complementary event

ಪ್ರತಿಚಯ ವ್ಯೋಮ : sample space

ಎಣಿಸಬಹುದಾದ ಅನಂತ ಪ್ರತಿಚಯ ವ್ಯೋಮ : countably infinite sample space
ಎಣಿಸಲಾಗದ ಅನಂತ ಪ್ರತಿಚಯ ವ್ಯೋಮ : noncountably infinite sample space
ಸಾಂತ ಪ್ರತಿಚಯ ವ್ಯೋಮ : finite sample space

ಪ್ರತಿರೂಪ : model

ಅನಿಶ್ಚಯಾತ್ಮಕ (ಸಂಭವತಾ) ಪ್ರತಿರೂಪ : nondeterministic (probabilistic) model
ಗಣಿತೀಯ ಪ್ರತಿರೂಪ : mathematical model
ನಿಶ್ಚಯಾತ್ಮಕ ಪ್ರತಿರೂಪ : deterministic model

ಪ್ರರೂಪ : pattern
ಪ್ರಾಯಿಕತೆ : likelihood
ಯಾದೃಚ್ಛಿಕ ಪ್ರಯೋಗ : random experiment
ವಿಕಲ್ಪ : combination
ವಿಭಜನೆ : partition
ಸಂಖ್ಯಾಕಲನೀಯ ನಿಯಮಿತತೆ : statistical regularity

ಸಂಭವತೆ : probability

ನಿರ್ಬಂಧಿತ ಸಂಭವತೆ : conditional probability

ಸಾಪೇಕ್ಷ ಆವರ್ತಾಂಕ : relative frequency

ಏದನ್'ನ ಮರದ ಅಡಿಯಲ್ಲಿ

ಶಶಿಧರ ಕುಲಕರ್ಣಿ

ಶಿಲುಬೆಯು ಭಾರ ಶಿಲುಬೆ ಏರಿದ ಎಲ್ಲರಿಗೂ
ಗೊತ್ತಿಲ್ಲ-
ಹೊತ್ತ ಕುರುಬನಿಗೆ ಮಾತ್ರ-
ತನ್ನ ಭಾರ ತಿಳಿದಿಲ್ಲ.

ನಕ್ಷತ್ರದ ದಾರಿಯಲಿ
ಎತ್ತರಕ್ಕೆ ಏರಿದ
ದೇವರ ಕುರಿ
ಬಿಟ್ಟ ಊರಿನ ಧೂಳ ಕೊಡವುತ್ತ
ಕಂಡದ್ದು
–ತಂದೆ ನಿರ್ಮಿಸಿದ
ಏದನ್' ತೋಟದಲ್ಲಿ
ಸೈತಾನ್ ತೋರಿಸಿದ ಮರದಲ್ಲಿ
ಹೊಸ– ಹಸಿರು, ಚಿಗುರು, ಮಿಡಿ
ಕೆಳಗೆ
ರುಚಿಕಂಡ
ಹವ್ವ– ಅದಾಮ'ರ ವಂಶಾವಳಿ–
'ಏರಿಹೋದವ ಇಳಿದು ಬರುತ್ತಾನೆ' ಎಂದು

ಆಗಸ ದಿಟ್ಟಿಸಿದಾಗ
ಸ್ವರ್ಗ,
ಸಿಂಹಾಸನ ಕಾಣಿಸಿತು-
'ಪ್ರಭು'ಮಾತ್ರ ಕಾಣಿಸಲಿಲ್ಲ

ಕೇಳಿಸಿದ ನಗೆಯಧ್ವನಿ ಮಾತ್ರ
ಕುರುಬನದಲ್ಲ
ಸೈತಾನನದು.

ಕವಿ ಅಶ್ವಘೋಷ ಮತ್ತು ಅವನ ಕೃತಿಗಳು

ಬಿ. ಅರುಣನಾರಾಯಣ

ಸಂಸ್ಕೃತದ ಅನೇಕ ಕವಿಗಳ ಕೃತಿಗಳು ಹಾಗೂ ಅವರ ಜೀವನದ ವಿಚಾರ ಕುರಿತಾಗಿ ನಮಗೆ ಬಹಳ ಕಡಿಮೆ ವಿವರಗಳಷ್ಟೆ ಲಭ್ಯವಾಗುತ್ತಿವೆ. ಅಶ್ವಘೋಷ ಸಂಸ್ಕೃತ ಸಾಹಿತ್ಯದಲ್ಲಿ ತುಂಬ ಖ್ಯಾತವಾದ ಹೆಸರು. ಸಂಸ್ಕೃತದ ಅತ್ಯಂತ ಪ್ರಾಚೀನ ನಾಟಕಕಾರರಲ್ಲಿ ಆತ ಒಬ್ಬ. ಆತ ಬರೆದ ಕೃತಿಗಳಲ್ಲಿ ಒಂದನ್ನು ಹೊರತು ಉಳಿದುವೆಲ್ಲಾ ಖಂಡ ಖಂಡವಾಗಿಯಷ್ಟೆ ನಮಗೆ ಲಭ್ಯವಾಗಿದೆ. ಅದೂ ಚೀನೀ ಭಾಷೆ ಮತ್ತು ಟಿಬೆಟ್ ಭಾಷೆಯ ಭಾಷಾಂತರಗಳ ರೂಪದಲ್ಲಿ ಆತ ಜೀವಿಸಿದ್ದ ಕಾಲದ ಕುರಿತು ವಿದ್ವಾಂಸರಲ್ಲಿ ಇನ್ನೂ ಜಿಜ್ಞಾಸೆ ನಡೆದೇ ಇದೆ.

1. ಅಶ್ವಘೋಷನಿಂದ ರಚಿತವಾದ "ಬುದ್ಧ ಚರಿತ" ಕಾವ್ಯ 5ನೇ ಶತಮಾನ ದಲ್ಲಿ ಚೀನೀ ಭಾಷೆಗೆ ಭಾಷಾಂತರವಾಯ್ತು. ಅದಕ್ಕೆ ಮೊದಲೇ ಕವಿ ಆ ಕೃತಿ ರಚಿಸಿರಬೇಕೆಂಬುದು ನಿರ್ವಿವಾದವಾದ ವಿಚಾರ.

2. ಬುದ್ಧ ಚರಿತದ ಅಂತಿಮ ಸರ್ಗದ 28ನೇ ಸರ್ಗ 63–67ನೇ ಶ್ಲೋಕ ದಲ್ಲಿ ಅಶೋಕ ಚಕ್ರವರ್ತಿಯ ಉಲ್ಲೇಖವಿದೆ. ಅಶೋಕನ ಕಾಲ ಕ್ರಿ.ಪೂ. 273-232 ಹೀಗಿರುವುದರಿಂದ ಆತ ಅಶೋಕನ ಕಾಲಕ್ಕಿಂತ ಹಿಂದೆ ಜೀವಿಸಿದ್ದ ಎನ್ನ ಬಹುದು.

3. ಅಶ್ವಘೋಷ ಮತ್ತು ಕಾಳಿದಾಸರ ಕಾವ್ಯ ಶೈಲಿಯನ್ನು ಹೋಲಿಸುವುದ ರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಏನೆಂದರೆ ಅಶ್ವಘೋಷ ಕಾಳಿದಾಸನಿಗಿಂತ ಪೂರ್ವದಲ್ಲಿ ಜೀವಿಸಿದ್ದ. ಕಾಳಿದಾಸ ಗುಪ್ತರ ಕಾಲದಲ್ಲಿ ಜೀವಿಸಿದ್ದ ಎನ್ನುತ್ತಾರೆ. ಬುದ್ಧ ಚರಿತ ಕಾವ್ಯದ 3ನೇ ಸರ್ಗದ ಕೆಲವು ವರ್ಣನಾ ಶ್ಲೋಕಗಳಿಗೂ ರಘುವಂಶದ ಕಾವ್ಯದ 7ನೇ ಸರ್ಗದ ಒಂದು ಸಂದರ್ಭದ ವರ್ಣನೆಗೂ ಅತ್ಯಂತ ನಿಕಟವಾದ ಸಾದೃಶ್ಯ ಕಂಡುಬರುತ್ತದೆ.

4. ಚೀನೀ ಪರಂಪರೆಯ ಕೆಲವು ಕಥೆಗಳ ಆಧಾರದಿಂದ ಹೇಳುವು ದಾದರೆ ಅಶ್ವಘೋಷ ಕುಶಾನ ವಂಶದ ರಾಜ ಕನಿಷ್ಕನ ಸಮಕಾಲೀನನಾಗಿದ್ದ. ಬೌದ್ಧ ಸಿದ್ಧಾಂತದ ಪ್ರಮುಖ ಅಂಗವಾದ ಅಭಿಧರ್ಮದ ವ್ಯಾಖ್ಯಾನವಾದ "ವಿಭಾಷೆ"ಯ ಲೇಖಕನಾಗಿದ್ದ ಆತ. ಕನಿಷ್ಕನ ಆಳ್ವಿಕೆಯಲ್ಲಿ ಈ ವಿಭಾಷೆಯ

ರಚನೆಯಾಯಿತು. ಇಲ್ಲಿ ಇನ್ನೂ ಒಂದು ತೊಡಕಿನ ಸಂಗತಿ ಎಂದರೆ ಕನಿಷ್ಕನ ಕಾಲವನ್ನು ಭಾರತೀಯ ಇತಿಹಾಸಕಾರರು ಖಚಿತವಾಗಿ ನಿರ್ಧರಿಸಿ ಹೇಳಲಿಲ್ಲ. ಬಹುಜನರ ಅಭಿಪ್ರಾಯದಂತೆ ಆತನ ಕಾಲ ಒಂದನೇ ಶತಮಾನದ ಅಂತಿಮ ಭಾಗ. ಎರಡನೇ ಶತಮಾನದ ದ್ವಿತೀಯ ಭಾಗವನ್ನು ದಾಟಿ ಯಾರೂ ಆತನ ಕಾಲವನ್ನು ಹೇಳುವುದಿಲ್ಲ. ಈಗ ಜನಜನಿತವಾಗಿರುವ ಅಭಿಪ್ರಾಯ ಕನಿಷ್ಕನ ಕಾಲ ಕ್ರಿ.ಪೂ. 78.

5. ಅಶ್ವಘೋಷನಿಂದ ರಚಿತವಾದ "ಸಾರಿಪುತ್ರ ಪ್ರಕರಣ" ಎಂಬ ನಾಟಕದ ಹಸ್ತ ಪ್ರತಿಯ ಲಿಪಿಯ ಆಧಾರದಿಂದ ಹೇಳುವುದಾದರೆ ಆತ ಕನಿಷ್ಕ ಅಥವಾ ಹುವಿಷ್ಕನ ಸಮಕಾಲೀನನಾಗಿದ್ದ ಇದು ಲೂಡರ್ಸ್ (Luders) ಎಂಬ ವಿದ್ವಾಂಸರ ಅಭಿಪ್ರಾಯ.

6. ಡಾ. ಜೋನ್‌ಸ್ಟನ್ ಎಂಬ ಇನ್ನೊಬ್ಬ ವಿದ್ವಾಂಸರು ಕ್ರಿ.ಪೂ. 50 ಮತ್ತು ಕ್ರಿ.ಪೂ. 100 ಈ ಮಧ್ಯೆ ಕವಿಯ ಜನ್ಮವಾಯಿತು ಎನ್ನುತ್ತಾರೆ.

ಈ ಎಲ್ಲಾ ಮುಖ್ಯಾಂಶಗಳ ಚಿಂತನ ಮಂಥನದಿಂದ ಇಷ್ಟು ಮಾತ್ರ ಹೇಳಲು ಬರುತ್ತದೆ. ಅಶ್ವಘೋಷ; ಪುರುಷಪುರ (ಈಗಿನ ಪಾಕಿಸ್ತಾನದಲ್ಲಿರುವ ಪೇಷಾವರ) ರಾಜಧಾನಿಯಲ್ಲಿ ಆಳುತ್ತಿದ್ದ ಕುಶಾನರ ರಾಜ ಕನಿಷ್ಕನ ಸಮಕಾಲೀನನಾಗಿದ್ದ ಅಥವಾ ಅವನಿಗಿಂತ ಸ್ವಲ್ಪ ಹಿಂದೆ ಜೀವಿಸಿದ್ದ ಇಂದಿಗೆ (1974) ಸುಮಾರು 2000 ಸಾವಿರ ವರ್ಷಗಳ ಹಿಂದೆ ಅಶ್ವಘೋಷ ಜೀವಿಸಿದ್ದನೆನ್ನಬಹುದು.

ಅಶ್ವಘೋಷ ಸುವರ್ಣಾಕ್ಷಿಯ ಪುತ್ರ ಸಾಕೇತವಾಸಿಯಾಗಿದ್ದ. ಸೌಂದರನಂದ ಕಾವ್ಯದ ಅಂತಿಮ ವಾಕ್ಯದಲ್ಲಿ ಈ ವಿಚಾರದ ಉಲ್ಲೇಖವಿದೆ. ("ಆರ್ಯ ಸುವರ್ಣಾಕ್ಷಿ ಪುತ್ರಸ್ಯ ಸಾಕೇತಸ್ಯ, ಭಿಕ್ಷೋರಾಚಾರ್ಯಸ್ಯ, ಭದಂತಶಶ್ವಘೋಷಸ್ಯಃ ಮಹಾಕವೇರ್ಮಹಾವಾದಿನಃ ಕೃತಿರಿಯಂ").

ಆತ ಬ್ರಾಹ್ಮಣ ಕುಲದಲ್ಲಿ ಜನಿಸಿದ. ಬ್ರಾಹ್ಮಣ ಕುಲಧರ್ಮದ ಸಂಪ್ರದಾಯಕ್ಕನುಗುಣವಾಗಿ ಆತನಿಗೆ ಬಾಲ್ಯದಲ್ಲಿಯೇ ಉತ್ತಮ ವಿದ್ಯಾಭ್ಯಾಸ ಲಭಿಸಿತು. ಹಿಂದೂ ಧರ್ಮಗ್ರಂಥಗಳು, ಪುರಾಣ, ಇತಿಹಾಸ, ರಾಮಾಯಣ, ಭಾರತಗಳ ಆಳವಾದ ಅಧ್ಯಯನವನ್ನು ಕೈಗೊಂಡು ವಿಪುಲ ಜ್ಞಾನಾರ್ಜನೆ ಮಾಡಿದ್ದ. ಬೌದ್ಧ ಧರ್ಮದ ಒಳ್ಳೆಯ ಗುಣಗಳಿಂದ ಆಕರ್ಷಿತನಾಗಿ ಆತ ಬೌದ್ಧಧರ್ಮವನ್ನು ಅವಲಂಬಿಸಿದ. ಸ್ವಂತ ಇಚ್ಛೆಯಿಂದಲೇ ಆತ ಬೌದ್ಧನಾದರೂ ಜೀವನದಲ್ಲಿ ಸಂತುಷ್ಟನಾಗಿರಲಿಲ್ಲ. ಕಾಲ ಕ್ರಮೇಣ ಆತ ಬೌದ್ಧಧರ್ಮದ ಪ್ರಬಲ ಪ್ರತಿಪಾದಕನೂ, ಉಪದೇಶಕನೂ, ಪ್ರಚಾರಕನೂ ಆದ. ಈ ಉದ್ದೇಶಕ್ಕಾಗಿ ಅಶ್ವಘೋಷ ಕಾವ್ಯ ಮತ್ತು ಸಂಗೀತದ ಮಾರ್ಗವನ್ನು ಯೋಚಿಸಿದ. ಕಾವ್ಯ ರಚನೆಯಲ್ಲಿ ಅಶ್ವಘೋಷನ ಉದ್ದೇಶ ಬೌದ್ಧಧರ್ಮ ಪ್ರಸಾರವೇ ಆಗಿತ್ತು. ಆತನ ನಾಟಕಗಳು

ಹಾಗೂ ಕಾವ್ಯಗಳಲ್ಲಿ ಉದ್ದಕ್ಕೂ ಬುದ್ಧನ ಮೇಲೆ ಆತನಿಗಿದ್ದ ಅಪಾರವಾದ ಭಕ್ತಿ, ಬೌದ್ಧ ಧರ್ಮ ತತ್ವಗಳ ಮೇಲೆ ಆತನಿಗಿದ್ದ ಪ್ರೇಮ, ದೃಢವಾದ ವಿಶ್ವಾಸ ಅಭಿವ್ಯಕ್ತವಾಗಿವೆ. ಗಾನ ಯೋಗ್ಯವಾದ ಮನೋಹರವಾದ ಪದಗಳ ವಿನ್ಯಾಸದಿಂದ ಕೂಡಿದ ಆಕರ್ಷಕ ಕಾವ್ಯಶೈಲಿ ಅಶ್ವಘೋಷನದು. ಗಾಯಕರು ಮತ್ತು ಗಾಯಿಕೆಯರ ಗುಂಪಿನೊಡನೆ ಸೇರಿಕೊಂಡು ನಾನಾ ಬಗೆಯ ವಾದ್ಯಗಳನ್ನು ಬಾರಿಸುತ್ತ ಜೀವನದ ಅನಿತ್ಯತೆಯ ಕುರಿತು ಮನೋಹರವಾದ ಗೀತೆಗಳನ್ನು ಹಾಡುತ್ತಾ ಊರೂರು ಸಂಚರಿಸುತ್ತಾ ಅಶ್ವಘೋಷ ಜನತೆಯನ್ನು ಬೌದ್ಧಧರ್ಮದ ಕಡೆಗೆ ಆಕರ್ಷಿಸುತ್ತಿದ್ದನಂತೆ.

ಕ್ರಿ.ಶ. 671 ರಿಂದ ಕ್ರಿ. ಶ. 695ರ ತನಕ ಭಾರತದಲ್ಲಿ ಪ್ರವಾಸ ಮಾಡುತ್ತಿದ್ದ ಚೀನೀ ಯಾತ್ರಿಕ ಇತ್ಸಿಂಗನೆಂಬಾತ ಹೇಳಿದ ಮಾತೊಂದಿದೆ. "ಅಶ್ವಘೋಷ ಬೌದ್ಧ ಧರ್ಮದ ಪ್ರಬಲ ಸಮರ್ಥಕನಾಗಿದ್ದ ಆತನ ಕಾಲದ ಬೌದ್ಧ ಮಠಗಳಲ್ಲಿ ಆತನ ಕೃತಿಗಳನ್ನು ಹಾಡುತ್ತಿದ್ದರು. ನಾಗಾರ್ಜುನ, ಅಶ್ವಘೋಷ, ದೇವ–ಈ ಮೂವರು ವಿದ್ವಾಂಸರ ಶ್ರೇಣಿಯಲ್ಲಿ ಅಶ್ವಘೋಷ ಮಾತ್ರ ಪ್ರತ್ಯೇಕ ಒಂದು ಗುಂಪಿನಲ್ಲಿ ಇರಲು ಅರ್ಹನು" ಎಂದು ಆತ ಹೇಳುತ್ತಾನೆ. ಇನ್ನೊಬ್ಬ ಚೀನೀ ಯಾತ್ರಿಕ ಹ್ಯುಯೆನ್‌ತ್ಸಾಂಗ್ (ಯುವಾನ್ ಚಾಂಗ್)ನ ಅಭಿಪ್ರಾಯದಂತೆ ಅಶ್ವಘೋಷ, ನಾಗಾರ್ಜುನ, ದೇವ, ಕುಮಾರಲಬ್ಧ (ಕುಮಾರ ಲತ) ನಾಲ್ಕು ಸೂರ್ಯರಂತೆ ವಿಶ್ವವನ್ನೇ ಬೆಳಗುತ್ತಿದ್ದಾರೆ.

ವಾಲ್ಮೀಕಿ ಅಥವಾ ಕಾಳಿದಾಸರಂತೆ ಅಶ್ವಘೋಷ ಒಬ್ಬ ಮಹಾ ಕವಿಯಾಗಿದ್ದ. ಕಾವ್ಯ ವಿಕಾಸ ಕ್ರಮವನ್ನು ಪರಿಶೀಲಿಸಿ ಹೇಳುವುದಾದರೆ ಅಶ್ವಘೋಷ ವಾಲ್ಮೀಕಿಯ ನಂತರದ ಸ್ಥಾನವನ್ನೂ ಕಾಳಿದಾಸನಿಗಿಂತ ಮೊದಲಿನ ಸ್ಥಾನವನ್ನೂ ಪಡೆಯುತ್ತಾನೆ. ಕಾವ್ಯ ಶೈಲಿಯಲ್ಲಿ ಆತ ವಾಲ್ಮೀಕಿಗೆ ಋಣಿ ಹಾಗೆಯೇ ಕಾಳಿದಾಸ ತನ್ನ ಕಾವ್ಯಶೈಲಿಗೆ ಅಶ್ವಘೋಷನಿಗೆ ಋಣಿಯಾಗಿದ್ದಾನೆ.

ಬೌದ್ಧ ಕವಿಯಾಗಿದ್ದ ಕಾರಣ ಇರಬೇಕು, ಅಶ್ವಘೋಷ ಭಾರತದಲ್ಲಿ ತನ್ನ ಜೀವಿತದ ಬಹು ಕಾಲವನ್ನು ಅಜ್ಞಾತವಾಗಿಯೇ ಕಳೆದ. ಕಳೆದ ಹಲವಾರು ವರ್ಷಗಳಿಂದ ಇತ್ತೀಚೆಗಿನ ತನಕ ಆತನ ಅನೇಕ ಕೃತಿಗಳ ಅನ್ವೇಷಣೆ ನಡೆದು ಕೆಲವು ಮಾತ್ರ ಉಪಲಬ್ಧವಾಗಿವೆ. ಆದರೆ ನಮ್ಮ ದುರ್ಭಾಗ್ಯವಶದಿಂದ ಕವಿಯ ಅನೇಕ ಕೃತಿಗಳು ಪೂರ್ತಿಯಾಗಿ ಲಭಿಸಿಲ್ಲ. ಕೇವಲ ತುಣುಕು ತುಣುಕುಗಳಲ್ಲಿ (ಖಂಡ ಖಂಡವಾಗಿ) ಲಭಿಸಿವೆ.

ಆರ್ಯಸುವರ್ಣಾಕ್ಷಿಪುತ್ರಸ್ಯ ಸಾಕೇತಸ್ಯ ಭಿಕ್ಷೋರಾಚಾರ್ಯಸ್ಯ
ಭದಂತಾಶ್ವಘೋಷಸ್ಯ ಮಹಾಕವೇರ್ಮಹವಾದಿನಃ ಕೃತಿಖ್ಯಮೂ

–ಕವಿಕೃತ ಸೌಂದರನಂದದ ಅಂತಿಮವಾಕ್ಯ.

ಅಶ್ವಘೋಷನ ಕೃತಿಗಳು

ಸೂತ್ರಾಲಂಕಾರ : ಈ ಕೃತಿ ಮೂಲ ಸಂಸ್ಕೃತ ಭಾಷೆಯಲ್ಲಿದೆ. ಅದು ಇಂದು ಉಪಲಬ್ಧವಾಗಿಲ್ಲ. ಕ್ರಿ.ಶ. 405ರಲ್ಲಿ ಕುಮಾರಜೀವ ಎಂಬುವನು ಇದನ್ನು ಚೀನೀ ಭಾಷೆಗೆ ಅನುವಾದಿಸಿದ ಈ ಗ್ರಂಥ ಸಮಕಾಲೀನ ಪಾಲೀ ಜಾತಕಗಳ ಆಧಾರದಿಂದ ರಚಿತವಾದ ಮನೋಜ್ಞವಾದ ಕತೆಗಳ ಸಂಕಲನವಾಗಿದೆ. ಬೌದ್ಧ ಧರ್ಮ ಪ್ರಸಾರದ ಪ್ರಮುಖ ಸಾಧನವಾಗಿದೆ. ಇತ್ಸಿಂಗನೆಂಬ ಚೀನೀ ಯಾತ್ರಿಕ ರಚಿಸಿದ ಅವನ ಪ್ರವಾಸಾನುಭವಗಳ ದಾಖಲೆಯ 7ನೇ ಅಧ್ಯಾಯದಲ್ಲಿ ಅಶ್ವಘೋಷನಿಂದ ರಚಿತವಾದ ಸೂತ್ರಾಲಂಕಾರದ ಉಲ್ಲೇಖವನ್ನು ಮಾಡಿದ್ದಾನೆ. ಮೂಲಗ್ರಂಥ ಹೇಗೆ ನಾಶವಾಯಿತೋ ಎಂದು ನಾಶವಾಯಿತೋ ಯಾವುದೊಂದು ವಿವರಗಳೂ ನಮಗೆ ತಿಳಿದು ಬರುವುದಿಲ್ಲ. ಹೂವರ್ ಎಂಬ ವಿದ್ವಾಂಸ ಈ ಗ್ರಂಥದ ಚೀನೀ ಭಾಷೆಯ ಅನುವಾದದ ಆಧಾರದಿಂದ ಅದನ್ನು ಫ್ರೆಂಚ್ ಭಾಷೆಗೆ ಅನುವಾದ ಮಾಡಿರುತ್ತಾನೆ.

ಮಧ್ಯ ಏಷ್ಯಾದಲ್ಲಿ ಲೂಡರ್ಸ್ ಎಂಬ ವಿದ್ವಾಂಸರ ಮೂಲಕ ಲಭ್ಯವಾದ ಕುಮಾರ ಲತ ಎಂಬಾತ ರಚಿಸಿದ "ಕಲ್ಪನ ಮಂಡಿತ ದೃಷ್ಟಾಂತ ಪಂಜ್ತಿ" ಎಂಬ ಗ್ರಂಥದ ಖಂಡ ಖಂಡವಾದ ಭಾಗಗಳು 1926ರಲ್ಲಿ ಪ್ರಕಟವಾಯಿತು. ಅಂದಿನಿಂದ ಆ ಕೃತಿಯ ಮತ್ತು ಸೂತ್ರಾಲಂಕಾರ ಕೃತಿಯ ಲೇಖಕರ ಹಾಗೂ ಎರಡೂ ಗ್ರಂಥಗಳಲ್ಲಿನ ಶೈಲಿಯ ಸಾದೃಶ್ಯದ ಕುರಿತು ವಿದ್ವಾಂಸರಲ್ಲಿ ಭಿನ್ನ ಭಿನ್ನ ವಿಚಾರಗಳು ಪ್ರತಿಪಾದಿಸಲ್ಪಟ್ಟವು. ಇವೆರಡೂ ಗ್ರಂಥಗಳೂ ಒಂದೇ ಅಲ್ಲ. ಮತಾಂತರವೇ ಪ್ರಧಾನ ಕಾರಣವಾದ್ದರಿಂದ ಇವೆರಡು ಗ್ರಂಥಗಳಲ್ಲಿನ ಕತೆಗಳಲ್ಲಿ ಹೋಲಿಕೆ ಕಂಡು ಬರುತ್ತದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರು.

ಮಹಾಯಾನ ಶ್ರದ್ಧೋತ್ಪಾದಕ

ಮಹಾಯಾನ ಸಂಪ್ರದಾಯದ ಒಂದು ದಾರ್ಶನಿಕ ಗ್ರಂಥವಿದು. ಆ ಗ್ರಂಥ ಎರಡು ಚೀನೀ ರೂಪಾಂತರಗಳಲ್ಲಿ ಮಾತ್ರ ಉಪಲಬ್ಧವಾಗಿವೆ. ಗ್ರಂಥಕರ್ತೃವಿನ ವಿಚಾರ ಇನ್ನೂ ವಿವಾದಾಸ್ಪದವಾಗಿ ಉಳಿದಿದೆ. ಹ್ಯುಯೆನ್‌ತ್ಸಾಂಗ್ ತನ್ನ ಪ್ರವಾಸಾನುಭವಗಳ ದಾಖಲೆಯಲ್ಲಿ ಈ ಗ್ರಂಥದ ಕರ್ತೃ ಅಶ್ವಘೋಷ ಎನ್ನುತ್ತಾನೆ. ಕೆಲವರ ಅಭಿಪ್ರಾಯದಂತೆ ಕವಿ ಅಶ್ವಘೋಷ ಹಾಗೂ ದಾರ್ಶನಿಕ ಅಶ್ವಘೋಷ ಇಬ್ಬರೂ ಭಿನ್ನ ಭಿನ್ನ ವ್ಯಕ್ತಿಗಳು. ಯಾರೋ ಮೂರನೆಯವನೊಬ್ಬ ಈ ಕೃತಿಯನ್ನು ರಚಿಸಿ ಅಶ್ವಘೋಷನ ಪ್ರಸಿದ್ಧಿಯನ್ನು ಕಂಡು ಗ್ರಂಥದ ಕರ್ತೃತ್ವವನ್ನು ಅವನಿಗೆ ಆರೋಪಿಸಿದ್ದಾನೆ. ಕೆಲವು ಜಪಾನಿ ವಿದ್ವಾಂಸರ ಅಭಿಪ್ರಾಯದಂತೆ ಇದು ಸಂಸ್ಕೃತ ಭಾಷೆಯ ಗ್ರಂಥವೇ ಅಲ್ಲ. ಚೀನೀ ಭಾಷೆಯ ಗ್ರಂಥವಾಗಿದೆ. ಜಪಾನಿನ ಶಾಲೆಗಳಲ್ಲಿ ಹಾಗೂ ಬೌದ್ಧ ಮಠಗಳಲ್ಲಿ ಈ ಗ್ರಂಥ ತುಂಬಾ ಪ್ರಸಿದ್ಧವಾಗಿದೆ.

ಗಾಂಡೀ ಸ್ತೋತ್ರಗಾಥಾ

ಇದು ಒಂದು ಸುಂದರವಾದ ಗೇಯ ಕಾವ್ಯವಾಗಿದೆ. ಬುದ್ಧ ಹಾಗೂ ಸಂಘದ ಸ್ತುತಿ ಇದರಲ್ಲಿದೆ. ಮನೋಜ್ಞವಾದ ಸ್ರಗ್ಧರಾವೃತ್ತ ಛಂದಸ್ಸಿನಲ್ಲಿರುವ 29 ಪದ್ಯಗಳು ಇದರಲ್ಲಿವೆ. ಒಬ್ಬ ಯುರೋಪಿನ ವಿದ್ವಾಂಸ ಈ ಕಾವ್ಯದ ಚೀನೀ ಲಿಪಿಯ ಆಧಾರದಿಂದ ಮತ್ತೆ ಇದನ್ನು ಮೂಲ ಸಂಸ್ಕೃತದಲ್ಲಿ ರಚಿಸಿದ.

ರಾಷ್ಟ್ರಪಾಲ

ದಿವಂಗತ ಸಿಲವಾಲೆವಿ ಎಂಬ ವಿದ್ವಾಂಸನ ಅಭಿಪ್ರಾಯದಂತೆ ಅಶ್ವಘೋಷ ಒಂದು ಗೇಯ ನಾಟಕವನ್ನು "ರಾಷ್ಟ್ರಪಾಲ" ಎಂಬ ಹೆಸರಲ್ಲಿ ರಚಿಸಿದ್ದ.

ವಜ್ರಸೂಚಿ

ಗ್ರಂಥದ ಹೆಸರೇ ವಜ್ರಸೂಚಿ. ಈ ಗ್ರಂಥ ತೀಕ್ಷ್ಣವಾದ ವಜ್ರದ ಸೂಜಿಯಂತೆ ವರ್ಣವ್ಯವಸ್ಥೆಯನ್ನು ಸಮರ್ಥಿಸುವ ವೈದಿಕರನ್ನು ಚುಚ್ಚುತ್ತದೆ. ಶ್ರುತಿ, ಸ್ಮೃತಿ ಹಾಗೂ ಮಹಾಭಾರತ ಗ್ರಂಥಗಳಿಂದ ಆರಿಸಿದ ಉದಾಹರಣೆಗಳ ಮೂಲಕ ವರ್ಣವ್ಯವಸ್ಥೆಯ ಕಠೋರವಾದ ಚಿಂತನೆಯನ್ನು ಗ್ರಂಥದಲ್ಲಿ ಮಾಡಲಾಗಿದೆ. ಮನುಷ್ಯನ ಜೀವನದಲ್ಲಿ ಸುಖ-ದುಖ, ವ್ಯವಸಾಯ-ವ್ಯಾಪಾರ, ಜನನ-ಮರಣ, ಭಯ-ಕಾಮ, ಮುಂತಾದ ಎಲ್ಲಾ ಬಗೆಯ ಶ್ರೇಣಿಗಳ ಪಾತ್ರವನ್ನು ವಿವೇಚಿಸಲಾಗಿದೆ. ಯುರೋಪಿನ ವಿದ್ವಾಂಸರು ಇಂತಹ ವಿಚಾರಗಳನ್ನು ಓದಿ ಪುಸ್ತಕದ ವಿಷಯ ಶೈಲಿಗೆ ಮುಗ್ಧರಾಗಿದ್ದಾರೆ. ಈ ಗ್ರಂಥದ ಚೀನೀ ಅನುವಾದದ ಆಧಾರದಿಂದ ಮೂಲ ಗ್ರಂಥದ ಲೇಖಕ "ಧರ್ಮಕೀರ್ತಿ" ಎಂದು ಪ್ರತೀತಿ.

ಸಾರಿಪುತ್ರ ಪ್ರಕರಣ ಮತ್ತು ಮೂರು ನಾಟಕಗಳು

ಅಶ್ವಘೋಷ ಸಂಸ್ಕೃತದ ಅತ್ಯಂತ ಪ್ರಾಚೀನ ನಾಟಕಕಾರರಲ್ಲಿ ಒಬ್ಬನೆಂದು ಪರಿಗಣಿಸಲ್ಪಟ್ಟಿದ್ದಾನೆ ಎಂಬ ವಿಷಯವನ್ನು ಇದೇ ಲೇಖನದ ಆರಂಭದಲ್ಲಿ ಹೇಳಲಾಗಿದೆ.

ಮಧ್ಯ ಏಷ್ಯದ ಟೂರ್ಫಾನ್ ಎಂಬಲ್ಲಿ 1911 ರಲ್ಲಿ ದೊರೆತ ಶಾರದ್ವತಿ ಪುತ್ರ ಪ್ರಕರಣ ಎಂಬ ನಾಟಕದ ತುಣುಕುಗಳಿಂದ ಮೇಲಿನ ಹೇಳಿಕೆ ಸ್ಪಷ್ಟವಾಗುತ್ತದೆ. ತಾಳೆಪತ್ರಗಳಲ್ಲಿ ಬರೆಯಲಾದ ಈ ಮೂರು ನಾಟಕಗಳ ಅವಶೇಷಗಳು ದೊರಕಿವೆ. ಅವುಗಳಲ್ಲಿ ಒಂದು ನಾಟಕದ ಅಂತಿಮ ವಾಕ್ಯದಲ್ಲಿ ಆ ನಾಟಕದ ಹೆಸರು, ಲೇಖಕನ ಹೆಸರು, ಅಂಕಗಳ ಸಂಖ್ಯೆ ಸ್ಪಷ್ಟವಾಗಿ ನಿರೂಪಿತವಾಗಿವೆ. ಗ್ರಂಥದ ಹೆಸರು ಸಾರಿಪುತ್ರಪ್ರಕರಣ ಅಥವಾ ಶಾರದ್ವತೀ ಪುತ್ರಪ್ರಕರಣ. ಲೇಖಕನ ಹೆಸರು ಸುವರ್ಣಾಕ್ಷಿ ಪುತ್ರ ಅಶ್ವಘೋಷ. ಅಂಕಗಳ ಸಂಖ್ಯೆ 9.

ಸಾರಿಪುತ್ರ ಪ್ರಕರಣದಲ್ಲಿ ನಾಟಕದಲ್ಲಿ ಬರುವ ಪ್ರಮುಖ ಪಾತ್ರಗಳು ಬುದ್ಧ, ಆತನ ಶಿಷ್ಯರಾದ ಸಾರಿಪುತ್ರ ಮೌದ್ಗಲಾಯನರು. ಅಶ್ವಜಿತು ಎಂಬುವನೊಡನೆ ಭೇಟಿಯಾದ ಬಳಿಕ ಸಾರಿಪುತ್ರ ತನ್ನ ಗೆಳೆಯನಾದ ವಿದೂಷಕನೊಡನೆ ಬುದ್ಧನಿಂದ ಉಪದೇಶ ಪಡೆಯುವ ತನ್ನ ಕೋರಿಕೆ (ಮನೋಭಿಲಾಷೆಯನ್ನು) ವ್ಯಕ್ತಪಡಿಸುತ್ತಾನೆ. ಮೌದ್ಗಲಾಯನ ಹಾಗೂ ಸಾರಿಪುತ್ರರಿಬ್ಬರೂ ಜೊತೆಯಾಗಿ ಬುದ್ಧನ ದರ್ಶನ ಪಡೆಯುತ್ತಾರೆ. ಅವನು ಅವರಿಬ್ಬರನ್ನೂ ಸತ್ಕರಿಸಿ ಉಪದೇಶ ನೀಡುತ್ತಾನೆ. ಪ್ರಕರಣದ ಅಂತ್ಯದಲ್ಲಿ ಬುದ್ಧ ಮತ್ತು ಸಾರಿಪುತ್ರರ ನಡುವೆ ನಡೆಯುವ ದಾರ್ಶನಿಕ ತತ್ವಗಳ ಚರ್ಚೆಯ ನಿರೂಪಣೆ ಇದೆ. ಇಬ್ಬರು ಶಿಷ್ಯರನ್ನೂ ಪ್ರಶಂಸಿಸುತ್ತಾ ಬುದ್ಧ ಭರತವಾಕ್ಯ ನುಡಿಯುತ್ತಾನೆ.

ದಶರೂಪಕಗಳಲ್ಲಿ 'ಪ್ರಕರಣ'ವೂ ಒಂದು. ಸಾರಿಪುತ್ರ ಪ್ರಕರಣದ ಅಧಿಕಾಂಶ ಭಾಗ ನಾಟ್ಯಶಾಸ್ತ್ರದ ಆಧಾರದಮೇಲೆ ರಚಿತವಾಗಿವೆ. ನಾಟ್ಯಶಾಸ್ತ್ರದಲ್ಲಿ ಹೇಳಿದಂತೆ ಒಂಭತ್ತು ಅಂಕಗಳುಳ್ಳ ಈ ನಾಟಕದ ನಾಯಕ ಧೀರನೂ, ಪ್ರಶಾಂತ ಸ್ವಭಾವದವನೂ ಆಗಿರುತ್ತಾನೆ. ನಾಯಿಕೆ ಕುಲಸ್ತ್ರೀ ಅಥವಾ ವೇಶ್ಯೆ ಆಗಿರುತ್ತಾಳೆ. ಆದರೆ ಅಂಕಗಳ ಹೆಸರು ಕಂಡುಬರುವುದಿಲ್ಲ. ಭರತವಾಕ್ಯ ನುಡಿಯುವ ಮೊದಲು ಸಂಸ್ಕೃತ ನಾಟಕಗಳಲ್ಲಿ ಸಾಂಪ್ರದಾಯಿಕವಾಗಿ ಉಚ್ಚರಿಸುವ "ಅತಃ ಪರಮಪಿ ಪ್ರಿಯಮಸ್ತಿ." ಎಂಬ ಮಾತು ಬರುವುದಿಲ್ಲ. ನಾಯಕ ಬುದ್ಧ. ಅವನ ಶಿಷ್ಯರು ಸಂಸ್ಕೃತ ಗದ್ಯಪದ್ಯಗಳಲ್ಲಿ ಸಂಭಾಷಣೆ ನಡೆಸುತ್ತಾರೆ. ಈ ಶಿಷ್ಯರುಗಳಲ್ಲಿ ಒಬ್ಬ ಕೌಂಡಿನ್ಯ ಹಾಗೂ ಒಬ್ಬ ಶ್ರವಣ (ಬೌದ್ಧಸನ್ಯಾಸಿ)ಯೂ ಇರುತ್ತಾರೆ. ವಿದೂಷಕ ಮಾತ್ರ ಪ್ರಾಕೃತದಲ್ಲಿ ಮಾತನಾಡುತ್ತಾನೆ.

ಸಾರಿಪುತ್ರ ಪ್ರಕರಣ ನಾಟಕವಿರುವ ಗ್ರಂಥದಲ್ಲಿ ಉಳಿದೆರಡು ರೂಪಕಗಳಿದ್ದುವು ಎಂದು ಅವುಗಳ ಅವಶೇಷಗಳಲ್ಲಿ ಕಂಡುಬರುತ್ತದೆ. ಇವುಗಳ ಲೇಖಕನೂ ಅಶ್ವ-ಘೋಷನೇ ಇರಬೇಕೆಂದು ಹೇಳಬಹುದು.

ಇದಕ್ಕೆ ಪ್ರಬಲವಾದ ಆಧಾರಗಳೇನೂ ಕೊಡಲು ಸಾಧ್ಯವಾಗುವುದಿಲ್ಲ. ಆ ಎರಡು ರೂಪಕಗಳಲ್ಲಿ ಎರಡನೆಯದರ ಶೈಲಿ ಹಾಗೂ ಅಶ್ವಘೋಷನ ಇತರ ಕೃತಿಗಳ ಶೈಲಿಯೊಡನೆ ಸಾದೃಶ್ಯ ಕಂಡುಬರುತ್ತದೆ. ಇವುಗಳಲ್ಲಿ ಮೊದಲನೆಯದು ಒಂದು ವಿಶಿಷ್ಟ ಬಗೆಯ ನಾಟಕ. ಬುದ್ಧಿ, ಕೀರ್ತಿ ಮತ್ತು ಧೃತಿ ಇವುಗಳೇ ಈ ನಾಟಕದ ಪ್ರಧಾನ ಪಾತ್ರಗಳು. ರಂಗಮಂದಿರದಮೇಲೆ ಆಗಮಿಸಿ ಈ ಮೂರೂ ಸಂಭಾಷಣೆ ನಡೆಸುತ್ತವೆ. ಈ ನಾಟಕದ ದೊರಕಿರುವ ಅವಶೇಷ ತುಣುಕುಗಳು ತುಂಬಾ ಶಿಥಿಲವಾಗಿ ಹೋಗಿರುವುದರಿಂದ ಹೆಚ್ಚಾಗಿ ಏನನ್ನೂ ಹೇಳಲು ಸಾಧ್ಯವಾಗುವುದಿಲ್ಲ. ಪೂರ್ತಿ ಲಭಿಸಿರುತ್ತಿದ್ದರೆ ಇಂದಿನ ನವ್ಯನಾಟಕಗಳಂತೆ ಎಷ್ಟು ಪ್ರಸಿದ್ಧವಾಗುತ್ತಿತ್ತೋ ? ಇಂತಹ ವಿಶಿಷ್ಟ ಬಗೆಯ ನಾಟಕ 10ನೇ ಶತಮಾನದ

ತನಕ ಬೇರೆ ಯಾವುದೂ ದೊರಕುವುದಿಲ್ಲ. 11ನೇ ಶತಮಾನದಲ್ಲಿ ಕೃಷ್ಣಮಿಶ್ರ ಎಂಬಾತ "ಪ್ರಬೋಧ ಚಂದ್ರೋದಯ" ಎಂಬ ಹೆಸರಿನ ನಾಟಕವೊಂದನ್ನು ರಚಿಸಿದ್ದನಂತೆ.

ಎರಡನೆಯ ನಾಟಕದ ಅವಶೇಷಗಳಿಂದ ಲಭಿಸಿದ ಕೆಲವೇ ತುಣುಕುಗಳ ಆಧಾರದಿಂದ ಹೇಳುವುದಾದರೆ ಇದು ಸಹಾ ಬೌದ್ಧ ಧರ್ಮದ ವಿಷಯವನ್ನೇ ಪ್ರತಿಪಾದಿಸುವ ನಾಟಕ. ನಾಟಕದಲ್ಲಿ ಮಗಧವತೀ ಎಂಬ ಹೆಸರಿನ ವೇಶ್ಯೆ, ಕೌಮುದಗಂಧ ಎಂಬ ಹೆಸರಿನ ವಿದೂಷಕ, ಸೋಮದತ್ತನೆಂಬ ನಾಯಕ, ಒಬ್ಬ ರಾಜಕುಮಾರ, ಒಬ್ಬಳು ದಾಸಿ, ಒಬ್ಬ ದುಷ್ಟ, ಸಾರಿಪುತ್ರ ಹಾಗೂ ಮೌದ್ಗಲಾಯನ ಇಷ್ಟು ಪಾತ್ರಗಳಿವೆ. ವೇಶ್ಯೆ, ದಾಸಿ, ಹಾಗೂ ದುಷ್ಟ ಇಷ್ಟು ಪಾತ್ರಗಳು ಪ್ರಾಕೃತದಲ್ಲಿ ಸಂಭಾಷಣೆ ನಡೆಸುತ್ತವೆ. ಮಿಕ್ಕುಳಿದ ಪಾತ್ರಗಳು ಸಂಸ್ಕೃತವಲ್ಲಿ ಮಾತನಾಡುತ್ತವೆ. ಒಂದು ಉದ್ಯಾನವನ ಹಾಗೂ ವೇಶ್ಯೆಯ ಗೃಹ, ನಾಟಕ ನಡೆಯುವ ಸ್ಥಳ. ನಾಟಕದ ಕೆಲವೇ ತುಣುಕುಗಳು ಲಭಿಸಿರುವ ಕಾರಣ ಇದರ ಕುರಿತಾಗಿಯೂ ಹೆಚ್ಚೇನೂ ಹೇಳಲು ಬರುವಂತಿಲ್ಲ. ಶೈಲಿಯ ಸಾದೃಶ್ಯದಿಂದ ಇವೆರಡನ್ನೂ ಅಶ್ವಘೋಷನೇ ರಚಿಸಿರಬೇಕು ಎನ್ನಬಹುದು.

ಬುದ್ಧ ಚರಿತೆ

"ಬುದ್ಧ ಚರಿತ" ಅಶ್ವಘೋಷನಿಂದ ರಚಿತವಾದ ಒಂದು ಮಹಾಕಾವ್ಯ. ಈ ಕಾವ್ಯವೂ ಪೂರ್ತಿಯಾಗಿ ಉಪಲಬ್ಧವಾಗಿಲ್ಲ. ಲಬ್ಧವಾಗಿರುವ ಮೂಲ ಸಂಸ್ಕೃತ ಕಾವ್ಯದಲ್ಲಿ 17 ಸರ್ಗಗಳಿವೆ. ಉಳಿದ ಅಂತಿಮ 4 ಸರ್ಗಗಳು 19ನೇ ಶತಮಾನದ ಆರಂಭದಲ್ಲಿ ಅನುವಾದಗಳ ಮುಖಾಂತರ ಮೂಲಗ್ರಂಥಕ್ಕೆ ಜೋಡಿಸಲ್ಪಟ್ಟುವು. ಈ ಕಾರ್ಯವನ್ನು ಅಮೃತಾನಂದ ಎಂಬುವನು ಯಶಸ್ವಿಯಾಗಿ ಮಾಡಿ ಮುಗಿಸಿದನು. ಧರ್ಮಕ್ಷೇಮ ಅಥವಾ ಧರ್ಮಾಕ್ಷರ ಎಂಬ ಹೆಸರಿನ ಭಾರತೀಯ ವಿದ್ವಾಂಸ (ಸು. ಕ್ರಿ.ಶ. 414–421 ರಲ್ಲಿ) ಈ ಕಾವ್ಯವನ್ನು ಚೀನೀ ಭಾಷೆಗೆ ಅನುವಾದ ಮಾಡಿದ. ಅವುಗಳಲ್ಲಿ (ಚೀನೀ ಅನುವಾದದಲ್ಲಿ) 28 ಸರ್ಗಗಳಿವೆ. ಬುದ್ಧನ ಪರಿನಿರ್ವಾಣದ ತನಕ ಕಥೆ ಮುಂದುವರಿದಿದೆ. 7 ಅಥವಾ 8ನೇ ಶತಮಾನದಲ್ಲಿ "ಬುದ್ಧಚರಿತ" ಟಿಬೇಟ್ ಭಾಷೆಗೆ ಅನುವಾದಿತವಾಯಿತು. ಇದರಲ್ಲೂ 28 ಸರ್ಗಗಳಿವೆ. ಮಹಾಮಹೋಪಾಧ್ಯಾಯ ಹರಿಪ್ರಸಾದ ಶಾಸ್ತ್ರಿ ಎಂಬುವರ ಮೂಲಕ ಲಭ್ಯವಾದ ಪ್ರತಿಯಲ್ಲಿ 40 ಸರ್ಗಗಳ ಮಧ್ಯಾಂತರದ ತನಕವಿದೆ. ಇದು ನಿಸ್ಸಂದೇಹವಾಗಿಯೂ ಮೂಲ ಸಂಸ್ಕೃತದ ಬುದ್ಧ ಚರಿತದ ಆಧಾರದಿಂದಲೇ ರಚಿತವಾಗಿದೆ. ಟಿಬೇಟ್ ಭಾಷೆಗೆ ಅನುವಾದಿತವಾದ ಪ್ರತಿಯ ಆಧಾರದಿಂದ ಮೂಲ ಸಂಸ್ಕೃತ ಬುದ್ಧ ಚರಿತದ ಅಲಭ್ಯವಾದ ಭಾಗಗಳ ಪುನರುದ್ಧಾರಮಾಡಲು ಸಾಧ್ಯವಿದೆ ಎಂದು ಹೇಳುತ್ತಾರೆ.

ಪ್ರಣಯ ದೃಶ್ಯಗಳ ಚಿತ್ರಣ ಮಹಾಕಾವ್ಯದ ಒಂದು ಪ್ರಮುಖ ಅಂಗವೆಂದು ಪರಿಗಣಿಸಲ್ಪಡುತ್ತದೆ. ಬುದ್ಧನ ಜೀವನದ ಕಥೆಯೇ ಕಾವ್ಯದ ಜೀವಾಳ. ಅರಮನೆಯಿಂದ ನಿರ್ಗಮಿಸುವ ರಾಜಕುಮಾರನನ್ನು ನೋಡುವ ತವಕದಿಂದ ಗುಂಪುಕೂಡಿದ್ದ ಸ್ತ್ರೀಯರ ಸಜೀವ ಚಿತ್ರಣದಲ್ಲಿ ಹಾಗೂ ರಾಜಕುಮಾರನ ಮಹಾಭಿನಿಷ್ಕ್ರಮಣ ಕಾಲದಲ್ಲಿ ನಿದ್ದೆಗೈಯುತ್ತಿರುವ ಸುಂದರಿಯರ ವರ್ಣನೆಯಲ್ಲಿ ಕವಿಗೆ ಶೃಂಗಾರರಸ ವರ್ಣನೆಯಲ್ಲಿರುವ ಪ್ರೌಢಿಮೆ ಸ್ಪಷ್ಟವಾಗುತ್ತದೆ. ನಾಲ್ಕನೆಯ ಸರ್ಗದಲ್ಲಿ ಕುಲ ಪುರೋಹಿತನು ರಾಜಕುಮಾರನಿಗೆ ನೀತಿಶಾಸ್ತ್ರದ ಉಪದೇಶ ಮಾಡುತ್ತಾನೆ. ರಾಜನೀತಿ ಶಾಸ್ತ್ರದಲ್ಲಿ ಕವಿಗೆ ಒಳ್ಳೆಯ ಪಾಂಡಿತ್ಯವಿತ್ತು, ಎಂಬುದು ಇದರಿಂದ ಅರಿವಾಗುತ್ತದೆ. ಪ್ರಣಯ ದೃಶ್ಯಗಳ ನಿರೂಪಣೆಯಂತೆ ಯುದ್ಧ ವರ್ಣನೆಯೂ ಮಹಾಕಾವ್ಯದ ಪ್ರಮುಖ ಅಂಗ. ಮಾರನಿಗೂ ಬುದ್ಧನಿಗೂ ನಡೆಯುವ ಕದನವನ್ನು ಸೊಗಸಾಗಿ ವರ್ಣಿಸಿ ಕಾವ್ಯಕೌಶಲವನ್ನು ವ್ಯಕ್ತಪಡಿಸಿದ್ದಾನೆ.

ಕಾವ್ಯದ ಅಂತಿಮ ಭಾಗ ವೈಶಿಷ್ಟ್ಯಪೂರ್ಣ. ಕಾವ್ಯದ ಪ್ರಯೋಜನವನ್ನು ಆತ ತಿಳಿಸುತ್ತಾನೆ. ಕಾವ್ಯಕೌಶಲವನ್ನು ಪ್ರದರ್ಶಿಸಲು ಅಥವಾ ಪಾಂಡಿತ್ಯ ಪ್ರದರ್ಶನಕ್ಕಾಗಿಯಾಗಲಿ ತಾನು ಈ ಕಾವ್ಯವನ್ನು ರಚಿಸಿಲ್ಲ. ಜಗತ್ತಿನ ಜನರ ಸುಖ ಮತ್ತು ಪ್ರಯೋಜನಕ್ಕಾಗಿ ಈ ಕಾವ್ಯವನ್ನು ರಚಿಸಿದ್ದೇನೆ ಎನ್ನುತ್ತಾನೆ. ಪ್ರಾಪಂಚಿಕ ವಿಷಯ ವಸ್ತುಗಳ ವ್ಯಾಮೋಹದಿಂದ ವ್ಯಾಕುಲಚಿತ್ತರಾದ ಜನರಿಗೆ ಸದುಪದೇಶ ಇಲ್ಲದೆ, ದುಃಖದಿಂದ ದಗ್ಧವಾಗಿ ಹೋದ ಸಂಸಾರಕ್ಕೆ ಸಂತೋಷ ಇಲ್ಲಿ ಲಭಿಸುತ್ತದೆ ಎನ್ನುವುದೇ ಕವಿಯ ಆಶಯ.

ಬುದ್ಧ ಚರಿತವನ್ನು ಮುಕ್ತ ಕಂಠದಿಂದ ಶ್ಲಾಘಿಸುತ್ತ ಇತ್ಸಿಂಗ್ ಚೀನಿ ಪ್ರವಾಸಿ ಹೇಳಿದ ಮಾತುಗಳಿವು. "ಭಾರತ ದೇಶದ ಐದು ಪ್ರಾಂತಗಳಲ್ಲಿ ಹಾಗೂ ದಕ್ಷಿಣ ಸಮುದ್ರದ ದ್ವೀಪಗಳ ತನಕವೂ ಈ ಕಾವ್ಯದ ಗುಣಗಾನ ಮಾಡಲ್ಪಡುತ್ತದೆ. ಕೆಲವೇ ಶಬ್ದಗಳಲ್ಲಿ ಕವಿ ಅರ್ಥ ಹಾಗೂ ಭಾವನೆಗಳ ಭಾರದಿಂದ ಬಳುಕುವ ಶ್ರೇಷ್ಠ ಕಾವ್ಯವೊಂದನ್ನು ರಚಿಸಿದ್ದಾನೆ. ಸಮಗ್ರ ಕಾವ್ಯದ ಸಾರಸರ್ವಸ್ವವನ್ನು ಎಷ್ಟು ಬಾರಿ ಓದಿ ಸವಿದರೂ ವಾಚಕರಿಗೆ ಆಯಾಸವೆಂಬುದೇ ಇಲ್ಲ. ನಿಸ್ಸಂದೇಹವಾಗಿಯೂ ಇದು ಒಂದು ಕಲಾತ್ಮಕ ಕೃತಿ. ವಿಷಯ ಪ್ರತಿಪಾದನೆ ಸುವ್ಯವಸ್ಥಿತವೂ, ಸುಂದರವೂ ಆಗಿದೆ. ದೃಶ್ಯ ವರ್ಣನೆಗಳು ಸಜೀವವೂ ಸುಂದರವೂ ಆಗಿವೆ. ಅನಾವಶ್ಯಕವಾದ ಅಲಂಕಾರ ವರ್ಣನೆಗಳು ಇಲ್ಲಿ ಕಂಡುಬರುವುದಿಲ್ಲ. ಚಮತ್ಕಾರ ಪೂರ್ಣವೂ ಆಶ್ಚರ್ಯಜನಕವೂ ಆದ ಘಟನಾವಳಿಗಳ ವರ್ಣನೆಯಲ್ಲಿ ಕವಿಯ ಸಂಯಮ, ಆತನ ಪ್ರತಿಭೆ ವ್ಯಕ್ತವಾಗುತ್ತದೆ.".

ಸೌಂದರನಂದ

ಇದು 18 ಸರ್ಗಗಳಿರುವ ಕಾವ್ಯ. ಈಕಾವ್ಯದ ಎರಡು ಅತ್ಯಂತ ಪ್ರಾಚೀನ ಹಸ್ತಪ್ರತಿಗಳು ಲಭ್ಯವಾಗಿವೆ. ಎರಡೂ ತುಂಬಾ ಜೀರ್ಣವಾಗಿದೆ (ಶಿಥಿಲಾವಸ್ಥೆಯಲ್ಲಿವೆ).

ಎರಡು ಪ್ರತಿಗಳೂ ನೇಪಾಲ ಮಹಾರಾಜನ ಗ್ರಂಥ ಭಂಡಾರದಲ್ಲಿ ಸುರಕ್ಷಿತವಾಗಿವೆ. ಇವುಗಳ ಆಧಾರದಿಂದ ಮೂಲ ಕಾವ್ಯದ ಶುದ್ಧ ಪ್ರತಿಗಳನ್ನು (ಪರಿಶುದ್ಧ ಪಾಠಾಂತರಗಳನ್ನು) ತಯಾರಿಸುವುದು ತುಂಬಾ ತೊಡಕಿನ ಕೆಲಸ. ಸೌಂದರನಂದ ಕಾವ್ಯ ಬೌದ್ಧಧರ್ಮದ ಅಮೂಲ್ಯವಾದ ಉಪದೇಶಗಳಿಂದ ಕೂಡಿದೆ. ಇದು ಹೀನ ಯಾನ ಸಂಪ್ರದಾಯದ ಕಾವ್ಯವಾದರೂ ಅಲ್ಲಲ್ಲಿ ಮಹಾಯಾನಕ್ಕೆ ಸಂಬಂಧಿಸಿದ ಸಿದ್ಧಾಂತಗಳ ಉಲ್ಲೇಖಗಳೂ ಕಂಡುಬರುತ್ತವೆ. ಬುದ್ಧನ ಜೀವನದ ಘಟನೆಗಳಿಗೆ ಸಂಬಂಧಿಸಿದ ಕೆಲವು ವಿವರಗಳು "ಬುದ್ಧ ಚರಿತ" ಕಾವ್ಯದಲ್ಲಿ ಸಿಗುತ್ತವೇನೋ ನಿಜ. ಅದೇ ವಿವರಗಳು ಸೌಂದರನಂದ ಕಾವ್ಯದಲ್ಲಿ ಹೆಚ್ಚು ವಿಸ್ತೃತವಾಗಿ ಕಂಡು ಬರುತ್ತವೆ.

ಸುಂದರಿ ಮತ್ತು ನಂದ ಎಂಬವರ ಕಥೆ ಇಲ್ಲಿ ಪ್ರಧಾನವಾದುದು. ಬೌದ್ಧ ಧರ್ಮ ಗ್ರಂಥಗಳಲ್ಲಿ ಬರುವ ಬುದ್ಧನ ಬಲತಮ್ಮ ನಂದ ಹಾಗೂ ಅವನ ರಸಿಕ ಜೀವನ ಅವನು ಕೊನೆಯಲ್ಲಿ ಬೌದ್ಧಧರ್ಮವನ್ನು ಸ್ವೀಕರಿಸಿದ್ದು ಇದರ (ಈ ಕಾವ್ಯದ) ಕಥಾವಸ್ತು. ಸುಂದರಿಯ ಸೌಂದರ್ಯರಾಶಿಯಿಂದ ಮೋಹಿತನಾದ ನಂದ ತನ್ನ ಸರ್ವಸ್ವವನ್ನೂ ಅವಳಿಗೋಸ್ಕರ ಮೀಸಲಾಗಿಡುತ್ತಾನೆ. ಯಾರಿಗೂ ತಿಳಿಯ ದಂತೆ ಅವಳ ಜೊತೆಯಲ್ಲಿ ಎಲ್ಲಾದರೂ ದೂರ ಹೊರಟು ಹೋಗೋಣವೆಂದು ಯೋಚಿಸುತ್ತಾನೆ. ಬುದ್ಧನ ಶಿಷ್ಯರೂ ಇತರ ಭಿಕ್ಷುಗಳೂ ನಾನಾ ಬಗೆಯ ಹಿತ ವಚನಗಳಿಂದ ಅವನ ಮನಸ್ಸನ್ನು ಪರಿವರ್ತಿಸಲು ಯತ್ನಿಸುತ್ತಾರೆ. "ಪ್ರಾಪಂಚಿಕ ವಸ್ತುಗಳ ಉಪಭೋಗಗಳ ಆನಂದ ಕ್ಷಣಿಕವಾದುದು. ಭೂಮಿಯಲ್ಲಿ ನಮ್ಮ ಬಾಳ್ವೆ ಕೇವಲ ಒಂದು ಯಾತ್ರೆ ಮಾತ್ರ." ಎನ್ನುವ ಬುದ್ಧನ ಶಿಷ್ಯ ಆನಂದನ ಮಾತು ಗಳಲ್ಲಿನ ಯಥಾರ್ಥತೆ ಪ್ರೇಮದಿಂದ ಕುರುಡನಾದ ಅವನ ಕಣ್ಣುಗಳನ್ನು ತೆರೆಸುತ್ತದೆ. ಕ್ರಮೇಣ ಆತನ ಮನಸ್ಸು ಧರ್ಮದ ಕಡೆಗೆ ವಾಲುತ್ತದೆ. ಕೊನೆಯಲ್ಲಿ ಬುದ್ಧ ನಂದ ನಿಗೆ ದೀಕ್ಷೆ ನೀಡಿ ತನ್ನ ಧರ್ಮಕ್ಕೆ ಸೇರಿಸಿಕೊಳ್ಳುತ್ತಾನೆ.

ಸೌಂದರನಂದ ಕಾವ್ಯದ ಅಂತಿಮ ಭಾಗದಲ್ಲಿ ಕವಿ ಮತ್ತೆ ತನ್ನ ಕಾವ್ಯದ ಪ್ರಯೋಜನದ ಕುರಿತಾಗಿ ವಾಚಕರಿಗೆ ಸ್ಪಷ್ಟ ಪಡಿಸುತ್ತಾನೆ. ಜನರಲ್ಲಿ ವಿಷಯ ವಾಸನೆ ಹೆಚ್ಚಿ, ಮೋಕ್ಷದಿಂದ ವಿಮುಖರಾಗುವ ಪ್ರವೃತ್ತಿ ಹೆಚ್ಚಿದ ಕಾರಣ, ಕಾವ್ಯದ ಮುಖಾಂತರ ಸತ್ಯವನ್ನು ಪ್ರತಿಪಾದಿಸಿದ್ದೇನೆ, ಮೋಕ್ಷ ಎಲ್ಲದಕ್ಕಿಂತಲೂ ಉನ್ನತ ವಾದ ಆದರ್ಶ" ಎಂಬುದೇ ಕವಿಯ ಆಶಯ.

ಆಧಾರ ಗ್ರಂಥಗಳು

(1) ಅಶ್ವಘೋಷ ಕೃತ ಬುದ್ಧಚರಿತ ಕಾವ್ಯದ ಪಂ। ಸೂರ್ಯನಾರಾಯಣ ಚೌಧುರಿ. ಹಿಂದೀ ಅನುವಾದ–ಪೀಠಿಕಾ ಪ್ರಕರಣ

(2)	ಕನ್ನಡ ವಿಶ್ವಕೋಶ	ಸಂಪುಟ I. ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ.
(3)	History and Culture of Indian People	Bharatiya Vidya Bhavan, Vols. II and III.
(4)	History of India	K. A. Neelakanta Shastry.
(5)	Vivekananda Centenary Volume.	

ಹರಿಹರನ ಎರಡು ಪದ್ಯಗಳ ಬಗ್ಗೆ (ಕಲ್ಪನಾ ವಿಲಾಸದ) ಒಂದು ಟಿಪ್ಪಣಿ

ಡಾ॥ ಫ. ಗು. ಹಳಕಟ್ಟಿಯವರು ಪ್ರಕಟಿಸಿರುವ 'ಮಾದಾರ ಚೆನ್ನಯ್ಯಗಳ ಮಹಾತ್ಮೆ' ಎಂಬ ರಗಳೆಯ ಆರಂಭದಲ್ಲಿ ಎರಡು ಪದ್ಯಗಳಿವೆ. ಮೊದಲನೆಯ ಚಿಕ್ಕ ಪದ್ಯದ ಛಂದಸ್ಸು ಯಾವುದು ಎಂಬುದನ್ನು ನಿರ್ದೇಶಿಸಿಲ್ಲ. ಎರಡನೆಯುದನ್ನು "ವೃತ್ತ (?)" ವೆಂದು ಕರೆದು ಸಂದೇಹವನ್ನು ಸೂಚಿಸಲಾಗಿದೆ. ಅವೆರಡನ್ನೂ ಗಮನಿಸಿದಾಗ ಮೊದಲನೆಯದು ತ್ರಿಪದಿಯಂತೆಯೂ ಎರಡನೆಯದು ಉತ್ಪಲಮಾಲೆ ಯಂತೆಯೂ ತೋರುತ್ತದೆ. ಅವು ಹೀಗಿವೆ :[1]

ಸನ್ನುತಾಗಮನಿಕರ ತಲ್ಲಣಂಗೊಳೆ ತನ್ನ
ಜಿಹ್ವೆಯೊಳು ಸವಿದು ಪನ್ನಂಗಧರಗಿತ್ತ
ಚೆನ್ನಯ್ಯನೆನ್ನಯ್ಯನೆಂಬೆ ॥

ವೃತ್ತ ॥ (?) ವೇದದ ಡಂಗುರಂ ಹೆದರಿ ಸೈವೆರಗಾದುವು ಶಾಸ್ತ್ರ ಸಂಭ್ರಮಂ
ಪೋದುವು ನಿಚ್ಚಲೋದುವ ಪುರಾಣದ ಮಾಲೆಗಳೆಂಬುವೆಲ್ಲ ಹಾ
ಳಾದುವು ಜಪತಪ ನೇಮ ಸಂಧ್ಯಾ ಸಮಾಧಿಗಳೆಂಬಿವೆಲ್ಲ ನುಚ್ಚುನೂ
ರಾದುವು ಹಂಪೆಯಾಳ್ದ ವರ ಚೆನ್ನನ ಕೂಡೊಲಿದುಂಡ ಕಾರಣ [ಂ] ॥

ಮೊದಲನೆಯದು ಗಣಗಳ ದೃಷ್ಟಿಯಿಂದ ಬಹುಮಟ್ಟಿಗೆ ಸಲಕ್ಷಣವಾಗಿರುವ ಒಂದು ತ್ರಿಪದಿ - ಮೂರನೆಯ ಪಾದದಲ್ಲಿ ಕೊನೆಯ ಎರಡು ಗಣಗಳು ವಿಷ್ಣು, ಬ್ರಹ್ಮ ಆಗಿವೆ. (ಲಕ್ಷಣದ ಪ್ರಕಾರ ಬ್ರಹ್ಮ, ವಿಷ್ಣು ಆಗಬೇಕು). ಮೊದಲನೆಯ ಪಾದದ ಒಳಪ್ರಾಸ ಬರುವ ಜಾಗದಲ್ಲಿ ಮತ್ತು ದ್ವಿತೀಯ ಪಾದದ ಪ್ರಾಸಸ್ಥಾನದಲ್ಲಿ ಪ್ರಾಸನಿಯಮದ ಉಲ್ಲಂಘನೆಯಾಗಿದೆ.

ಎರಡನೆಯ ಪದ್ಯ ಉತ್ಪಲಮಾಲೆ - ಪ್ರಾಸದ ನಿಯಮವನ್ನು ಅನುಸರಿಸಿದೆ. 1, 2, 4ನೆ ಪಾದಗಳಲ್ಲಿ ಗಣಗಳ ಸಂಖ್ಯೆ ಸರಿಯಾಗಿದೆ. ಮೂರನೆಯ ಪಾದದಲ್ಲಿ ಇಪ್ಪತ್ತಕ್ಕೆ ಬದಲು ಇಪ್ಪತ್ತೆರಡು ಅಕ್ಷರಗಳು ಬಂದು ಗಣನಿಯಮದ ಉಲ್ಲಂಘನೆ ಯಾಗಿದೆ.

1. ಹರಿಹರನ ರಗಳೆಗಳು (ಧಾರವಾಡ. 1968), ಪು. 348. ವೃತ್ತದ ಕೊನೆಯಲ್ಲಿರುವ ಬಿಂದು ನಾನು ಸೇರಿಸಿದ್ದು.

ತ್ರಿಪದಿಯಲ್ಲಿ ಗಣನಿಯಮ ಬಹುತೇಕ ಸರಿಯಾಗಿದೆ. ಪ್ರಾಸನಿಯಮ ಎಗರಿ ಹೋಗಿದೆ.

ವೃತ್ತದಲ್ಲಿ ಪ್ರಾಸನಿಯಮ ಸರಿಯಾಗಿದೆ. ಒಂದು ಪಾದದಲ್ಲಿ ಗಣನಿಯಮ ತೂರಿ ಹೋಗಿದೆ.

ಇದಕ್ಕೆ ಏನು ಹೇಳೋಣ? ಆಕಸ್ಮಿಕವೇ? ಲಿಪಿಕಾರರ ದೋಷವೇ? ಹರಿಹರನೇ ಹೀಗೆ ನಿಯಮಗಳನ್ನು ಬೇಕೆಂದೇ ಮುರಿದಿದ್ದಾನೆಯೋ?

ಹೊಲೆಯನಾದ ಚೆನ್ನನ ಮನೆಯಲ್ಲಿ ಅವನ ಎಂಜಲನ್ನು ಶಿವ ಉಂಡದ್ದರಿಂದ ಆಗಮಗಳು ನಡುಗಿ ಹೋದುವು; ಪುರಾಣ, ಶಾಸ್ತ್ರ, ಜಪ, ತಪ, ಸಂಧ್ಯಾವಂದನೆ, ಸಮಾಧಿ ಇವೆಲ್ಲ ಸಾವಿರಾರು ವರ್ಷಗಳಿಂದ ಯಾವ ನಿಯಮವನ್ನು ಕಟ್ಟಿ ಕೊಂಡಿದ್ದುವೋ ಅದೆಲ್ಲ ನಿಮಿಷಾರ್ಧದಲ್ಲಿ ಸಿಡಿದು ಗಾಳಿಗೆ ತೂರಿಹೋಯಿತು. ಈ ಅದ್ಭುತ ಸಂಗತಿಯನ್ನು ಹೇಳುವ ಪದ್ಯಗಳಲ್ಲಿಯೇ ಕವಿ ಬೇಕೆಂದೇ ಛಂದಶ್ಶಾಸ್ತ್ರದ ನಿಯಮಗಳನ್ನು ಮೀರಿದ್ದಾನೆ ಎಂದು ತೆಗೆದುಕೊಳ್ಳುವುದರಲ್ಲಿ ಔಚಿತ್ಯವಿಲ್ಲವೆ? ಅಥವಾ ಅದು ಕಲ್ಪನಾವಿಲಾಸವೆ? ಒಂದು ವೇಳೆ ಕಲ್ಪನಾವಿಲಾಸವೆಂದೇ ಇಟ್ಟು ಕೊಂಡರೂ ಉಚಿತವಾಗಿಲ್ಲವೇ?[2]

ಹರಿಹರ ಇಲ್ಲಿ ಬೇಕೆಂದೇ ಛಂದೋನಿಯಮಗಳನ್ನು ಮೀರಿದ್ದಾನೆ ಎಂಬುದು ಸದ್ಯದ ನನ್ನ ನಂಬಿಕೆಯಾಗಿದೆ. ತನ್ನ ಕೃತಿಯ ಆರಂಭ ಅಂತ್ಯಗಳಲ್ಲಿ ಕಂದ ವೃತ್ತ ಗಳನ್ನು ತರುತ್ತಿದ್ದವನು ಇಲ್ಲಿ ತ್ರಿಪದಿಯನ್ನು ತಂದು ತನ್ನ ನಿಯಮವನ್ನು ತಾನೇ ಮೀರಿದ್ದಾನೆ. ಸಾಮಾನ್ಯ ಜನತೆಗೆ ತೀರಾ ಸಮೀಪವಾಗಿದ್ದ ತ್ರಿಪದಿ ಮಟ್ಟು ಮಾದರ ಚೆನ್ನಯ್ಯನ ಕತೆಯ ಆರಂಭದಲ್ಲಿ ಬಂದಿರುವುದೂ ಉಚಿತವಲ್ಲವೆ?

---

2 ಶ್ರೀ ಎಚ್. ದೇವೀರಪ್ಪನವರು ತಮ್ಮ ಶರಣಚರಿತಮಾನಸದಲ್ಲಿ (ಪು. 317) ಪ್ರಕಟಿಸಿರುವ ಮಾದರ ಚೆನ್ನಯ್ಯಗಳ ರಗಳೆಯಲ್ಲಿ ಮೊದಲ ಪದ್ಯವಿಲ್ಲ. ಎರಡನೆಯ ಪದ್ಯದ ನಾಲ್ಕು ಪಾದಗಳೂ ಸಲಕ್ಷಣವಾಗಿವೆ. ಅದು ಹೀಗಿದೆ;

ವೇದದ ಡಂಗುರಂ ಹೆದಱಿ ಸೈವೆರಗಾದುವು ಶಾಸ್ತ್ರ ಸಂಪದಂ।
ಹೋದುವು ನಿಚ್ಚಲೋದುವ ಪುರಾಣದ ಮಾತಿನ ಮಾಲೆ ನುಚ್ಚು ನೂ।
ಱಾದುವು ಹೋಮ ನೇಮ ಜಪ ಸಂಜೆ ಸಮಾಧಿಗಳೆಂಬವೆಲ್ಲ ಹೊ।
ಳ್ಳಾದುವು ಹಂಪೆಯಾಳ್ದ ವರ ಚೆನ್ನನ ಕೂಡೊಲಿದುಂಡ ಕಾರಣಂ॥

ಮೂಲತಃ ಸಲಕ್ಷಣವಾದ ಪದ್ಯದ ಛಂದಸ್ಸನ್ನು ಲಿಪಿಕಾರರು ಕೆಡಿಸಿದರು ಎಂದು ಭಾವಿಸುವು- ದಕ್ಕಿಂತ ಲಕ್ಷಣವನ್ನು ಬೇಕೆಂದೇ ಉಲ್ಲಂಘಿಸಿದ ಕವಿಯ ಪದ್ಯವನ್ನು ಅವರು ಪರಿಷ್ಕರಿಸಿದರು ಎಂದು ತೆಗೆದುಕೊಳ್ಳುವುದು ಹೆಚ್ಚು ತಾರ್ಕಿಕವಾಗಿದ್ದರೆ, ಹಳಕಟ್ಟಿಯವರದೇ ಮೂಲಪಾಠಕ್ಕೆ ಸಮೀಪ ಎಂದು ಹೇಳಲು ಅವಕಾಶವಾಗುತ್ತದೆ.

ಪ್ರಾಸನಿರಾಕರಣೆಯ ಬಗ್ಗೆ ಮಾತನಾಡುವಾಗ ಶ್ರೀ ಗೋವಿಂದಪೈಯವರ ಹೆಸರನ್ನು ನಾವೆಲ್ಲ ಹೇಳುತ್ತೇವೆ. ಹರಿಹರನ ಪ್ರಾಸನಿರಾಕರಣೆಯೂ ಉಲ್ಲೇಖ ನೀಯುವಲ್ಲವೇ ? ಅದೂ, ಏಳು ಶತಮಾನಗಳಿಗೂ ಹಿಂದಿನಷ್ಟು ಪ್ರಾಚೀನಕಾಲದಲ್ಲಿ !

ಎಂ. ಚಿದಾನಂದಮೂರ್ತಿ

ಇಟ್ಟಿಗೆಯ ಸುಟ್ಟವನು

ಶಿವಪೂಜೆಯಂ ಮಾಡದವನು ಗುರ್ವಾಜ್ಞೆಗೆ।
ಟ್ಟವನು ಪರಸತಿಗಳುಪುವವನು ಪರರಸುಗೆ ಮುಳಿ ।
ವವನು ತಾಯಂ ಬಗೆಯದವನು ತಂದೆಯನೊಲ್ಲದವನು ಪರಿನಿಂದೆಗೆಯ್ವ ।
ಅವನು ಇಟ್ಟಿಗೆಯ ಸುಟ್ಟವನು ಬೇಗೆಯನಿಕ್ಕು ।
ವವನಧಮರನು ಬೆರಸುವವನು ಕುಲಧರ್ಮಗೆ।
ಟ್ಟವನಿಳಿವ ನರಕದೊಳಗಿಳಿವೆನವಧಿಗೆ ನಿಮ್ಮ ಧನವನೀಯದಡೆಂದನು ।।

ಇದು ಹರಿಶ್ಚಂದ್ರ ಕಾವ್ಯದ ಪದ್ಯ (8-57). ಅವಧಿಗೆ ಸರಿಯಾಗಿ ನಾನು ನಿಮಗೆ ದಕ್ಷಿಣೆಯನ್ನು ಸಲ್ಲಿಸದಿದ್ದರೆ ''ಶಿವಪೂಜೆಯಂ ಮಾಡದವನು, ಗುರ್ವಾಜ್ಞೆಗೆಟ್ಟವನು ...ಇಟ್ಟಿಗೆಯ ಸುಟ್ಟವನು..." ಇಳಿವ ನರಕಕ್ಕೆ ಇಳಿಯುತ್ತೇನೆಂದು ವಿಶ್ವಾಮಿತ್ರನಿಗೆ ಹರಿಶ್ಚಂದ್ರ ಭಾಷೆ ನೀಡುತ್ತಾನೆ, ಇಲ್ಲಿ.

ಶ್ರೀ ಆರ್. ರಾಜಪ್ಪ ಅವರು ಪ್ರ. ಕ 52-3 ರಲ್ಲಿ ಇಲ್ಲಿಯ "ಇಟ್ಟಿಗೆಯ ಸುಟ್ಟವನು" ಎಂಬ ಪಾಠದ ಅರ್ಥವನ್ನು 4 ಬಗೆಯಾಗಿ ವಿವೇಚಿಸಿದ್ದಾರೆ :

1. ಇಟ್ಟಿಗೆಯನ್ನು ಸುಡುವ ಮೊದಲು ಕುರಿ, ಕೋಳಿಗಳನ್ನು ಬಲಿಕೊಡುವ ಸಂಪ್ರದಾಯ (ಇಂದಿಗೂ) ಇದ್ದು, ಈ ರೀತಿ ಪ್ರಾಣಿಹಿಂಸೆ ಮಾಡುವವನೇ "ಇಟ್ಟಿಗೆಯ ಸುಟ್ಟವನು".

2. ಇಟ್ಟಿಗೆಯನ್ನು ಸುಡುವಾಗ ಮಣ್ಣಿನಲ್ಲಿಯ ಕ್ರಿಮಿ–ಕೀಟಗಳು ತಂತಾನೇ ಸಾಯುತ್ತಿದ್ದು, ಹೀಗೆ ಪ್ರಾಣಿಹಿಂಸೆ ಮಾಡುವವನೇ ''ಇಟ್ಟಿಗೆಯ ಸುಟ್ಟವನು".

3. "ಇಟ್ಟಗೆಯ ಸುಟ್ಟವನು" ಎಂದು ಈ ಪಾಠವನ್ನು ತಿದ್ದಿಕೊಂಡರೆ (ಇಟ್ಟ+ಅಗೆ) ಮೊಳಕೆಯನ್ನು ಸುಟ್ಟವನು ಎಂಬ ಅರ್ಥ ಬರುತ್ತದೆ. ಇದೂ ಪಾಪಕಾರ್ಯ.

4. "ಇಟ್ಟಕಯ ಸುಟ್ಟವನು" ಎಂದು ಈ ಪಾಠವನ್ನು ತಿದ್ದಿಕೊಂಡರೆ "ಅನ್ನವಿಟ್ಟ ಕೈಯನ್ನು ಸುಟ್ಟವನು" ಎಂಬ ಅರ್ಥ ಬರುತ್ತದೆ. ಇದೂ ಪಾಪ ಕಾರ್ಯ.

ಹೀಗೆ ನಾಲ್ಕು ಬಗೆಯಾಗಿ ಅರ್ಥ ವಿವರಿಸಿ, ಇವುಗಳಲ್ಲಿ ಮೊದಲಿನ ಎರಡು ಅರ್ಥಗಳೇ ತಮಗೆ ಸರಿಯೆನಿಸಿವೆಯೆಂದಿದ್ದಾರೆ. ಈ ಪ್ರಸಂಗದಲ್ಲಿ ನನ್ನ ಗಮನಕ್ಕೆ ಬಂದ ಬೇರೆ ಎರಡು ಪ್ರಯೋಗಗಳ ಬೆಳಕಿನಲ್ಲಿ ಶ್ರೀಯುತರ ಹೇಳಿಕೆಯನ್ನು ವಿವೇಚಿಸ ಬಹುದು.

ಇಟ್ಟಿಗೆಯ ಸುಟ್ಟಾತ । ಕೆಟ್ಟ ಕೆಡೆ ನುಡಿವಾತ ।
ಬಟ್ಟೆಯಲಿ ಮುಳ್ಳನೆಳೆವಾತ । ನರಕದ
ಬಟ್ಟೆಯೊಳಗಿರುವ ಪರಮಾರ್ಥ ॥

ಇದು ಸರ್ವಜ್ಞನ ವಚನ. ಇಲ್ಲಿಯ "ಇಟ್ಟಿಗೆಯ ಸುಟ್ಟಾತ" ಎಂಬ ಪ್ರಯೋಗ, ಶ್ರೀ ರಾಜಪ್ಪನವರು ಊಹಿಸಿದ 3, 4 ನೆಯ ಹೊಸ ಪಾಠಗಳು ಅನವಶ್ಯವೆಂದೂ ಕೈ ಬಿಡಬೇಕೆಂದೂ ತಿಳಿಸುತ್ತದೆ. ಜೊತೆಗೆ ಇಟ್ಟಿಗೆಯನ್ನು ಸುಟ್ಟವನು ನರಕಕ್ಕೆ ಹೋಗುವನೆಂಬ ಹರಿಶ್ಚಂದ್ರ ಕಾವ್ಯದ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ಆದರೆ ಶ್ರೀ ರಾಜಪ್ಪ ಅವರು ಮಂಡಿಸಿದ 1 ಮತ್ತು 2 ನೆಯ ವಿಚಾರಗಳಲ್ಲಿ ಯಾವುದು ಸರಿಯೆಂಬುದನ್ನು ಸೂಚಿಸುವುದಿಲ್ಲ. ಈ ಸಂದರ್ಭದಲ್ಲಿ ನೆರವಾಗಬಹುದಾದ ಬ್ರಹ್ಮ ಶಿವನ ಸಮಯ ಪರೀಕ್ಷೆಯ ಪದ್ಯ (4–127) ವೊಂದು ಹೀಗಿದೆ :

ಜಿನಗೃಹಮಂ ಮನೋಮುದದೆ ಮಾಡದನಾಪ್ತ ಗೃಹಂಗಳಂ ಮಹಾ ।
ಜನಮನೆ ನೋಡಿ ಮಾಡಿಸುವವಂ ಶುಚಿಯ [ಪ್ಪನೆಯೆ]*ತ್ತಲಿಕ್ಕೆ ಕ ।
ಲ್ಲನೆ ತೆಗೆವಲ್ಲಿ, ಸುಣ್ಣಮುಮನಿಟ್ಟಗೆಯುಂ ಸುಡುವಲ್ಲಿ ಸಾವ ಜೀ ।
ವನಿಕರದೊಂದು ಹಿಂಸೆಯೊಳ್ ಪಾಪಮೆ ಮೊಕ್ಕಳಮೆಂದೆನಲ್ಪಲಂ ॥

''ಜಿನಗೃಹಗಳನ್ನು ಬಿಟ್ಟು ಆಪ್ತಗೃಹಗಳನ್ನು ಮಾಡಿಸುವುದು ನಿಷ್ಪ್ರಯೋಜಕ. ಒಂದುವೇಳೆ ಮಾಡಿದರೆ ಅವುಗಳನ್ನು ಎತ್ತಲಿಕೆ (ನಿರ್ಮಿಸಲಿಕ್ಕೆ) ಬೇಕಾಗುವ ಕಲ್ಲನ್ನು ತೆಗೆವಲ್ಲಿ, ಸುಣ್ಣ ಮತ್ತು ಇಟ್ಟಿಗೆಗಳನ್ನು ಸುಡುವಲ್ಲಿ ಸಾಯುವ ಜೀವ ರಾಶಿಗಳ ಹಿಂಸೆಯೇ ಫಲವೆನಿಸುತ್ತದೆ''–ಎಂಬುದು ಇಲ್ಲಿಯ ಒಟ್ಟು ಅಭಿಪ್ರಾಯ. ಶ್ರೀ ರಾಜಪ್ಪನವರು ಮಾಡಿದ 2ನೆಯ ಊಹೆಗೆ ಈ ವಿವರಣೆ ಸಮರ್ಥನೆ ನೀಡುವುದರಿಂದ, ಹರಿಶ್ಚಂದ್ರ ಕಾವ್ಯದ ''ಇಟ್ಟಿಗೆಯ ಸುಟ್ಟವನು'' ಪಾಠಕ್ಕೆ ಇಟ್ಟಿಗೆಯನ್ನು ಸುಡುವಾಗ ಅಪ್ರತ್ಯಕ್ಷವಾಗಿ ಪ್ರಾಣಿಹಿಂಸೆ ಮಾಡುವವನು ಎಂದು ಅರ್ಥ ಹೇಳ ಬೇಕಾಗುತ್ತದೆ.

ಎಂ. ಎಂ. ಕಲಬುರ್ಗಿ

---

* ಕಂಸಿನಲ್ಲಿಯದು ನಾನು ಊಹಿಸಿದ ಪಾಠ. ಅಚ್ಚಿನ ಪ್ರತಿಯಲ್ಲಿರುವ ಪಾಠ : ಪ್ಪದದ.

'ಶ್ರೀವಿಜಯರ ಕವಿಮಾರ್ಗಂ' : ಒಂದು ವಿವರಣೆ

'ಸಾಹಿತ್ಯವಾರ್ಷಿಕ - 1973'ರಲ್ಲಿ (ಪು. 147-150) ಡಾ। ಎಂ. ಎಂ. ಕಲಬುರ್ಗಿಯವರ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಗ್ರಂಥವನ್ನು ವಿಮರ್ಶಿಸುತ್ತಾ ಡಾ॥ ಎಂ. ಚಿದಾನಂದ ಮೂರ್ತಿಯವರು ಕವಿರಾಜಮಾರ್ಗವನ್ನು ಶ್ರೀವಿಜಯನು ರಚಿಸಿದ ಎನ್ನುವುದಕ್ಕೆ ಸಾಧಕವಾದ ದುರ್ಗಸಿಂಹನ ಪದ್ಯವನ್ನು ಕುರಿತು ತಕ್ಕಮಟ್ಟಿಗೆ ವಿವರ ಪೂರ್ಣವಾಗಿ ವಿಚಾರಮಾಡಿದ್ದಾರೆ. ವಿಚಾರ ವಿಮರ್ಶೆಯ ಸೌಕರ್ಯಕ್ಕೋಸ್ಕರ ದುರ್ಗಸಿಂಹನ ಪದ್ಯವನ್ನು ಇಲ್ಲಿ ಎತ್ತಿ ಕೊಡಬಹುದು :

> **ಶ್ರೀವಿಜಯರ ಕವಿಮಾರ್ಗಂ ।**
> **ಭಾವಿಪ ಕವಿಜನದ ಮನಕೆ ಕನ್ನಡಿಯುಂ ಕೈ ।**
> **ದೀವಿಗೆಯುಮಾದುದಱಿಂ ।**
> **ಶ್ರೀ ವಿಜಯರ್ ದೇವರವರನೇ ವಣ್ಣಿಪುದೋ ॥**

ಮೇಲಿನ ಪದ್ಯದಲ್ಲಿ ಕವಿಮಾರ್ಗ ಎಂಬ ಶಬ್ದ ಒಂದು ಕಾವ್ಯರಚನಾ ಸಂಪ್ರದಾಯ ಅಥವಾ ಮಾರ್ಗವನ್ನು ಸೂಚಿಸುತ್ತದೆಯೆ ಹೊರತು, ಒಂದು ಕೃತಿಯನ್ನಲ್ಲ, ಎಂಬುದು ಚಿದಾನಂದಮೂರ್ತಿಗಳ ಅಭಿಪ್ರಾಯ.

ಶ್ರೀವಿಜಯನೇ ಕವಿರಾಜಮಾರ್ಗದ ಕರ್ತೃ ಎಂದು ವಾದಿಸುತ್ತಿದ್ದ ವಿದ್ವಾಂಸರು ಈ ಪದ್ಯವನ್ನು ಒಂದು ಪ್ರಬಲ ಬಾಹ್ಯಪ್ರಮಾಣವಾಗಿ ಸ್ವೀಕರಿಸಿದ್ದಾರೆ. ಈ ಪದ್ಯದಲ್ಲಿ ಸ್ಪಷ್ಟಗೋಚರವಾದ ಒಂದು ತೊಡಕೆಂದರೆ, 'ಕವಿಮಾರ್ಗ' ಶಬ್ದ ಗ್ರಂಥ-ನಾಮ ಸೂಚಕವೇ ಇಲ್ಲವೆ ಒಂದು 'ಕಾವ್ಯಮಾರ್ಗ' ಸೂಚಕವೇ ಎಂಬುದು. ಗ್ರಂಥನಾಮ ಸೂಚಕವಾಗಿದ್ದಲ್ಲಿ, ದುರ್ಗಸಿಂಹ 'ಕವಿರಾಜಮಾರ್ಗ' ಎಂದು ಹೇಳದೆ 'ಕವಿಮಾರ್ಗ' ಎಂದು ಸಂಕ್ಷೇಪಿಸಿ ಹೇಳಿದ್ದೇಕೆ ಎಂದು ನೃಪತುಂಗ ಕರ್ತೃತ್ವವಾದಿಗಳು ಆಕ್ಷೇಪಿಸಿರುವುದುಂಟು. ಛಂದಸ್ಸಿನ ಅಗತ್ಯಕ್ಕಾಗಿ ಹಾಗೆ ಮಾಡಿದೆ, ಎಂದು ಆಕ್ಷೇಪಕ್ಕೆ ಸಮಾಧಾನ. ದುರ್ಗಸಿಂಹನಂಥ ಸಮರ್ಥಕವಿ ಹಾಗೆ ಮಾಡುವನೆನ್ನುವುದು ಹಾಸ್ಯಾಸ್ಪದ ಎಂದು ಸಮಾಧಾನಕ್ಕೆ ಮಾರುತ್ತರ. ಛಂದಸ್ಸಿನ ದೃಷ್ಟಿಯಿಂದ ನಿರ್ಣಯಿಸಹೋಗುವುದು ನಿಷ್ಫಲವಾದ ಪ್ರಯತ್ನ ; ಎರಡು ಕಡೆಯಿಂದಲೂ ವಾದಿಸಬಹುದು. ಹೀಗಿದ್ದರೂ, ಛಂದಸ್ಸಿನ ಅಗತ್ಯಕ್ಕಾಗಿ ದುರ್ಗಸಿಂಹನು ಕೃತಿನಾಮವನ್ನು ಸಂಕ್ಷೇಪಿಸಿರುವ ಸಾಧ್ಯತೆಯಿದೆ.[1]

---

1 ದೀರ್ಘವೃತ್ತದಲ್ಲಿಯಾದರೆ 'ಕವಿರಾಜ ಮಾರ್ಗ' ಎಂಬ ಶಬ್ದವನ್ನು ಅಳವಡಿಸಿ ಪದ್ಯರಚನೆ ಮಾಡುವುದು ಸಾಧ್ಯ. ದುರ್ಗಸಿಂಹನು ಹೇಳಿರುವಷ್ಟು ವಿಷಯವನ್ನೇ ಇಟ್ಟುಕೊಂಡು, 'ಕವಿರಾಜಮಾರ್ಗ' ಶಬ್ದವನ್ನು ಬಗೆಬಗೆಯಲ್ಲಿ ಸೇರಿಸಿ, ಕಂದಪದ್ಯವನ್ನು ರಚಿಸಲು ನಾನು ಪಟ್ಟ ಪ್ರಯತ್ನಗಳೆಲ್ಲ ನಿಷ್ಫಲವಾಗಿವೆ. ಕೃತಿನಾಮವನ್ನು ಸ್ವತಃ ಕವಿಯೋ ಇತರರೋ ಸಂಕ್ಷೇಪಿಸಿ, ಇಲ್ಲವೆ ಸ್ವಲ್ಪ ಮಾರ್ಪಡಿಸಿ, ಉಲ್ಲೇಖ ಮಾಡುವ ಪದ್ಧತಿಯೂ ಉಂಟು. (ಉದಾ., ಪ್ರತಾಪರುದ್ರಯಶೋಭೂಷಣಂ = ಪ್ರತಾಪರುದ್ರೀಯ ; ವಿಕ್ರಮಾರ್ಜುನ ವಿಜಯಂ = ಸಮಸ್ತ ಭಾರತಂ ; ಸ್ವಪ್ನವಾಸವದತ್ತನಾಟಕಂ = ಸ್ವಪ್ನನಾಟಕಂ). ದುರ್ಗಸಿಂಹನೂ 'ಕವಿರಾಜಮಾರ್ಗ'ವನ್ನು ಸಂಕ್ಷೇಪಿಸಿರಬಹುದು.

ದುರ್ಗಸಿಂಹನ ಪದ್ಯದಲ್ಲಿ 'ಕವಿಮಾರ್ಗ' ಗ್ರಂಥನಾಮಕ್ಕೆ ಸಾರ್ಥಕ್ಯವನ್ನು ಕಲ್ಪಿಸಲು ಇನ್ನೊಂದು ದಿಕ್ಕಿನಿಂದಲೂ ಪ್ರಯತ್ನ ನಡೆದಿದೆ : 'ಕವಿರಾಜಮಾರ್ಗ'ವನ್ನು ಎರಡನೆಯ ಬಾರಿಗೆ ಪರಿಷ್ಕರಿಸಿ ಪ್ರಕಟಿಸಿದ ಮದರಾಸು ವಿಶ್ವವಿದ್ಯಾನಿಲಯದ ಮುದ್ರಣದ ಸಂಪಾದಕರುಗಳಾದ ಪಂಡಿತ ಎಚ್. ಶೇಷಯ್ಯಂಗಾರ್ ಮತ್ತು ಆಲೆಮನೆ ವೆಂಕಟರಾವ್ ಅವರು—ಕವಿರಾಜಮಾರ್ಗದಲ್ಲಿಯೇ ಉಕ್ತನಾದ ಪೂರ್ವಕವಿ (1-32) ಶ್ರೀವಿಜಯನೆಂಬವನು 'ಕವಿಮಾರ್ಗ'ವೆಂಬ ಗ್ರಂಥವನ್ನು ರಚಿಸಿದ್ದನು, ನೃಪತುಂಗನ ಆಶ್ರಿತನಾದ ಕವೀಶ್ವರನೆಂಬ ಕವಿ ಅದನ್ನು 'ತನ್ನದಾಗಿ ಮಾಡಿಕೊಂಡು' ನೃಪತುಂಗನ ಹೆಸರನ್ನು ಶಾಶ್ವತಗೊಳಿಸಲು 'ಕವಿರಾಜಮಾರ್ಗ' ಎಂಬ ಹೆಸರಿನಿಂದ ಪ್ರಸಿದ್ಧ ಮಾಡಿದನು, ಎಂದು ವಾದಿಸಿದ್ದಾರೆ. ಕವೀಶ್ವರ ಕರ್ತೃತ್ವವಾದ ಬಹಳ ದುರ್ಬಲವಾಗಿದೆ ; ಅದರ ಪ್ರಸಕ್ತಿ ಇಲ್ಲಿಗೆ ಅನಗತ್ಯ.

ಆದರೆ, ಶ್ರೀವಿಜಯನು 'ಕವಿಮಾರ್ಗ' ಎಂಬ ಗ್ರಂಥವೊಂದನ್ನು ರಚಿಸಿದ್ದನು ಎಂಬ ಊಹೆಯನ್ನು ಈಚಿನ ಕೆಲವು ವಿದ್ವಾಂಸರೂ ಎತ್ತಿ ಹಿಡಿಯುತ್ತ ಬಂದಿದ್ದಾರೆ. ಈ ಲೇಖಕನು (1968ರಲ್ಲಿ) ಸಂಪಾದನೆ ಮಾಡಿದ ಪರಿಷ್ಕೃತ ಮುದ್ರಣದಲ್ಲಿ, "ದುರ್ಗಸಿಂಹನ ಹೇಳಿಕೆಯಿಂದ ಶ್ರೀವಿಜಯನು ಕವಿರಾಜಮಾರ್ಗದ ಕರ್ತೃ ಎಂದು ಅನುಮಾನಿಸಲು ಅವಕಾಶವಿದೆ. 'ಕವಿಮಾರ್ಗ' ಎನ್ನುವ ಪದಕ್ಕೆ 'ಕಾವ್ಯರಚನಾ ಪದ್ಧತಿ' ಎಂದು ಸಾಮಾನ್ಯಾರ್ಥವನ್ನು ಹೇಳುವುದಕ್ಕಿಂತ 'ಕವಿಮಾರ್ಗವೆಂಬ ಗ್ರಂಥ'ವೆಂದು ವಿಶಿಷ್ಟಾರ್ಥವನ್ನು ಹೇಳುವುದೇ ಸೂಕ್ತವಾಗಿ ಕಾಣುತ್ತದೆ. ಒಂದು **ಗ್ರಂಥವನ್ನು ಕೈಗನ್ನಡಿ, ಕೈದೀವಿಗೆ** ಎಂದು ನಿರ್ದೇಶಿಸುವುದು ಉಚಿತ ; ಕಾವ್ಯಮಾರ್ಗವನ್ನು ಹಾಗೆ ನಿರ್ದೇಶಿಸುವುದು ಸಮಂಜಸವೆನಿಸದು. ನಾಗವರ್ಮನು ತನ್ನ ಕಾವ್ಯಾವಲೋಕನವನ್ನು 'ಕವಿಗಳಿಗಿದು ಕೈಗನ್ನಡಿ' ಎಂದು ವರ್ಣಿಸಿರುವುದನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಆದ್ದರಿಂದ, 'ಕವಿಮಾರ್ಗ' ಎಂದರೆ ದುರ್ಗಸಿಂಹನು ಒಂದು ಲಕ್ಷಣಗ್ರಂಥವನ್ನೇ ಹೆಸರಿಸಿದ್ದಾನೆ ಎಂದು ತಿಳಿಯುವುದು ಹೆಚ್ಚು ಸಮಂಜಸ", ಎಂದು ಅಭಿಪ್ರಾಯಪಟ್ಟಿರುವುದನ್ನು ಈ ಸಂದರ್ಭದಲ್ಲಿ ಪುನರುಚ್ಚರಿಸುವುದು ಅನಗತ್ಯವೆನಿಸದು. ಅಲ್ಲದೆ, ದುರ್ಗಸಿಂಹನು 'ಕವಿರಾಜಮಾರ್ಗ' ಶಬ್ದವನ್ನು ಸಂಕ್ಷೇಪಿಸಿರಬಹುದಾದ ಸಂಭಾವ್ಯತೆಗೆ ಪ್ರಾಧಾನ್ಯಕೊಟ್ಟು ಶ್ರೀವಿಜಯ 'ಕವಿರಾಜಮಾರ್ಗ' ರಚನೆಗೆ ಪೂರ್ವದಲ್ಲಿ 'ಕವಿಮಾರ್ಗ'ವೆಂಬ ಹೆಸರಿನಲ್ಲಿಯೇ ಆ ಗ್ರಂಥವನ್ನು ರಚಿಸಿದ್ದಿರಬಹುದೆಂಬ ಸಂಭಾವ್ಯತೆಯನ್ನು ಕೇವಲ ಊಹೆಯಾಗಿ ಈ ಲೇಖಕ ಸ್ವೀಕರಿಸಿದ್ದಾನೆ.[2]

ಈ ಊಹೆಗೆ ಖಚಿತವಾದ ಸ್ವರೂಪವನ್ನು ಕೊಡಲು ಪ್ರಯತ್ನಿಸಿರುವವರು ಡಾ॥ ಎಂ. ಎಂ. ಕಲಬುರ್ಗಿಯವರು. ಚಿದಾನಂದಮೂರ್ತಿಯವರ ಮಾತಿನಲ್ಲಿ

---

2. 'ಶ್ರೀವಿಜಯಕೃತ ಕವಿರಾಜಮಾರ್ಗಂ', ಪೀಠಿಕೆ, ಪು. xlvii–xlix

ಹೇಳುವುದಾದರೆ, "...ಶ್ರೀವಿಜಯ ತಾನು ಮೊದಲು ಬರೆದ 'ಕವಿಮಾರ್ಗ' ಎಂಬ ಗ್ರಂಥದಲ್ಲಿ ನೃಪತುಂಗನ ಅಭಿಪ್ರಾಯಗಳನ್ನು ಸೇರಿಸಿ ಪರಿಷ್ಕಾರಗೊಳಿಸಿ 'ಕವಿರಾಜಮಾರ್ಗ'ವನ್ನು ನಿರ್ಮಿಸಿದ ಎಂಬುದು ಕಲಬುರ್ಗಿಯವರ ನಿಲುವು."[3] ಈ 'ನಿಲುವಿ'ಗೂ, ನಮ್ಮ 'ಊಹೆ'ಗೂ ಆಧಾರವಾಗಿರತಕ್ಕದ್ದು ದುರ್ಗಸಿಂಹನ 'ಕವಿಮಾರ್ಗ' ಪದಪ್ರಯೋಗ ಆದ್ದರಿಂದ, ಇಲ್ಲಿನ ಮುಖ್ಯ ಸಮಸ್ಯೆ, ಕವಿಮಾರ್ಗ ಕೃತಿನಾಮವಾಚಕವೇ, ಇಲ್ಲವೆ 'ಕಾವ್ಯರಚನಾಪದ್ಧತಿ' ಸೂಚಕವೇ ಎಂಬುದು.

'ಕವಿಮಾರ್ಗ' ಎಂಬ ಪದ ಕೃತಿಯನ್ನು ಸೂಚಿಸುವುದಿಲ್ಲ; ಒಂದು ಸಂಪ್ರದಾಯವನ್ನು ಸೂಚಿಸುತ್ತದೆ ಎಂಬುದು ಚಿದಾನಂದಮೂರ್ತಿಯವರ ವಾದ: "ನಾನು ಸೂಚಿಸಬೇಕೆಂದಿರುವ ಸಮಸ್ಯೆ– 'ದಿವಿಗೆಯುಮ್ ಆದುವು' ಎಂಬಲ್ಲಿನ ಕ್ರಿಯಾಪದದ ಬಹುವಚನಕ್ಕೆ ಸಂಬಂಧಿಸಿದ್ದು. 'ಕವಿಮಾರ್ಗಂ...ಆದುವು' ಎಂಬಲ್ಲಿ 'ಕವಿಮಾರ್ಗಂ' ಎಂಬುದೇ ಕರ್ತೃಪದ, 'ಆದುವು' ಕ್ರಿಯಾಪದ. ಆದ್ದರಿಂದ, 'ಕವಿಮಾರ್ಗಂ' ಎಂಬುದು ಒಂದು ಕೃತಿಯನ್ನು ಸೂಚಿಸುವುದಿಲ್ಲ. ಆ ಕಾರಣದಿಂದ ಕವಿರಾಜಮಾರ್ಗಕ್ಕೆ ಮೂಲವಾಗಿದ್ದಿರಬಹುದಾದ ಕೃತಿ ಅದು ಎಂಬ ಕಲಬುರ್ಗಿಯವರ ವಾದ ಅಷ್ಟು ಸಡಿಲವಾಗುತ್ತದೆ'' ಎಂದು ಹೇಳಿ, 'ಕವಿಮಾರ್ಗ' 'ಕಾವ್ಯಮಾರ್ಗ' ಎಂಬುವು 'ಸಂಪ್ರದಾಯ' (tradition, heritage) ಎಂಬರ್ಥದಲ್ಲಿ ಬಳಕೆಯಾಗುತ್ತಿದ್ದುವೆಂಬುದಕ್ಕೆ ಸೂಕ್ತಿಸುಧಾರ್ಣವದ ಪದ್ಯವೊಂದರ ಪ್ರಯೋಗದ ಸಮರ್ಥನೆಯನ್ನು ಕೊಟ್ಟು, ''ಕವಿಮಾರ್ಗ ಎಂದರೆ tradition ಎಂದೇ ಅರ್ಥ. ಆದ್ದರಿಂದ ಶ್ರೀವಿಜಯ ಅವರು ತಮ್ಮ ಅನೇಕ ಕೃತಿಗಳ ಮೂಲಕ ನಿರ್ಮಿಸಿದ **'ಕವಿಮಾರ್ಗ'**ವು (ಇಲ್ಲಿ ಬಹುವಚನದ ಬದಲು ಏಕವಚನ ಬಂದಿರಬಹುದು)[4] ಅನೇಕ ಕವಿಗಳಿಗೆ ಕನ್ನಡಿಯೂ, ಕತ್ತಲೆಯ ದಾರಿ ದೀಪವೂ **ಆದುವೆಂ**ಬುದು ಹಿಂದಿನ ಪದ್ಯದ ಅರ್ಥ" ಎಂದು ಚಿದಾನಂದ ಮೂರ್ತಿಯವರು ಬಹುಮಟ್ಟಿಗೆ ತೀರ್ಮಾನವಾಗಿಯೇ ನುಡಿದಿದ್ದಾರೆ.

---

3. ಸಾಹಿತ್ಯ ವಾರ್ಷಿಕ, ಪು. 149
4. ಆದುವು ಎಂಬ ಬಹುವಚನದ ಬದಲು ಏಕವಚನ ಬಂದಿರಬಹುದು ಎಂಬ ಚಿದಾನಂದ ಮೂರ್ತಿಯವರ ಊಹೆ ಸರಿಯಾಗಿದೆ. ಆದರೂ, ಅವರ ವಾದ ಬಹುವಚನ ಪ್ರಯೋಗದ ಆಧಾರದ ಮೇಲೆ ಸಾಗಿದೆ.

ನನ್ನ ಕೋರಿಕೆಯಂತೆ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಸಂಶೋಧನ ಸಹಾಯಕರಾಗಿರುವ, ನನ್ನ ಮಾನ್ಯ ಮಿತ್ರರಾದ ಶ್ರೀ ಎಸ್. ಶಿವಣ್ಣನವರು ದುರ್ಗಸಿಂಹನ 'ಪಂಚತಂತ್ರ'ದ ಎರಡು ಮುದ್ರಣಗಳನ್ನೂ (1. ಎಸ್. ಜಿ. ನರಸಿಂಹಾಚಾರ್ ಮತ್ತು ಎಂ. ಎ. ರಾಮಾನುಜ ಅಯ್ಯಂಗಾರ್ ಅವರುಗಳು ಸಂಪಾದಿಸಿ 1898 ರಲ್ಲಿ ಪ್ರಕಟಿಸಿರುವ ಮುದ್ರಣ; 2. ಎನ್. ಅನಂತರಂಗಾಚಾರ್ ಅವರು ಸಂಪಾದನೆ ಮಾಡಿ 1973ರಲ್ಲಿ ಪ್ರಕಟಿಸಿರುವ, ಮೈಸೂರಿನ ಕವಿಕಾವ್ಯಮಾಲೆಯ ಮುದ್ರಣ) ಪರಿಶೀಲಿಸಿ,

ಚಿದಾನಂದಮೂರ್ತಿಯವರು 'ಕವಿಮಾರ್ಗ' ಎನ್ನುವುದಕ್ಕೆ ಒಂದು ಕಾವ್ಯ ಸಂಪ್ರದಾಯ ಎಂದು ಅರ್ಥಮಾಡುವುದರಲ್ಲಿ ತಪ್ಪೇನಿಲ್ಲ. ಸಮರ್ಥನೆಗಾಗಿ ಅವರು ಕೊಟ್ಟಿರುವ ಪ್ರಯೋಗದ ಜೊತೆಗೆ ಇನ್ನೂ ಕೆಲವು ಅಂಥ ಪ್ರಯೋಗಗಳನ್ನು ಎತ್ತಿ ಕೊಡಬಹುದು. ದುರ್ಗಸಿಂಹನ ಪದ್ಯದಲ್ಲಿ ಕರ್ತೃಪದ ಏಕವಚನವಾಗಿರುವಲ್ಲಿ, ಕ್ರಿಯಾಪದ ಬಹುವಚನದಲ್ಲಿರುವುದು ವಚನದೋಷಕ್ಕೆ ಎಡೆಗೊಡುತ್ತದೆ. ಇಲ್ಲಿ ಪಾಠದೋಷವಿರುವುದು ಸ್ವಯಂಸ್ಪಷ್ಟ. ಮುಳಿಯ ತಿಮ್ಮಪ್ಪಯ್ಯನವರ ತಿದ್ದು ಪಾಟು ಅಗತ್ಯ. ಆದ್ದರಿಂದ, ಪ್ರಕೃತ ಸಂದರ್ಭದಲ್ಲಿ, ಶ್ರೀವಿಜಯರ **ಕವಿ ಮಾರ್ಗ** ಕವಿಜನಕ್ಕೆ ಕನ್ನಡಿಯುಂ ಕೈದೀವಿಗೆಯುಂ **ಆಯಿತು** (ಆದುದು) ಎಂದು ಅರ್ಥ ಮಾಡುವುದೆ ಉಚಿತ. 'ಕಾವ್ಯಮಾರ್ಗ' ಎಂಬ ಅಮೂರ್ತ ಕಲ್ಪನೆಯನ್ನು (abstract concept) ಮೂರ್ತ ವಸ್ತುಗಳಾದ ಕನ್ನಡಿಗೂ ದೀವಿಗೆಗೂ ಹೋಲಿಸು ವುದರಲ್ಲಿ ಔಚಿತ್ಯವಿಲ್ಲ; ಕೃತಿಯನ್ನು ಹಾಗೆ ಹೋಲಿಸುವಲ್ಲಿ ಔಚಿತ್ಯವಿದೆ. ಇದಕ್ಕೆ ನಾಗವರ್ಮನ ಪ್ರಯೋಗದ ನಿದರ್ಶನವೂ ಇದೆ. ಅಲ್ಲದೆ, ಇಂದಿಗೂ ಗ್ರಂಥಗಳನ್ನು 'ಕೈಪಿಡಿ' ಎಂದು ನಿರ್ದೇಶಿಸುವ ರೂಢಿಯನ್ನು ನೆನೆಯಬಹುದು. (ಹೋಲಿಸಿ: 'ಕನ್ನಡ ಕೈಪಿಡಿ'). 'ಕವಿಮಾರ್ಗ' ಎರಡೂ ಅರ್ಥಗಳಲ್ಲಿ ಪ್ರಯೋಗವಾಗಬಹುದು. ಪ್ರಕೃತ ಸಂದರ್ಭದಲ್ಲಿ ಅದು ಕೃತಿಯನ್ನು ಸೂಚಿಸುತ್ತದೆ. 'ಕವಿರಾಜಮಾರ್ಗ' ಕೃತಿ ಸೂಚಕವಾಗಿರುವಲ್ಲಿ, 'ಕವಿಮಾರ್ಗ' ಏಕೆ ಕೃತಿಸೂಚಕವಾಗಬಾರದು? 'ಕವಿರಾಜ ಮಾರ್ಗ' ಗ್ರಂಥನಾಮದಲ್ಲಿ ಕೂಡ (ಕವಿಗಳ ರಾಜಮಾರ್ಗ ಅಥವಾ ಕವಿರಾಜರ ಮಾರ್ಗ ಎಂಬ 'ಉನ್ನತ ಸಂಪ್ರದಾಯ'ದ ಅರ್ಥ ಅಡಗಿಯೇ ಇದೆ. ಕವಿರಾಜ ಮಾರ್ಗ ಶಬ್ದವನ್ನು ಈ ಅರ್ಥದಲ್ಲಿ ಬಳಸಿರುವ ಕವಿಪ್ರಯೋಗವೂ ಇದೆ. ನೋಡಿ:

ಸಮಸಂದೆಣಿಸಿದ ಮೂವ-
ತ್ತುಮೂಱು ಸಂಚಾರಿ ಭಾವಮಂ ಪೇೞ್ವೆನನು-
ಕ್ರಮದಿಂದೆನ್ನಱುವನಿತಂ
ಸಮಸ್ತ ಕವಿರಾಜಮಾರ್ಗ ನಿಗದಿತಮಂ[5]

ಎರಡರಲ್ಲೂ ಬಹುವಚನದ ಪ್ರಯೋಗವೇ ಇದೆಯೆಂದೂ ಪಾಠಾಂತರಗಳು ಇಲ್ಲವೆಂದೂ ತಿಳಿಸಿ ಉಪಕರಿಸಿದ್ದಾರೆ.

ಮುಳಿಯ ತಿಮ್ಮಪ್ಪಯ್ಯನವರು ತಮ್ಮ 'ಕವಿರಾಜ ಮಾರ್ಗ ವಿವೇಕ'ದಲ್ಲಿ 'ಆದುವು' ಎಂಬ ಬಹುವಚನವನ್ನು 'ಆದುದು' ಎಂದು ತಿದ್ದುಪಾಟು ಮಾಡಿಕೊಂಡಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬಹುದು. 'ಕವಿರಾಜಮಾರ್ಗ' ಎಂಬ ಸಮಸ್ತ ಪದದಲ್ಲಿ 'ರಾಜ' ಎಂಬ ಪದವನ್ನು ಲೋಪಿಸಿ 'ಕವಿಮಾರ್ಗ'ವೆಂದಿದ್ದಾನೆ ದುರ್ಗಸಿಂಹ ಎಂಬುದು ಅವರ ಅಭಿ ಪ್ರಾಯ. ('ಕವಿರಾಜಮಾರ್ಗ ವಿವೇಕ, 1973 ರ ಮುದ್ರಣ, ಪು. 74–75),

5. ಕವಿಕಾಮ 'ಶೃಂಗಾರ ರತ್ನಾಕರ', ii-17

ಶ್ರೀವಿಜಯ 'ಕವಿಮಾರ್ಗ'ವೆಂಬ ಗ್ರಂಥವನ್ನು ಬರೆದಿದ್ದು, ಅದನ್ನು 'ಕವಿರಾಜಮಾರ್ಗ'ವಾಗಿ ಹಿಗ್ಗಿಸಿ ಪುನರ್ನಿರ್ಮಾಣ ಮಾಡಿರಬಹುದು ಎಂಬ ನಿಲವು ಸದ್ಯಕ್ಕೆ ಒಂದು ಸಂಭಾವ್ಯ ಊಹೆಯಾಗಿ ಮಾತ್ರ ನಿಲ್ಲತಕ್ಕದ್ದು. ಆದರೆ, ದುರ್ಗಸಿಂಹನ ಪದ್ಯದಲ್ಲಿ 'ಕವಿಮಾರ್ಗ' ಒಂದು ಕೃತಿಯನ್ನೇ ಸೂಚಿಸುತ್ತದೆ, ಅದು 'ಕವಿರಾಜಮಾರ್ಗ' ಎಂಬಲ್ಲಿ ಸಂದೇಹಕ್ಕೆಡೆಯಿಲ್ಲ.

ಎಂ. ವಿ. ಸೀತಾರಾಮಯ್ಯ

ಚಂದ್ರಗತಿ

ಜೈನಪುರಾಣ ಗ್ರಂಥಗಳಲ್ಲಿ ಬರುವ ಒಂದು ವಿಶಿಷ್ಟ ಶಬ್ದ "ಚಂದ್ರಗತಿ" ಎಂಬುದು. ಈ ಶಬ್ದಕ್ಕೆ ಏನು ಅರ್ಥ ಎಂಬುದು ಸ್ಪಷ್ಟವಾಗದೆ ಇದ್ದುದರಿಂದ ಈ ಶಬ್ದಕ್ಕೆ ವಿದ್ವಾಂಸರು ಅರ್ಥಕೋಶದಲ್ಲಿ ಪ್ರಶ್ನಾರ್ಥಕ ಚಿಹ್ನವನ್ನು ಹಾಕಿದ್ದುಂಟು. ಈ ಪ್ರಶ್ನಾರ್ಥಕ ಚಿಹ್ನವನ್ನು ತೆಗೆಯಲು ಸಾಧ್ಯವುಂಟೇ ಎಂಬ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಮೊತ್ತಮೊದಲು ಈ ಶಬ್ದ ಪ್ರಯೋಗವಾಗಿರುವ ಸಂದರ್ಭವನ್ನು ಅವಲೋಕಿಸುವುದು ಒಳಿತು.

1. "ಅನ್ನೆಗಮಾದಿ ಮುನೀಶ್ವರನುಮಾ ಪುರಾಂತದೊಳ್ ಸಂವೇಗ ವೈರಾಗ್ಯಾಭಿವೃದ್ಧ್ಯರ್ಥಮಾಗೆ ಜಗತ್ ಕಾಯ ಸ್ವಭಾವಭಾವನಾಪರಂ ಸಕಲಶರೀರಿಗಣಾಧಿಕ ದುಃಖಾರ್ದ್ದಿತಾವಿನೀತರೊಳ್ ಮೈತ್ರಿ ಪ್ರಮೋದ ಕಾರುಣ್ಯ ಮಾಧ್ಯಸ್ಥವೃತ್ತಿಗಳಂ ಭಾವಿಸುತ್ತುಂ ಯುಗ್ಮ ಪ್ರಮಾಣ ಕ್ಷೋಣೀ ನಿರೀಕ್ಷಣ ನಿರತನುಮತಿದ್ರುತವಿಲಂಬಿತ ಗತಿವ್ಯಪೇತನುಮಾಗಿ ನಗರಾರಣ್ಯ ನಿರ್ವ್ವಿಶೇಷನುತ್ತಮ ಮಧ್ಯಮ ಜಘನ್ಯಾಗಾರಾಂಗಳೊಳ್ **ಚಂದ್ರಗತಿ**ಯಿಂ ಸಲುತ್ತುಮಾಲೋಕ ಸಂಭ್ರಮೋಪೇತ ಪುರಜನಾನುಗಮ್ಯಮಾನಂ ಸೋಮಪ್ರಭರಾಜ ಮಂದಿರಾಭಿಮುಖನಾಗಿ..."[1]

2. "ಅಂತಲ್ಲಿಯ ಚೈತ್ಯಾಲಯಂಗಳಂ ವಂದಿಸಿ ತದ್ವಾಸರದೊಳ್ ತೀರ್ಥೋಪವಾಸಂಗೆಯ್ದು ಪಾರಣಾದಿನದೊಳ್ ಚರ್ಯಾಮಾರ್ಗದಿಂ ಕೌಶಂಬೀನಗರಾಭಿಮುಖಂ ಸತ್ವಗುಣಾಧಿಕ ಕ್ಲಿಶ್ಯಮಾನಾವಿನಯರೊಳ್ ಮೈತ್ರೀ ಪ್ರಮೋದ ಕಾರುಣ್ಯ ಮಾಧ್ಯಸ್ಥವೃತ್ತಿಯಂ ಭಾವಿಸುತ್ತುಮತಿ ವಿಳಂಬಿತ ಗತಿ ವ್ಯಪೇತನುಂ ಯುಗ

1 ಪಂಪ-ಆದಿಪುರಾಣಂ ೯-೧೩೦ ವ॥ ಸಂ. ಪ್ರೊ. ಕೆ. ಜಿ. ಕುಂದಣಗಾರ, ಎಂ. ಎ.; ದಿವಾಣ ಬಹಾದ್ದೂರ ಎ.ಪಿ. ಚೌಗುಲೆ, ಬಿ.ಎ., ಎಲ್ಎಲ್.ಬಿ.

ಪ್ರಮಾಣ ಮೇದಿನೀತಳ ನಿರೀಕ್ಷಣನುಮಾಗಿ ಪುಗಲ್ತಕ್ಕ ಮನೆಗಳೊಳ್ **ಚಂದ್ರ ಗತಿ**ಯಿಂ ಚರಿಗೆವುಗುತ್ತುಂ..."[2]

3. "ಕೌರವಪುರದೊಳಗೆ ಚಂದ್ರಗತಿಯಿಂ ಚರಿಗೆವರ್ಪುದಂ"[3]

ಜನ್ನಕವಿ ಚಂದ್ರನ ಪರ್ಯಾಯ ನಾಮವನ್ನು ಉಪಯೋಗಿಸಿ ಹೀಗೆ ಪ್ರಯೋಗಿಸಿದ್ದಾನೆ :

4 ಲಲನಾಯಾಚಕ ಸೂತಿಕೊಳ್ದಹನ ದೀನಾನಾಥ ದುಃಕರ್ಮದುಃ
ಕುಲನಂದಿಸ್ಖಲಿತಾಂಗ ಕಾಮುಕಗೃಹದ್ವಾರಂಗಳಂ ಬಿಟ್ಟುಸ
ತ್ಕುಲ ಗೇಹೋತ್ತಮ ಮಧ್ಯಮಾಧಮ ವಿಚಾರಂ ಪಿಂಗಿಮಾನಾಪಮಾ
ನಲವಂ ತೋಱದೆ ಬಂದನಿಂದುಗತಿಯಿಂ ಯೋಗೀಂದ್ರ ವಂದಾರಕಂ ॥ [4]

ಹೀಗೆ ಈ ಶಬ್ದ ಸಾಮಾನ್ಯವಾಗಿ ಎಲ್ಲ ಜೈನ ಪುರಾಣಗ್ರಂಥಗಳಲ್ಲಿ ಪ್ರಯೋಗವಾಗಿದೆ ಹಾಗೂ ಜಿನಮುನಿ ಚರಿಗೆಗೆ ಹೋಗುವ ಸಂದರ್ಭವನ್ನು ವರ್ಣಿಸುವಲ್ಲಿ ಪ್ರಯೋಗವಾಗಿದೆ. ಈ ಸಂದರ್ಭಗಳಲ್ಲೆಲ್ಲ ಚಂದ್ರಗತಿ, ಇಂದುಗತಿ ಎಂಬ ಶಬ್ದ ಜಿನಮುನಿ ಚರಿಗೆಗಾಗಿ ಯಾವರೀತಿಯಲ್ಲಿ ಹೋಗುತ್ತಾನೆ ಎಂಬುದನ್ನು ತಿಳಿಸುವಂತಹುದಾಗಿದೆ ಅಂದರೆ ಚರಿಗೆಗಾಗಿ ಜಿನಮುನಿ ಯಾವ ಗತಿ (ಚಲನೆ, ನಡಿಗೆ)ಯಲ್ಲಿ ಹೋಗುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಜಿನಮುನಿಯು ಚರಿಗೆಗೆ ನಡೆಯುವ ಗತಿ ಮಾತ್ರ ಚಂದ್ರನದು ಎಂದು ಹೇಳಿರುವುದರಿಂದ ಚಂದ್ರನ ಗತಿ ಹೇಗಿರುತ್ತದೆ ಎಂಬುದನ್ನು ಅರಿತುಕೊಳ್ಳದ ಹೊರತು ಇಲ್ಲಿಯ ಗತಿಯ ರೀತಿ ತಿಳುವಳಿಕೆಗೆ ಬರುವುದಿಲ್ಲ. ಇದನ್ನು ಅರಿಯಬೇಕಾದರೆ ಮೊತ್ತಮೊದಲು ಜಿನಮುನಿಗಳು ಚರಿಗೆಗಾಗಿ ಹೋಗುತ್ತಿರುವಾಗ ಹೇಗೆ ಹೋಗಬೇಕೆಂಬ ನಿಯಮವಿದೆ ಎಂಬುದನ್ನು ಅರಿತು ಕೊಂಡರೆ ಆಗ ಇಲ್ಲಿ ಬಂದಿರುವ ಚಂದ್ರಗತಿ ಎಂಬುದರ ಅರ್ಥ ಸ್ಪಷ್ಟವಾಗಲು ಅವಕಾಶವಿರುತ್ತದೆ. ಆದುದರಿಂದ ಮೊದಲು ಅದನ್ನು ಅವಲೋಕಿಸೋಣ.

ಬಾಲಚಂದ್ರದೇವ ವಿರಚಿತ 'ತತ್ತ್ವರತ್ನಪ್ರದೀಪಿಕೆ' ಎಂಬ ಗ್ರಂಥವೊಂದಿದೆ. ಅದಕ್ಕೆ ಶ್ರೀಮದುನೂಸ್ವಾಮಿಯವರು ಕನ್ನಡ ವ್ಯಾಖ್ಯಾನ ಬರೆದುದುಂಟು. ಅದರಲ್ಲಿ ಚರಿಗೆಯ ವಿಷಯವಾಗಿ ಹೀಗೆ ಹೇಳಿದ್ದುಂಟು :

---

2 ಶಾಂತಿನಾಥ–ಸುಕುಮಾರ ಚರಿತೆ. 4.21 ವ॥ ಸಂ. ಟಿ.ಎಸ್. ಶಾಮರಾವ್; ಡಿ.ಎಲ್. ನರಸಿಂಹಾಚಾರ್.

3 ನಯಸೇನ-ಧರ್ಮಾಮೃತಂ. 4.22. ಸಂ. ಡಾ. ಎಂ. ಶಾಮಾಶಾಸ್ತ್ರಿ, ಬಿ.ಎ., ಪಿಎಚ್.ಡಿ., ಎಂ.ಆರ್.ಎಸ್.

4 ಜನ್ನ-ಅನಂತನಾಥ ಪುರಾಣಂ 9–82 ಸಂ. ಡಿ. ಶ್ರೀನಿವಾಸಾಚಾರ್, ಎಂ.ಎ., ಹೆಚ್.ಆರ್. ರಂಗಸ್ವಾಮಿ ಅಯ್ಯಂಗಾರ್, ಎಂ.ಎ.

"ಗಾಳಿಯವೋಲ್ ಎಲ್ಲಿಯುಂ ಸಿಲ್ಕದನುಂ ಅನೇಕ ದೇಶಂಗಳಂ ವಿಹರಿಸುವನುಂ ಯೋಗ್ಯಕಾಲೈಕವಾರ ಭೋಜನನಿಯಮ ನಿಯುಕ್ತನುಂ ಮೌನಿಯುಂ ಮೌನಿ ಸಮಾನನುಂ ಮೇಣ್ ಯೋಗ್ಯ ಚರ್ಯಾಕಾಲದೊಳ್ ಒರ್ಮೆಯುಂ ತನುವಂ ತೋರ್ಪನುಂ ಪಾಣಿಪುಟಮಾತ್ರ ಪಾತ್ರನುಂ ಚರ್ಯಾಯೋಗ್ಯ ಬಹುಗೃಹಂಗಳೊಳ್ ಚಿರಕಾಲಂ ಚರಿಗೆವಡೆಯದಲ್ಲಿ ಸಂಕ್ಲೇಶವಿಲ್ಲದನುಂ ದಾತೃವಿಶೇಷ ಪರೀಕ್ಷಾನಿರುತ್ಸುಕನುಂ ಲಾಭದಿಂ ಅಲಾಭಮುಂ ಪರಮತಪಮೆಂದು ಸಂತಸಂ ಬಡುವನುಂ ಇಂತಪ್ಪ ಮುನಿಗೆ ಸಿಕ್ಕುವಂ ಅಲಾಭ ಪರೀಷಹಜಯಮಕ್ಕುಂ."[5]

ಈ ವ್ಯಾಖ್ಯಾನವನ್ನು ಗಮನಿಸಿದಾಗ ಜಿನಮುನಿ ಚರಿಗೆಗೆ ಹೋಗುವಾಗ ಒಂದು ಮನೆಯಲ್ಲಿ ಒಂದೇ ಒಂದು ಸಲ ಮಾತ್ರ ಚರಿಗೆಯನ್ನು ಸ್ವೀಕರಿಸಿ, ಅಲ್ಲಿ ಬಹುಕಾಲ ನಿಲ್ಲದೆ ಮುಂದಕ್ಕೆ ಹೊರಟು ಹೋಗುತ್ತಾನೆ ಎಂಬುದು ತಿಳಿದು ಬರುವ ಅಂಶ. ಅಂದರೆ ಜಿನಮುನಿ ತಾನು ಸಾಗುವ ಚರ್ಯಾಮಾರ್ಗದಲ್ಲಿ ಆತನಿಗೆ ಚರಿಗೆಯನ್ನು ನೀಡುವ ಹಲವು ಮನೆಗಳಿದ್ದರೂ ಒಂದೊಂದು ದಿನ ಒಂದೊಂದೇ ಮನೆಯಲ್ಲಿ ಒಂದೇ ಒಂದು ಸಲ ಮಾತ್ರ ಭಿಕ್ಷೆಯನ್ನು ಸ್ವೀಕರಿಸುತ್ತಾನೆಯೇ ಹೊರತು ಅಲ್ಲಿ ಬಹುಕಾಲ ನಿಂತು ಹಲವು ಸಲ ಒಂದೇ ಮನೆಯನ್ನಾಗಲೀ ಹಲವು ಮನೆಗಳನ್ನಾಗಲೀ ಚರಿಗೆ ಸ್ವೀಕರಿಸುವುದಿಲ್ಲ ಎಂಬುದು ಇಲ್ಲಿ ಸ್ಪಷ್ಟವಾಗುವ ವಿಷಯವಾಗಿದೆ. ಈ ರೀತಿ ಒಂದು ದಿನಕ್ಕೆ ಒಂದು ಮನೆಯಲ್ಲಿ ಒಮ್ಮೆ ಮಾತ್ರ ಭಿಕ್ಷೆಯನ್ನು ಸ್ವೀಕಾರಮಾಡುವ ನಿಯಮವೇ "ಚಂದ್ರಗತಿಯಿಂ ಚರಿಗವುಗುತ್ತುಂ," "ಚಂದ್ರಗತಿಯಿಂ ಸಲುತ್ತುಂ" ಎಂಬ ಸಂಜ್ಞೆಯಿಂದ ಸೂಚಿಸಲಾಗಿದೆ ಕಾವ್ಯಗಳಲ್ಲಿ. ಆದರೆ ಚಂದ್ರಗತಿ ಎಂಬ ಶಬ್ದಕ್ಕೆ ಈ ಅರ್ಥವಿದೆಯೇ? ಎಂಬುದು ವಿಚಾರಾರ್ಹ. ಇದನ್ನು ಅರಿಯಲು ಜ್ಯೋತಿಷ್ಯ ಶಾಸ್ತ್ರಕ್ಕೆ ಶರಣು ಹೋಗಬೇಕಾಗುತ್ತದೆ. ಏಕೆಂದರೆ ಚಂದ್ರನು ನವಗ್ರಹಗಳಲ್ಲಿ ಒಬ್ಬನಲ್ಲವೆ: ಆ ಗ್ರಹಗಳ ಗತಿಯನ್ನು ಪರಾಂಬರಿಸಿದರೆ, ಅವರಲ್ಲಿ ಚಂದ್ರನ ಗತಿ ಯಾವುದೋ ಅದೇ ಚಂದ್ರಗತಿ ಎಂದು ಅರ್ಥೈಸಲು ಸಾಧ್ಯವಾಗುತ್ತದೆ.

ನವಗ್ರಹಗಳು ದ್ವಾದಶರಾಶಿಗಳಲ್ಲಿ ತಮ್ಮ ಗತಿಯನ್ನು ಸಾಗಿಸುತ್ತವೆ. ಅವುಗಳ ಆ ಗತಿಯ ಕಾಲಮಿತಿಯನ್ನು ಜ್ಯೋತಿಷ್ಯಶಾಸ್ತ್ರದಲ್ಲಿ ವಿವರಿಸಲಾಗಿದೆ. ಅದರ ಪ್ರಕಾರ ಒಂದೊಂದು ಗ್ರಹವೂ ಒಂದೊಂದು ರಾಶಿಯಲ್ಲಿರುವ ಕಲಾಮಿತಿ ಹೀಗಿದೆ–

ಗ್ರಹಗಳ ಹೆಸರು	ರಾಶಿಯಲ್ಲಿರುವ ಕಾಲಮಿತಿ
ರವಿ	1 ಮಾಸ
ಚಂದ್ರ	$2\frac{1}{4}$ ದಿವಸ

5 ತತ್ತ್ವರತ್ನಪ್ರದೀಪಿಕೆ. ನವಮಪ್ರಕರಣಂ. ಪು. 339. ಸಂ. ವಿದ್ವಾನ್. ಎ. ಶಾಂತಿರಾಜ ಶಾಸ್ತ್ರಿ ನ್ಯಾಯತೀರ್ಥ.

ಕುಜ	1½ ಮಾಸ
ಬುಧ	1 ಮಾಸ
ಗುರು	12 ಮಾಸ
ಶುಕ್ರ	1 ಮಾಸ
ಶನಿ	30 ಮಾಸ
ರಾಹು ಕೇತು	18 ಮಾಸ

ಇದನ್ನು ಅವಲೋಕಿಸಿದಾಗ ಪ್ರತಿಯೊಂದು ಗ್ರಹವೂ ಒಂದೊಂದು ರಾಶಿಯಲ್ಲಿ ಎಷ್ಟು ಸಮಯ ಇರುತ್ತದೆ ಎಂಬ ಅಂಶ ತಿಳುವಳಿಕೆಗೆ ಬರುತ್ತದೆ. ಇದರಲ್ಲಿ ಶನಿಗ್ರಹ ಒಂದೊಂದು ರಾಶಿಯಲ್ಲಿ ಎರಡೂವರೆ ವರ್ಷಗಳ ಕಾಲ ನೆಲೆಸಿದರೆ, ರಾಹು–ಕೇತುಗಳು ಒಂದೂವರೆ ವರ್ಷಗಳ ಕಾಲವಿರುತ್ತವೆ. ಉಳಿದ ಗ್ರಹಗಳಲ್ಲಿ ಕುಜನು ಒಂದೂವರೆ ತಿಂಗಳೂ ರವಿ, ಬುಧ, ಶುಕ್ರರು ಒಂದೊಂದು ತಿಂಗಳೂ ನೆಲಸುತ್ತವೆಯಾದರೆ ಅತ್ಯಂತ ಕಡಿಮೆಯ ಅವಧಿಯೆಂದರೆ ಎರಡೂಕಾಲು ದಿವಸ ಮಾತ್ರ ನೆಲಸುವುದು ಕೇವಲ ಚಂದ್ರನೊಬ್ಬನೆ. ಎರಡೂಕಾಲು ದಿವಸವೆಂದರೆ ಎರಡೂಕಾಲು ನಕ್ಷತ್ರಗಳಾಗುತ್ತವೆ. ಅಂದಮೇಲೆ ಚಂದ್ರನು ಒಂದೊಂದೇ ದಿವಸ ಒಂದೊಂದೇ ನಕ್ಷತ್ರದೊಂದಿಗೆ ಇರುತ್ತಾನೆಯೇ ಹೊರತು ಹೆಚ್ಚು ದಿನ ನಿಲ್ಲುವುದಿಲ್ಲ. ಇದರಿಂದ ಸ್ಪಷ್ಟವಾಗುವ ಪ್ರಮುಖ ಅಂಶವೆಂದರೆ ಚಂದ್ರನೊಬ್ಬನೆ ಬಹು ಬೇಗನೇ ಒಂದು ರಾಶಿಯಿಂದ ಮತ್ತೊಂದು ರಾಶಿಗೆ, ಒಂದು ನಕ್ಷತ್ರದಿಂದ ಮತ್ತೊಂದು ನಕ್ಷತ್ರಕ್ಕೆ ಚಲಿಸುತ್ತಾನೆ, ರಾಶಿ ಹಾಗೂ ನಕ್ಷತ್ರಗಳ ಸಂಪರ್ಕ ಆತನಿಗೆ ಕೇವಲ ಅತ್ಯಲ್ಪ ಎಂಬುದು. ಅಂದಮೇಲೆ ಚಂದ್ರನು ಯಾವುದೇ ರಾಶಿಯಲ್ಲಿ ಶನಿಗ್ರಹದಂತೆ ದೀರ್ಘಕಾಲ ನೆಲಸದೆ ಕ್ಷಿಪ್ರವಾಗಿ ಮತ್ತೊಂದು ರಾಶಿಗೆ ಹೋಗುತ್ತಾನೆ. ದ್ವಾದಶ ರಾಶಿಗಳಲ್ಲಿ ಚಲಿಸಬೇಕಾಗಿರುವಾಗ ಶನಿಗ್ರಹ ಒಂದೊಂದು ರಾಶಿಯಲ್ಲಿಯೇ ಮಂದ ಗತಿಯಿಂದ ಸಾಗುತ್ತ ಎರಡೂವರೆ ವರ್ಷಗಳ ಕಾಲ ನೆಲಸಿ ಮೂವತ್ತು ವರ್ಷಗಳ ದೀರ್ಘಕಾಲವನ್ನು ಉಪಯೋಗಿಸಿಕೊಂಡರೆ ಚಂದ್ರಗ್ರಹ ಇಪ್ಪತ್ತೇಳು ದಿನಗಳಲ್ಲಿ ದ್ವಾದಶರಾಶಿಗಳನ್ನು ಸುತ್ತಿ ಬರುತ್ತದೆ. ಇವರಿಂದ ಚಂದ್ರನ ಗತಿ ಕ್ಷಿಪ್ರದಲ್ಲಿ ಸಾಗುತ್ತದೆ ಎಂಬಂಶ ಸ್ಪಷ್ಟವಾಗುತ್ತದೆ. 'ತತ್ತ್ವರತ್ನಪ್ರದೀಪಿಕೆ'ಯಲ್ಲಿಯೂ ಹೇಳಿದ ಒಂದು ವಿಚಾರ ಇಲ್ಲಿ ವಿವೇಚನಾರ್ಹ – "ಚಂದ್ರಂಗೆ ಪಂಚದಶವೀಥಿಗಳ್. ಆದಿತ್ಯಂಗೆ ಚತುರಶೀತಿ ಶತವೀಥಿಗಳಪ್ಪುವು. ನಿಚ್ಚಲೊಂದು ವೀಥಿಯಂ ತೊಳಲ್ವರ್".[6] ಈ ಮಾತಿನಿಂದಲೂ ಚಂದ್ರನು ಒಂದೊಂದು ವೀಥಿಯನ್ನು ಒಂದೊಂದು ದಿನ ನಡೆಯುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ.

ಜ್ಯೋತಿಷ್ಯ ಶಾಸ್ತ್ರದಲ್ಲಿ ಗ್ರಹಬಲದ ಕಾಲಪ್ರಮಾಣವನ್ನು ಸೂಚಿಸುವಾಗ ಈ ರೀತಿ ಹೇಳಲಾಗಿದೆ—

---

6 ಚತುರ್ಥ ಪ್ರಕರಣಂ-ಪು 203

ಶನೇರ್ವರ್ಷಸ್ತದರ್ಧಂ ಸ್ಯಾದ್ಭಾನೋರ್ಮಾಸದ್ವಯಂ ವಿಶಃ ।
ಶುಕ್ರಸ್ಯ ಪಕ್ಷೋ ಜೀವಸ್ಯಮಾಸೋ ಭೌಮಸ್ಯವಾಸರಃ
ಇಂದೋರ್ಮುಹೂರ್ತಮಿತ್ಯುಕ್ತಂ ಗ್ರಹಾಣಾಂ ಬಲತೋವದೇತ್ ।।

—"ಶನಿಗೆ ಒಂದು ವರ್ಷವು, ರವಿಗೆ ಆರು ತಿಂಗಳು, ಬುಧನಿಗೆ ಎರಡು ತಿಂಗಳು, ಶುಕ್ರನಿಗೆ ಒಂದು ಪಕ್ಷ (15 ದಿವಸ)ವು, ಗುರುವಿಗೆ ಒಂದು ತಿಂಗಳು, ಕುಜನಿಗೆ ಒಂದು ದಿನವು, ಚಂದ್ರನಿಗೆ ಒಂದು ಮುಹೂರ್ತ (ಎರಡು ಘಳಿಗೆಕಾಲ)ವು ಎಂದು ತಿಳಿಯಬೇಕು".[7] ಎಂಬ ಈ ಸಿದ್ಧಾಂತದ ಪ್ರಕಾರವೂ ಚಂದ್ರನ ಕಾಲ ಪ್ರಮಾಣ ಕೇವಲ ಒಂದು ಮುಹೂರ್ತಕಾಲ ಮಾತ್ರ ಒಂದು ರಾಶಿಯಲ್ಲಿರುತ್ತದೆ ಎಂಬುದು ಮನವರಿಕೆಯಾಗುತ್ತದೆ. ಜ್ಯೋತಿಷ್ಯಶಾಸ್ತ್ರದ ಈ ಎಲ್ಲ ಹೇಳಿಕೆಗಳಿಂದ ಚಂದ್ರನು ಒಂದೊಂದು ದಿನ ಒಂದೊಂದು ನಕ್ಷತ್ರದಲ್ಲಿದ್ದು ಮುಹೂರ್ತಕಾಲ ತನ್ನ ಬಲವನ್ನು ತೋರಿಸುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ. ಇದೇ ರೀತಿ ಜಿನಮುನಿಯೂ ಕೂಡ ಚರ್ಯಾಕಾಲದಲ್ಲಿ ಒಂದೊಂದು ದಿನ ಒಂದೊಂದೇ ಮನೆಯಲ್ಲಿ ಮುಹೂರ್ತ ಕಾಲ ಮಾತ್ರ ಇದ್ದು ಭಿಕ್ಷೆಯನ್ನು ಸ್ವೀಕರಿಸುತ್ತ ಸಾಗುತ್ತಾನೆ. ಇದನ್ನೇ 'ಚಂದ್ರ ಗತಿಯಿಂ ಸಲುತ್ತುಂ' ಎಂದು ಹೇಳಲಾಗಿದೆ.

ಜಿನಮುನಿ ಹೀಗೇಕೆ ಚಲಿಸುತ್ತಾನೆ ಎಂಬುದಕ್ಕೆ ಉತ್ತರ ಪಂಪನ ಆದಿಪುರಾಣದ ವಚನದಲ್ಲಿಯೇ ಇದೆ. ಅವನು ಯೋಗ ನಿಯೋಗ ನಿಶ್ಚಲಮನನಾಗಿ ಅಱುದಿಂಗಳು ನೆರಪಿದ ಅನಂತರ ಯುಗ ಪ್ರಮಾಣ ಮೇದಿನಿ ತಳವನ್ನು ನಿರೀಕ್ಷಣ ನಿರತನಾಗಿ ಅತಿ ದ್ರುತವಿಲಂಬಿತಗತಿ ವ್ಯಪೇತನಾಗಿ ಸಾಗುತ್ತಾನೆ. ಹಾಗೆ ಹೋಗುವಾಗ ಅನುಕ್ರಮ ವಾಗಿ ಗ್ರಾಮನಗರ ಖೇಡ ಖರ್ವಡ ಮಡಂಬಗಳಲ್ಲಿ ಒಡಂಬಡಿಲ್ಲದೆ ಚರ್ಯಾ್ಯಮಾರ್ಗ ವನ್ನು ಅನುಸರಿಸುತ್ತಾನೆ. ಆದರೆ ಎಲ್ಲಿಯೂ ಬೇಕಾದಷ್ಟು ದೊರಕುತ್ತದೆ ಎಂಬ ಆಮಿಷಕ್ಕೆ ಒಳಗಾಗದೆ ಚಂದ್ರಗತಿಯಿಂದ—ಎಲ್ಲಿಯೂ ದೀರ್ಘಕಾಲನಿಲ್ಲದೆ—ಸಾಗು ತ್ತಾನೆ. ಏಕೆಂದರೆ ಅವನು ಸಂಚರಿಸಬೇಕಾದ ಕ್ಷೋಣಿತಳ ವಿಸ್ತಾರವಾದುದು. ಹೀಗಾಗಿ ಜಿನಮುನಿ ಚಂದ್ರನಂತೆ ಎಲ್ಲಿಯೂ ದೀರ್ಘಕಾಲ ನಿಲ್ಲದೆ ಒಂದೊಂದು ಮನೆಯಲ್ಲಿ ಒಂದೊಂದೇ ಸಲ ಚರಿಗೆಗಾಗಿ ಸಲ್ಲುತ್ತ ಮುಂದೆ ಸಾಗುತ್ತಾನೆ.

ಎರಡನೆಯದಾಗಿ ಅವನು ಚತುರ್ದಶ ಪರೀಷಹಗಳನ್ನು ಗೆಲ್ಲಬೇಕು. ಚತು ರ್ದಶ ಪರೀಷಹಗಳಲ್ಲಿ ಒಂದು ಚರ್ಯಾಪರೀಷಹ. ಯಾವುದೇ ಆಸೆ ಆಮಿಷಗಳಿಗೆ ಬಲಿ ಬೀಳದಂತಿರಬೇಕಾದ ಜಿನಮುನಿ ಆಹಾರ ಸ್ವೀಕಾರದಲ್ಲಿಯೂ ಆಹಾರಕ್ಕೂ ಅದರ ರಸರುಚಿಗಳಿಗೂ ಮಾರು ಹೋಗದೆ ಇರಬೇಕಾದುದೂ ಪ್ರಮುಖವಾದ ಅಂಶ. ಆದುದರಿಂದ ಅವನು ದಾನಿಗಳು ತಡೆದು ನಿಲ್ಲಿಸಿದಲ್ಲಿ ನಿಂತು, ಅವರು ಇತ್ತುದನ್ನು ಸ್ವೀಕರಿಸಿ ಅಲ್ಲಿಂದ ಮುಂದಕ್ಕೆ ಸಾಗುತ್ತಾನೆ. ಒಮ್ಮೆ ಒಬ್ಬರು ತಡೆದು ನಿಲ್ಲಿಸಿ

---

7 ಪ್ರತ್ಯಕ್ಷ ಆರೂಢ ಪ್ರಶ್ನ ಚಂದ್ರಿಕೆ, ಪುಟ-19, ಸಿದ್ಧಾಂತಿ ವಿರುಪಾಕ್ಷ ಶಾಸ್ತ್ರಿ

ದಾಗ ಅಲ್ಲಿ ಆಹಾರವನ್ನು ಸ್ವೀಕರಿಸಿಬಿಟ್ಟರೆ, ಆ ಜಿನಮುನಿ ಅಲ್ಲಿಂದ ಮುಂದೆ ಸಾಗುವಾಗ ಅದೇ ದಿನ ಇನ್ನೊಬ್ಬರು ತಡೆದು ನಿಲ್ಲಿಸಿದರೆ ಅವನು ಮತ್ತೊಮ್ಮೆ ಆಹಾರ ಸ್ವೀಕಾರ ಮಾಡುವುದಿಲ್ಲ. ಹೀಗಾಗಿಯೇ 'ವಡ್ಡಾರಾಧನೆ'ಯಲ್ಲಿ "ಅರಸಂ ಶಿವಗುಪ್ತ ಭಟ್ಟಾರಕರ್ಗಾಂ ಪಾರಣೆಯಂ ಮಾಡುವೆಂ ಪೆಱರಾರುಂ ನಿಱಿಸಲ್ ಸಲ್ಲೆಂದು ಪೊಟಿಲೊಳಗೆಲ್ಲಂ ಗೋಸನೆಯಂ ತೊಟಿಲ್ವಿದೊಡೆ..."[8] ಎಂಬ ಮಾತು ಬಂದಿರುವುದು. ಇಲ್ಲಿ ಅರಸನು ಬೇರೆ ಯಾರೂ ಶಿವಗುಪ್ತ ಭಟ್ಟಾರರಿಗೆ ಪಾರಣೆಗಾಗಿ ನಿಲ್ಲಿಸಬಾರದು ಎಂದು ಘೋಷಣೆ ಮಾಡಿಸಿರುವ ಉದ್ದೇಶವೇನು ? ಬೇರೆ ಯಾರಾದರೂ ಅವರನ್ನು ಪಾರಣೆಗೆ ನಿಲ್ಲಿಸಿಕೊಂಡರೆ ಅವರು ಅಂದು ಪುನಃ ಇನ್ನೊಬ್ಬರಲ್ಲಿ ಪಾರಣೆಗೆ ನಿಲ್ಲುವುದಿಲ್ಲವೆಂಬುದರಿಂದಲ್ಲವೇ ಅಂದಮೇಲೆ ಒಂದು ದಿನಕ್ಕೆ ಒಂದೇ ಮನೆಯಲ್ಲಿ ಮಾತ್ರ ಆಹಾರ ಸ್ವೀಕಾರ ಮಾಡುವುದು ಚರಿಗೆಯ ನಿಯಮವೆಂಬುದು ಸ್ಪಷ್ಟವಾಗುವುದಲ್ಲವೆ! ಹೀಗೆ ಒಂದು ದಿನ ಕೇವಲ ಒಂದೇ ಮನೆಯಲ್ಲಿ ಒಂದೇ ಹೊತ್ತು ಆಹಾರವನ್ನು ಸ್ವೀಕರಿಸುವುದು, ಹಾಗೆ ಆಹಾರವನ್ನು ಸ್ವೀಕರಿಸುವಾಗ ಯಾವ ಸಂಕ್ಲೇಶವೂ ಅಲ್ಲಿ ಇಟ್ಟುಕೊಳ್ಳದೆ ಮುಹೂರ್ತ ಮಾತ್ರ ಅಲ್ಲಿ ಇದ್ದು ಮುಂದೆ ಸಾಗುವುದು ಎಂಬುದೇ "ಚಂದ್ರಗತಿಯಿಂ ಚರಿಗೆವುಗುತ್ತುಂ" ಎಂಬುದರ ಅಂತರಾರ್ಥ.

ಚಂದ್ರಗತಿ ಎಂಬುದನ್ನು ಚಂದ್ರನ ಗತಿ (=ಚಲನೆ) ಎಂಬರ್ಥದಲ್ಲಿ ಸ್ವೀಕರಿಸದೆ, ಚಂದ್ರನ ಗತಿ (=ನಡತೆ, ಸ್ವಭಾವ) ಎಂಬರ್ಥದಲ್ಲಿ ಸ್ವೀಕರಿಸಲೂ ಅವಕಾಶವಿದೆ. ಆಗಲೂ ಕೂಡ ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಚಂದ್ರನಿಗೆ ಉಳಿದ ಗ್ರಹಗಳಂತೆ ಮಿತ್ರರು, ಸಮರು ಆದ ಗ್ರಹಗಳಿದ್ದರೂ ಶತ್ರುಗ್ರಹಗಳಿಲ್ಲ ಎಂದು ಹೇಳಿರುವುದರಿಂದ ಚಂದ್ರನು ಎಲ್ಲರನ್ನೂ ಸಮಾನವಾಗಿ ಕಾಣುತ್ತಾನೆಯೇ ಹೊರತು ಉಚ್ಚ-ನೀಚ ಭೇದವನ್ನಾಗಲೀ ಶತ್ರುತ್ವಭಾವನೆಯನ್ನಾಗಲೀ ತೋರಿಸುವುದಿಲ್ಲ ಎಂದು ಸೂಚಿಸಿದಂತಾಯಿತು. ಇದರಂತೆ ಜಿನಮುನಿಯೂ ಕೂಡ ಎಲ್ಲಿಯೂ ಯಾರ ವಿಷಯದಲ್ಲಿಯೂ ಉಚ್ಚ-ನೀಚ ಅಥವಾ ಶತ್ರುತ್ವ ಭಾವದಿಂದ ವರ್ತಿಸದೆ ಎಲ್ಲ ಸ್ಥಳಗಳನ್ನೂ ಸಮಾನವಾಗಿ ಕಂಡು ಚರಿಗೆಗೆ ಪ್ರವೇಶಿಸುತ್ತಾನೆ—"ಉತ್ತಮ ಮಧ್ಯಮ ಜಘನ್ಯಾಗಾರಂಗಳೊಳ್ ಚಂದ್ರಗತಿಯಿಂ ಸಲುತ್ತುಂ"—ಎಂದೂ ಹೇಳಬಹುದು.

ಒಟ್ಟಿನಲ್ಲಿ ಎಲ್ಲಿಯೂ ಯಾವುದೇ ವಿಧದ ಭೇದಭಾವವನ್ನು ತೋರಿಸದೆ, ಸಮಾನಭಾವದಿಂದ ವರ್ತಿಸಿ, ಯಾವ ಮನೆಯಲ್ಲಿಯೂ ದೀರ್ಘಕಾಲ ಉಳಿಯದೆ ಮುಹೂರ್ತಕಾಲ ಮಾತ್ರವಿದ್ದು ಭಿಕ್ಷೆಯನ್ನು ಸ್ವೀಕರಿಸಿ ಮುಂದೆ ಸಾಗುವುದೇ 'ಚಂದ್ರಗತಿಯಿಂ ಸಲುತ್ತುಂ' ಎಂಬುದಾಗಿದೆ.

---

8. ವಡ್ಡಾರಾಧನೆ, ಪುಟ 78 : ಸಂ. ಡಿ. ಎಲ್. ನರಸಿಂಹಾಚಾರ್

ಈ ರೀತಿ ಚರಿಗೆಗೆ ಬರುವ ಮುನಿಗಳನ್ನು ಶ್ರದ್ಧಾದಿ ಸಪ್ತಗುಣ ಸಂಪನ್ನರೂ ಪ್ರತಿಗ್ರಹಾದಿ ನವವಿಧ ಪುಣ್ಯ ಪುರಸ್ಸರರೂ ಆಗಿ ನಿಲ್ಲಿಸಿ ಕನಕ ಕಲಶದಲ್ಲಿ ತುಂಬಿದ ಅಮೃತ ರಸ ಸಮಾನ ಧವಲೇಕ್ಷುರಸಧಾರೆಯನ್ನು ಸಮುತ್ತಾನೀಕೃತ ವಿಶಾಲ ಪಾಣಿಪಾತ್ರದಲ್ಲಿ ಎರೆದು ತಮ್ಮಿಂದಾದಷ್ಟು ಅತ್ಯುತ್ತಮ ಭೋಜ್ಯವಸ್ತುಗಳನ್ನು ಆ ಕೈ ಬೊಗಸೆಯಲ್ಲಿಯೇ ಬಡಿಸುವ ಅಕ್ಷಯದಾನವನ್ನು ಮಾಡುವುದು ಜೈನಧರ್ಮ ದಲ್ಲಿ ಪ್ರಮುಖವಾದ ವಿಶಿಷ್ಟ ಅಂಶವಾಗಿದೆ.

ಎಂ. ಮಾಧವ ಪೈ

ಸಂಪಾದಕೀಯ

ಸಾಧನೆ ತನ್ನ ಯಶಸ್ವಿಯಾದ ಐದನೆಯ ವರ್ಷಕ್ಕೆ ಕಾಲಿರಿಸುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ಗಡಿರೇಖೆಗಳು ವಿಸ್ತರಿಸಿ, ಗ್ರಾಮಾಂತರ ಪ್ರದೇಶಗಳನ್ನು ಒಳಗೊಂಡ ಈ ಹೊತ್ತಿನಲ್ಲಿ ಇದರ ಚಂದಾದಾರರ ಸಂಖ್ಯೆಯೂ ಹೆಚ್ಚಬಹುದೆಂದು ನಿರೀಕ್ಷಿಸಲಾಗಿದೆ. ಐದು ವರ್ಷಗಳ ಹಿಂದೆ ಪ್ರಾರಂಭವಾದ, ಬೆಂಗಳೂರು ವಿಶ್ವವಿದ್ಯಾಲಯದ ಏಕೈಕ ಪತ್ರಿಕೆಯಾಗಿದ್ದ 'ಸಾಧನೆ'ಯ ಜತೆಗೆ ಇದೀಗ ಇಂಗ್ಲಿಷ್ ಭಾಷೆಯಲ್ಲಿ, 'ವಿದ್ಯಾಭಾರತಿ' ಮತ್ತು 'ವಿಜ್ಞಾನಭಾರತಿ'ಗಳೂ ಜತೆಗೂಡಿ, ಬೆಂಗಳೂರು ವಿಶ್ವವಿದ್ಯಾಲಯದ ಸಾಧನೆಯ ಬಹುಮುಖತೆಗೆ ದಾಖಲೆಗಳಾಗಿವೆ.

ಸಾಧನೆ ಎಂದಿನಂತೆ ತನ್ನ ಗುಣಮಟ್ಟವನ್ನು ಕಾಯ್ದುಕೊಂಡು ಬರುತ್ತದೆ—ಲೇಖಕರ ಮತ್ತು ಚಂದಾದಾರರ ಸಹಕಾರದಿಂದ.

ಸಂತಾಪ

ತಮ್ಮ ಸ್ವಯಂ ಸಾಧನೆಯಿಂದ, ವಿಶಿಷ್ಟ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಕರ್ನಾಟಕ ಏಕೀಕರಣಕ್ಕಾಗಿ ಮತ್ತು ಸಾಹಿತ್ಯಾಭಿವೃದ್ಧಿಗಾಗಿ ಶ್ರಮಿಸಿ ಗೌರವಾಸ್ಪದರಾದ ಪಂಡಿತರತ್ನಂ, ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಯವರು ; ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹತ್ತರ ಪಾತ್ರವಹಿಸಿದ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ, ಪ್ರಪ್ರಥಮ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ ಶ್ರೀ ಗುರುರಾವ್ ದೇಶಪಾಂಡೆ ಮತ್ತು ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರಾದ ಶ್ರೀ ಮಿರ್ಜಿ ಅಣ್ಣಾರಾಯ — ಈ ಮಹನೀಯರ ನಿಧನಕ್ಕೆ ಸಾಧನೆಯು ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಈ ಸಂಚಿಕೆಯ ಲೇಖಕರು

ಜಯಂತಕಾಯ್ಕಿಣಿ	141, ಹಳೆಯ ಹಾಸ್ಟೆಲ್ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 3
ದಿ. ತೀ. ನಂ. ಶ್ರೀಕಂಠಯ್ಯ	
ಡಾ॥ ಕೆ. ಪದ್ಮಾ ಉಮಾಪತಿ	ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಗೃಹವಿಜ್ಞಾನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು 6
ಡಾ॥ ಬಿ. ಕುಪ್ಪುಸ್ವಾಮಿ	490, 19ನೇ ಮೈನ್ ರೋಡು 4ನೇ 'ಟಿ' ಬ್ಲಾಕ್, ಜಯನಗರ ಬೆಂಗಳೂರು 560011
ಎಸ್. ವೆಂಕಟೇಶ ಮೂರ್ತಿ	ರಾಸಾಯನ ಶಾಸ್ತ್ರದ ಅಧ್ಯಾಪಕರು ನ್ಯಾಷನಲ್ ಕಾಲೇಜ್ ಬಸವನಗುಡಿ, ಬೆಂಗಳೂರು 560004
ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ	ರೀಡರ್ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು 6
ಎನ್. ಪ್ರಭುಸ್ವಾಮಿ	ಅರ್ಥಶಾಸ್ತ್ರ ವಿಭಾಗ ಮಾನಸಗಂಗೋತ್ರಿ, ಮೈಸೂರು 12
ಎಂ. ಸತ್ಯನಾರಾಯಣ ರಾವ್	23, ಎಲ್.ಐ.ಸಿ. ಕಾಲೋನಿ (ಐಡಿಯಲ್) 3ನೇ ಬ್ಲಾಕ್, (ಪೂರ್ವ) ಜಯನಗರ, ಬೆಂಗಳೂರು 560011

ಶಿವರಾಮಯ್ಯ	ಅಧ್ಯಾಪಕರು ಕನ್ನಡ ವಿಭಾಗ ಮಹದೇಶ್ವರ ಕಾಲೇಜು ಕೊಳ್ಳೇಗಾಲ
ಮೀರಾ ಚಕ್ರವರ್ತಿ	ಸಂಸ್ಕೃತ ವಿಭಾಗ, ಜ್ಞಾನಭಾರತಿ ಬೆಂಗಳೂರು 560056
ಬಿ. ವೈ. ಲಲಿತಾಂಬ	ಅಧ್ಯಾಪಕಿ ಹಿಂದಿ ವಿಭಾಗ ಮಹಾರಾಣಿಯವರ ಕಾಲೇಜು ಬೆಂಗಳೂರು 560001
ಟಿ. ಶ್ರೀವೆಂಕಟರಮಣ	ಅಧ್ಯಾಪಕ ಸಂಖ್ಯಾಕಲನ ಶಾಸ್ತ್ರ ವಿಭಾಗ ಸೆಂಟ್ರಲ್ ಕಾಲೇಜು ಬೆಂಗಳೂರು 560009
ಬಿ. ಅರುಣನಾರಾಯಣ	ಕನ್ನಡ ಅಧ್ಯಾಪಕ ಸರ್ಕಾರಿ ಜೂನಿಯರ್ ಕಾಲೇಜ್ ಪಲಿಮಾರು (ದಕ್ಷಿಣ ಕನ್ನಡ)
ಡಾ॥ ಎಂ. ಚಿದಾನಂದಮೂರ್ತಿ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಡಾ॥ ಎಂ. ಎಂ. ಕಲಬುರ್ಗಿ	ರೀಡರ್, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 3
ಎಂ. ವಿ. ಸೀತಾರಾಮಯ್ಯ	54, 'ಅರವಿಂದ' 3ನೇ ಅಡ್ಡರಸ್ತೆ, ಗವಿಪುರಂ ಬಡಾವಣೆ ಬೆಂಗಳೂರು 560019

ಎಂ. ಮಾಧವ ಪೈ	ಶ್ರೀ ಸಿದ್ಧೇಶ್ವರ ನಿಲಯ ಎಡ, ಆರನೆಯ ಅಡ್ಡ ರಸ್ತೆ ರವೀಂದ್ರ ನಗರ, ಶಿವಮೊಗ್ಗ
ಎಚ್. ಎಚ್. ಗಂಗಾಧರಾಚಾರ್	ಸಹ ಅಧ್ಯಾಪಕ ಎಸ್. ಜೆ. ಪಾಲಿಟೆಕ್ನಿಕ್ ಭದ್ರಾವತಿ
ಎಂ. ಎನ್. ಜಯಪ್ರಕಾಶ್	ರಥದ ಬೀದಿ ತೀರ್ಥಹಳ್ಳಿ (577432) ಶಿವಮೊಗ್ಗ
ಶಶಿಧರ ಕುಲಕರ್ಣಿ	1063-78, 1ನೇ ತಿರುವು, ವಿದ್ಯಾರಣ್ಯಪುರಂ, ಮೈಸೂರು 8

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

ಸಂಪುಟ	1	ಕನ್ನಡ ಸಾಹಿತ್ಯ ಸಮೀಕ್ಷೆ	...	ಜಿ. ಎಸ್. ಶಿವರುದ್ರಪ್ಪ
ಸಂಪುಟ	2	ಶಾಸನ ಮತ್ತು ಗದ್ಯ	...	ಹು. ಕಾ. ಜಯದೇವ್
ಸಂಪುಟ	3	ಶಾಸ್ತ್ರ ಸಾಹಿತ್ಯ	...	ಎಂ. ವಿ. ಸೀತಾರಾಮಯ್ಯ
ಸಂಪುಟ	4	ಚಂಪೂ ಕವಿಗಳು	...	ಪಿ. ವಿ. ನಾರಾಯಣ
ಸಂಪುಟ	5	ವಚನ ಸಾಹಿತ್ಯ	...	ಎಂ. ಚಿದಾನಂದ ಮೂ[illegible]
ಸಂಪುಟ	6	ಷಟ್ಪದಿ ಸಾಹಿತ್ಯ	...	ಕೆ. ಮರುಳಸಿದ್ದಪ್ಪ
ಸಂಪುಟ	7	ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ	...	ಕಾಳೇಗೌಡ ನಾಗವಾರ
ಸಂಪುಟ	8	ಕೀರ್ತನಕಾರರು	...	ಎಚ್. ಎಸ್. ವೆಂಕಟೇಶ ಮೂರ್ತಿ
ಸಂಪುಟ	9	ಸಾಂಗತ್ಯ ಕವಿಗಳು	...	ಹಂಪ. ನಾಗರಾಜಯ್ಯ
ಸಂಪುಟ	10	ಹೊಸಗನ್ನಡ ಸಾಹಿತ್ಯ	...	ಎಲ್. ಎಸ್. ಶೇಷಗಿರಿ ರಾವ್

ಪ್ರತಿ ಸಂಪುಟದ ಬೆಲೆ : ರೂ. 4-00

ಈ ಸಂಪುಟಗಳನ್ನು ಕೊಳ್ಳುವ ಸಲುವಾಗಿ ಸುಲಭ ಕಂತುಗಳಲ್ಲಿ ಸಾಲ ಸೌಲಭ್ಯವನ್ನು ಕೆನರಾ ಬ್ಯಾಂಕ್ ಒದಗಿಸಿದೆ. ಕೆನರಾ ಬ್ಯಾಂಕ್‌ನ ಕರ್ನಾಟಕದ ಯಾವುದೇ ಶಾಖೆಯಲ್ಲಿ ಈ ಬಗ್ಗೆ ವಿವರಗಳನ್ನು ಪಡೆಯಬಹುದು.

ವಿವರಗಳಿಗೆ ವ್ಯವಹರಿಸಿ :

ಉಪ-ನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560056

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು